prajavani.net prajavani

ಮಂಗಳವಾರ, ನವೆಂಬರ್ 4, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 304 | ಪುಟ 14

www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಸೆನ್ಸೆಕ್ಸ್ 83,978 | ನಿಫ್ಟಿ 25,763 | $/₹ 88.77 | ಚಿನ್ನ (Std. 10g) ₹1,26,800 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹1,58,600 (ಬೆಂಗಳೂರು)

ಸಜ್ಜನರ ಆಟಕ್ಕೆ 'ತಾಯ್ತನ'ದ ಪ್ರಭಾವಳಿ

• ವಿಶಾಖ ಎನ್.

ದಕ್ಷಿಣ ಆಫ್ರಿಕಾದ ಬೌಲರ್ ಲೀಸ್ ಹಾಕಿದ ಎಸೆತವೊಂದನ್ನು ನೇರವಾಗಿ ಡ್ರೈವ್ ಮಾಡಿ, ಸಿಕ್ಸರ್‌ಗೆ ಎತ್ತಿದಾಗ ಶಫಾಲಿ ವರ್ಮಾ ತಮ್ಮ ಹಳೆಯ ಲಯಕ್ಕೆ ಎಷ್ಟರಮಟ್ಟಿಗೆ ಕುದುರಿಕೊಂಡಿದ್ದಾರೆ ಎನ್ನುವುದು ಭಾನುವಾರ ಕಾಣಿಸಿತು.

2025ರ ವಿಶ್ವಕಪ್ ಕ್ರಿಕೆಟ್ ಟೂರ್ನಿಯಲ್ಲಿ ಭಾನುವಾರ ಭಾರತ ಚಾಂಪಿಯನ್ ಆಯಿತಲ್ಲ; ಆ ಫೈನಲ್ ಪಂದ್ಯದ ಶ್ರೇಷ್ಠ ಆಟಗಾರ್ತಿ ಪ್ರಶಸ್ತಿಯನ್ನು ತಮ್ಮತ್ತ ಎಳೆದುಕೊಂಡವರು ಶಫಾಲಿ. ಆಡುವ ಹಾಗೂ ಸಂಭವನೀಯರನ್ನು ಒಳಗೊಂಡ 15 ಮಂದಿಯ ತಂಡಕ್ಕೆ ಮೊದಲು ಆಯ್ಕೆಯೇ ಆಗದಿದ್ದ ಯುವತಿ, ದಕ್ಷಿಣ ಆಫ್ರಿಕಾ ಎದುರಿನ ಮಹತ್ವದ ಪಂದ್ಯದಲ್ಲಿ ಇಂತಹ ಪ್ರಶಸ್ತಿಗೆ ಭಾಜನರಾದುದನ್ನು ಅದೃಷ್ಟವಷ್ಟೆ ಎನ್ನಲಾಗದು.

ಹರಿಯಾಣದ ಹುಡುಗಿ ಶಫಾಲಿ ಕ್ರಿಕೆಟ್ ಅಕಾಡೆಮಿಗೆ ಸೇರಿಕೊಂಡಿದ್ದು ತಾನು ಹುಡುಗ ಎಂದು ಸುಳ್ಳು ಹೇಳಿಕೊಂಡು. ಆದರೆ, ಈಗ 'ಕ್ರಿಕೆಟ್ ಜಂಟಲ್‌ಮನ್ಸ್ ಗೇಮ್ ಅಷ್ಟೇ ಅಲ್ಲ, ಎಲ್ಲರ ಆಟ ಎಂದು ಒಕ್ಕಣೆಯನ್ನು ಬದಲಿಸಿಕೊಳ್ಳಿ' ಎಂಬ ಸಾಮಾಜಿಕ ಮಾಧ್ಯಮದ ಅಭಿಯಾನಕ್ಕೆ ಈಕೆಯಂತೆ ಭಾರತ ಕ್ರಿಕೆಟ್ ತಂಡದ ಹೆಣ್ಣುಮಕ್ಕಳು ಭಾಷ್ಯ ಬರೆದಿದ್ದಾರೆ.

ಒಬ್ಬಿಬ್ಬರಲ್ಲ; ಭಾರತ ತಂಡದ ಎಲ್ಲರೂ ಭಾಷ್ಯ ಬರೆದವರೇ. 215 ರನ್‌ಗಳನ್ನು ಕಲೆಹಾಕಿದ್ದೇ ಅಲ್ಲದೆ 22 ವಿಕೆಟ್‌ಗಳನ್ನು ಕಿತ್ತು ಸರಣಿ ಶ್ರೇಷ್ಠ ಆಟಗಾರ್ತಿಯಾದ ದೀಪ್ತಿ ಶರ್ಮಾ, ಟೂರ್ನಿಯುದ್ದಕ್ಕೂ ಅವಕಾಶ ಸಿಕ್ಕೀತೋ ಇಲ್ಲವೋ ಎಂಬ ತಲ್ಲಣದಲ್ಲಿ ಬಿಕ್ಕುತ್ತಾ... ಸೆಮಿಫೈನಲ್‌ನಲ್ಲಿ ಆಸ್ಟ್ರೇಲಿಯಾ ಎದುರು ಅವುಡುಗಚ್ಚಿ ನಿಂತು ಶತಕದಾಟವಾಡಿ ನಿಟ್ಟುಸಿರಿಟ್ಟು ಭಾವುಕರಾದ ಜೆಮಿಮಾ ರಾಡ್ರಿಗಸ್ ಸದ್ಯ ಎಲ್ಲರ ಕಣ್ಮಣಿಗಳು.

ಅನುಭವ ಎಂತಹ ಸಂಯಮ ಕಲಿಸುತ್ತದೆ ಎನ್ನುವುದರ ಪ್ರಾತ್ಯಕ್ಷಿಕೆಯಂತೆ ಆಡಿದ ಆರಂಭಿಕ ಆಟಗಾರ್ತಿ ಸ್ಮೃತಿ ಮಂದಾನ, 'ಆವೋ ಆವೋ' (ಬಾ ಬಾ) ಎಂದು ಫೀಲ್ಡರ್‌ಗಳನ್ನು ಚೆಂಡು ಹೋದ ದಿಕ್ಕಿನತ್ತ ಓಡುವಂತೆ ಪ್ರೇರೇಪಿಸಿದ–ಫೈನಲ್ ಪಂದ್ಯದಲ್ಲಿ ತಾವಾಡಿದ ಎರಡನೇ ಎಸೆತವನ್ನೇ ನಿರ್ಭಿಡೆಯಿಂದ ಸಿಕ್ಸರ್‌ಗೆ ಎತ್ತಿದ ವಿಕೆಟ್ ಕೀಪರ್ ಬ್ಯಾಟ್ಸ್‌ವುಮನ್ ರಿಚಾ ಘೋಷ್ ಆಟ ಮರೆಯಲಾದೀತೆ? ಬಿಳಿ ಚೆಂಡಿನಲ್ಲಿ ಎಡಗೈ ಸಾಂಪ್ರದಾಯಿಕ ಬೌಲಿಂಗ್ ಅನ್ನು ವಿಕೆಟ್ ಗುರಿಯಾಗಿಸಿಕೊಂಡೇ ಮಾಡುವುದು ಹೇಗೆಂದು ಪದೇಪದೇ ದರ್ಶನ ಮಾಡಿಸಿದ ಶ್ರೀ ಚರಣಿಗೆ ಒಳ್ಳೆಯ ಭವಿಷ್ಯವಿದೆ ಎಂಬ ಕ್ರಿಕೆಟ್ ಪರಿಣತರ ಶಹಬ್ಬಾಸ್‌ಗಿರಿಗೂ ಅರ್ಥವಿದೆ.

ಮುನ್ನೂರಕ್ಕೂ ಹೆಚ್ಚು ರನ್ ಗಳಿಸಿಯೂ ಕಾಲು ಉಳುಕಿದ್ದರಿಂದ ಪದಕಹಾರ ಹಾಕಿಸಿಕೊಳ್ಳುವ ಕ್ಷಣದ ಭಾಗವಾಗಲಾಗದೆ ಗಾಲಿ ಕುರ್ಚಿಯಲ್ಲಿ ಕುಳಿತೇ ಸಂಭ್ರಮದ ಹೂವಾದ ಪ್ರತೀಕಾ ರಾವಲ್ ಒಂದು ಭಾವುಕ ಅಧ್ಯಾಯವೇ ಹೌದು. ಆಲ್‌ರೌಂಡ್ ಆಟಗಾರ್ತಿಯರಿಗೆ ಭವ್ಯ ಭವಿಷ್ಯವಿದೆ ಎಂದು ಕೆಲವು ಉದಾಹರಣೆಗಳನ್ನು ಉಳಿಸಿದ ಅಮನ್ಜೋತ್ ಕೌರ್ ಹಾಗೂ ಈ ಎಲ್ಲರನ್ನೂ ಸಮರ್ಥವಾಗಿ ನಿರ್ವಹಿಸಿ, ನಾಯಕತ್ವದ ನೊಗವನ್ನು ಯಶಸ್ವಿಯಾಗಿ ಹೊತ್ತು ಸಾಗಿದ ಹರ್ಮನ್‌ಪ್ರೀತ್ ಕೌರ್ ಯಶೋಗಾಥೆಗೆ ಕನ್ನಡಿ ಹಿಡಿದರು.

ಕುದಿರಕ್ತದ ಯುವಕ–ಯುವತಿಯರ ಮನಃಸ್ಥಿತಿಯ ರೂಪಕ ಶಫಾಲಿ. ಹದಿನೈದನೇ ಪ್ರಾಯದಲ್ಲೇ ಭಾರತ ಅಂತರರಾಷ್ಟ್ರೀಯ ತಂಡದ ಪರವಾಗಿ ಟ್ವೆಂಟಿ20 ಪಂದ್ಯದಲ್ಲಿ ಆಡುವ ಅವಕಾಶ ಪಡೆದಿದ್ದವರು ಅವರು. ನಿರ್ಭಿಡೆಯ ಶೈಲಿಯ ಆಟಗಾರ್ತಿ. ಅದೇ ಫಾರ್ಮ್ ಕಳೆದುಕೊಳ್ಳಲು ಕೂಡ ಕಾರಣವಾಯಿತು. ತಂಡದಿಂದ ಹೊರಗುಳಿಯಬೇಕಾಯಿತು. ದೇಸಿ ಕ್ರಿಕೆಟ್‌ನಲ್ಲಿ ಅವರು ಮತ್ತೆ ಲೋಪ ಸರಿಪಡಿಸಿಕೊಂಡರು. ಫೈನಲ್ ಪಂದ್ಯ ಶುರುವಾಗುವ ಮೊದಲು ನಾಯಕಿ ಹರ್ಮನ್‌ಪ್ರೀತ್, 'ಎರಡು ಮೂರು ಓವರ್ ಬೌಲ್ ಮಾಡಬೇಕಾದೀತು.. ಸಿದ್ಧ ಇರು' ಎಂದು ಹೇಳಿದ್ದರು. 'ಹತ್ತೂ ಓವರ್ ಕೊಟ್ಟರೂ ಮಾಡುವೆ' ಎಂದು ಅವರು ಛಲದ ಉತ್ತರ ನೀಡಿದರು. ಅಷ್ಟೇ ಅಲ್ಲದೆ, ತಾವು ಮಾಡಿದ ಮೊದಲ ಎರಡು ಓವರ್‌ಗಳಲ್ಲೇ ಎರಡು ವಿಕೆಟ್‌ಗಳನ್ನೂ ಕಿತ್ತರು.

▶11

'ಸ್ಥಳೀಯ ಸಂಸ್ಥೆ ಮೀಸಲು ನಿಗದಿಗೆ 150 ದಿನ ಬೇಕು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಈ ತಿಂಗಳಾತ್ಯಕ್ಕೆ ಅವಧಿ ಮುಕ್ತಾಯಗೊಳ್ಳಲಿರುವ ರಾಜ್ಯದ 188 ನಗರ ಸ್ಥಳೀಯ ಸಂಸ್ಥೆಗಳ ವಾರ್ಡ್‌ವಾರು ಮೀಸಲಾತಿಯ ಅಂತಿಮ ಅಧಿಸೂಚನೆ ಹೊರಡಿಸಲು ಕನಿಷ್ಠ 150 ದಿನಗಳಾದರೂ ಬೇಕಾಗುತ್ತದೆ' ಎಂದು ರಾಜ್ಯ ಸರ್ಕಾರ ಹೈಕೋರ್ಟ್‌ಗೆ ಅರುಹಿದೆ.

'ಅವಧಿ ಮುಗಿಯಲಿರುವ ನಗರ ಸ್ಥಳೀಯ ಸಂಸ್ಥೆಗಳಿಗೆ ಆಡಳಿತಾಧಿಕಾರಿ ನೇಮಕ ಮಾಡುವ ಕ್ರಮಕ್ಕೆ ಮುಂದಾಗದಂತೆ ಸರ್ಕಾರಕ್ಕೆ ನಿರ್ದೇಶಿಸಬೇಕು' ಎಂದು ಕೋರಿ 65 ನಗರ ಸ್ಥಳೀಯ ಸಂಸ್ಥೆಗಳ ಚುನಾಯಿತ ಸದಸ್ಯರು ಪ್ರತ್ಯೇಕವಾಗಿ ಸಲ್ಲಿಸಿರುವ ರಿಟ್ ಅರ್ಜಿಗಳನ್ನು ನ್ಯಾಯಮೂರ್ತಿ ಎಸ್.ಸುನಿಲ್ ದತ್ ಯಾದವ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

▶6

ಡಿಜಿಟಲ್ ಅರೆಸ್ಟ್ ವಿರುದ್ಧ ಕಠಿಣ ಕಾನೂನು: ಸುಪ್ರೀಂ

17.82 ಲಕ್ಷ	₹5,489 ಕೋಟಿ	9.45 ಲಕ್ಷ	2.63 ಲಕ್ಷ
ಸೈಬರ್ ಅಪರಾಧ ಕುರಿತು ದಾಖಲಾದ ದೂರಿನ ಸಂಖ್ಯೆ	ವಂಚನೆ ಆಗದಂತೆ ತಡೆದ ಮೊತ್ತ	ವಂಚನೆಗೆ ಬಳಸಿದ್ದ, ದೂರಿನ ಬಳಿಕ ರದ್ದು ಮಾಡಲಾದ ಸಿಮ್ ಕಾರ್ಡ್‌ಗಳು	ವಂಚನೆಗೆ ಬಳಸಿದ್ದ ದೂರಿನ ಬಳಿಕ ರದ್ದು ಮಾಡಲಾದ ಐಎಂಇಐ ಸಂಖ್ಯೆ

ಆಧಾರ: 2025ರ ಆಗಸ್ಟ್ 6ರಂದು ಕೇಂದ್ರ ಗೃಹ ಸಚಿವಾಲಯವು ರಾಜ್ಯಸಭೆಗೆ ನೀಡಿದ ಉತ್ತರ

ಪ್ರಜಾವಾಣಿ ವಾರ್ತೆ/ಪಿಟಿಐ



ನವದೆಹಲಿ (ಪಿಟಿಐ): 'ಡಿಜಿಟಲ್ ಅರೆಸ್ಟ್' ಹೆಸರಿನಲ್ಲಿ ದೇಶದ ಜನರನ್ನು ಬೆದರಿಸಿ ₹3,000 ಕೋಟಿಗೂ ಹೆಚ್ಚು ಮೊತ್ತವನ್ನು ಸುಲಿಗೆ ಮಾಡಲಾಗಿದೆ ಎಂದು ಕೇಂದ್ರ ಗೃಹ ಸಚಿವಾಲಯ ಮತ್ತು ಸಿಬಿಐ ಸುಪ್ರೀಂ ಕೋರ್ಟ್‌ಗೆ ಸೋಮವಾರ ತಿಳಿಸಿವೆ. ಈ ಕುರಿತು ತೀವ್ರ ಆಘಾತ ವ್ಯಕ್ತಪಡಿಸಿರುವ ಸುಪ್ರೀಂ ಕೋರ್ಟ್, 'ಈ ಪಿಡುಗು ನಿಯಂತ್ರಣಕ್ಕೆ ಕಠಿಣ ಕ್ರಮ ಅಗತ್ಯ' ಎಂದು ಹೇಳಿದೆ.

ಹರಿಯಾಣದ ವೃದ್ಧ ದಂಪತಿ ತಾವು 'ಡಿಜಿಟಲ್ ಅರೆಸ್ಟ್'ನಲ್ಲಿ ₹1.5 ಕೋಟಿ ಕಳೆದುಕೊಂಡಿರುವ ಬಗ್ಗೆ ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಬಿ.ಆರ್. ಗವಾಯಿ ಅವರಿಗೆ ಪತ್ರ ಬರೆದಿದ್ದರು. ಇದನ್ನು ಆಧರಿಸಿ ನ್ಯಾಯಾಲಯವು ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡು ವಿಚಾರಣೆ ನಡೆಸುತ್ತಿದೆ.

ಎಲ್ಲ ಕೇಂದ್ರಾಡಳಿತ ಪ್ರದೇಶಗಳು ಮತ್ತು ರಾಜ್ಯಗಳು ತಮ್ಮ ವ್ಯಾಪ್ತಿಯಲ್ಲಿ ನಡೆದ ಇಂಥ ಪ್ರಕರಣಗಳ ಮಾಹಿತಿ ನೀಡುವಂತೆ ಸುಪ್ರೀಂ ಕೋರ್ಟ್ ಅ.27ರಂದು ನಡೆದ ವಿಚಾರಣೆ ವೇಳೆ ಸೂಚನೆ ನೀಡಿತ್ತು. ಇದರಂತೆ, ಕೇಂದ್ರ ಗೃಹ ಸಚಿವಾಲಯ ಮತ್ತು ಸಿಬಿಐ ಮುಚ್ಚಿದ ಲಕೋಟೆಯಲ್ಲಿ ವರದಿ ನೀಡಿವೆ.

ನ್ಯಾಯಮೂರ್ತಿಗಳಾದ ಸೂರ್ಯ ಕಾಂತ್, ಉಜ್ಜಲ್ ಭುಯಾನ್ ಮತ್ತು ಜಾಯ್ ಮಾಲ್ಯಾ ಬಾಗ್ಚಿ ಅವರಿರುವ ಪೀಠವು ಈ ವರದಿಯನ್ನು ಪರಿಶೀಲಿಸಿತು. 'ಗೃಹ ಸಚಿವಾಲಯ ಮತ್ತು ಸಿಬಿಐ ವರದಿಯನ್ನು ಪರಿಶೀಲಿಸಿ ನಮ್ಮ ಕಚೇರಿಯು ಸಣ್ಣ ವರದಿಯೊಂದನ್ನು ಸಿದ್ಧಪಡಿಸಿದೆ' ಎಂದು ಪೀಠ ತಿಳಿಸಿತು.

'ಡಿಜಿಟಲ್ ಅರೆಸ್ಟ್' ಎನ್ನುವುದು ನಾವು ಅಂದುಕೊಂಡಿದ್ದಕ್ಕಿಂತ ಬಹಳ ದೊಡ್ಡ ಸಮಸ್ಯೆಯಾಗಿ ಪರಿಣಮಿಸಿದೆ. ವರದಿಯನ್ನು ನೋಡಿದರೆ ದಿಗಿಲಾಗುತ್ತಿದೆ ಎಂದರು.

▶10

'ಕಠಿಣ ಆದೇಶವೇ ಬೇಕು'

ಜನರಿಂದ ₹3 ಸಾವಿರ ಕೋಟಿ ಸುಲಿಗೆ ಮಾಡಲಾಗಿದೆ ಎನ್ನುವುದು ಆಘಾತಕಾರಿಯಾದುದು. ವೃದ್ಧರನ್ನೇ ಗುರಿ ಮಾಡುತ್ತಿರುವುದು ಕೂಡ ಆಘಾತಕಾರಿಯೇ ಆಗಿದೆ. ಒಂದೇ ದೇಶದಲ್ಲಿ ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಪ್ರಕರಣ ವರದಿಯಾಗುತ್ತಿವೆ ಎಂದರೆ ಏನು? ಈ ಬಗ್ಗೆ ನಾವು ಕಠಿಣವಾದ ಮತ್ತು ಕಟ್ಟುನಿಟ್ಟಿನ ಆದೇಶ ನೀಡಲಿಲ್ಲವಾದರೆ, ಸಮಸ್ಯೆಯು ಉಲ್ಬಣಿಸುತ್ತದೆ. ನಮ್ಮ ಆದೇಶಗಳ ಮೂಲಕ ನಮ್ಮ ತನಿಖಾ ಸಂಸ್ಥೆಗಳಿಗೆ ಬಲ ತುಂಬಲೇಬೇಕಾಗಿದೆ

ಸುಪ್ರೀಂ ಕೋರ್ಟ್

'ಸ್ಕ್ಯಾಮ್ ಕಾಂಪೌಂಡ್ಸ್'ಗಳ ಕಾರ್ಯಾಚರಣೆ'

ನ್ಯಾ. ಸೂರ್ಯ ಕಾಂತ್

'ಆಗ್ನೇಯ ಏಷ್ಯಾ ಭಾಗದಲ್ಲಿನ ಕೆಲವು ದೇಶಗಳಲ್ಲಿ ಸೈಬರ್ ಅಪರಾಧ ಎಸಗಲು ದೊಡ್ಡ ಮಟ್ಟದ ಕೇಂದ್ರಗಳನ್ನು (ಸ್ಕ್ಯಾಮ್ ಕಾಂಪೌಂಡ್ಸ್) ಸ್ಥಾಪಿಸಲಾಗಿದೆ. ಅಲ್ಲಿಂದಲೇ ಸೈಬರ್ ಅಪರಾಧ ಸಿಂಡಿಕೇಟ್‌ಗಳು ಕಾರ್ಯನಿರ್ವಹಿಸುತ್ತಿವೆ ಎಂಬುದನ್ನು ಸಿಬಿಐ ಗುರುತಿಸಿದೆ' ಎಂದು ನ್ಯಾ. ಸೂರ್ಯ ಕಾಂತ್ ಹೇಳಿದರು.

'ಈ ಕೇಂದ್ರಗಳಲ್ಲಿ ಆರ್ಥಿಕ, ತಾಂತ್ರಿಕವಾದ ಎಲ್ಲ ಸೌಲಭ್ಯಗಳೂ ಇವೆ. ಜೊತೆಗೆ, ಇಂಥ ಸಿಂಡಿಕೇಟ್‌ಗಳನ್ನು ನಿರ್ವಹಿಸಲು ಜನರನ್ನು ನೇಮಿಸಿಕೊಳ್ಳಲಾಗಿದೆ ಎಂದು ಸಿಬಿಐ ಹೇಳಿದೆ' ಎಂದರು.

ತೆಲಂಗಾಣದ ರಂಗಾರೆಡ್ಡಿ ಜಿಲ್ಲೆಯ ಚೆವೆಲ್ಲಾದಲ್ಲಿ ಸೋಮವಾರ ಸಾರಿಗೆ ಸಂಸ್ಥೆಗೆ ಸೇರಿದ ಬಸ್‌ಗೆ ಜಲ್ಲಿಕಲ್ಲು ತುಂಬಿದ ಲಾರಿ ಡಿಕ್ಕಿ ಹೊಡೆದ ಬಳಿಕ ನಜ್ಜುಗುಜ್ಜಾದ ಬಸ್ –ಪಿಟಿಐ ಚಿತ್ರ

ತೆಲಂಗಾಣದ ರಂಗಾರೆಡ್ಡಿ ಜಿಲ್ಲೆಯಲ್ಲಿ ದುರ್ಘಟನೆ

ಬಸ್–ಟಿಪ್ಪರ್ ಡಿಕ್ಕಿ: 19 ಸಾವು

ಹೈದರಾಬಾದ್, ತೆಲಂಗಾಣ (ಪಿಟಿಐ): ಜಲ್ಲಿಕಲ್ಲು ಸಾಗಿಸುತ್ತಿದ್ದ ಲಾರಿಯೊಂದು (ಟಿಪ್ಪರ್) ತೆಲಂಗಾಣ ಸಾರಿಗೆ ಸಂಸ್ಥೆ ಬಸ್‌ಗೆ ಡಿಕ್ಕಿ ಹೊಡೆದದ್ದರಿಂದ 19 ಮಂದಿ ಮೃತಪಟ್ಟು, 22 ಮಂದಿ ಗಾಯಗೊಂಡ ಘಟನೆ ಇಲ್ಲಿನ ರಂಗಾರೆಡ್ಡಿ ಜಿಲ್ಲೆಯಲ್ಲಿ ಸೋಮವಾರ ಬೆಳಿಗ್ಗೆ 6.15ರ ವೇಳೆಗೆ ಸಂಭವಿಸಿದೆ.

'ವಿಕಾರಾಬಾದ್ ಜಿಲ್ಲೆಯ ತಾಂಡುರ್ ಪಟ್ಟಣದಿಂದ ಹೈದರಾಬಾದ್‌ಗೆ ಬಸ್ ತೆರಳುತ್ತಿತ್ತು. ಚೆವೆಲ್ಲಾದ ಮಿರ್ಜಾಗುಡದಲ್ಲಿ ನಡೆದ ಅಪಘಾತದ ಬಳಿಕ ಟಿಪ್ಪರ್‌ನಲ್ಲಿದ್ದ ಜಲ್ಲಿಕಲ್ಲುಗಳು ಬಸ್‌ಗೆ ಒಳಗೆ ತೂರಿಹೋಗಿ, ಪ್ರಯಾಣಿಕರು ಹೊರಬರಲು ಸಾಧ್ಯ ಆಗದೇ ಸಿಲುಕಿಕೊಂಡರು. ನಂತರ, ರಕ್ಷಣಾ ಕಾರ್ಯಕರ್ತರು ಜೆಸಿಬಿ ಯಂತ್ರ ಬಳಸಿ, ಒಳಗೆ ಸಿಲುಕಿಕೊಂಡವರನ್ನು ಹೊರ ಕರೆತಂದರು. 19 ಮಂದಿ ಮೃತರಲ್ಲಿ ಒಂದು ಹೆಣ್ಣು ಮಗು ಸೇರಿದಂತೆ 13 ಮಂದಿ ಮಹಿಳೆಯರು ಸೇರಿದ್ದಾರೆ' ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

▶7

ಮುಖ್ಯಾಂಶಗಳು

- ತಾಂಡುರ್‌ನಿಂದ ಹೈದರಾಬಾದ್‌ಗೆ ತೆರಳುತ್ತಿದ್ದ ಬಸ್
- ಬಸ್‌ನೊಳಗೆ ತೂರಿಹೋದ ಜಲ್ಲಿಕಲ್ಲು
- ಹೊರಬರಲು ಸಾಧ್ಯವಾಗದೇ ಹೆಚ್ಚಿದ ಸಾವು

ನಿಂತಿದ್ದ ವಾಹನಗಳಿಗೆ ಟಿಪ್ಪರ್ ಡಿಕ್ಕಿ: 13 ಸಾವು

ಜೈಪುರ, ರಾಜಸ್ತಾನ (ಪಿಟಿಐ): ವೇಗವಾಗಿ ಬಂದ ಟಿಪ್ಪರ್‌ವೊಂದು ನಿಂತಿದ್ದ 17 ವಾಹನಗಳಿಗೆ ಡಿಕ್ಕಿ ಹೊಡೆದು, 13 ಮಂದಿ ಮೃತಪಟ್ಟು, 10 ಮಂದಿ ಗಾಯಗೊಂಡ ಘಟನೆ ಇಲ್ಲಿನ ಜನನಿಬಿಡ ಹರ್ಮಡಾ ಪ್ರದೇಶದ ಲೊಹಾ ಮಂಡಿಯಲ್ಲಿ ಸೋಮವಾರ ಮಧ್ಯಾಹ್ನ ನಡೆದಿದೆ. ರಸ್ತೆಯುದ್ದಕ್ಕೂ ಶವಗಳು ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದವು. ಟಿಪ್ಪರ್‌ನ ಹೊಡೆತದ ರಭಸಕ್ಕೆ ಹತ್ತಾರು ಕಾರು, ಬೈಕ್‌ಗಳು ನಜ್ಜುಗುಜ್ಜಾದವು.

▶7

ಜಿಬಿಎ ಚುನಾವಣೆ: ವಾರ್ಡ್ ಮರುವಿಂಗಡಣೆಯ ಅಂತಿಮ ಅಧಿಸೂಚನೆ

ಮತ್ತೆ 15 ದಿನಗಳ ಕಾಲಾವಕಾಶ

ಪ್ರಜಾವಾಣಿ ವಾರ್ತೆ

ನವದೆಹಲಿ: ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ಎಲ್ಲ ಐದು ಪಾಲಿಕೆಗಳ ವಾರ್ಡ್‌ಗಳ ಮರುವಿಂಗಡಣೆಯ ಅಂತಿಮ ಅಧಿಸೂಚನೆ ಪ್ರಕಟಿಸಲು ರಾಜ್ಯ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ 15 ದಿನಗಳ ಕಾಲಾವಕಾಶ ನೀಡಿದೆ.

ರಾಜ್ಯ ಸರ್ಕಾರದ ಪರ ಹಿರಿಯ ವಕೀಲ ಅಭಿಷೇಕ್ ಮನುಸಿಂಘ್ವಿ ವಾದ ಆಲಿಸಿದ ನ್ಯಾಯಮೂರ್ತಿಗಳಾದ ಸೂರ್ಯ ಕಾಂತ್, ಉಜ್ಜಲ್ ಭುಯಾನ್, ಜಾಯ್‌ಮಲ್ಯ ಬಾಗ್ಚಿ ಅವರಿದ್ದ ಪೀಠವು ಸರ್ಕಾರಕ್ಕೆ ಕಾಲಾವಕಾಶ ನೀಡಿತು.

ವಾದ ಮಂಡಿಸಿದ ಸಿಂಘ್ವಿ, 'ವಾರ್ಡ್ ಮರುವಿಂಗಡಣೆ ಪ್ರಕ್ರಿಯೆ ಮುಗಿಸಲು ಇನ್ನೂ 15 ದಿನಗಳ ಕಾಲಾವಕಾಶ ನೀಡಬೇಕು' ಎಂದು ಮನವಿ ಮಾಡಿದರು. 'ಜಿಬಿಎ ವ್ಯಾಪ್ತಿಯಲ್ಲಿ ಜಾತಿವಾರು ಸಮೀಕ್ಷೆ ನಡೆಯುತ್ತಿದೆ. ಅನೇಕ ಸಮೀಕ್ಷಕರು ದತ್ತಾಂಶ ಸಂಗ್ರಹಿಸುವಲ್ಲಿ ವಿಳಂಬ ಮಾಡಿದ್ದಾರೆ. ಇದರಿಂದಾಗಿ ಎಲ್ಲ ಮಾಹಿತಿ ಸಂಗ್ರಹಿಸಲು ಹೆಚ್ಚುವರಿ ಸಮಯದ ಅಗತ್ಯವಿದೆ. ಉಳಿದೆಲ್ಲ ಪ್ರಕ್ರಿಯೆಗಳು ಪೂರ್ಣಗೊಂಡಿವೆ' ಎಂದರು.

'ರಾಜ್ಯ ಸರ್ಕಾರ ಸಲ್ಲಿಸಿದ ಅಫಿಡವಿಟ್‌ನಲ್ಲಿ ಉಲ್ಲೇಖಿಸಲಾದ ಕಾರಣಗಳನ್ನು ಪರಿಗಣಿಸಿ, ನ್ಯಾಯದ ಹಿತದೃಷ್ಟಿಯಿಂದ 15 ದಿನಗಳ ಹೆಚ್ಚುವರಿ ಸಮಯ ನೀಡುವುದು ಸೂಕ್ತವೆಂದು ನಾವು ಪರಿಗಣಿಸಿದ್ದೇವೆ. ನವೆಂಬರ್ 15ರೊಳಗೆ ವಾರ್ಡ್ ಮರುವಿಂಗಡಣೆ ಪ್ರಕ್ರಿಯೆ ಪೂರ್ಣಗೊಳಿಸಬೇಕು. ವಾರ್ಡ್ ಮೀಸಲಾತಿ ಇತ್ಯಾದಿಗಳನ್ನು ಡಿಸೆಂಬರ್ 15ರೊಳಗೆ ಮುಗಿಸಬೇಕು' ಎಂದು ಪೀಠ ನಿರ್ದೇಶನ ನೀಡಿತು.

ಅರ್ಜಿದಾರರ ಪರ ವಕೀಲರು, 'ಬಿಬಿಎಂಪಿಗೆ ಚುನಾವಣೆ ನಡೆದು ಹಲವು ವರ್ಷಗಳಾಗಿವೆ. ಚುನಾವಣೆ ನಡೆಸಲು ಸರ್ಕಾರ ವಿಳಂಬ ಧೋರಣೆ ಅನುಸರಿಸುತ್ತಿದೆ' ಎಂದು ಆಕ್ಷೇಪ ವ್ಯಕ್ತಪಡಿಸಿದರು.

ಬಿಬಿಎಂಪಿ ಸದಸ್ಯರ ಅಧಿಕಾರ ಅವಧಿಯು 2019ರ ಸೆಪ್ಟೆಂಬರ್ 10ರಂದು ಪೂರ್ಣಗೊಂಡಿತ್ತು. ಆರು ವಾರಗಳಲ್ಲಿ ಬಿಬಿಎಂಪಿ ಚುನಾವಣೆ ನಡೆಸುವಂತೆ ರಾಜ್ಯ ಚುನಾವಣಾ ಆಯೋಗಕ್ಕೆ ಸೂಚಿಸಿ ಹೈಕೋರ್ಟ್ ಹೊರಡಿಸಿದ್ದ ಆದೇಶವನ್ನು ಸುಪ್ರೀಂ ಕೋರ್ಟ್ 2020ರ ಡಿಸೆಂಬರ್ 18ರಂದು ಅಮಾನತಿನಲ್ಲಿ ಇರಿಸಿತ್ತು. ಕರ್ನಾಟಕ ಮುನಿಸಿಪಲ್ ಕಾರ್ಪೊರೇಷನ್ (ತಿದ್ದುಪಡಿ) ಕಾಯ್ದೆ– 2020ರ ಅನ್ವಯ ರಚಿಸಲಾಗುವ 243 ವಾರ್ಡ್‌ಗಳ ಬದಲಿಗೆ, ಮೊದಲಿದ್ದ 198 ವಾರ್ಡ್‌ಗಳಿಗೆ ಚುನಾವಣೆ ನಡೆಸುವಂತೆ ಹೈಕೋರ್ಟ್ ನೀಡಿದ್ದ ಆದೇಶದ ಸಿಂಧುತ್ವ ಪ್ರಶ್ನಿಸಿ ಕರ್ನಾಟಕ ಸರ್ಕಾರವು ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿತ್ತು.

₹7,545 ಕೋಟಿ ಮೌಲ್ಯದ ಅನಿಲ್ ಅಂಬಾನಿ ಆಸ್ತಿ ಜಪ್ತಿ

ಅನಿಲ್ ಅಂಬಾನಿ

ನವದೆಹಲಿ (ಪಿಟಿಐ): ಹಣ ಅಕ್ರಮ ವರ್ಗಾವಣೆ ಪ್ರಕರಣ ತನಿಖೆಯ ಭಾಗವಾಗಿ ರಿಲಯನ್ಸ್ ಸಮೂಹದ ಅಧ್ಯಕ್ಷ ಅನಿಲ್ ಅಂಬಾನಿ, ಅವರ ಕಂಪನಿಗಳು ಮತ್ತು ಸಂಬಂಧಿತ ಸಂಸ್ಥೆಗಳಿಗೆ ಸೇರಿದ ₹7,545 ಕೋಟಿ ಮೌಲ್ಯದ ಆಸ್ತಿ ಜಪ್ತಿ ಮಾಡಲಾಗಿದೆ ಎಂದು ಜಾರಿ ನಿರ್ದೇಶನಾಲಯ (ಇ.ಡಿ) ತಿಳಿಸಿದೆ.

▶10

ಚಿನಕುರುಳಿ ಪ್ರಕಾಶ್ ಶೆಟ್ಟಿ

ಖಾಸಗಿ ಕಾಲೇಜುಗಳ ಸಂಖ್ಯೆ ಹೆಚ್ಚಳ • ಸರ್ಕಾರಿ ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ಕೊರತೆ

ಪಿ.ಯು: 1.18 ಲಕ್ಷ ವಿದ್ಯಾರ್ಥಿಗಳು ಬೇಕು!

• ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ರಾಜ್ಯದಲ್ಲಿ ಪದವಿಪೂರ್ವ ಕಾಲೇಜುಗಳ ಸಂಖ್ಯೆ ಹೆಚ್ಚುತ್ತಿದ್ದು, ಎಸ್‌ಎಸ್‌ಎಲ್‌ಸಿ ಉತ್ತೀರ್ಣರಾಗುವ ವಿದ್ಯಾರ್ಥಿಗಳ ಸಂಖ್ಯೆಗಿಂತ ಪ್ರಥಮ ಪಿಯುಸಿಯ ಸೀಟುಗಳ ಸಂಖ್ಯೆ ಪ್ರತಿವರ್ಷ ಏರಿಕೆ‌ಆಗುತ್ತಿದೆ. ಹೀಗಾಗಿ, ಈ ಸಾಲಿನಲ್ಲಿ ಪಿಯುಸಿಗೆ 1.18 ಲಕ್ಷ ವಿದ್ಯಾರ್ಥಿಗಳ ಕೊರತೆ ಎದುರಾಗಿದೆ.

ಐದು ವರ್ಷಗಳಲ್ಲಿ ಖಾಸಗಿ ಕಾಲೇಜುಗಳ ಸಂಖ್ಯೆಯಲ್ಲಿ ಭಾರಿ ಏರಿಕೆಯಾಗಿದೆ. ಪ್ರಸ್ತುತ 3,623 ಖಾಸಗಿ ಕಾಲೇಜುಗಳಿವೆ. ನಿಗದಿತ ಪಠ್ಯದ ಜತೆಗೆ ಕಾಲೇಜುಗಳಲ್ಲೇ ನೀಟ್, ಸಿಇಟಿ, ಜೆಇಇ ಕೋರ್ಸ್‌ಗಳಿಗೆ ತರಬೇತಿ ನೀಡುತ್ತಿರುವುದರಿಂದ ವಿಜ್ಞಾನ ವಿಷಯ ಓದುವ ವಿದ್ಯಾರ್ಥಿಗಳನ್ನು ಆಕರ್ಷಿಸು ತ್ತಿವೆ. ದುಬಾರಿ ಶುಲ್ಕ ವಿಧಿಸಿದರೂ ಪೋಷಕರು ಖಾಸಗಿ ಕಾಲೇಜುಗಳತ್ತ ಒಲವು ತೋರುತ್ತಿದ್ದಾರೆ. ಇದರ ಪರಿಣಾಮ ನೇರವಾಗಿ ಸರ್ಕಾರಿ ಹಾಗೂ ಅನುದಾನಿತ ಕಾಲೇಜುಗಳ ಮೇಲೆ ಬೀರುತ್ತಿದ್ದು, ಹಲವು ಕಾಲೇಜುಗಳು ಬಾಗಿಲು ಮುಚ್ಚುವ ಸ್ಥಿತಿಗೆ ತಲುಪಿವೆ.

ಸರ್ಕಾರಿ ಪದವಿಪೂರ್ವ ಕಾಲೇಜುಗಳಿಗೆ ಪ್ರವೇಶ ಪಡೆಯುವ ಬಾಲಕಿಯರಿಗೆ ಸರ್ಕಾರ ಉಚಿತ ಶಿಕ್ಷಣ ನೀಡುತ್ತಿದೆ. ಶುಲ್ಕ ಮರುಪಾವತಿ ಮಾಡುತ್ತಿದೆ. ಬಹುತೇಕ ಕಾಲೇಜುಗಳಲ್ಲಿ ಎರಡು ವರ್ಷಗಳಿಂದ ಉಚಿತವಾಗಿ ಸಿಇಟಿ, ನೀಟ್, ಜೆಇಇ ಕೋರ್ಸ್‌ಗಳಿಗೆ ಉಚಿತ ತರಬೇತಿ ನೀಡಲು ವ್ಯವಸ್ಥೆ ಮಾಡಿದೆ. ಹಲವು ಕಾಲೇಜುಗಳಲ್ಲಿ ಸ್ಮಾರ್ಟ್ ಕ್ಲಾಸ್, ಡಿಜಿಟಲ್ ಲ್ಯಾಬ್ ಸೌಲಭ್ಯ ಕಲ್ಪಿಸಲಾಗಿದೆ.



▶10

ಸಂಕಷ್ಟದಲ್ಲಿ ಸರ್ಕಾರಿ ಪಿಯು ಕಾಲೇಜುಗಳು

ಪ್ರಸ್ತುತ ಸರ್ಕಾರಿ ಪಿಯು ಕಾಲೇಜುಗಳ ಸಂಖ್ಯೆ 1,319 ಹಾಗೂ ಅನುದಾನಿತ ಕಾಲೇಜುಗಳ ಸಂಖ್ಯೆ 815ಕ್ಕೆ ಕುಸಿದಿವೆ.

'ಖಾಸಗಿ ಕಾಲೇಜುಗಳಿಗೆ ಕಡಿವಾಣ ಹಾಕದಿದ್ದರೆ ಕೆಲವೇ ವರ್ಷಗಳಲ್ಲಿ ಸರ್ಕಾರಿ ಕಾಲೇಜುಗಳು ಶಾಶ್ವತವಾಗಿ ಬಾಗಿಲು ಮುಚ್ಚಬೇಕಾಗುತ್ತದೆ. ಸರ್ಕಾರಿ ಕಾಲೇಜುಗಳ ಉಳಿವಿಗಾಗಿ ಕರ್ನಾಟಕ ಶೈಕ್ಷಣಿಕ ಸಂಸ್ಥೆಗಳ ವರ್ಗೀಕರಣ ಮತ್ತು ನೋಂದಣಿ ನಿಯಮಗಳು–1997 ಕಟ್ಟುನಿಟ್ಟಾಗಿ ಜಾರಿಗೆ ತರಬೇಕು. ಹೊಸ ಕಾಲೇಜುಗಳಿಗೆ ಅನುಮತಿ ನೀಡುವಾಗ ಆ ಪ್ರದೇಶದ ಜನಸಂಖ್ಯೆ, ಪ್ರೌಢಶಾಲಾ ವಿದ್ಯಾರ್ಥಿಗಳ ಪ್ರಮಾಣ, ಸಮೀಪದ ಕಾಲೇಜುಗಳ ಅಂತರ, ಅವುಗಳ ಸಂಖ್ಯೆ ಹಾಗೂ ಸ್ಥಿತಿಗತಿ, ಪರಿಶಿಷ್ಟರು, ಹಿಂದುಳಿದವರು, ಅಂಗವಿಕಲ ಮಕ್ಕಳ ಶೈಕ್ಷಣಿಕ ಅಗತ್ಯ ಮೊದಲಾದ ಅಂಶಗಳನ್ನು ಪರಿಗಣನೆಗೆ ತೆಗೆದುಕೊಳ್ಳಬೇಕು. ಅಗತ್ಯವಿದ್ದರೆ ನಿಯಮಗಳಿಗೆ ಸೂಕ್ತ ತಿದ್ದುಪಡಿ ತರಬೇಕು' ಎಂದು ಒತ್ತಾಯಿಸುತ್ತಾರೆ ಕರ್ನಾಟಕ ರಾಜ್ಯ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರ ಸಂಘದ ಅಧ್ಯಕ್ಷ ನಿಂಗೇಗೌಡ ಎ.ಎಚ್.

> **ಮುಂದಿನ ಮೂರು ವರ್ಷಗಳವರೆಗೆ ಯಾವುದೇ ಹೊಸ ಖಾಸಗಿ ಕಾಲೇಜುಗಳಿಗೆ ಅನುಮತಿ ನೀಡಬಾರದು. ಸರ್ಕಾರಿ ಕಾಲೇಜುಗಳನ್ನು ಬಲವರ್ಧನೆಗೊಳಿಸಬೇಕು**
>
> **ನಿಂಗೇಗೌಡ ಎ.ಎಚ್,** ಅಧ್ಯಕ್ಷ, ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರ ಸಂಘ

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ

ಪಾಲಿಕೆಗಳ ಬಜೆಟ್ ಅರ್ಧದಷ್ಟು ಕಡಿತ

ಜಿಬಿಎ ಸಭೆಯಲ್ಲಿ ಅನುಮೋದಿತ ಬಜೆಟ್‌ಗೆ ನಗರಾಭಿವೃದ್ಧಿ ಇಲಾಖೆಯಿಂದ ಪರಿಷ್ಕರಣೆ

● ಆರ್. ಮಂಜುನಾಥ್

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ನಡೆದ ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ಮೊದಲ ಸಭೆಯಲ್ಲಿ ಅನುಮೋದನೆಯಾಗಿದ್ದ ಐದು ನಗರ ಪಾಲಿಕೆಗಳ ಬಜೆಟ್ ಅನ್ನು ಅರ್ಧಕ್ಕಿಂತ ಹೆಚ್ಚು ಕಡಿತಗೊಳಿಸಿ ನಗರಾಭಿವೃದ್ಧಿ ಇಲಾಖೆ ಅನುಮೋದನೆ ನೀಡಿದೆ.

ಅಕ್ಟೋಬರ್ 10ರಂದು ನಡೆದ ಜಿಬಿಎ ಸಭೆಯಲ್ಲಿ, ಬಿಬಿಎಂಪಿ ಯಾಗಿದ್ದಾಗ 2025–26ನೇ ಸಾಲಿಗೆ ಮಂಡಿಸಲಾಗಿದ್ದ ₹20,440.33 ಕೋಟಿ ಬಜೆಟ್ ಅನ್ನು, ಐದು ನಗರ ಪಾಲಿಕೆಗಳಿಗೆ ವಿಭಜನೆ ಮಾಡಿದ್ದ ಬಜೆಟ್‌ಗೆ ಅನುಮೋದನೆ ದೊರೆತಿತ್ತು. ಒಟ್ಟಾರೆ ಬಜೆಟ್ ಗಾತ್ರ ₹7,972.66 ಕೋಟಿ ಯಷ್ಟಾಗಿತ್ತು. ಇದನ್ನು ₹6,001 ಕೋಟಿಗೆ ಕಡಿತಗೊಳಿಸಿ, ಯಾವುದಕ್ಕೆ ಎಷ್ಟು ವೆಚ್ಚ ಮಾಡಬೇಕು ಎಂಬುದನ್ನು 'ಬಜೆಟ್ ಕೋಡ್' ನೀಡಿ ವೆಚ್ಚಗಳನ್ನು ಮರುವಿಂಗಡಿಸಲಾಗಿದೆ.

2025ರ ಸೆಪ್ಟೆಂಬರ್ 1ರಿಂದ 2026ರ ಮಾರ್ಚ್ 31ರವರೆಗೆ ಐದು ನಗರ ಪಾಲಿಕೆಗಳು ಹಾಗೂ ಜಿಬಿಎ ಬಜೆಟ್ ಅನ್ನು ಮಂಜೂರು ಮಾಡಲಾಗಿದ್ದು, ಒಟ್ಟಾರೆ ಬಜೆಟ್ ಗಾತ್ರದಲ್ಲಿ ಜಿಬಿಎ ಪಾಲು ₹2,932 ಕೋಟಿಯಾಗಿದೆ.

ಕೌನ್ಸಿಲ್, ಸಾಮಾನ್ಯ ಆಡಳಿತ, ತೋಟಗಾರಿಕೆ, ಸಾರ್ವಜನಿಕ ಶಿಕ್ಷಣ, ಸಾರ್ವಜನಿಕ ಆರೋಗ್ಯ, ವೈದ್ಯಕೀಯ, ಸಾರ್ವಜನಿಕ ಕಾಮಗಾರಿ, ಕಂದಾಯ, ಘನತ್ಯಾಜ್ಯ ನಿರ್ವಹಣೆ, ನಗರ ಯೋಜನೆ, ನಗರ ಅರಣ್ಯೀಕರಣ, ಕಲ್ಯಾಣ ವಿಭಾಗಗಳಲ್ಲಿ ಕಾಮಗಾರಿಗಳಿಗೆ ಕೋಡ್ ನೀಡಿ, ಯಾವ ನಗರ ಪಾಲಿಕೆಗಳು ಎಷ್ಟು ಹಣ ವೆಚ್ಚ ಮಾಡಬೇಕು ಎಂಬುದನ್ನೂ ತಿಳಿಸಲಾಗಿದೆ.

ನಗರ ಪಾಲಿಕೆಗಳ ಚುನಾವಣೆಗಾಗಿ ₹100 ಕೋಟಿಯನ್ನು ಮೀಸಲಿಡಲಾಗಿದ್ದು, ಅದನ್ನು ಜಿಬಿಎ ಬಾಬ್ತಿನಲ್ಲಿ ವೆಚ್ಚ ಮಾಡಲಾಗುತ್ತದೆ. ಬಜೆಟ್‌ನ ಬಹುಪಾಲು ಮೊತ್ತ ಘನತ್ಯಾಜ್ಯ ನಿರ್ವಹಣೆಗೆ ನೀಡಲಾಗುತ್ತಿದ್ದು, ನಗರ ಪಾಲಿಕೆಗಳ ಆದಾಯದಿಂದಲೇ ಅದನ್ನು ಭರಿಸಬೇಕಾಗುತ್ತದೆ.

₹7,972.66 ಕೋಟಿ ಜಿಬಿಎ ಸಭೆ ಅನುಮೋದಿಸಿದ್ದ 5 ನಗರ ಪಾಲಿಕೆಗಳ ಬಜೆಟ್

₹6,001 ಕೋಟಿ ಜಿಬಿಎ– ಐದು ನಗರ ಪಾಲಿಕೆಗಳಿಗೆ ನಗರಾಭಿವೃದ್ಧಿ ಇಲಾಖೆ ಅನುಮೋದನೆ ನೀಡಿರುವ ಬಜೆಟ್

₹2,932 ಕೋಟಿ ಬಜೆಟ್‌ನಲ್ಲಿ ಜಿಬಿಎ ಪಾಲು

₹3,069 ಕೋಟಿ ನಗರಾಭಿವೃದ್ಧಿ ಇಲಾಖೆ ಅನುಮೋದಿಸಿರುವ 5 ನಗರ ಪಾಲಿಕೆಗಳ ಬಜೆಟ್

ಯಾವುದಕ್ಕೆ ಎಷ್ಟು ವೆಚ್ಚ?

₹874 ಕೋಟಿ	ಬಿಎಸ್‌ಡಬ್ಲ್ಯುಎಂಎಲ್‌ಗೆ ಆಡಳಿತ, ತ್ಯಾಜ್ಯ ಸಂಸ್ಕರಣಾ ಘಟಕ ನಿರ್ವಹಣೆ, ಅಭಿವೃದ್ಧಿ ಕಾರ್ಯ
₹500 ಕೋಟಿ	ಬಾಕಿ ಉಳಿದಿರುವ ಬಿಲ್ ಪಾವತಿ
₹157.39 ಕೋಟಿ	ಬೀದಿ ದೀಪಗಳಿಗೆ ವಿದ್ಯುತ್
₹100 ಕೋಟಿ	ಚುನಾವಣೆ ವೆಚ್ಚ
₹67 ಕೋಟಿ	ಉದ್ಯಾನಗಳ ನಿರ್ವಹಣೆ
₹65.62 ಕೋಟಿ	ಸ್ಥಳೀಯ ರಸ್ತೆಗಳ ದುರಸ್ತಿ
₹43.76 ಕೋಟಿ	ಬೀದಿ ದೀಪಗಳ ವಾರ್ಷಿಕ ನಿರ್ವಹಣೆ
₹35.03 ಕೋಟಿ	ಬೀದಿ ನಾಯಿಗಳ ನಿಯಂತ್ರಣ
₹35 ಕೋಟಿ	ಇಂದಿರಾ ಕ್ಯಾಂಟೀನ್
₹20.40 ಕೋಟಿ	ಸೊಳ್ಳೆ ನಿಯಂತ್ರಣ

ಐದು ನಗರ ಪಾಲಿಕೆಗಳ ಬಜೆಟ್

(ಸೆಪ್ಟೆಂಬರ್ 2025ರಿಂದ ಮಾರ್ಚ್ 2025– ₹ಕೋಟಿಗಳಲ್ಲಿ)



ಆಚರಣೆಗಳಿಗೆ ₹6.29 ಕೋಟಿ ವೆಚ್ಚ

- ಸ್ವಾತಂತ್ರ್ಯ ದಿನ, ಗಣರಾಜ್ಯೋತ್ಸವ, ರಾಜ್ಯೋತ್ಸವ ಆಚರಣೆಗೆ ಐದು ನಗರ ಪಾಲಿಕೆಗಳಿಂದ ₹11 ಲಕ್ಷ, ಜಿಬಿಎಯಿಂದ ₹1.23 ಕೋಟಿ
- ನಾಡಪ್ರಭು ಕೆಂಪೇಗೌಡ ದಿನಾಚರಣೆಗೆ ಜಿಬಿಎಯಿಂದ ₹1.46 ಕೋಟಿ
- ಪೌರಕಾರ್ಮಿಕರ ದಿನಾಚರಣೆಗೆ ನಗರ ಪಾಲಿಕೆಗಳಿಂದ ₹17 ಲಕ್ಷ, ಜಿಬಿಎಯಿಂದ ₹41 ಲಕ್ಷ ಖರ್ಚು
- ಬಿ.ಆರ್. ಅಂಬೇಡ್ಕರ್ ಜನ್ಮದಿನಾಚರಣೆಗೆ ಜಿಬಿಎಯಿಂದ ₹1.17 ಕೋಟಿ
- ಕಡಲೆಕಾಯಿ ಪರಿಷೆಗೆ ಪಶ್ಚಿಮ ನಗರ ಪಾಲಿಕೆ– ₹13 ಲಕ್ಷ, ದಕ್ಷಿಣ ನಗರ ಪಾಲಿಕೆ– ₹12 ಲಕ್ಷ, ಕೇಂದ್ರ ನಗರ ಪಾಲಿಕೆ– ₹4 ಲಕ್ಷ
- ದಸರಾ ಆಚರಣೆಗೆ ಜಿಬಿಎಯಿಂದ ₹58 ಲಕ್ಷ
- ಕರಗ ಆಚರಣೆಗೆ ಪಶ್ಚಿಮ ನಗರ ಪಾಲಿಕೆ– ₹13 ಲಕ್ಷ, ದಕ್ಷಿಣ ನಗರ ಪಾಲಿಕೆ ₹12 ಲಕ್ಷ, ಕೇಂದ್ರ ನಗರ ಪಾಲಿಕೆ– ₹4 ಲಕ್ಷ, ಜಿಬಿಎ– ₹58 ಲಕ್ಷ
- ಜನಸ್ಪಂದನಾ, ನಗರ ಪಾಲಿಕೆಗಳ ಸಮಾರಂಭ, ಸರ್ಕಾರಿ ಯೋಜನೆಗಳ ಪ್ರಚಾರಕ್ಕೆ ಐದು ನಗರ ಪಾಲಿಕೆ– ಜಿಬಿಎ ₹47.12 ಕೋಟಿ ವೆಚ್ಚ ಮಾಡಲಿವೆ.

ಮಹಿಳೆ ಮೇಲೆ ದೌರ್ಜನ್ಯ: ಕ್ರಮಕ್ಕೆ ಆಯೋಗ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಿಳೆ ಮೇಲೆ ಪೊಲೀಸರು ದೌರ್ಜನ್ಯ ಎಸಗಿರುವ ಪ್ರಕರಣಕ್ಕೆ ಸಂಬಂಧಿಸಿದಂತೆ ತನಿಖೆ ನಡೆಸಿ ವರದಿ ಸಲ್ಲಿಸುವಂತೆ ವೈಟ್‌ಫೀಲ್ಡ್ ಉಪ ವಿಭಾಗದ ಡಿಸಿಪಿಗೆ ರಾಜ್ಯ ಮಹಿಳಾ ಆಯೋಗದ ಕಾರ್ಯದರ್ಶಿ ಅವರಿಗೆ ಸೂಚನೆ ನೀಡಿ ಪತ್ರ ಬರೆದಿದ್ದಾರೆ.

ತಕ್ಷಣವೇ ಪರಿಶೀಲಿಸಿ ವರದಿ ನೀಡಬೇಕು. ಅಲ್ಲದೇ ತಪ್ಪಿತಸ್ಥರ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು ಎಂದು ಸೂಚನೆ ನೀಡಿದ್ದಾರೆ.

ವರ್ತೂರು ಪೊಲೀಸ್ ಠಾಣಾ ವ್ಯಾಪ್ತಿಯ ಅಪಾರ್ಟ್‌ಮೆಂಟ್‌ವೊಂದರ ಫ್ಲ್ಯಾಟ್‌ನಲ್ಲಿ ಹೊರರಾಜ್ಯದ ಮಹಿಳೆ ಕೆಲಸ ಮಾಡುತ್ತಿದ್ದರು. ಅವರು ಕೆಲಸ ಮಾಡುತ್ತಿದ್ದ ಫ್ಲ್ಯಾಟ್‌ನಲ್ಲಿ ಹಣ ಹಾಗೂ ಚಿನ್ನಾಭರಣ ಕಳ್ಳತನ ನಡೆದಿತ್ತು. ಕೆಲಸದಾಕೆಯ ಮೇಲೆ ಅನುಮಾನ ವ್ಯಕ್ತಪಡಿಸಿ ಫ್ಲ್ಯಾಟ್ ಮಾಲೀಕರು ವರ್ತೂರು ಪೊಲೀಸ್ ಠಾಣೆಗೆ ದೂರು ನೀಡಿದ್ದರು. ದೂರು ಆಧರಿಸಿ ಮಹಿಳೆಯನ್ನು ಪೊಲೀಸರು ವಶಕ್ಕೆ ಪಡೆದುಕೊಂಡಿದ್ದರು.

ಥಳಿತ: ಆರೋಪ

'ವಿಚಾರಣೆಯ ನೆಪದಲ್ಲಿ ವಶಕ್ಕೆ ಪಡೆದುಕೊಂಡು ಹಲ್ಲೆ ನಡೆಸಿದ್ದಾರೆ. ಶೌಚಾಲಯಕ್ಕೆ ತೆರಳುವುದಕ್ಕೂ ಸಾಧ್ಯವಾಗುತ್ತಿಲ್ಲ ಎಂಬುದಾಗಿ ಮಹಿಳೆ ಆರೋಪ ಮಾಡಿದ್ದಾರೆ. ಪ್ರಕರಣದ ಬಗ್ಗೆ ನಿಯಮಾನುಸಾರ ಪರಿಶೀಲಿಸಿ ವರದಿಯನ್ನು ಶೀಘ್ರದಲ್ಲೇ ಆಯೋಗಕ್ಕೆ ಸಲ್ಲಿಸಬೇಕು' ಎಂದು ಕಾರ್ಯದರ್ಶಿ ಅವರು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

ಸ್ವಚ್ಛ ಕ್ಷೇತ್ರ: ₹1 ಲಕ್ಷ ಬಹುಮಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸಭೆ ಕ್ಷೇತ್ರಗಳಲ್ಲಿ ಉತ್ತಮವಾಗಿ ಸ್ವಚ್ಛತಾ ಕಾರ್ಯ ನಡೆಸಲು, ನಗರ ಪಾಲಿಕೆಗಳ ಅಧಿಕಾರಿಗಳನ್ನು ಉತ್ತೇಜಿಸಲು ಸ್ಪರ್ಧೆ ಆಯೋಜಿಸಲಾಗಿದ್ದು, ಮೊದಲ ಬಹುಮಾನವಾಗಿ ₹1 ಲಕ್ಷ ಬಹುಮಾನ ನೀಡಲಾಗುತ್ತದೆ.

ನಗರವನ್ನು ಸ್ವಚ್ಛವಾಗಿ ಇಟ್ಟುಕೊಳ್ಳುವ ಉದ್ದೇಶದಿಂದ ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ತ್ಯಾಜ್ಯ ಎಸೆಯದಂತೆ ಜನರಲ್ಲಿ ಅರಿವು ಮೂಡಿಸುವ ನಿಟ್ಟಿನಲ್ಲಿ 'ಸಾಮೂಹಿಕ ಸ್ವಚ್ಛತಾ ಕಾರ್ಯಕ್ರಮ' ಹಮ್ಮಿಕೊಳ್ಳಲಾಗಿದೆ. ಉತ್ತಮವಾಗಿ ಕೆಲಸ ಮಾಡಿದವರನ್ನು ಗೌರವಿಸಲಾಗುತ್ತದೆ ಎಂದು ಆಯುಕ್ತ ಪೊಮ್ಮಲ ಸುನೀಲ್ ಕುಮಾರ್ ಹೇಳಿದರು.

ಉತ್ತರ ನಗರ ಪಾಲಿಕೆಯ ಹೆಬ್ಬಾಳ, ಪುಲಿಕೇಶಿನಗರ, ಸರ್ವಜ್ಞನಗರ, ಯಲಹಂಕ, ಬ್ಯಾಟರಾಯನಪುರ, ದಾಸರಹಳ್ಳಿ ಮತ್ತು ರಾಜರಾಜೇಶ್ವರಿ ನಗರ ವಿಧಾನಸಭೆ ಕ್ಷೇತ್ರಗಳ ಒಟ್ಟು 93.9 ಕಿ.ಮೀ ರಸ್ತೆಗಳಲ್ಲಿ ತ್ಯಾಜ್ಯ, ಸಿಲ್ಟ್, ಕಟ್ಟಡ ತ್ಯಾಜ್ಯ ಹಾಗೂ ಮರದ ರೆಂಬೆ-ಕೊಂಬೆಗಳನ್ನು ತೆರವುಗೊಳಿಸುವ ಜೊತೆಗೆ ಚರಂಡಿಗಳನ್ನು ಸ್ವಚ್ಛಗೊಳಿಸುವ ಕಾರ್ಯವನ್ನು ನ.8ರಿಂದ ಕೈಗೊಳ್ಳಲಾಗುವುದು.

ಈ ಮಹಾ ಸ್ವಚ್ಛತಾ ಅಭಿಯಾನದಲ್ಲಿ ಪಾಲಿಕೆಯ ಘನತ್ಯಾಜ್ಯ, ಎಂಜಿನಿಯರಿಂಗ್, ರಸ್ತೆ ಮೂಲಸೌಕರ್ಯ, ಆರೋಗ್ಯ ವಿಭಾಗ, ಸಂಚಾರ ಪೊಲೀಸ್, ತೋಟಗಾರಿಕೆ ವಿಭಾಗ, ಅರಣ್ಯ ವಿಭಾಗ, ಕೆರೆಗಳ ನಿರ್ವಹಣೆ ವಿಭಾಗ ಸೇರಿದಂತೆ ಇತರೆ ಇಲಾಖೆಗಳು ಹಾಗೂ ಸ್ಥಳೀಯ ಸಂಘಟನೆಗಳು ಪಾಲ್ಗೊಳ್ಳಲಿವೆ.

ಪಾಲಿಕೆ ಅಧಿಕಾರಿಗಳನ್ನು ಗುರುತಿಸಿ ಉತ್ತೇಜಿಸುವ ನಿಟ್ಟಿನಲ್ಲಿ ಹಾಗೂ ಉತ್ತಮವಾಗಿ ಸ್ವಚ್ಛತಾ ಕಾರ್ಯ ನಿರ್ವಹಿಸುವ ಮೊದಲ ಮೂರು ವಿಧಾನಸಭಾ ಕ್ಷೇತ್ರಗಳಿಗೆ ನಗರ ಪಾಲಿಕೆಯ ವತಿಯಿಂದ ಬಹುಮಾನಗಳನ್ನು ನೀಡಲಾಗುವುದು.

ಉತ್ತಮವಾಗಿ ಸ್ವಚ್ಛತಾ ಕಾರ್ಯ ನಿರ್ವಹಿಸಿದ ವಿಧಾನಸಭಾ ಕ್ಷೇತ್ರಗಳನ್ನು ಎನ್‌ಜಿಒ / ಸಂಘ ಸಂಸ್ಥೆಗಳ ಮೂಲಕ ತಪಾಸಣೆ ಮಾಡಿಸಿ ಆಯ್ಕೆ ಮಾಡಲಾಗುವುದು ಎಂದು ಪೊಮ್ಮಲ ಸುನೀಲ್ ಕುಮಾರ್ ಮಾಹಿತಿ ನೀಡಿದರು.

ಮೊದಲ ಬಹುಮಾನ – ₹1 ಲಕ್ಷ, ಎರಡನೇ ಬಹುಮಾನ – ₹50 ಸಾವಿರ, ಮೂರನೇ ಬಹುಮಾನ – ₹25 ಸಾವಿರ ಇರುತ್ತದೆ. ಅಲ್ಲದೆ, ವಿಭಾಗವಾರು ಪ್ರತ್ಯೇಕ ಸಮಾಧಾನಕರ ಬಹುಮಾನಗಳನ್ನು ನೀಡಲಾಗುತ್ತದೆ ಎಂದರು.

ನಗರದ ಸ್ವಚ್ಛತೆ ಕಾಪಾಡಲು ಪಾಲಿಕೆಯ ಸಿಬ್ಬಂದಿ ಪ್ರತಿದಿನ ಶ್ರಮಿಸುತ್ತಿದ್ದಾರೆ. ಉತ್ತಮವಾದ ಪರಿಸರವನ್ನು ನಿರ್ಮಿಸಲು ಹಾಗೂ ನಾಗರಿಕರಿಗೆ ಉತ್ತಮ ಸೇವೆ ನೀಡುವ ನಿಟ್ಟಿನಲ್ಲಿ ಪಾಲಿಕೆಯು ಅನೇಕ ಕಾರ್ಯಕ್ರಮಗಳ ಮೂಲಕ ಹೆಜ್ಜೆ ಇರಿಸಿದೆ. ಈ ಪ್ರಯತ್ನದಲ್ಲಿ ನಾಗರಿಕರ ಸಹಭಾಗಿತ್ವ ಹಾಗೂ ಪ್ರೋತ್ಸಾಹ ಅಗತ್ಯವಿದೆ. ಸಾರ್ವಜನಿಕ ಸ್ವಚ್ಛತೆ ಹಾಗೂ ಮೂಲಸೌಕರ್ಯಗಳ ಕ್ಷೇತ್ರದಲ್ಲಿ ಎದುರಾಗುವ ಸವಾಲುಗಳನ್ನು ನಿವಾರಿಸಲು ಜನರು ಕೈಜೋಡಿಸಬೇಕು ಎಂದು ತಿಳಿಸಿದರು.

ತಾಂತ್ರಿಕ ದೋಷ ವಿಮಾನ ಭೂಸ್ಪರ್ಶ

ಭೋಪಾಲ್ (ಪಿಟಿಐ): ದೆಹಲಿಯಿಂದ ಬೆಂಗಳೂರಿಗೆ ಹೊರಟಿದ್ದ ಏರ್ ಇಂಡಿಯಾ ವಿಮಾನ ತಾಂತ್ರಿಕ ದೋಷದಿಂದಾಗಿ ಭೋಪಾಲ್‌ಗೆ ಮಾರ್ಗ ಬದಲಿಸಿದ್ದು, ರಾಜಭೋಜ್ ವಿಮಾನ ನಿಲ್ದಾಣದಲ್ಲಿ ಸೋಮವಾರ ರಾತ್ರಿ ಸುರಕ್ಷಿತವಾಗಿ ಇಳಿಸಲಾಯಿತು. ವಿಮಾನದಲ್ಲಿ 172 ಪ್ರಯಾಣಿಕರಿದ್ದರು.

'ತಾಂತ್ರಿಕ ದೋಷದ ಎಚ್ಚರಿಕೆ ಸಂದೇಶ ಬಂದ ಬಳಿಕ ಮಾರ್ಗ ಬದಲಾವಣೆ ಮಾಡಲಾಯಿತು. ಇದು ಇತರೆ ವಿಮಾನಗಳ ಕಾರ್ಯಾಚರಣೆಗೆ ಅಡ್ಡಿ ಯಾಗಲಿಲ್ಲ' ಎಂದು ವಿಮಾನ ನಿಲ್ದಾಣದ ನಿರ್ದೇಶಕ ರಾಮ್‌ಜಿ ಅವಸ್ಥಿ ತಿಳಿಸಿದ್ದಾರೆ.

ಸಮ್ಮೇಳನದಲ್ಲಿ ಎಸ್‌.ವಿ. ಸುರೇಶ ಅವರು ಅಣಬೆಗಳನ್ನು ಪ್ರದರ್ಶಿಸಿದರು. ಕೆ.ಪಿ. ರಘುಪ್ರಸಾದ್, ಅತುಲ್ ಸಕ್ಸೇನಾ, ಎಚ್‌.ಎಸ್‌. ಶಿವರಾಮು ಉಪಸ್ಥಿತರಿದ್ದರು

'ಅಣಬೆ ಸಮಗ್ರ ಕೃಷಿಯ ಭಾಗವಾಗಲಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅಣಬೆ ಬೇಸಾಯವನ್ನು ಸಮಗ್ರ ಕೃಷಿಯ ಪ್ರಮುಖ ಭಾಗವಾಗಿ ಪರಿಗಣಿಸಬೇಕು' ಎಂದು ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಕುಲಪತಿ ಎಸ್.ವಿ. ಸುರೇಶ ಹೇಳಿದರು.

ಮಿಲ್ಕಿವೇ ಟೆಕ್ನಾಲಜೀಸ್, ಡಾ.ಕುರಾಡೇಸ್, ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಸಹಯೋಗದಲ್ಲಿ ಆಯೋಜಿಸಿರುವ ಅಂತರರಾಷ್ಟ್ರೀಯ ಅಣಬೆ ಸಮ್ಮೇಳನವನ್ನು ಉದ್ಘಾಟಿಸಿ ಅವರು ಮಾತನಾಡಿದರು.

'ನಮ್ಮ ದೇಶದ ಜನಸಂಖ್ಯೆಗೆ ಅನುಗುಣವಾಗಿ ಅಣಬೆಯನ್ನು ಉತ್ಪಾದಿಸಬೇಕು. ರೈತರು ಹೆಚ್ಚಾಗಿ ಅಣಬೆ ಕೃಷಿ ಮಾಡುವ ಮೂಲಕ ಆಹಾರ ಭದ್ರತೆಯ ಜೊತೆಗೆ ಪೌಷ್ಟಿಕ ಭದ್ರತೆಯನ್ನು ಒದಗಿಸಬೇಕು. ಚೀನಾ ಮತ್ತು ಇತರೆ ದೇಶಗಳಿಗೆ ಹೋಲಿಸಿದರೆ ಭಾರತದಲ್ಲಿ ಅಣಬೆ ಮಾರುಕಟ್ಟೆ ಇನ್ನೂ ಸೀಮಿತವಾಗಿದೆ. ಅಣಬೆ ಒಂದು ಪೌಷ್ಟಿಕ ಆಹಾರವಾಗಿದ್ದು, ಇದನ್ನು ಜನಪ್ರಿಯಗೊಳಿಸುವ ಮೂಲಕ ಮಾರುಕಟ್ಟೆಯ ಜಾಲವನ್ನು ವಿಸ್ತರಿಸಬೇಕಾಗಿದೆ' ಎಂದು ತಿಳಿಸಿದರು.

ಡಾ. ಕುರಾಡೇಸ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ (ಸಿಇಒ) ಸಂಗಮ್ ಕುರಾಡೇಸ್ ಮಾತನಾಡಿ, 'ಅಣಬೆ ಕೃಷಿ ಅತ್ಯಂತ ಭರವಸೆಯ ಕ್ಷೇತ್ರವಾಗಿದೆ. ಇದರಲ್ಲಿ ಪ್ರೋಟಿನ್, ವಿಟಾಮಿನ್ ಮತ್ತು ಖನಿಜಗಳು ಸಮೃದ್ಧವಾಗಿವೆ. ಇದನ್ನು ಕೃಷಿ ತ್ಯಾಜ್ಯದಿಂದಲೂ ಬೆಳೆಯಬಹುದಾಗಿದೆ. ಅಣಬೆ ಕೃಷಿ ಪರಿಸರ ಸ್ನೇಹಿಯಾಗಿದ್ದು, ಕಡಿಮೆ ಹೂಡಿಕೆ ಮಾಡಿ ಹೆಚ್ಚು ಲಾಭ ಪಡೆಯಬಹುದು' ಎಂದರು.

ಚನ್ನಪಟ್ಟಣ ಯೋಜನಾ ಪ್ರಾಧಿಕಾರ
ನಂ. 2850. ಮೊದಲನೇ ಮಹಡಿ, ಚರ್ಚ್ ಸ್ಟ್ರೀಟ್, ರಾಜಾಕೆಂಪೇಗೌಡ ಬಡಾವಣೆ, ಚನ್ನಪಟ್ಟಣ–562160

ಸಂಖ್ಯೆ: ಚಯೋಪ್ರಾ/ಹೊ.ನೌ/2025–26/204 ದಿನಾಂಕ: 03.11.2025

ಇ–ಟೆಂಡರ್ ಪ್ರಕಟಣೆ

ಚನ್ನಪಟ್ಟಣ ಯೋಜನಾ ಪ್ರಾಧಿಕಾರಕ್ಕೆ ವಿವಿಧ **ಹುದ್ದೆಗಳಿಗೆ ಮ್ಯಾನ್‌ಪವರ್ ಏಜೆನ್ಸಿಯಿಂದ ಹೊರಗುತ್ತಿಗೆ ಆಧಾರದ ಮೇಲೆ ನೌಕರರ ಸೇವೆಯನ್ನು ಒದಗಿಸುವ ಸಲುವಾಗಿ ಒಂದು ವರ್ಷದ ಅವಧಿಗೆ** ಮೀರದಂತೆ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ **TPA/2025-26/SE0058** ರಲ್ಲಿ ಇ–ಹರಾಜು ಪ್ರಕ್ರಿಯೆ ಕೈಗೊಳ್ಳಲಾಗಿದ್ದು, ಆಸಕ್ತಿಯುಳ್ಳ ಅರ್ಹ ಸಂಸ್ಥೆಗಳು **ದಿನಾಂಕ: 14.11.2025ರಂದು ಸಮಯ ಸಂಜೆ 4.00 ಗಂಟೆ** ಒಳಗೆ ಇ–ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಬಹುದು ಹಾಗೂ ಹೆಚ್ಚಿನ ವಿವರಗಳಿಗೆ ವೆಬ್‌ಸೈಟ್ ವಿಳಾಸ: **http://www.kppp.karnataka.gov.in** ನಲ್ಲಿ ಪರಿಶೀಲಿಸಿಕೊಳ್ಳಬಹುದು.

ಸಹಿ/– **ಸದಸ್ಯ ಕಾರ್ಯದರ್ಶಿಗಳು**
ಚನ್ನಪಟ್ಟಣ ಯೋಜನಾ ಪ್ರಾಧಿಕಾರ, ಚನ್ನಪಟ್ಟಣ

DIPR/BSD/421/SA/2025-26

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ
(ಸಿಐಎನ್: ಯು40109ಕೆಎ1999ಎಸ್‌ಜಿಸಿ025521)

ಸಂಖ್ಯೆ: ಕಾನಿಇಂ(ವಿ)/ಯೋ.ವಿ.ಉ/ಸಕಾಇಂ(ವಿ)-2/ಸಇಂ(ವಿ)-2/2025-26/2310 ದಿನಾಂಕ: 03.11.2025

ಸಾರ್ವಜನಿಕರ ತಿಳುವಳಿಕೆಗಾಗಿ / ಮಾಹಿತಿಗಾಗಿ

ಸಾರ್ವಜನಿಕರ ತಿಳುವಳಿಕೆಗಾಗಿ/ಮಾಹಿತಿಗಾಗಿ ಈ ಮೂಲಕ ಪ್ರಕಟಪಡಿಸುವುದೇನೆಂದರೆ, ಕ.ವಿ.ಪ್ರ.ನಿ.ನಿ ವತಿಯಿಂದ 220/66 ಕೆ.ವಿ. ಜಿ.ಐ.ಎಸ್ ಎನ್.ಆರ್.ಎಸ್. ವಿದ್ಯುತ್ ಕೇಂದ್ರದಿಂದ 220/666ಕೆ.ವಿ. ಜಿ.ಐ.ಎಸ್ ಮತ್ತೀಕೆರೆ ವಿದ್ಯುತ್ ಕೇಂದ್ರದ ವರೆಗೆ ಹೊಸದಾಗಿ 220 ಕೆ.ವಿ. ಅತಿ ಅಧಿಕ ಒತ್ತಡದ 1200 ಚ.ಮಿಮೀ ಗಾತ್ರದ ಭೂಗತ ವಿದ್ಯುತ್ ಕೇಬಲ್‌ನ್ನು ಸುಮಾರು 7.14 ಕಿ.ಮೀ ಅಳವಡಿಸಲಾಗಿದ್ದು **ದಿನಾಂಕ 05.11.2025 ರಂದು ಅಥವಾ ತದನಂತರ ವಿದ್ಯುದ್ದೀಕರಿಸಲಾಗುವುದು.**

ಸದರಿ ವಿದ್ಯುತ್ ಮಾರ್ಗವು ಈ ಕೆಳಕಂಡ ರಸ್ತೆ ಮಾರ್ಗದ ಮೂಲಕ ಹಾದು ಹೋಗಿರುತ್ತದೆ:-220/66 ಕೆ.ವಿ. ಜಿ.ಐ.ಎಸ್ ಮತ್ತೀಕೆರೆ ವಿದ್ಯುತ್ ಕೇಂದ್ರ, ಮತ್ತೀಕೆರೆ ಹೆಚ್.ಎಂ.ಟಿ. ರಸ್ತೆ, ಸಿ.ವಿ. ರಾಮನ್ ರಸ್ತೆ, ಯಶವಂತಪುರ ವೃತ್ತ, ಮಲ್ಲೇಶ್ವರ 8ನೇ ಮುಖ್ಯ ರಸ್ತೆ, ಮಲ್ಲೇಶ್ವರ ಸುಬ್ರಮಣ್ಯ ಬಿ.ಬಿ.ಎಂ.ಪಿ. ಪಾರ್ಕ್ ರಸ್ತೆ, ಡಾ. ರಾಜ್ ಕುಮಾರ್ ರಸ್ತೆ, ನವರಂಗ ಚಿತ್ರಮಂದಿರ ಹತ್ತಿರ, ರಾಜಾಜಿನಗರ ಪೊಲೀಸ್ ಠಾಣೆ ರಸ್ತೆ, ರಾಜಾಜಿನಗರ ಇ.ಎಸ್.ಐ. ಆಸ್ಪತ್ರೆ ರಸ್ತೆ, ರಾಜಾಜಿನಗರ ಎನ್.ಆರ್.ಎಸ್. ಬೆ.ವಿ.ಕಂ. ಉಗ್ರಾಣ ರಸ್ತೆ ಯಿಂದ 220/66ಕೆವಿ ಜಿ.ಐ.ಎಸ್ ಎನ್.ಆರ್.ಎಸ್. ವಿದ್ಯುತ್ ಉಪ ಕೇಂದ್ರದ ವರೆಗೆ.

ಆದ್ದರಿಂದ ಈ ಮೇಲ್ಕಂಡ ಭೂಗತ ಕೇಬಲ್ ಮಾರ್ಗದಲ್ಲಿ ಸಾರ್ವಜನಿಕರು/ ಸರ್ಕಾರಿ ಸಂಸ್ಥೆ/ಖಾಸಗಿ ಸಂಸ್ಥೆ ಅಗೆಯುಬಾರದಾಗಿ ಈ ಮೂಲಕ ತಿಳಿಯಪಡಿಸಲಾಗಿದೆ ಹಾಗೂ ಇಂತಹ ಕೃತ್ಯಗಳನ್ನು ಎಸಗಿದಲ್ಲಿ ಉಂಟಾಗುವ ಅಪಘಾತಗಳಿಗೆ **ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು ಯಾವುದೇ ರೀತಿಯಲ್ಲೂ ಜವಾಬ್ದಾರಿಯಾಗಿರುವುದಿಲ್ಲ** ಹಾಗೂ ಇದರಿಂದ ಆಗುವ ನಿಗಮದ ನಷ್ಟವನ್ನು ಸಂಬಂದಪಟ್ಟವರು ಭರಿಸತಕ್ಕದ್ದು ಎಂದು ಈ ಮೂಲಕ ತಿಳಿಯಪಡಿಸಲಾಗಿದೆ.

ಸಹಿ/–, ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಯೋಜನೆ ವಿಭಾಗ–ಉತ್ತರ,
ಕ.ವಿ.ಪ್ರ.ನಿ.ನಿ. ಆನಂದರಾವ್ ವೃತ್ತ, ಬೆಂಗಳೂರು–09

ಅರಣ್ಯ ಇಲಾಖೆ
ಉಪ ಅರಣ್ಯ ಸಂರಕ್ಷಣಾಧಿಕಾರಿಯವರ ಕಛೇರಿ, ಸಾಮಾಜಿಕ ಅರಣ್ಯ ವಿಭಾಗ, ಬೆಂಗಳೂರು ಗ್ರಾಮಾಂತರ, ಬೊಮ್ಮವಾರ, ದೇವನಹಳ್ಳಿ ತಾಲ್ಲೂಕು – 562110
ದೂರವಾಣಿ: 080–29599998 e-mail : forest.brzp@gmail.com

ಸಂ: ಎ3/ಬಿಯುಡಿ/RSPD/ಟೆಂಡರ್/ಸಿಆರ್– /2025–26 ದಿನಾಂಕ: 03.11.2025

ಇ–ಟೆಂಡರ್ ಪ್ರಕಟಣೆ

2025–26ನೇ ಸಾಲಿನಲ್ಲಿ ಬೆಂಗಳೂರು ಗ್ರಾಮಾಂತರ ಸಾಮಾಜಿಕ ಅರಣ್ಯ ವಿಭಾಗದ ವ್ಯಾಪ್ತಿಯ ವಲಯಗಳಲ್ಲಿ ಸಾರ್ವಜನಿಕರಿಗೆ ವಿತರಿಸಲು ಸಸಿ ಬೆಳೆಸುವ ಯೋಜನೆ (ಆರ್.ಎಸ್.ಪಿ.ಡಿ) ಯೋಜನೆಯಡಿ ನರ್ಸರಿಗಳಲ್ಲಿ ವಿವಿಧ ಅರಣ್ಯ ಜಾತಿಯ ಸಸಿಗಳನ್ನು ವಿವಿಧ ಅಳತೆಯ ನೇಯ್ದ ಪಾಲಿಥಿನ್ ಚೀಲಗಳಲ್ಲಿ ಬೆಳೆಸುವ ಕಾಮಗಾರಿಗಳನ್ನು ಕೈಗೊಳ್ಳಲು ನೋಂದಾಯಿತ ಅರಣ್ಯ ಗುತ್ತಿಗೆದಾರರಿಂದ ಮಾತ್ರ ಕರ್ನಾಟಕ ಸರ್ಕಾರದ ಇ–ಪೋರ್ಟಲ್ https://kppp.karnataka.gov.in ಮೂಲಕ ಟೆಂಡರ್ ಆಹ್ವಾನಿಸಲಾಗಿದೆ.

ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಟೆಂಡರ್ ಫಾರಂಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ: 10.11.2025 ಸಂಜೆ 5.30 ಗಂಟೆಯವರೆಗೆ. ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: 12.11.2025ರ ಅಪರಾಹ್ನ 12.00 ಗಂಟೆಗೆ. ತಾಂತ್ರಿಕ ಬಿಡ್‌ನಲ್ಲಿನ ಷರತ್ತುಗಳನ್ನು ಯಶಸ್ವಿಯಾಗಿ ಪೂರೈಸಿದ್ದರೆ ಮಾತ್ರ ಆರ್ಥಿಕ ಬಿಡ್‌ಗಳನ್ನು ತೆರೆಯಲಾಗುವುದು ಹಾಗೂ ಷರತ್ತುಗಳನ್ನು ಪೂರೈಸಿಲ್ಲದ ಬಿಡ್‌ಗಳನ್ನು ತಿರಸ್ಕರಿಸಲಾಗುವುದು. ಆರ್ಥಿಕ ಬಿಡ್‌ನ್ನು ದಿನಾಂಕ: 13.11.2025ರಂದು ಅಪರಾಹ್ನ 12.00 ಗಂಟೆಗೆ ತೆರೆಯಲಾಗುವುದು.

ಮೇಲ್ಕಂಡ ದಿನಾಂಕಗಳಂದು ಯಾವುದೇ ಟೆಂಡರ್ ಬಾರದಿದ್ದರೆ ಅಥವಾ ಕಾರಣಾಂತರಗಳಿಂದ ಟೆಂಡರ್ ನಡೆಯದೇ ಇದ್ದರೆ ಇದೇ ಪ್ರಕಟಣೆಯ ಷರತ್ತಿಗೊಳಪಟ್ಟು ದಿನಾಂಕ: 17.11.2025ರ ಸಂಜೆ 5.30 ಗಂಟೆವರೆಗೆ ಮರು ಟೆಂಡರ್ ಮುಂದುವರೆಸಲಾಗುವುದು (Auto Extension). ತಾಂತ್ರಿಕ ಬಿಡ್‌ನ್ನು ದಿನಾಂಕ: 19.11.2025 ಅಪರಾಹ್ನ 12.00 ಗಂಟೆಗೆ ತೆರೆಯಲಾಗುವುದು. ಆರ್ಥಿಕ ಬಿಡ್‌ನ್ನು ದಿನಾಂಕ: 20.11.2025ರಂದು ತೆರೆಯಲಾಗುವುದು.

ಮೇಲಿನ ಟೆಂಡರ್ ಬಗ್ಗೆ ಹೆಚ್ಚಿನ ಮಾಹಿತಿ ಬೇಕಾದಲ್ಲಿ ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಸಾಮಾಜಿಕ ಅರಣ್ಯ ವಿಭಾಗ, ಬೊಮ್ಮವಾರ, ದೇವನಹಳ್ಳಿ ತಾಲ್ಲೂಕು ಇಲ್ಲಿ ಸಂಪರ್ಕಿಸಬಹುದು.

ಸಹಿ/– ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ
ಸಾಮಾಜಿಕ ಅರಣ್ಯ ಉಪ ವಿಭಾಗ, ಬೆಂಗಳೂರು ಗ್ರಾಮಾಂತರ

ವಾಸಾಸಂಇ/ವಾಪ್ರ/3552/ಅಕಾರ್/2025–26

ನೆಲಮಂಗಲ ಯೋಜನಾ ಪ್ರಾಧಿಕಾರ
2ನೇ ಮುಖ್ಯರಸ್ತೆ, ಸದಾಶಿವನಗರ, ನೆಲಮಂಗಲ – 562123.
ದೂರವಾಣಿ: 9663046622 ಇ–ಮೇಲ್: nelamangala.pa@gmail.com

ಸಂಖ್ಯೆ: ನೆಯೋಪ್ರಾ/CLU/65/2025–26 ದಿನಾಂಕ: 03–11–2025

ಸಾರ್ವಜನಿಕ ಪ್ರಕಟಣೆ

ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 134 ಬೆಂರುಪ್ರಾ 2006 ದಿನಾಂಕ: 13–02–2007 ರನ್ವಯ **ನೆಲಮಂಗಲ ತಾಲ್ಲೂಕು, ಸೋಂಪುರ ಹೋಬಳಿ, ನಿಜಗಲ್‌ಕೆಂಪೋಹಳ್ಳಿ** ಗ್ರಾಮವು **"ನೆಲಮಂಗಲ ಸ್ಥಳೀಯ ಯೋಜನಾ ಪ್ರದೇಶದ"** ವ್ಯಾಪ್ತಿಗೆ ಒಳಪಟ್ಟಿದ್ದು, ನೆಲಮಂಗಲ ಸ್ಥಳೀಯ ಯೋಜನಾ ಪ್ರದೇಶಕ್ಕೆ ಸರ್ಕಾರದ ಆದೇಶ ಸಂಖ್ಯೆ: ನಅಇ 150 ಬಿಎಂಆರ್ 2013, ದಿನಾಂಕ: 01–06–2015 ರಲ್ಲಿ ಅನುಮೋದನೆಗೊಂಡಿರುವ ಮಹಾಯೋಜನೆಯಲ್ಲಿ ಈ ಕೆಳಕಂಡ ಜಮೀನನ್ನು **"ವ್ಯವಸಾಯ"** ವಲಯದಲ್ಲಿ ಕಾಯ್ದಿರಿಸಲಾಗಿರುತ್ತದೆ. ಈ ಹಿನ್ನೆಲೆಯಲ್ಲಿ **ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14(ಎ) ರ ಅಡಿಯಲ್ಲಿ "ವಾಣಿಜ್ಯ"** ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಅರ್ಜಿದಾರರು ಕೋರಿರುವಂತೆ **"ವ್ಯವಸಾಯ"** ವಲಯದಿಂದ **"ವಾಣಿಜ್ಯ"** ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡುವ ಸಂಬಂಧ ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ **ಸದಸ್ಯ ಕಾರ್ಯದರ್ಶಿಗಳು, ನೆಲಮಂಗಲ ಯೋಜನಾ ಪ್ರಾಧಿಕಾರ, ನೆಲಮಂಗಲ** ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಕಂದಾಯ ದಾಖಲಾತಿಗಳಂತೆ ಮಾಲೀಕರ ಹೆಸರು	ತಾಲ್ಲೂಕು / ಹೋಬಳಿ / ಗ್ರಾಮ	ಸ.ನಂ.	ವಿಸ್ತೀರ್ಣ (ಎ–ಗು)	ಅನುಮೋದಿತ ಮಹಾಯೋಜನೆಯಂತೆ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
ಶ್ರೀ ರುದ್ರಾರಾಧ್ಯ. ಹೆಚ್.ಎಸ್ ಬಿನ್ ಲೇಟ್ ಶೇಖರಪ್ಪ	ನೆಲಮಂಗಲ / ಸೋಂಪುರ / ನಿಜಗಲ್‌ಕೆಂಪೋಹಳ್ಳಿ	12/10	00-35½	ವ್ಯವಸಾಯ	ವಾಣಿಜ್ಯ

ಷರಾ:– ಪ್ರಶ್ನಿತ ಜಮೀನಿನ ಪರಿಸರದಲ್ಲಿ ವಾಣಿಜ್ಯ ಸಮುಚ್ಚಯ ಇಲ್ಲದೆ ಇರುವುದರಿಂದ ಪ್ರಶ್ನಿತ ಜಮೀನುಗಳಲ್ಲಿ ಉತ್ತಮ ಸೌಲಭ್ಯಗಳನ್ನೊಳಗೊಂಡ ವಾಣಿಜ್ಯ ಸಮುಚ್ಚಯ ಸ್ಥಾಪಿಸಿದಲ್ಲಿ, ಸ್ಥಳೀಯ ಉದ್ದಿಮೆದಾರರಿಗೆ ಹಾಗೂ ಸಾರ್ವಜನಿಕರಿಗೆ ತುಂಬಾ ಅನುಕೂಲವಾಗುತ್ತದೆ ಹಾಗೂ ಸ್ಥಳೀಯ ನಿರುದ್ಯೋಗಿಗಳಿಗೆ ಉದ್ಯೋಗವನ್ನು ಕಲ್ಪಿಸುವ ಉದ್ದೇಶವನ್ನು ಹೊಂದಿರುತ್ತದೆ ಎಂದು ತಿಳಿಸುತ್ತಾ ಸದರಿ ಪ್ರದೇಶವನ್ನು **"ವ್ಯವಸಾಯ"** ವಲಯದಿಂದ **"ವಾಣಿಜ್ಯ"** ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/– ಜಂಟಿ ನಿರ್ದೇಶಕರು
ನಗರ ಮತ್ತು ಗ್ರಾಮಾಂತರ ಯೋಜನೆ ಹಾಗೂ ಸದಸ್ಯ–ಕಾರ್ಯದರ್ಶಿ,
ನೆಲಮಂಗಲ ಯೋಜನಾ ಪ್ರಾಧಿಕಾರ, ನೆಲಮಂಗಲ.

ವಾಸಾಸಂಇ/ವಾ.ಪ್ರ/3559/ಅಡ್ವರ್ಟೋರ್/2025–26

ನೈಋತ್ಯ ರೈಲ್ವೆ
ಇ–ಟೆಂಡರು ಸೂಚನೆ ಸಂ.: SWRTMYPR202526WT07
ದಿನಾಂಕ: 27.10.2025
ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ವಿವರ	ಅಂದಾಜು ಮೌಲ್ಯ
ನೈಋತ್ಯ ರೈಲ್ವೆಯಲ್ಲಿ ಟ್ರ್ಯಾಕ್ ಮಶೀನ್‌ಗಳ ಬಳಕೆಗಾಗಿ ಸೂಕ್ತವಾದ ಎಂಡ್ ಫಿಟಿಂಗ್‌ಗಳಲ್ಲಿರುವ ಹೋಸ್‌ಗಳು ಸರಿಯಾದ ರೀತಿಯಲ್ಲಿ ಕ್ರಿಂಪಿಂಗ್ ಮಾಡಲಾಗಿರುವ ಹೈಡ್ರಾಲಿಕ್ ಹೋಸ್‌ಗಳ ಖರೀದಿ. (ಮುಕ್ತಾಯದ ಅವಧಿ: 12 ತಿಂಗಳುಗಳು).	ರೂ. 91,73,969/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 25.11.2025, 11:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ ಕೊನೆಯ ದಿನಾಂಕದವರೆಗೆ ಯಾವುದಾದರೂ ತಿದ್ದುಪಡಿ ಇದ್ದಲ್ಲಿ ವೆಬ್‌ಸೈಟ್‌ಅನ್ನು ನೋಡುತ್ತಲೇ ಇರಿ

ಕಾರ್ಯನಿರ್ವಾಹಕ ಇಂಜಿನಿಯರ್/ಟ್ರ್ಯಾಕ್ ಮಶೀನ್/ ಯಶವಂತಪುರ/ಬೆಂಗಳೂರು

PUB/594/AAF/PRB/SWR/2025-26

ಕಾಯ್ದಿರಿಸದ ಟಿಕೇಟುಗಳನ್ನು ಸುಲಭವಾಗಿ ಬುಕಿಂಗ್ ಮಾಡಲು ಗೂಗಲ್ ಪ್ಲೇ ಸ್ಟೋರ್‌ನಿಂದ ಯುಟಿಎಸ್ ಮೊಬೈಲ್ ಆ್ಯಪ್‌ಅನ್ನು ಡೌನ್‌ಲೋಡ್ ಮಾಡಿರಿ

South Western Railway - SWR | SWRRLY | SWRAILWAYHQ | sw_railways

3M INDIA LIMITED

Regd Office: Plot No. 48-51, Electronics City, Hosur Road, Bengaluru - 560100
CIN:L31300KA1987PLC013543 I Website: www.3m.com/in I Email: investorhelpdesk.in@mmm.com

Extract of the Financial Results for the quarter and half year ended 30 September 2025

(Rs. in Lakhs, except per share data, unless otherwise stated)

Particulars	3 months ended 30 September 2025	6 months ended 30 September 2025	3 months ended 30 September 2024	12 months ended 31 March 2025
	Unaudited	Unaudited	Unaudited	Audited
Total income from operations (including other income)	1,27,881.16	2,48,976.55	1,12,896.87	4,51,582.15
Net Profit for the period (before tax, Exceptional and / or Extraordinary items)	25,080.81	49,020.95	18,310.92	77,340.66
Net Profit for the period before tax (after Exceptional and / or Extraordinary items)	25,080.81	49,020.95	18,310.92	77,340.66
Net Profit for the period after tax	19,133.83	36,902.47	13,378.08	47,606.74
Total comprehensive income for the period [Comprising Profit / (Loss) for the period (after tax) and other comprehensive income/ (loss) (after tax)]	19,013.42	36,661.65	13,344.75	47,125.08
Equity share capital	1,126.51	1,126.51	1,126.51	1,126.51
Reserves (excluding revaluation reserves as per Ind AS)				1,83,523.18
Earnings per share (in Rs.) (of Rs. 10/- each)				
a) Basic (in Rs.)	169.85	327.58	118.76	422.60
b) Diluted (in Rs.)	169.85	327.58	118.76	422.60

Notes:
1. The above unaudited financial results of 3M India Limited have been reviewed by the Audit Committee and thereafter approved by the Board of Directors at their meeting held on 03 November 2025.
2. The financial results of the Company have been prepared in accordance with Indian Accounting Standards (Ind AS) as notified by the Ministry of Corporate Affairs pursuant to Section 133 of the Companies Act, 2013 read with Rule 3 of the Companies (Indian Accounting Standard) Rules 2015, as amended and in terms of Regulation 33 of the SEBI (Listing Obligations and Disclosure Requirements) Regulations, 2015.
3. The above is an extract of the detailed format for the unaudited financial results for the quarter and half year ended 30 September 2025 filed with the Stock Exchanges under Regulation 33 of the SEBI (Listing and Other Disclosure Requirements) Regulations, 2015. The full format for the unaudited financial results for the quarter and half year ended 30 September 2025 are available on the Stock Exchange websites viz. www.bseindia.com, www.nseindia.com and on the Company's website (https://www.3mindia.in/3M/en_IN/company-in/about-3m/financial-facts-local/). The same can be accessed by scanning the QR code provided below.

Place: Bengaluru
Date : 03 November 2025

For and on behalf of the Board
3M India Limited

Ramesh Ramadurai
Managing Director

ಸೋನಿಯಾ ಗಾಂಧಿ, ರಾಹುಲ್, ಖರ್ಗೆ ಹೇಳಿದ್ದಾರೆಯೇ: ಸಿ.ಎಂ ಪ್ರಶ್ನೆ

‘ಹೈಕಮಾಂಡ್ ಮಾತಿಗಷ್ಟೇ ಕಿಮ್ಮತ್ತು’

ಪ್ರಜಾವಾಣಿ ವಾರ್ತೆ

ಸಿದ್ದರಾಮಯ್ಯ

ಮೈಸೂರು: ‘ಹೈಕಮಾಂಡ್ ತೀರ್ಮಾನ ಮಾಡದೇ ಬೇರೆ ಯಾರೇ ಏನೇ ಮಾತನಾಡಿದರೂ ಅದಕ್ಕೆ ಕಿಮ್ಮತ್ತಿಲ್ಲ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇಲ್ಲಿ ಸೋಮವಾರ ಹೇಳಿದರು.

ಇಲ್ಲಿ ಸುದ್ದಿಗಾರರ ಜೊತೆಗೆ ಮಾತನಾಡಿದ ಅವರು ನಾಯಕತ್ವ ಬದಲಾವಣೆ ಕುರಿತ ಪ್ರಶ್ನೆಗೆ, ‘ಮಾಧ್ಯಮದವರಿಗೆ ಇದು ಬಿಟ್ಟು ಬೇರೆ ವಿಷಯವಿಲ್ಲವೇ’ ಎಂದು ಪ್ರಶ್ನಿಸಿದರು.

‘ಡಿ.ಕೆ. ಶಿವಕುಮಾರ್ ಅವರು ಮುಖ್ಯಮಂತ್ರಿಯಾಗಲಿ ಎಂದು ಬಿಹಾರ ಮೂಲದ ಮುಖಂಡರು ಹೇಳಿದ್ದಾರಲ್ಲಾ’ ಎಂಬ ಪ್ರಶ್ನೆಗೆ ಕೋಪಗೊಂಡರು.

‘ಈ ಕುರಿತು ಹೈಕಮಾಂಡ್ ಹೇಳಬೇಕಲ್ಲವೇ? ಸೋನಿಯಾ ಗಾಂಧಿ, ರಾಹುಲ್ ಗಾಂಧಿ, ಮಲ್ಲಿಕಾರ್ಜುನ ಖರ್ಗೆ ನಮ್ಮ ಹೈಕಮಾಂಡ್. ಅವರೇನಾದರೂ ಹೇಳಿದ್ದಾರೆಯೇ’ ಎಂದೂ ಪ್ರಶ್ನಿಸಿದರು. ‘ಜನರು ಏನಾದರೂ ಮಾತನಾಡುತ್ತಾರೆ. ಜನರು ಮಾತನಾಡುವುದಕ್ಕಿಂತ ಮಾಧ್ಯಮ ಗಳಲ್ಲೇ ಇದು ಜಾಸ್ತಿ ಚರ್ಚೆ ಆಗುತ್ತಿದೆ. ಆ ಪ್ರಶ್ನೆ ಕೇಳುವ ಅಗತ್ಯವೇನಿದೆ’ ಎಂದು ಪ್ರಶ್ನಿಸಿದರು.

‘ಸಚಿವ ಸಂಪುಟ ಪುನರ್‌ರಚನೆ ಬಗ್ಗೆ ಬಿಹಾರ ಚುನಾವಣೆ ಬಳಿಕ ನವದೆಹಲಿಗೆ ಹೋಗಿ ರಾಹುಲ್ ಗಾಂಧಿ, ಮಲ್ಲಿಕಾರ್ಜುನ ಖರ್ಗೆ ಜೊತೆಗೆ ಚರ್ಚಿಸು ತ್ತೇನೆ. ನ.15ಕ್ಕೆ ದೆಹಲಿಗೆ ಹೋಗುತ್ತಿದ್ದೇನೆ’ ಎಂದರು.

‘ಸಚಿವ ಸ್ಥಾನ: ಭರವಸೆ ಈಡೇರಿಸಿ’

ವಿಜಯಪುರ: ‘ಚುನಾವಣೆಗೂ ಮುನ್ನ ಹೈಕಮಾಂಡ್‌ನಿಂದ ನನಗೆ ಸಚಿವ ಸ್ಥಾನದ ಭರವಸೆ ಸಿಕ್ಕಿತ್ತು. ಅದನ್ನು ಪಕ್ಷದ ನಾಯಕರು ಈಡೇರಿಸಬೇಕು’ ಎಂದು ಕಾಂಗ್ರೆಸ್‌ನ ಇಂಡಿ ಕ್ಷೇತ್ರದ ಶಾಸಕ ಯಶವಂತರಾಯಗೌಡ ಪಾಟೀಲ ಹೇಳಿದರು.

‘ರಣದೀಪ್‌ಸಿಂಗ್ ಸುರ್ಜೇವಾಲಾ, ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ ಸಮ್ಮುಖದಲ್ಲಿ ಸಭೆ ನಡೆದಾಗ ನನಗೆ ಸಚಿವ ಸ್ಥಾನದ ಭರವಸೆ ದೊರಕಿತ್ತು’ ಎಂದು ಇಲ್ಲಿ ತಿಳಿಸಿದರು. ‘ಎಲ್ಲ ಕ್ಷೇತ್ರಗಳಿಗೂ ಸಚಿವ ಸ್ಥಾನ ಸಿಕ್ಕಿದೆ. ಸಚಿವ ಸ್ಥಾನದಿಂದ ಇಂಡಿ ವಂಚಿತವಾಗಿದೆ, ನಾನು ಕೇಳುತ್ತಿರುವುದರಲ್ಲಿ ನ್ಯಾಯವಿಲ್ಲವೇ’ ಎಂದೂ ಪ್ರಶ್ನಿಸಿದರು.

‘ದಲಿತ ನಾಯಕರೊಬ್ಬರಿಗೆ ಮುಖ್ಯಮಂತ್ರಿ ಸ್ಥಾನ ನೀಡಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯದಲ್ಲಿ ಮುಖ್ಯಮಂತ್ರಿ ಬದಲಾವಣೆಯ ಚರ್ಚೆ ನಡೆಯುತ್ತಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ದಲಿತ ಸಮುದಾಯದ ನಾಯಕ ರೊಬ್ಬರಿಗೆ ಮುಖ್ಯಮಂತ್ರಿ ಸ್ಥಾನ ನೀಡುವ ಕುರಿತು ನಿರ್ಧಾರ ಕೈಗೊಳ್ಳಬೇಕು’ ಎಂದು ಕರ್ನಾಟಕ ರಾಜ್ಯ ಛಲವಾದಿ ಕ್ಷೇಮಾಭಿವೃದ್ಧಿ ಸಂಘ ತಿಳಿಸಿದೆ.

ಸೋಮವಾರ ನಡೆದ ಸುದ್ದಿಗೋಷ್ಠಿ ಯಲ್ಲಿ ಮಾತನಾಡಿದ ಸಂಘದ ರಾಜ್ಯ ಘಟಕದ ಅಧ್ಯಕ್ಷ ಮಹದೇವಸ್ವಾಮಿ ಎಂ. ಚಿದರವಳ್ಳಿ, ‘ದಲಿತ ಸಮುದಾಯದ ಹಲವರು ಶಾಸಕರಾಗಿ ಆಯ್ಕೆ ಯಾಗಿದ್ದಾರೆ. ಆದರೆ ಇದುವರೆಗೂ ಯಾರೊಬ್ಬರಿಗೂ ಮುಖ್ಯಮಂತ್ರಿ ಆಗುವ ಅವಕಾಶ ದೊರೆತಿಲ್ಲ. ಕೆಲವು ಬಾರಿ ಅವಕಾಶಗಳು ಲಭಿಸಿದರೂ ರಾಜಕೀಯ ಪಿತೂರಿಗಳಿಂದ ಕೈತಪ್ಪಿದೆ. ಪ್ರಸ್ತುತ ರಾಜಕೀಯ ಸನ್ನಿವೇಶದಲ್ಲಿ ದಲಿತ ನಾಯಕರೊಬ್ಬರಿಗೆ ಮುಖ್ಯಮಂತ್ರಿ ಯಾಗುವ ಅವಕಾಶವನ್ನು ನೀಡಿ ಸಾಮಾಜಿಕ ನ್ಯಾಯ ಒದಗಿಸಬೇಕು’ ಎಂದು ಆಗ್ರಹಿಸಿದರು.

‘ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸಮುದಾಯಗಳು ಕಾಂಗ್ರೆಸ್ ಪಕ್ಷದ ಬೆನ್ನೆಲುಬಾಗಿ ನಿಂತಿವೆ. ಸಾಮಾಜಿಕ ನ್ಯಾಯ ಮತ್ತು ದಲಿತರ ಅಭಿವೃದ್ಧಿಯ ಬಗ್ಗೆ ಹೆಚ್ಚು ಕಾಳಜಿ ಹೊಂದಿರುವ ಸಿದ್ದರಾಮಯ್ಯ ಅವರು ದಲಿತರೊಬ್ಬ ರನ್ನು ರಾಜ್ಯದ ಮುಖ್ಯಮಂತ್ರಿಯಾಗಿ ಆಯ್ಕೆ ಮಾಡಲು ಮುಂದಾಗಬೇಕು. ಇದು ರಾಜ್ಯದಲ್ಲಿ ಕಾಂಗ್ರೆಸ್‌ಗೆ ಬಲಿಷ್ಠ ನೆಲೆ ಒದಗಿಸಲಿದೆ’ ಎಂದು ತಿಳಿಸಿದರು.

ಸಂಘದ ಪ್ರಧಾನ ಕಾರ್ಯದರ್ಶಿ ಎಂ. ಸುವರ್ಣಾ, ಸಂಘಟನಾ ಕಾರ್ಯದರ್ಶಿ ಆರ್.ಎಂ. ನಾರಾಯಣಸ್ವಾಮಿ, ಖಜಾಂಚಿ ಎಚ್. ಗಿರಿಜಾ ಸುದ್ದಿಗೋಷ್ಠಿಯಲ್ಲಿದ್ದರು.

‘ಸಿ.ಎಂ ಬದಲಾವಣೆ ಚರ್ಚೆ ಅಪ್ರಸ್ತುತ’

ಪ್ರಜಾವಾಣಿ ವಾರ್ತೆ

ಬಂಗಾರಪೇಟೆ (ಕೋಲಾರ): ‘ಮುಖ್ಯಮಂತ್ರಿ ಬದಲಾವಣೆ ಚರ್ಚೆ ಅಪ್ರಸ್ತುತ. ಸದ್ಯ ಆ ಬಗ್ಗೆ ಮಾತನಾಡುವು ದರಲ್ಲಿ ಅರ್ಥವಿಲ್ಲ. ಹಾಗಾಗಿ ಆ ವಿಚಾರವಾಗಿ ಯಾವುದೇ ಪ್ರತಿಕ್ರಿಯೆ ನೀಡಲು ನಾನು ಬಯಸಲ್ಲ’ ಎಂದು ಗೃಹ ಸಚಿವ ಜಿ.ಪರಮೇಶ್ವರ ಹೇಳಿದ್ದಾರೆ.

ಇಲ್ಲಿ ಸುದ್ದಿಗಾರರೊಂದಿಗೆ ಮಾತನಾ ಡಿದ ಅವರು, ‘ದಲಿತ ಮುಖ್ಯಮಂತ್ರಿ ವಿಚಾರವಾಗಿ ನಾವು ಯಾವುದೇ ಸಭೆ ಮಾಡಿಲ್ಲ’ ಎಂದು ಸ್ಪಷ್ಟಪಡಿಸಿದರು.

‘ಸಂಚಿವ ಸಂಪುಟ ವಿಸ್ತರಣೆ ಬಗ್ಗೆ ನನಗಂತೂ ಯಾವುದೇ ಅಧಿಕೃತ ಮಾಹಿತಿ ಇಲ್ಲ. ನಿಮಗೆ ಏನಾದರೂ ಮಾಹಿತಿ ಇದೆಯಾ’ ಎಂದು ಮಾಧ್ಯಮ ಪ್ರತಿನಿಧಿಗಳನ್ನು ಪ್ರಶ್ನಿಸಿದರು. ಸಚಿವ ಸಂಪುಟ ವಿಸ್ತರಣೆ, ಮುಖ್ಯಮಂತ್ರಿ ಬದಲಾವಣೆ ಇವೆಲ್ಲ ಮಾಧ್ಯಮಗಳ ಸೃಷ್ಟಿ ಎಂದು ಸಮಜಾಯಿಷಿ ನೀಡಿದರು.

‘ಊಟ, ತಿಂಡಿ, ಕಾಫಿ ಕುಡಿಯಲು ಸೇರುತ್ತೇವೆ. ಹಾಗಂತ ಮುಖ್ಯಮಂತ್ರಿ ಬದಲಾವಣೆ, ದಲಿತ ಮುಖ್ಯಮಂತ್ರಿ ವಿಚಾರ ಚರ್ಚೆ ಮಾಡಲು ಅಲ್ಲ. ಬೇರೆ ರಾಜಕೀಯ ಬೆಳವಣಿಗೆಗಳ ಕುರಿತು ಚರ್ಚಿಸುತ್ತೇವೆ’ ಎಂದು ಸ್ಪಷ್ಟನೆ ನೀಡಿದರು.

‘ರಾಜ್ಯದಲ್ಲಿ ದಲಿತ ಸಮಾವೇಶ ಮಾಡಲು ಸೂಕ್ತ ಸಮಯ, ಸಂದರ್ಭ ಬಂದಾಗ ಮಾಡುತ್ತೇವೆ. ಅದರಲ್ಲಿ ಯಾವುದೇ ರೀತಿಯ ವಿಶೇಷತೆ ಇಲ್ಲ. ಚುನಾವಣೆಗೂ ಮುನ್ನ ಚಿತ್ರದುರ್ಗದಲ್ಲಿ ಮಾಡಿದ ರೀತಿಯಲ್ಲಿ ಸೂಕ್ತ ಸಮಯದಲ್ಲಿ ದಲಿತ ಸಮಾವೇಶ ಮಾಡುತ್ತೇವೆ’ ಎಂದರು.

ನಗರದಲ್ಲಿ ಪಾರಿವಾಳ ನಿಯಂತ್ರಣಕ್ಕೆ ಮನವಿ

ಬೆಂಗಳೂರು: ಬೆಂಗಳೂರಿನಲ್ಲಿ ಪಾರಿವಾಳಗಳ ಸಂಖ್ಯೆ ಹೆಚ್ಚಳವಾಗಿರು ವುದರಿಂದ ನಾಗರಿಕರಲ್ಲಿ ಶ್ವಾಸಕೋಶದ ಸಮಸ್ಯೆಯೂ ಹೆಚ್ಚಾಗಿದೆ. ಈ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕು ಎಂದು ಬಿಜೆಪಿ ಶಾಸಕ ಎಸ್.ಸುರೇಶ್ ಕುಮಾರ್ ಅವರು ಗ್ರೇಟರ್ ಬೆಂಗಳೂರು ಪ್ರಾಧಿಕಾರಕ್ಕೆ ಪತ್ರ ಬರೆದಿದ್ದಾರೆ.

‘ನಗರದ ವಿವಿಧ ಉದ್ಯಾನಗಳಲ್ಲಿ ಮತ್ತು ಇನ್ನೂ ಕೆಲವು ಬಯಲು ಪ್ರದೇಶಗಳಲ್ಲಿ ಪಾರಿವಾಳಗಳಿಗೆ ಧಾನ್ಯಗಳನ್ನು ನೀಡುವ ದಾನಿಗಳು ಕಾರ್ಯೋನ್ಮುಖರಾಗಿದ್ದಾರೆ. ಅವರ ಹೃದಯವಂತಿಕೆ ನಿಜಕ್ಕೂ ಶ್ಲಾಘನೀಯ. ಆದರೆ, ಪಾರಿವಾಳಗಳ ಸಂಖ್ಯೆ ವಿಪರೀತ ಹೆಚ್ಚಾಗಿರುವುದರಿಂದ ನಾಗರಿಕರಿಗೆ ಶ್ವಾಸಕೋಶದ ಸಮಸ್ಯೆ ಹೆಚ್ಚಾಗುತ್ತಿರುವ ಬಗ್ಗೆ ಅನೇಕ ವೈದ್ಯಕೀಯ ವರದಿಗಳಿವೆ’ ಎಂದು ಅವರು ಹೇಳಿದ್ದಾರೆ.

‘ಈ ಬಗ್ಗೆ ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಮಟ್ಟದಲ್ಲಿ ಒಂದು ತೀರ್ಮಾನ ತೆಗೆದುಕೊಳ್ಳಬೇಕು’ ಎಂದೂ ಮನವಿ ಮಾಡಿದ್ದಾರೆ.

ಮಹಿಳಾ ಕಾರ್ಮಿಕರಿಗೆ ಬಿಸಿಯೂಟ: ಮನವಿ

ಬೆಂಗಳೂರು: ಗಾರ್ಮೆಂಟ್ಸ್ ಹಾಗೂ ಕಾರ್ಖಾನೆಗಳಲ್ಲಿ ಕೆಲಸ ಮಾಡುವ ಮಹಿಳಾ ಕಾರ್ಮಿಕರಿಗೆ ಮಧ್ಯಾಹ್ನ ಮೊಟ್ಟೆ ಸಹಿತ ಪೌಷ್ಟಿಕ ಆಹಾರ ನೀಡಬೇಕು ಹಾಗೂ ವಸತಿ ಸೌಲಭ್ಯ ಕಲ್ಪಿಸಬೇಕು ಎಂದು ಮುನ್ನಡೆ ಸಾಮಾಜಿಕ ಸಂಸ್ಥೆ ಮತ್ತು ಸಿವಿಡೆಪ್ ಇಂಡಿಯಾ ಸಂಸ್ಥೆ ಸರ್ಕಾರಕ್ಕ ಮನವಿ ಮಾಡಿದೆ.

‘ಕೆಲಸ ಸ್ಥಳದಲ್ಲಿ ಮೊಟ್ಟೆ ಸಹಿತ ಪೌಷ್ಟಿಕ ಆಹಾರ ನೀಡಬೇಕು. ಕ್ಯಾಂಟೀನ್ ಹಾಗೂ ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಬೇಕು. ವಸತಿ ಸೌಕರ್ಯ ಹಾಗೂ ಪಡಿತರ ಚೀಟಿ ನೀಡಬೇಕು. ಅಲ್ಲದೇ ಕನಿಷ್ಠ ವೇತನವನ್ನು ಹೆಚ್ಚಳ ಮಾಡಬೇಕು. ಉಚಿತವಾಗಿ ಪ್ಯಾಡ್ ನೀಡುವುದರ ಜತೆಗೆ ಶೌಚಾಲಯ ಶುಚಿಯಾಗಿರುವಂತೆ ನೋಡಿಕೊಳ್ಳಬೇಕು. ಮುಟ್ಟಿನ ರಜೆಯನ್ನು ಶೀಘ್ರ ಅನುಷ್ಠಾನಕ್ಕೆ ತರಬೇಕು’ ಎಂದು ಸಾಮಾಜಿಕ ಸಂಸ್ಥೆ ಕಾರ್ಯನಿರ್ವಾಹಕ ನಿರ್ದೇಶಕಿ ಪಿ.ಎಚ್. ಯಶೋದಾ ಆಗ್ರಹಿಸಿದರು.



ಚಿಟಿಕೆ ಸುದ್ದಿ

ಯುವಕ ಸಮುದ್ರ ಪಾಲು

ಮೂಲ್ಕಿ (ದಕ್ಷಿಣ ಕನ್ನಡ): ತಾಲ್ಲೂಕಿನ ಸಸಿಹಿತ್ಲು ಬೀಚ್‌ನಲ್ಲಿ ಈಜಲು ಸಮುದ್ರಕ್ಕೆ ಇಳಿದಿದ್ದ ಬೆಂಗಳೂರು ಮೂಲದ 7 ಎಂಜಿನಿಯರಿಂಗ್ ವಿದ್ಯಾರ್ಥಿಗಳ ಪೈಕಿ ಒಬ್ಬ ಸಮುದ್ರ ಪಾಲಾಗಿದ್ದು, ಶೋಧ ಕಾರ್ಯ ನಡೆಯುತ್ತಿದೆ.

ಬೆಂಗಳೂರಿನ ಎಂಜಿನಿಯರಿಂಗ್ ಕಾಲೇಜೊಂದರ ವಿದ್ಯಾರ್ಥಿ ಪ್ರಣವ್ (22) ಸಮುದ್ರ ಪಾಲಾದವರು.

ವಿವಿಧ ಕಾಲೇಜುಗಳ ವಿದ್ಯಾರ್ಥಿಗಳು ಭಾನುವಾರ ಸಂಜೆ ಸಸಿಹಿತ್ಲು ಬೀಚ್‌ಗೆ ಬಂದಿದ್ದರು. ಕತ್ತಲಾದರೂ ಸಮುದ್ರದಲ್ಲಿ ಈಜಾಡುತ್ತಿದ್ದ ಅವರಲ್ಲಿ 6 ಮಂದಿ ಪಾರಾಗಿದ್ದಾರೆ. ಪ್ರಣವ್ ಸಮುದ್ರದಲ್ಲಿ ಕೊಚ್ಚಿ ಹೋಗಿದ್ದಾರೆ.

'ಬಸ್ ಹತ್ತಿಸಿ, ಇಳಿಸುವುದು ಅಭಿವೃದ್ಧಿಯಲ್ಲ'

ಕುಣಿಗಲ್ (ತುಮಕೂರು): ಜನರನ್ನು ಬಸ್ ಹತ್ತಿಸಿ, ಇಳಿಸುವುದು ಅಭಿವೃದ್ಧಿ ಅಲ್ಲ ಎಂದು ಸಂಸದ ಡಾ.ಸಿ.ಎನ್. ಮಂಜುನಾಥ್ ಟೀಕಿಸಿದ್ದಾರೆ.

ಕೆರೆ ನಿರ್ಮಾಣ, ಶುದ್ಧ ಕುಡಿಯುವ ನೀರು, ಆರೋಗ್ಯ, ಗುಣಮಟ್ಟದ ಶಿಕ್ಷಣ, ರೈತರಿಗೆ ಅಗತ್ಯ ಸೌಲಭ್ಯ ನೀಡುವುದು ನಿಜವಾದ ಅಭಿವೃದ್ಧಿ ಎಂದರು.

ಕುಣಿಗಲ್ ತಾಲ್ಲೂಕನ್ನು ಬೆಂಗಳೂರು ದಕ್ಷಿಣ ಜಿಲ್ಲೆಗೆ ಸೇರಿಸುವ ಬಗ್ಗೆ ತಾಲ್ಲೂಕಿನ ಜನತೆ, ಜನಪ್ರತಿನಿಧಿ ಜತೆ ಯಾವುದೇ ಚರ್ಚೆ ನಡೆದಿಲ್ಲ. ಅದರ ಉದ್ದೇಶವೇ ಬೇರೆ ಇದೆ. ಟೌನ್‌ಶಿಪ್ ಮಾಡಿ ಎಂದು ಯಾರು ಕೇಳುತ್ತಿಲ್ಲ. ಬೆಂಗಳೂರಿನಲ್ಲಿ 3 ಲಕ್ಷ ಅಪಾರ್ಟ್‌ಮೆಂಟ್ ಜತೆಗೆ ಶಿವರಾಮ ಕಾರಂತ್, ಕೆಂಪೇಗೌಡ ಮತ್ತು ವಿಶ್ವೇಶ್ವರಯ್ಯ ಬಡಾವಣೆ ಖಾಲಿ ಬಿದ್ದಿವೆ. ಸರ್ಕಾರ ಸಾವಿರಾರು ಎಕರೆ ಕೃಷಿ ಭೂಮಿ ಸ್ವಾಧೀನಪಡಿಸಿ ಟೌನ್‌ಶಿಪ್ ನಿರ್ಮಿಸುವ ಬದಲು ಚೀನಾ ಮಾದರಿಯಲ್ಲಿ 50 ಎಕರೆ ಪ್ರದೇಶದಲ್ಲಿ ಬಹುಮಹಡಿಯ ಮನೆಗಳನ್ನು ನಿರ್ಮಿಸಲಿ ಎಂದರು

100 ಬದಲು 65 ಮೀಟರ್ ರಸ್ತೆ ನಿರ್ಮಾಣ

ಬೆಂಗಳೂರು ಬ್ಯುಸಿನೆಸ್ ಕಾರಿಡಾರ್: ಎರಡು ವರ್ಷದಲ್ಲಿ ಪೂರ್ಣಗೊಳಿಸುವ ಗುರಿ

• ಕೆ.ಎಸ್.ಸುನಿಲ್

ಬೆಂಗಳೂರು: ಪೆರಿಫೆರಲ್ ರಿಂಗ್ ರಸ್ತೆ (ಪಿಆರ್‌ಆರ್–1) ಯೋಜನೆಯನ್ನು ಬೆಂಗಳೂರು ಬ್ಯುಸಿನೆಸ್ ಕಾರಿಡಾರ್ (ಬಿಬಿಸಿ) ಎಂದು ಮರು ನಾಮಕರಣ ಮಾಡಿರುವ ಸರ್ಕಾರ, ಎರಡು ವರ್ಷಗಳಲ್ಲಿ ಯೋಜನೆ ಪೂರ್ಣಗೊಳಿಸುವ ಗುರಿ ಹೊಂದಿದೆ. ಬಿಬಿಸಿ ರಸ್ತೆ ಅಗಲವನ್ನು 100 ಮೀಟರ್ ಬದಲು 65 ಮೀಟರ್‌ಗೆ ಸೀಮಿತಗೊಳಿಸಲು ತೀರ್ಮಾನಿಸಿದೆ.

2007ರಲ್ಲಿ ಯೋಜನೆ ಘೋಷಿಸಿದಾಗ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) 73 ಕಿ.ಮೀ. ಮಾರ್ಗದಲ್ಲಿ 100 ಮೀಟರ್ ಅಗಲದ ರಸ್ತೆ ನಿರ್ಮಿಸುವ ಸಂಬಂಧ ಅಧಿಸೂಚನೆ ಹೊರಡಿಸಿ, ವಿಸ್ತೃತ ಯೋಜನಾ ವರದಿಯನ್ನು ಸಿದ್ಧಪಡಿಸಲಾಗಿತ್ತು. ಈಗ ರಸ್ತೆ ವಿನ್ಯಾಸದಲ್ಲಿ ಬದಲಾವಣೆ ಮಾಡಿ, 100 ಮೀಟರ್ ಬದಲಿಗೆ ಸರ್ವೀಸ್ ರಸ್ತೆ, ಮೆಟ್ರೊ ಮಾರ್ಗವನ್ನೂ ಒಳಗೊಂಡಂತೆ 65 ಮೀಟರ್‌ಗೆ ಸೀಮಿತಗೊಳಿಸಿದೆ.

ಬೆಂಗಳೂರು – ಮೈಸೂರು ಎಕ್ಸ್‌ಪ್ರೆಸ್ ಹೆದ್ದಾರಿ ಮಾದರಿಯಲ್ಲಿ ರಸ್ತೆ ನಿರ್ಮಿಸಲು ತೀರ್ಮಾನಿಸಲಾಗಿದೆ. ರಸ್ತೆಯ ಎರಡೂ ಭಾಗದಲ್ಲಿ ಸರ್ವೀಸ್ ರಸ್ತೆ ಇರಲಿದ್ದು, ಪ್ರಮುಖ ರಸ್ತೆ ಟೋಲ್ ರಸ್ತೆಯಾಗಲಿದೆ.

ಪಿಆರ್‌ಆರ್ ರಸ್ತೆಯ ಎರಡೂ ಬದಿಯಲ್ಲಿ 9 ಮೀಟರ್ ಅಗಲದ ಸರ್ವೀಸ್ ರಸ್ತೆ, 3 ಮೀಟರ್ ಅಗಲದ ಪಾದಚಾರಿ ಮಾರ್ಗ ನಿರ್ಮಾಣಗೊಳ್ಳಲಿದೆ. ರಸ್ತೆಗೆ ಹೊಂದಿಕೊಂಡಿರುವ ಗ್ರಾಮಗಳಿಗೆ ಹಾಗೂ ಯೋಜನೆಗೆ ಸ್ವಾಧೀನ ಪಡಿಸಿಕೊಂಡ ಬಳಿಕ ಉಳಿಯುವ ರೈತರ ಭೂಮಿಗೆ ರಸ್ತೆ ಸಂಪರ್ಕ ಕಲ್ಪಿಸಲು ಸರ್ವೀಸ್ ರಸ್ತೆ ನಿರ್ಮಿಸಲಾಗುತ್ತದೆ.

ಸರ್ವೀಸ್ ರಸ್ತೆ ಪಕ್ಕದಲ್ಲಿ ಮೆಟ್ರೊ ಮಾರ್ಗ ನಿರ್ಮಾಣ ಅಥವಾ ಎಲಿವೇಟೆಡ್ ರೈಲು ವ್ಯವಸ್ಥೆಗೆ 5 ಮೀಟರ್‌ನಷ್ಟು ಜಾಗ ಕಾಯ್ದಿರಿಸಲಾಗುತ್ತಿದೆ. ರಸ್ತೆಯ ಪ್ರತಿಯೊಂದು ಬದಿಯಲ್ಲಿ 4 ಮೀಟರ್‌ಗಳನ್ನು ಶೋಲ್ಡರ್ ಮತ್ತು ಫೆನ್ಸಿಂಗ್‌ಗೆ ಬಳಸಲಾಗುತ್ತದೆ.

ಯೋಜನೆಯ ಈ ಪರಿಷ್ಕರಣೆಯಿಂದಾಗಿ 35 ಮೀಟರ್ ಜಾಗ ಉಳಿತಾಯವಾಗಲಿದ್ದು, ಅದನ್ನೇ ರೈತರಿಗೆ ಪರಿಹಾರ ರೂಪದಲ್ಲಿ ಮರಳಿ ನೀಡಲು ತೀರ್ಮಾನಿಸಲಾಗಿದೆ. ಪ್ರಮುಖ ವಾಣಿಜ್ಯ ಪ್ರದೇಶವಾಗಿ ಈ ಯೋಜನಾ ಮಾರ್ಗವು ರೂಪುಗೊಳ್ಳಲಿರುವ ಕಾರಣ ರೈತರಿಗೂ ಅನುಕೂಲವಾಗಲಿ ಎಂದು ಈ ತೀರ್ಮಾನ ಮಾಡಲಾಗಿದೆ.

ಪಿಆರ್‌ಆರ್ ರಸ್ತೆ ಸುತ್ತಮುತ್ತ 1 ಕಿ.ಮೀ. ವ್ಯಾಪ್ತಿಯೊಳಗಿನ ಎಲ್ಲ ಭೂ ವ್ಯವಹಾರಗಳಿಗೆ ಮುದ್ರಾಂಕ ಮತ್ತು ನೋಂದಣಿ ಶುಲ್ಕದ ಮೇಲೆ ಶೇಕಡ 1ರಷ್ಟು ಸೆಸ್ ವಿಧಿಸಲಾಗುತ್ತದೆ. ಈ ಸೆಸ್ ಅನ್ನು ನೋಂದಣಿ ಮತ್ತು ಮುದ್ರಾಂಕ ಇಲಾಖೆಯಿಂದ ಸಂಗ್ರಹಿಸಿ, ರಾಜ್ಯದ ಸಂಯುಕ್ತ ನಿಧಿಗೆ ಜಮೆ ಮಾಡಲಾಗುತ್ತದೆ. ಸರ್ಕಾರ ಈ ಸೆಸ್ ಅನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ವರ್ಗಾಯಿಸಲಿದೆ.

> ಬಿಬಿಸಿ ಯೋಜನೆಗೆ ಸ್ವಾಧೀನ ಪಡಿಸಿಕೊಳ್ಳುವ ಭೂಮಿಯನ್ನು ರಿಯಲ್ ಎಸ್ಟೇಟ್‌ಗೆ ಬಳಸಿಕೊಳ್ಳುವುದಿಲ್ಲ. ಯಾವುದೇ ವದಂತಿಗಳಿಗೆ ರೈತರು ಕಿವಿಗೊಡಬಾರದು.
>
> **ಎಲ್.ಕೆ.ಅತೀಕ್,** ಅಧ್ಯಕ್ಷ, ಬಿಬಿಸಿ ವಿಶೇಷ ಉದ್ದೇಶದ ಘಟಕ (ಎಸ್‌ಪಿವಿ)

117 ಕಿ.ಮೀ. ಉದ್ದದ ಮಾರ್ಗ

ಬಿಬಿಸಿ ಯೋಜನೆಯು 117 ಕಿ.ಮೀ. ಉದ್ದ ಇರಲಿದೆ. ತುಮಕೂರು ರಸ್ತೆಯಿಂದ ಯಲಹಂಕ, ವೈಟ್‌ಫೀಲ್ಡ್, ಆನೇಕಲ್, ಎಲೆಕ್ಟ್ರಾನಿಕ್ ಸಿಟಿ, ಮೈಸೂರು ರಸ್ತೆ ಮಾರ್ಗವಾಗಿ ಬೆಂಗಳೂರನ್ನು ಸುತ್ತುವರಿದು, ಮತ್ತೆ ತುಮಕೂರು ರಸ್ತೆಯ ಬಿಐಇಸಿ ಬಳಿ ಸಂಪರ್ಕ ಸಾಧಿಸಲಿದೆ. ಈ ರಸ್ತೆಯು ಬೆಂಗಳೂರಿನ ಉತ್ತರ ಭಾಗದಲ್ಲಿ 73 ಕಿ.ಮೀ. ಸಾಗಲಿದ್ದು, ಉಳಿದದ್ದು ಬೆಂಗಳೂರಿನ ದಕ್ಷಿಣ ಭಾಗದಲ್ಲಿ ಸಾಗಲಿದೆ. ಎಲೆಕ್ಟ್ರಾನಿಕ್ ಸಿಟಿ, ತುಮಕೂರು ರಸ್ತೆ, ನೆಲಮಂಗಲ, ಮೈಸೂರು ರಸ್ತೆ ಕಡೆ ಹೋಗುವ ವಾಹನಗಳು ಈ ರಸ್ತೆಯಲ್ಲಿ ಸಾಗಲಿವೆ.

ಸಾಕುನಾಯಿ ಕೊಂದ ಕೆಲಸದಾಕೆ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾಲೀಕರು ಸಾಕಿದ್ದ ನಾಯಿ ಮರಿ ಕೊಂದ ಆರೋಪದಡಿ ಮನೆ ಕೆಲಸದಾಕೆಯನ್ನು ಬಾಗಲೂರು ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಪುಷ್ಪಲತಾ ಬಂಧಿತ ಆರೋಪಿ. ಆರೋಪಿಯನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದ ಬಳಿಕ ಬಂಧಿಸಲಾಯಿತು ಎಂದು ಪೊಲೀಸರು ಹೇಳಿದರು.

ಕೆ.ಆರ್. ರಾಶಿಕಾ ಅವರು ನೀಡಿದ ದೂರು ಆಧರಿಸಿ ಪ್ರಾಣಿಗಳ ಮೇಲಿನ ಕ್ರೌರ್ಯ ತಡೆ ಕಾಯ್ದೆ ಹಾಗೂ ಭಾರತೀಯ ನ್ಯಾಯ ಸಂಹಿತೆ (ಬಿಎನ್‌ಎಸ್) ಸೆಕ್ಷನ್ 325 ಅಡಿ ಪ್ರಕರಣ ದಾಖಲು ಮಾಡಿಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು.

'ಗೂಫಿ' ಹೆಸರಿನ ನಾಯಿಯನ್ನು ಮನೆ ಕೆಲಸದಾಕೆ ಪುಷ್ಪಲತಾ ನೆಲಕ್ಕೆ ಬಡಿದು, ಕತ್ತು ಬಿಗಿದು ಕೊಲೆ ಮಾಡಿರುವುದು ಲಿಫ್ಟ್‌ನ ಸಿಸಿಟಿವಿಯಲ್ಲಿ ಸೆರೆಯಾಗಿದೆ.

ಕೆಲಸದಾಕೆಯ ಕೃತ್ಯವನ್ನು ಮನೆ ಮಾಲೀಕರಾದ ರಾಶಿ ಅವರು ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡಿದ್ದಾರೆ. ಪುಷ್ಪಲತಾ ಅವರ ಕೃತ್ಯಕ್ಕೆ ಪ್ರಾಣಿ ಪ್ರಿಯರಿಂದ ತೀವ್ರ ಆಕ್ರೋಶ ವ್ಯಕ್ತವಾಗಿದೆ.

ದೂರಿನಲ್ಲಿ ಏನಿದೆ?: 'ಸಾಕು ನಾಯಿ ನೋಡಿಕೊಳ್ಳಲು ಪುಷ್ಪಾಲತಾ ಅವರನ್ನು ನೇಮಿಸಿಕೊಳ್ಳಲಾಗಿತ್ತು. ಅ.31ರಂದು ನಾಯಿಯನ್ನು ವಾಕಿಂಗ್‌ಗೆ ಕರೆದೊಯ್ದಿದ್ದ ಪುಷ್ಪಲತಾ ಲಿಫ್ಟ್ ನೊಳಗೆ ಬರುತ್ತಿದ್ದಂತೆ ನೆಲಕ್ಕೆ ಬಡಿದು, ಬೆಲ್ಟ್‌ನಿಂದ ಕತ್ತು ಬಿಗಿದು ಸಾಯಿಸಿದ್ದಾರೆ. ಬಳಿಕ ನಾಯಿಯ ಕಳೇಬರವನ್ನು ಎಳೆದು ತಂದು ಇದ್ದಕ್ಕಿದ್ದಂತೆ ಸಾವನ್ನಪ್ಪಿತು ಎಂದು ಆರೋಪಿ ಸುಳ್ಳು ಹೇಳಿದ್ದರು. ಅನುಮಾನಗೊಂಡು ಮಾರನೇ ದಿನ ಸಿಸಿಟಿವಿ ಕ್ಯಾಮೆರಾ ದೃಶ್ಯಗಳನ್ನು ಪರಿಶೀಲನೆ ಮಾಡಿದಾಗ ಕೆಲಸದಾಕೆಯ ಕೃತ್ಯ ಗೊತ್ತಾಗಿದೆ ಎಂದು ಮೂಲಗಳು ಹೇಳಿವೆ.

ನೈಜೀರಿಯಾದ ಡ್ರಗ್ಸ್ ಪೆಡ್ಲರ್ ಸೆರೆ

ಅಪರಾಧ ಸುದ್ದಿ

ಬೆಂಗಳೂರು: ಹೊರರಾಜ್ಯದಿಂದ ಮಾದಕ ವಸ್ತುಗಳನ್ನು ನಗರಕ್ಕೆ ತಂದು ಮಾರಾಟ ಮಾಡುತ್ತಿದ್ದ ನೈಜೀರಿಯಾ ದೇಶದ ಡ್ರಗ್ಸ್ ಪೆಡ್ಲರ್ ಸ್ಟೆಫಿನ್ ಬ್ಲೆಸ್ಸಿಂಗ್ ನೋಸ್ಲಿ (35) ಅವರನ್ನು ಕೊಡಿಗೇಹಳ್ಳಿ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಆರೋಪಿಯಿಂದ 35 ಗ್ರಾಂ ಎಂಡಿಎಂಎ ಕ್ರಿಸ್ಟಲ್ ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

ಬುರ್ಖಾ ಧರಿಸಿಕೊಂಡು ಅನುಮಾನಾಸ್ಪದವಾಗಿ ಮಹಿಳೆ ಓಡಾಟ ನಡೆಸುತ್ತಿದ್ದರು. ಭಾನುವಾರ ಸಂಜೆ ರಸ್ತೆಯಲ್ಲಿ ಆಟವಾಡುತ್ತಿದ್ದ ಮಕ್ಕಳು ಮಹಿಳೆಯನ್ನು ಗಮನಿಸಿದ್ದರು. ಬಳಿಕ ಪೋಷಕರಿಗೆ ಮಾಹಿತಿ ನೀಡಿದ್ದರು. ಪೊಲೀಸ್ ಸಹಾಯವಾಣಿಗೆ ಕರೆ ಮಾಡಿ ಪೋಷಕರು ಮಾಹಿತಿ ನೀಡಿದ್ದರು. ಸ್ಥಳಕ್ಕೆ ಬಂದ ಕೊಡಿಗೇಹಳ್ಳಿ ಪೊಲೀಸರು, ಆರೋಪಿಯನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ ಡ್ರಗ್ಸ್ ಪೆಡ್ಲರ್ ಎಂಬುದು ಗೊತ್ತಾಗಿದೆ.

'ಆರೋಪಿ ಪರಾರಿಯಾಗುವ ಯತ್ನದಲ್ಲಿ ಎಂಡಿಎಂಎ ಕ್ರಿಸ್ಟಲ್ ಪೊಟ್ಟಣಗಳನ್ನು ಬಕೆಟ್‌ಗೆ ಎಸೆದಿರುವುದು ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾದ ದೃಶ್ಯಾವಳಿಯಲ್ಲಿದೆ' ಎಂದು ಮೂಲಗಳು ತಿಳಿಸಿವೆ.

ನಿಲುಗಡೆ ಮಾಡಿದ್ದ ವಾಹನಗಳ ಗಾಜು ಒಡೆದು ಹಾನಿ

ಬೆಂಗಳೂರು: ರಸ್ತೆಬದಿಯಲ್ಲಿ ರಾತ್ರಿ ವೇಳೆ ನಿಲುಗಡೆ ಮಾಡಿದ್ದ ಆಟೊ, ಕಾರುಗಳ ಗಾಜು ಒಡೆದು ಹಾನಿಗೊಳಿಸಿರುವ ಘಟನೆ ಬ್ಯಾಡರಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯ ಅಂಧ್ರಹಳ್ಳಿಯಲ್ಲಿ ಸೋಮವಾರ ರಾತ್ರಿ ನಡೆದಿದೆ.

ಆರೋಪಿಗಳ ಕೃತ್ಯ ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ.

ಗಾಜು ಒಡೆಯುತ್ತಿದ್ದ ದೃಶ್ಯವನ್ನು ಗಮನಿಸಿದ ಸ್ಥಳೀಯರು, ಐವರು ಆರೋಪಿಗಳನ್ನು ಹಿಡಿದು ಪೊಲೀಸರಿಗೆ ಒಪ್ಪಿಸಿದ್ದಾರೆ. ಆರೋಪಿಗಳ ವಿರುದ್ಧ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ. ತಲೆಮರೆಸಿಕೊಂಡಿರುವ ನಾಲ್ವರ ಪತ್ತೆಗೆ ಶೋಧ ಕಾರ್ಯ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು. ಮದ್ಯದ ನಶೆಯಲ್ಲಿ ಆರೋಪಿಗಳು ಕೃತ್ಯ ಎಸಗಿದ್ದಾರೆ ಎಂದು ಪೊಲೀಸರು ಹೇಳಿದರು.

ವೈದ್ಯೆ ಪತ್ನಿ ಕೊಲೆ: ಗೆಳತಿಯೊಂದಿಗೆ ಆರೋಪಿ ಚಾಟಿಂಗ್

ಬೆಂಗಳೂರು: ಅನಾರೋಗ್ಯದಿಂದ ಬಳಲುತ್ತಿದ್ದ ಪತ್ನಿ ಡಾ.ಕೃತಿಕಾ ರೆಡ್ಡಿ ಅವರಿಗೆ ಅನಸ್ತೇಶಿಯಾ ನೀಡಿ ಕೊಲೆ ಮಾಡಿ 'ಸಹಜ ಸಾವು' ಎಂಬುದಾಗಿ ಬಿಂಬಿಸಿದ್ದ ಪ್ರಕರಣದಲ್ಲಿ ಆರೋಪಿ ಡಾ.ಜಿ.ಎಸ್.ಮಹೇಂದ್ರ ರೆಡ್ಡಿ ಅವರು ತನ್ನ ಗೆಳತಿಯ ಜತೆಗೆ ಮೊಬೈಲ್‌ನಲ್ಲಿ ಚಾಟಿಂಗ್ ನಡೆಸಿರುವುದು ಪೊಲೀಸ್ ತನಿಖೆಯಿಂದ ಗೊತ್ತಾಗಿದೆ.

ಆರೋಪಿ ಬಂಧನದ ಬಳಿಕ ಮೊಬೈಲ್ ಹಾಗೂ ಲ್ಯಾಪ್‌ಟಾಪ್ ವಶಕ್ಕೆ ಪಡೆದುಕೊಂಡು ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ (ಎಫ್‌ಎಸ್‌ಎಲ್) ರವಾನೆ ಮಾಡಲಾಗಿತ್ತು. ಎಫ್‌ಎಸ್‌ಎಲ್ ತಜ್ಞರು ಪರಿಶೀಲನೆ ನಡೆಸಿ ವರದಿ ನೀಡಿದ್ದು, ಗೆಳತಿಯ ಜತೆಗೆ ಆರೋಪಿ ಚಾಟಿಂಗ್ ನಡೆಸಿರುವುದು ಪತ್ತೆಯಾಗಿದೆ.

ಪದೇ ಪದೇ ಚಾಟಿಂಗ್ ಮಾಡುತ್ತಿದ್ದಂತೆ ಬೇಸರಗೊಂಡಿದ್ದ ಸ್ನೇಹಿತೆ ಮಹೇಂದ್ರ ರೆಡ್ಡಿ ಅವರ ಮೊಬೈಲ್ ಸಂಖ್ಯೆಯನ್ನು ಬ್ಲಾಕ್ ಲೀಸ್ಟ್‌ಗೆ ಸೇರಿಸಿದ್ದರು. ಕೆಲವು ಬಾರಿ ಫೋನ್ ಪೇಯಲ್ಲೂ ಆರೋಪಿ ಸಂದೇಶ ಕಳುಹಿಸಿರುವುದು ಪತ್ತೆಯಾಗಿದೆ.

'ನಿನಗಾಗಿ ನನ್ನ ಪತ್ನಿಯನ್ನು ಕೊಲೆ ಮಾಡಿದ್ದೇನೆ' ಎಂಬುದಾಗಿ ಆರೋಪಿ ಸಂದೇಶ ಕಳುಹಿಸಿರುವುದು ಸಿಕ್ಕಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ. ಪ್ರಕರಣದ ಸಂಬಂಧ ಯುವತಿ ಕರೆಸಿ ವಿಚಾರಣೆ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

'ಕಬ್ಬು ಬೆಳೆಗಾರರ ಸಂಕಷ್ಟಕ್ಕೆ ಸ್ಪಂದಿಸದ ಸರ್ಕಾರ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬೆಳಗಾವಿ, ಬಾಗಲಕೋಟೆ, ವಿಜಯಪುರ ಮತ್ತಿತರ ಜಿಲ್ಲೆಗಳಲ್ಲಿ ಕಬ್ಬು ಬೆಳೆಗಾರರು ತಮ್ಮ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಹೋರಾಟ ನಡೆಸುತ್ತಿದ್ದಾರೆ. ಸರ್ಕಾರ ರೈತರ ಸಂಕಷ್ಟದ ಬಗ್ಗೆ ತಲೆ ಕೆಡಿಸಿಕೊಂಡಿಲ್ಲ. ಆದ್ದರಿಂದ ಬೆಳಗಾವಿಯಲ್ಲಿ ನಡೆಯುತ್ತಿರುವ ಕಬ್ಬು ಬೆಳೆಗಾರರ ಹೋರಾಟದಲ್ಲಿ ಮಂಗಳವಾರ ಭಾಗವಹಿಸುತ್ತೇನೆ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದರು.

ಸುದ್ದಿಗಾರರ ಜತೆ ಸೋಮವಾರ ಮಾತನಾಡಿದ ಅವರು, ಪ್ರತಿ ಟನ್‌ಗೆ ₹3,500 ನಿಗದಿಪಡಿಸುವಂತೆ ಆಗ್ರಹಿಸಿ ಬೆಳಗಾವಿ ಜಿಲ್ಲೆ ಮೂಡಲಗಿ ತಾಲ್ಲೂಕಿನ ಗುರ್ಲಾಪುರ ಕ್ರಾಸ್‌ನಲ್ಲಿ ರೈತರು ಹೋರಾಟ ನಡೆಸುತ್ತಿದ್ದಾರೆ. ಆದರೆ, ಸರ್ಕಾರ ರೈತರ ಹೋರಾಟಕ್ಕೆ ಸ್ಪಂದಿಸಿಲ್ಲ ಎಂದರು.

'ಕಲ್ಯಾಣ ಕರ್ನಾಟಕ, ಕಿತ್ತೂರು ಕರ್ನಾಟಕಗಳಲ್ಲಿ ಆಗಿರುವ ಅತಿವೃಷ್ಟಿಯಿಂದ ರೈತರು ಸಂಕಷ್ಟದಲ್ಲಿದ್ದಾರೆ. ಆ ಭಾಗದಲ್ಲಿ ನಾವೂ ಪ್ರವಾಸ ಮಾಡಿದ್ದೇವೆ. ಜಿಲ್ಲಾ ಉಸ್ತುವಾರಿಗಳು ನಾಪತ್ತೆಯಾಗಿದ್ದಾರೆ ಎಂದು ಸರ್ಕಾರದ ಗಮನವನ್ನೂ ಸೆಳೆದಿದ್ದೇವೆ. ಈ ಬಗ್ಗೆ ಇಲಾಖಾ ಅಧಿಕಾರಿಗಳು ತಲೆ ಕೆಡಿಸಿಕೊಂಡಿಲ್ಲ. ಪರಿಹಾರವನ್ನು ಬಿಡುಗಡೆ ಮಾಡಿಲ್ಲ. ಸಚಿವರು ಬೆಂಗಳೂರಿನಲ್ಲಿ ಕುಳಿತು ಕೇಂದ್ರ ಸರ್ಕಾರ ಹಣ ಕೊಟ್ಟಿಲ್ಲ ಎಂದು ಆರೋಪಿಸುತ್ತಾ ಕುಳಿತಿದ್ದಾರೆ. ಸಂಕಷ್ಟದಲ್ಲಿರುವ ರೈತರಿಗೆ ರಾಜ್ಯ ಸರ್ಕಾರ ಪರಿಹಾರ ನೀಡಿಲ್ಲ' ಎಂದು ಆಪಾದಿಸಿದರು.

ಕುರ್ಚಿ ಕಿತ್ತಾಟದಲ್ಲಿ ರೈತರನ್ನು ಮರೆತ ಸರ್ಕಾರ: 'ಕುರ್ಚಿ ಕಿತ್ತಾಟದಲ್ಲಿ ಸರ್ಕಾರ ರೈತರನ್ನು ಸಂಪೂರ್ಣವಾಗಿ ಮರೆತಿದೆ. ವಿವಿಧ ಜಿಲ್ಲೆಗಳಲ್ಲಿ ಕಬ್ಬು ಬೆಳೆಗಾರರು ಬೀದಿಗಿಳಿದು ಪ್ರತಿಭಟನೆ ನಡೆಸುತ್ತಿದ್ದರೂ ಕ್ಯಾರೆ ಎನ್ನುತ್ತಿಲ್ಲ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಹೇಳಿದ್ದಾರೆ.

ಕೋಲಾರದಲ್ಲಿ ನಡೆದ ಯುವಜನೋತ್ಸವ ಕಲಾಶೃಂಗದಲ್ಲಿ ಕೋಲಾರದ ತೋಟಗಾರಿಕಾ ಮಹಾವಿದ್ಯಾಲಯ ಹಾಗೂ ಬೆಳಗಾವಿ ಜಿಲ್ಲೆಯ ಅರಭಾವಿಯ ಕಿತ್ತೂರು ರಾಣಿ ಚನ್ನಮ್ಮ ತೋಟಗಾರಿಕಾ ಮಹಾವಿದ್ಯಾಲಯ ಸಮಗ್ರ ವೀರಾಗ್ರಣಿ ಪ್ರಶಸ್ತಿ ಜಯಿಸಿದವು

ಕೋಲಾರ, ಅರಭಾವಿಗೆ ಸಮಗ್ರ ಪ್ರಶಸ್ತಿ

ಯುವಜನೋತ್ಸವ: ಬೆಂಗಳೂರು ತಂಡ ರನ್ನರ್ ಅಪ್

ಪ್ರಜಾವಾಣಿ ವಾರ್ತೆ

ಕೋಲಾರ: ಕೋಲಾರದ ತೋಟಗಾರಿಕಾ ಮಹಾವಿದ್ಯಾಲಯ ಹಾಗೂ ಬೆಳಗಾವಿ ಜಿಲ್ಲೆಯ ಅರಭಾವಿಯ ಕಿತ್ತೂರು ರಾಣಿ ಚನ್ನಮ್ಮ ತೋಟಗಾರಿಕಾ ಮಹಾವಿದ್ಯಾಲಯ ಸಮಗ್ರ ವೀರಾಗ್ರಣಿ ಪ್ರಶಸ್ತಿ ಜಯಿಸಿವೆ. ಬೆಂಗಳೂರಿನ ತೋಟಗಾರಿಕಾ ಮಹಾವಿದ್ಯಾಲಯ ರನ್ನರ್ ಅಪ್ ಪ್ರಶಸ್ತಿ ತನ್ನದಾಗಿಸಿಕೊಂಡಿತು.

ನಗರದಲ್ಲಿ ಬಾಗಲಕೋಟೆ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಕೋಲಾರ ತೋಟಗಾರಿಕಾ ಮಹಾವಿದ್ಯಾಲಯ ಆಶ್ರಯದಲ್ಲಿ ಹಮ್ಮಿಕೊಂಡಿದ್ದ 16ನೇ ಅಂತರ ಮಹಾವಿದ್ಯಾಲಯಗಳ ಯುವಜನೋತ್ಸವ ಕಲಾಶೃಂಗ–2025ದಲ್ಲಿ ಗಣ್ಯರು ಈ ಪ್ರಶಸ್ತಿಗಳನ್ನು ಪ್ರದಾನ ಮಾಡಿದರು.

10 ಮಹಾವಿದ್ಯಾಲಯಗಳ ನಡುವೆ ಮೂರು ದಿನ 20 ಸ್ಪರ್ಧೆಗಳು ನಡೆದವು. ಇಲ್ಲಿ ಗೆದ್ದವರು ರಾಷ್ಟ್ರಮಟ್ಟದ ಯುವಜನೋತ್ಸವದಲ್ಲಿ ಪಾಲ್ಗೊಳ್ಳಲಿದ್ದಾರೆ.

ಸಮಾರೋಪ ಸಮಾರಂಭದಲ್ಲಿ ನಟ ಯುವ ರಾಜ್‌ಕುಮಾರ್, ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ವ್ಯವಸ್ಥಾಪನಾ ಮಂಡಳಿ ಸದಸ್ಯರಾದ ಎಸ್.ಎನ್.ವಾಸುದೇವನ್, ಎಚ್.ಜೆ.ಮನೋಹರ, ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ಡೀನ್, ವಿದ್ಯಾರ್ಥಿ ಕಲ್ಯಾಣ ವಿಭಾಗದ ರಾಮಚಂದ್ರ ನಾಯ್ಕ, ತೋಟಗಾರಿಕಾ ಮಹಾವಿದ್ಯಾಲಯ ಡೀನ್ ರಾಘವೇಂದ್ರ ಮೇಸ್ತ ಉಪಸ್ಥಿತರಿದ್ದರು.

ವಿವಿಧ ಪ್ರಶಸ್ತಿ ವಿಜೇತರು

ಏಕಾಂಕ ನಾಟಕದಲ್ಲಿ ತೋಟಗಾರಿಕಾ ಮಹಾವಿದ್ಯಾಲಯ, ಕೋಲಾರ–ಪ್ರಥಮ, ಕೊಪ್ಪಳ-ದ್ವಿತೀಯ ಹಾಗೂ ಬೆಂಗಳೂರು-ತೃತೀಯ, ಜಾನಪದ ಸಮೂಹ ನೃತ್ಯದಲ್ಲಿ ತೋಟಗಾರಿಕಾ ಮಹಾವಿದ್ಯಾಲಯ, ಕೋಲಾರ –ಪ್ರಥಮ, ಬೀದರ್-ದ್ವಿತೀಯ ಹಾಗೂ ಅರಭಾವಿ-ತೃತೀಯ, ಏಕಪಾತ್ರಾಭಿನಯದಲ್ಲಿ ತೋಟಗಾರಿಕಾ ಮಹಾವಿದ್ಯಾಲಯ, ಕೋಲಾರ –ಪ್ರಥಮ, ಅರಭಾವಿ-ದ್ವಿತೀಯ ಹಾಗೂ ಬಾಗಲಕೋಟೆ-ತೃತೀಯ, ರಂಗೋಲಿ ಸ್ಪರ್ಧೆಯಲ್ಲಿ ತೋಟಗಾರಿಕಾ ಮಹಾವಿದ್ಯಾಲಯ, ಕೋಲಾರ– ಪ್ರಥಮ, ಬೆಂಗಳೂರು-ದ್ವಿತೀಯ ಹಾಗೂ ಅರಭಾವಿ-ತೃತೀಯ, ಆಶು ಭಾಷಣ ಸ್ಪರ್ಧೆಯಲ್ಲಿ ತೋಟಗಾರಿಕಾ ಮಹಾವಿದ್ಯಾಲಯ, ಬೆಂಗಳೂರು –ಪ್ರಥಮ, ಅರಭಾವಿ-ದ್ವಿತೀಯ ಹಾಗೂ ಮೈಸೂರು-ತೃತೀಯ, ವ್ಯಂಗ್ಯಚಿತ್ರ ಬಿಡಿಸುವಿಕೆಯಲ್ಲಿ ತೋಟಗಾರಿಕಾ ಮಹಾವಿದ್ಯಾಲಯ, ಅರಭಾವಿ-ಪ್ರಥಮ, ದೇವಿಹೊಸೂರ-ದ್ವಿತೀಯ ಹಾಗೂ ಬೆಂಗಳೂರ-ತೃತೀಯ ಪ್ರಶಸ್ತಿಗೆ ಭಾಜನವಾದವು.

ಸುದ್ದಿ 2 ನಿಮಿಷ

ಅಕ್ರಮ ಆಸ್ತಿ: ಅಧಿಕಾರಿಗೆ ಮೂರು ವರ್ಷ ಶಿಕ್ಷೆ, ₹70 ಲಕ್ಷ ದಂಡ

ಬೆಂಗಳೂರು: ಆದಾಯಕ್ಕಿಂತ ಅಧಿಕ ಆಸ್ತಿ ಸಂಪಾದನೆಯ ಆರೋಪ ಸಾಬೀತಾದ ಹಿನ್ನಲೆಯಲ್ಲಿ ಬಿಎಂಟಿಸಿ ಯಶವಂತಪುರ ವಿಭಾಗೀಯ ಸಂಚಾರ ನಿಯಂತ್ರಕ ಕೆ.ಬಿ.ರಾಮಕೃಷ್ಣರೆಡ್ಡಿಗೆ ನಗರದ 23ನೇ ಹೆಚ್ಚುವರಿ ಸಿಟಿ ಸಿವಿಲ್ ಮತ್ತು ಸೆಷನ್ಸ್ ನ್ಯಾಯಾಲಯ ಮೂರು ವರ್ಷ ಶಿಕ್ಷೆ ಹಾಗೂ ದಂಡ ವಿಧಿಸಿ ಆದೇಶಿಸಿದೆ.

ಅಕ್ರಮ ಆಸ್ತಿ ಹೊಂದಿರುವ ಸಂಬಂಧ ರಾಮಕೃಷ್ಣ ರೆಡ್ಡಿ ವಿರುದ್ಧ ಲೋಕಾಯುಕ್ತ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದರು. ಬಲ್ಲ ಮೂಲಗಳ ಆದಾಯಕ್ಕಿಂತ ₹61,45,944 ಅಂದರೆ ಶೇಕಡ 29.84 ರಷ್ಟು ಅಕ್ರಮ ಆಸ್ತಿ ಹೊಂದಿರುವುದು ತನಿಖೆಯಲ್ಲಿ ದೃಢಪಟ್ಟಿದೆ. ತನಿಖಾಧಿಕಾರಿ ಕೆ.ಎಸ್.ಮುನಿಯಪ್ಪ ಅವರು ವಿಶೇಷ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದರು.

ಆರೋಪ ಸಾಬೀತಾದ ಕಾರಣ ಆರೋಪಿಗೆ ಮೂರು ವರ್ಷ ಕಠಿಣ ಸಜೆ, ₹70 ಲಕ್ಷ ದಂಡ ವಿಧಿಸಲಾಗಿದೆ. ದಂಡ ಪಾವತಿಸಲು ತಪ್ಪಿದ್ದಲ್ಲಿ ಆರು ತಿಂಗಳ ಸಾದಾ ಸಜೆ ಅನುಭವಿಸಬೇಕು ಎಂದು ನ್ಯಾಯಾಧೀಶ ಕೆ.ಎಂ. ರಾಧಾಕೃಷ್ಣ ಆದೇಶದಲ್ಲಿ ತಿಳಿಸಿದ್ದಾರೆ. ಅಭಿಯೋಜಕ ಮಂಜುನಾಥ ಹೊನ್ನಯ್ಯ ನಾಯಕ್ ವಾದ ಮಂಡಿಸಿದರು.

₹10 ಕೋಟಿ ವೆಚ್ಚದ ಡಾಂಬರೀಕರಣ ಕಾಮಗಾರಿ

ರಾಜರಾಜೇಶ್ವರಿ ನಗರ: ಹೇರೋಹಳ್ಳಿ ವಾರ್ಡ್ ನ ಈಸ್ಟ್ ವೆಸ್ಟ್ ಕಾಲೇಜು ರಸ್ತೆ, ಬಿಳಿಕಲ್ಲು, ಬಿಇಎಲ್ 1 ಮತ್ತು 2ನೇ ಹಂತದಲ್ಲಿ ₹10 ಕೋಟಿ ವೆಚ್ಚದಲ್ಲಿ ಕೈಗೊಂಡಿರುವ ಡಾಂಬರೀಕರಣ ಕಾಮಗಾರಿಗೆ ಶಾಸಕ ಎಸ್.ಟಿ.ಸೋಮಶೇಖರ್ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು, ಹೇರೋಹಳ್ಳಿ, ಬಿದರಕಲ್ಲು ವಾರ್ಡ್ ವ್ಯಾಪ್ತಿಯಲ್ಲಿ ಸುಸಜ್ಜಿತ ರಸ್ತೆ, ಡಾಂಬರೀಕರಣ, ಒಳಚರಂಡಿ ವ್ಯವಸ್ಥೆ ಇರಲಿಲ್ಲ. ಮಳೆ ಬಂದಾಗ ರಸ್ತೆಗಳು ಕೆಸರು ಗದ್ದೆ ಆಗುತ್ತಿದ್ದವು. ಈ ಭಾಗಕ್ಕೆ ಮೂಲ ಸೌಲಭ್ಯ ಕಲ್ಪಿಸುವುದೇ ದೊಡ್ಡ ಸವಾಲಾಗಿತ್ತು. ಹಂತ ಹಂತವಾಗಿ ಅಭಿವೃದ್ಧಿ ಪಡಿಸಲಾಗುತ್ತಿದೆ ಎಂದು ಹೇಳಿದರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಚ್. ಶ್ರೀಧರ್, ಪ್ರಧಾನ ಕಾರ್ಯದರ್ಶಿ ಎಂ. ಗಂಗರಾಜು, ಉದ್ಯಮಿ ಎಸ್.ಟಿ. ರಮೇಶ್, ಪಶ್ಚಿಮ ಜಿಲ್ಲಾ ಕಾಂಗ್ರೆಸ್ ಉಪಾಧ್ಯಕ್ಷ ಚಂದ್ರಶೇಖರ್, ಗಿಡ್ಡದ ಕೋನೇನಹಳ್ಳಿ ಕೆಂಪಣ್ಣ, ಕಾಚೋಹಳ್ಳಿ ಲೋಕೇಶ್, ಮಹದೇವ್, ಮಹಿಳಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಹೇಮಾ, ಜಿಲ್ಲಾ ಕಾರ್ಯದರ್ಶಿ ನಾಗವೇಣಿ, ಸವಿತಾ, ಕರೆಕಲ್ಲು ಮಾರೇಗೌಡ, ಗುಂಡಣ್ಣ, ಹೇರೋಹಳ್ಳಿ ಬ್ಲಾಕ್ ಯುವ ಕಾಂಗ್ರೆಸ್ ಅಧ್ಯಕ್ಷ ನಿಖಿಲ್ ಗೌಡ ಜಿಬಿಎ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ರಮೇಶ್ ಹಾಜರಿದ್ದರು.

ಕಬಡ್ಡಿ ಕ್ರೀಡಾಪಟುಗಳಿಗೆ ಶಾಸಕ ಎಸ್. ಮುನಿರಾಜು ಅವರು ಶುಭ ಹಾರೈಸಿದರು

ಕಬಡ್ಡಿ ಪಂದ್ಯಾವಳಿ ಆರಂಭ

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: ಕ್ರೀಡೆಯಲ್ಲಿ ಸೋಲು, ಗೆಲುವು ಮುಖ್ಯ ಅಲ್ಲ. ಆಟದಲ್ಲಿ ಭಾಗವಹಿಸಿ ಉತ್ತಮ ಪ್ರದರ್ಶನ ನೀಡುವುದು ಮುಖ್ಯ ಎಂದು ಶಾಸಕ ಎಸ್. ಮುನಿರಾಜು ತಿಳಿಸಿದರು.

ದಾಸರಹಳ್ಳಿಯ ಕಾಳಸ್ತ್ರೀ ನಗರದ ಸರ್ಕಾರಿ ಶಾಲಾ ಅವರಣದಲ್ಲಿ ಬೆಂಗಳೂರು ವಿಭಾಗ ಮಟ್ಟದ 14 ರಿಂದ 17 ವರ್ಷವಯೋಮಿತಿಯ ಬಾಲಕ, ಬಾಲಕಿಯರ ಕಬಡ್ಡಿ ಪಂದ್ಯಾವಳಿ 2025 -26ರ ಮೂರು ದಿನದ ಸ್ಪರ್ಧೆಗೆ ಚಾಲನೆ ನೀಡಿ ಮಾತನಾಡಿದರು. ಕಬಡ್ಡಿ ಒಂದು ಗ್ರಾಮೀಣ ಕ್ರೀಡೆ. ಆಟಗಾರನ ಚುರುಕುತನ ಮತ್ತು ಕೌಶಲಗಳನ್ನು ಒಳಗೊಂಡಿದೆ ಎಂದರು.

ಕ್ಷೇತ್ರ ಶಿಕ್ಷಣಾಧಿಕಾರಿ ಆರ್.ಎನ್. ಶೈಲಾ ಮಾತನಾಡಿ, 'ಕಬಡ್ಡಿ ಸ್ಪರ್ಧೆಯಲ್ಲಿ ರಾಜ್ಯದ 11 ಜಿಲ್ಲೆಗಳಿಂದ ಸುಮಾರು 660 ವಿದ್ಯಾರ್ಥಿಗಳು ಭಾಗವಹಿಸುತ್ತಿದ್ದಾರೆ. ಮೂರು ದಿನಗಳ ಸ್ಪರ್ಧೆಯಲ್ಲಿ ವಿಜೇತರಿಗೆ ಸೂಕ್ತ ಬಹುಮಾನ ನೀಡಲಾಗುವುದು' ಎಂದರು.

ಸಮಾರಂಭದಲ್ಲಿ ಬೆಂಗಳೂರು ಉತ್ತರ ಜಿಲ್ಲೆ ಶಿಕ್ಷಣ ಇಲಾಖೆಯ ಉಪ ನಿರ್ದೇಶಕ ಅಂಜಿನಪ್ಪ, ಜಿಲ್ಲಾ ದೈಹಿಕ ಶಿಕ್ಷಣಾಧಿಕಾರಿ ಮಹಮ್ಮದ್ ಹುಸೇನ್ ಪೀರ್, ಬೆಂಗಳೂರು ಉತ್ತರ ವಲಯ 3ರ ದೈಹಿಕ ಶಿಕ್ಷಣ ಪರಿವೀಕ್ಷಕ ಶೇಖರಪ್ಪ, 4ರ ಪರಿವೀಕ್ಷಕ ಗಂಗಪ್ಪ, ಸಿಆರ್ ಪಿ ಪುಷ್ಪಲತಾ ಮತ್ತು ವಿವಿಧ ಜಿಲ್ಲೆಯ ಶಿಕ್ಷಕರು ಇದ್ದರು.

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

BUSINESS

Business to Business

Business

PROPERTY COLLATERALS/ Joint Ventures/ Takeovers/ Training/ New Ideas/ Finance for Big Projects. Dr. Swamy Naidu, Vamshadhara Projects & Services:- 9342247637.

PERSONAL

Change of Name

CHANGE OF NAME

I, Basavaraju M, residing at No. 67, 2nd Stage, Ramachandrapura, VTC: Bengaluru North, PO: Vidhyaranyapura, Sub Dist: Bengaluru- 560097, have changed my name & gender from Male to Female to VACHANA SAARA M vide affidavit dated 3-11-2025 sworn before Notary Sumithra N, Bengaluru. Henceforth, I shall be know as VACHANA SAARA M only.

I, SHWETA Bhimrao Chawhan W/o Mr. Renjith Ramakrishna Achari, R/at No.44, "Krishna Villa", 2 nd Main Road, Vidhyaranyapura, Subbanna Layout,Bangalore 560097 have changed my name to SHWETA RENJITH ACHARIfor all practical purposes vide affidavit dt. 28-10-2025 sworn before Notary H.Sridhar Rao, Bangalore.

I, VAISHALI BHASKAR VARMA, Spouse of Cuddapah Bhaskar Varma, residing at OMQ 379, Officers Mess, Station House, Air Force Station, Jalahalli East, Bangalore- 560014, have changed my name from Vaishali Bhaskar Varma to VAISHALI VARMA, vide affidavit dated 13/10/2025 before Notary H.Prakasha, Bengaluru

CAUTION NOTICE

Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.

Advertisement Manager
The Printers (Mysore) Pvt. Ltd.
Bengaluru

ನಗರದಲ್ಲಿ ಇಂದು

ಜಿಲ್ಲಾ ಮಟ್ಟದ ಅಂಚೆ ಚೀಟಿಗಳ ಸಂಗ್ರಹಣಾ ಪ್ರದರ್ಶನ: ಅತಿಥಿಗಳು: ಹಂ.ಪ. ನಾಗರಾಜಯ್ಯ, ಉಪಸ್ಥಿತಿ: ಚಂದ್ರಶೇಖರ್ ಕಾಕುಮಾನು, ಸಂದೇಶ್ ಮಹಾದೇವಪ್ಪ, ವಿ. ತಾರಾ, ಅತಿಥಿಗಳು: ಬಿ.ಎಲ್. ಶಂಕರ್, ಸಿ. ರವೀಂದ್ರನಾಥ್, ಎನ್. ಶ್ರೀದೇವಿ, ಆಯೋಜನೆ: ಅಂಚೆ ಇಲಾಖೆ, ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್ತು, ಕುಮಾರಕೃಪಾ ರಸ್ತೆ, ಬೆಳಿಗ್ಗೆ 10ರಿಂದ



ಹಂ.ಪ. ನಾಗರಾಜಯ್ಯ

ಕೌಶಲ ಶೃಂಗಸಭೆ: ಉದ್ಘಾಟನೆ: ಸಿದ್ದರಾಮಯ್ಯ, ಉಪಸ್ಥಿತಿ: ಡಿ.ಕೆ. ಶಿವಕುಮಾರ್, ಡಾ. ಶರಣಪ್ರಕಾಶ ಪಾಟೀಲ, ಸ್ಥಳ: ದಿ ಲಲಿತ್ ಅಶೋಕ್, ಕುಮಾರಕೃಪಾ ರಸ್ತೆ, ಸಂಜೆ 4

'ಹೊನ್ನಾವರ ಬಂದರು ಯೋಜನೆ' ವಾಸ್ತವ ಶೋಧನಾ ವರದಿ ಬಿಡುಗಡೆ: ಮೇಧಾ ಪಾಟ್ಕರ್, ಆಯೋಜನೆ: ಎಐಸಿಸಿಟಿಯು, ಎಫ್‌ಎಫ್‌ಎಫ್–ಕೆ, ಪಿಯುಸಿಎಲ್, ಸ್ಥಳ: ಪ್ರೆಸ್‌ಕ್ಲಬ್, ಕಬ್ಬನ್ ಉದ್ಯಾನ, ಸಂಜೆ 5

ವಿ. ರಾಣಿ ಗೋವಿಂದರಾಜು ದತ್ತಿ ಪ್ರಶಸ್ತಿ ಪ್ರದಾನ: ವೂಡೇ ಪಿ. ಕೃಷ್ಣ, ಪ್ರಶಸ್ತಿ ಸ್ವೀಕರಿಸುವವರು: ರು. ಬಸಪ್ಪ, ಉಪಸ್ಥಿತಿ: ವಿ. ರಾಣಿ ಗೋವಿಂದರಾಜು, ಅಧ್ಯಕ್ಷತೆ: ಬೈರಮಂಗಲ ರಾಮೇಗೌಡ, ಆಯೋಜನೆ ಮತ್ತು ಸ್ಥಳ: ಬಿ.ಎಂ.ಶ್ರೀ ಪ್ರತಿಷ್ಠಾನ, ಎನ್.ಆರ್. ಕಾಲೊನಿ, ಸಂಜೆ 5

ನಾಟಕೋತ್ಸವ–2025: 'ಬದುಕು ಕಲಿಸಿದ ಬೇಂದ್ರೆ (ಹಾಡು ಹಬ್ಬ) ಮೇಳ: ಮಂಜುನಾಥ ಅಂಕುರ, ರಾಜ್‌ಗುರು, ಪ್ರಭಾಕರ್, ಮಾತುಕತೆ: ಗುಂಡಣ್ಣ ಚಿಕ್ಕಮಗಳೂರು, 'ಭೂಮಿ' ನಾಟಕ ಪ್ರದರ್ಶನ: ನಿರ್ದೇಶನ: ರಾಜ್‌ಗುರು, ಆಯೋಜನೆ: ರಂಗಪಯಣ, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 6ರಿಂದ

'ಆನಂದ ರಾಮಾಯಣ' ಧಾರ್ಮಿಕ ಪ್ರವಚನ: ವೆಂಕಟೇಶಾಚಾರ್ ಕಟ್ಟಿ, ಆಯೋಜನೆ ಮತ್ತು ಸ್ಥಳ: ವಿಜಯ ಮಧ್ವ ಸಂಘ, ಗಂಗಾಧರ ಬಡಾವಣೆ, ವಿಜಯನಗರ ಎರಡನೇ ಹಂತ, ಸಂಜೆ 6.30

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ..
nagaradalli_indu@prajavani.co.in

ಉದ್ವೇಗದ ಹೇಳಿಕೆ ನೀಡದಂತೆ ಬಿಜೆಪಿ ನಾಯಕರಿಗೆ ಆರ್‌ಎಸ್‌ಎಸ್ ಕಿವಿಮಾತು

'ಕಾಂಗ್ರೆಸ್ ಜಾಲಕ್ಕೆ ಬೀಳಬೇಡಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ದೇಶವ್ಯಾಪಿ ಹೀನಾಯ ಸ್ಥಿತಿಯಲ್ಲಿರುವ ಕಾಂಗ್ರೆಸ್ ತನ್ನ ಹುಳುಕು ಮುಚ್ಚಿಕೊಳ್ಳಲು ಸಂಘದ ಕುರಿತು (ಆರ್‌ಎಸ್‌ಎಸ್) ಸುಳ್ಳು ಮತ್ತು ಕೆಟ್ಟದಾದ ಸಂಕಥನವನ್ನು ಸೃಷ್ಟಿಸುತ್ತಿದೆ. ಈ ಬಗ್ಗೆ ಉದ್ವೇಗದ ಹೇಳಿಕೆ ನೀಡುವ ಅಗತ್ಯವಿಲ್ಲ ಮತ್ತು ಅನಗತ್ಯವಾಗಿ ಅವರ ಜಾಲಕ್ಕೂ ಸಿಕ್ಕಿಬೀಳಬಾರದು' ಎಂದು ಆರ್‌ಎಸ್‌ಎಸ್ ಮುಖಂಡರು ಬಿಜೆಪಿ ನಾಯಕರಿಗೆ ಸಲಹೆ ನೀಡಿದ್ದಾರೆ.

'ಭಾರತೀಯ ವಿದ್ಯಾಭವನದಲ್ಲಿ ಸೋಮವಾರ ನಡೆದ ಅಭ್ಯಾಸ ವರ್ಗದಲ್ಲಿ ಸಂಘದ ಪ್ರಮುಖರು ಕಿವಿಮಾತು ಹೇಳಿದ್ದಾರೆ' ಎಂದು ಮೂಲಗಳು ತಿಳಿಸಿವೆ.

'ಸಂಘಕ್ಕೆ ನೂರು ವರ್ಷಗಳ ಇತಿಹಾಸವಿದೆ. ಸಾಕಷ್ಟು ಬಾರಿ ಕಠಿಣ ಪರಿಸ್ಥಿತಿಯನ್ನು ಎದುರಿಸಿದೆ ಮತ್ತು ಸವಾಲುಗಳನ್ನು ಮೆಟ್ಟಿ ನಿಂತಿದೆ. ಮೂರು ಬಾರಿ ಸಂಘವನ್ನು ನಿಷೇಧ ಮಾಡುವ ಪ್ರಯತ್ನವೂ ನಡೆದಿತ್ತು, ಅದೂ ವಿಫಲವಾಗಿದೆ. ಈಗ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ತನ್ನ ವೈಫಲ್ಯವನ್ನು ಮುಚ್ಚಿಕೊಳ್ಳಲು, ಜನರ ಗಮನವನ್ನು ಬೇರೆಡೆ ಸೆಳೆಯಲು ಸಂಘದ ವಿಚಾರವನ್ನು ಪ್ರಸ್ತಾಪಿಸುತ್ತಿದೆ. ಜನರಿಗೆ ಸಂಘದ ಕೆಲಸ, ವಿಚಾರಧಾರೆ ವಿಷಯ ಚೆನ್ನಾಗಿ ಗೊತ್ತಿದೆ. ಹೀಗಾಗಿ ಕಾಂಗ್ರೆಸ್ ಕಿತಾಪತಿಗೆ ಜನ ಸೊಪ್ಪು ಹಾಕುವುದಿಲ್ಲ' ಎಂಬುದಾಗಿ ಹೇಳಿದರು ಎನ್ನಲಾಗಿದೆ.

ಸೋಮವಾರ ನಡೆದ ಚಿಂತನ ವರ್ಗದಲ್ಲಿ ಆರ್‌ಎಸ್‌ಎಸ್‌ನ ಕ್ಷೇತ್ರೀಯ ಕಾರ್ಯವಾಹ ನಾ.ತಿಪ್ಪೇಸ್ವಾಮಿ, ಬಿಜೆಪಿ ನಾಯಕರಾದ ಬಿ.ವೈ.ವಿಜಯೇಂದ್ರ, ಸಿ.ಟಿ.ರವಿ, ಛಲವಾದಿ ನಾರಾಯಣಸ್ವಾಮಿ ಪಾಲ್ಗೊಂಡಿದ್ದರು

'ರಾಜ್ಯ ಸರ್ಕಾರದ ವೈಫಲ್ಯ, ಭ್ರಷ್ಟಾಚಾರ, ಸ್ವಜನ ಪಕ್ಷಪಾತ, ಅಪರಾಧ ಸಂಖ್ಯೆ ಹೆಚ್ಚುತ್ತಿರುವು ದನ್ನು ಜನರಿಗೆ ಮನವರಿಕೆ ಮಾಡಿ ಕೊಡಬೇಕು. ಈ ವಿಚಾರದಲ್ಲಿ ಬಿಜೆಪಿ ನಾಯಕರು ಆತುರಪಡಬೇಕಾಗಿಲ್ಲ. ಸರ್ಕಾರದ ವಿರುದ್ಧ ದೃಢವಾದ ಮತ್ತು ನಿರಂತರ ಹೋರಾಟ ಮಾಡಬೇಕು' ಎಂದು ಸಲಹೆ ನೀಡಿದರು.

'ಕಾಂಗ್ರೆಸ್ ನಾಯಕರು ನೀಡುವ ಪ್ರತಿಯೊಂದು ಟೀಕೆ– ಟಿಪ್ಪಣಿಗೂ ಉತ್ತರ ನೀಡುವ ಅಗತ್ಯವಿಲ್ಲ. ನಿಮ್ಮನ್ನು ಬಲೆ ಬೀಳಿಸಲು, ವಿವಾದ ಸೃಷ್ಟಿಸಲು ಇಂತಹ ಟೀಕೆ ಮಾಡುತ್ತಿರುತ್ತಾರೆ. ಕೆಲವು ಟೀಕೆಗಳಿಗೆ ಮೌನವೇ ಮದ್ದು. ಧರ್ಮಸ್ಥಳ ಪ್ರಕರಣವನ್ನು ಯಾವ ರೀತಿ ಸೃಷ್ಟಿಸಿದರು ಎಂಬುದು ಎಲ್ಲರಿಗೂ ಗೊತ್ತೇ ಇದೆ. ಅಂತಹ ಸಂದರ್ಭಗಳಲ್ಲಿ ಹೆಚ್ಚು ಜಾಣ್ಮೆಯಿಂದ ಪರಿಸ್ಥಿತಿ ನಿಭಾಯಿಸಬೇಕು' ಎಂದು ಹೇಳಿರುವುದಾಗಿ ಮೂಲಗಳು ತಿಳಿಸಿವೆ.

ಸಭೆಯಲ್ಲಿ ಸಂಘದ ಕ್ಷೇತ್ರೀಯ ಕಾರ್ಯವಾಹ ನಾ.ತಿಪ್ಪೇಸ್ವಾಮಿ, ಬಿಜೆಪಿ ನಾಯಕರಾದ ಆರ್.ಅಶೋಕ, ಬಿ.ವೈ.ವಿಜಯೇಂದ್ರ, ಬಸವರಾಜ ಬೊಮ್ಮಾಯಿ, ಸಿ.ಟಿ.ರವಿ, ಛಲವಾದಿ ನಾರಾಯಣಸ್ವಾಮಿ, ಡಾ.ಸಿ.ಎನ್. ಅಶ್ವತ್ಥನಾರಾಯಣ, ಪ್ರತಾಪ್ ಸಿಂಹ, ಬೃಜೇಶ್ ಚೌಟ, ಜನಾರ್ದನ ರೆಡ್ಡಿ, ಎನ್.ರವಿಕುಮಾರ್, ಲಹರ್‌ಸಿಂಗ್ ಸಿರೋಯಾ, ಭರತ್ ಶೆಟ್ಟಿ ಪಾಲ್ಗೊಂಡಿದ್ದರು.

ನಿಧನ ವಾರ್ತೆ

ಕೆ.ವಿ. ದೇವರಾಜ್

ಚಿಕ್ಕಬಳ್ಳಾಪುರ: ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ನಿವೃತ್ತ ಕುಲಪತಿ ಕೆ.ವಿ. ದೇವರಾಜ್ (89) ವಯೋಸಹಜ ಅನಾರೋಗ್ಯದಿಂದ ಸೋಮವಾರ ಬೆಂಗಳೂರಿನಲ್ಲಿ ನಿಧನರಾದರು.

ಬೆಂಗಳೂರು ಕೃಷಿ ವಿ.ವಿ ಸಹಾಯ ಪ್ರಾಧ್ಯಾಪಕರಾಗಿದ್ದ ಅವರು 1992-95ರ ಅವಧಿಯಲ್ಲಿ ಕುಲಪತಿಯಾಗಿದ್ದರು.

ನಂತರ ಮೀನುಗಾರಿಕೆಗೆ ಸಂಬಂಧಿಸಿದಂತೆ ಜಾಗತಿಕ ಸಂಘ ಸಂಸ್ಥೆಗಳಲ್ಲಿ ಕೆಲಸ ಮಾಡಿದ್ದರು. ಚಿಕ್ಕಬಳ್ಳಾಪುರದದಲ್ಲಿ ಅಂತ್ಯಕ್ರಿಯೆ ನಡೆಯಿತು.

ಅವರಿಗೆ ಪತ್ನಿ ಲೀಲಾ ಇದ್ದಾರೆ. ಲೀಲಾ ಅವರು ಚಿಕ್ಕಬಳ್ಳಾಪುರ ನಗರಸಭೆಯ ಮೊದಲ ಅಧ್ಯಕ್ಷೆಯಾಗಿದ್ದರು. ದೇವರಾಜ್ ಅವರು ಮಾಜಿ ಶಾಸಕ ಸಿ.ವಿ. ವೆಂಕಟರಾಯಪ್ಪ ಅವರ ಅಳಿಯ.

ಸೈಬರ್ ದಾಳಿ ತಡೆಯಲಿದೆ ಎಸ್‌ಒಸಿ

ನಮ್ಮ ಮೆಟ್ರೊ ಬೈಯಪ್ಪನಹಳ್ಳಿ ಡಿಪೊದಲ್ಲಿ ಭದ್ರತಾ ಕಾರ್ಯಾಚರಣೆ ಕೇಂದ್ರ ಸ್ಥಾಪಿಸಲು ಸಿದ್ಧತೆ

• ಬಾಲಕೃಷ್ಣ ಪಿ.ಎಚ್.

ಬ್ರ್ಯಾಂಡ್ ಬೆಂಗಳೂರು

ಬೆಂಗಳೂರು: ಸೈಬರ್ ದಾಳಿ ನಡೆಯದಂತೆ ತಡೆಯಲು ಮತ್ತು ಸಿ.ಸಿ.ಟಿ.ವಿ ಕ್ಯಾಮೆರಾಗಳ ಮೇಲ್ವಿಚಾರಣೆಗಾಗಿ ನಮ್ಮ ಮೆಟ್ರೊ ಬೈಯಪ್ಪನಹಳ್ಳಿ ಡಿಪೊದಲ್ಲಿ ಭದ್ರತಾ ಕಾರ್ಯಾಚರಣೆ ಕೇಂದ್ರ (ಎಸ್‌ಒಸಿ) ಸ್ಥಾಪಿಸಲಾಗುತ್ತಿದೆ. ಇದು ಅತ್ಯಾಧುನಿಕವಾದ ಭದ್ರತಾ ಕಾರ್ಯಾಚರಣೆ ಕೇಂದ್ರ ಹೊಂದಿರುವ ದೇಶದ ಮೊದಲ ಮೆಟ್ರೊವಾಗಿ ಬಿಎಂಆರ್‌ಸಿಎಲ್ ಎಂಬ ಹೆಗ್ಗಳಿಕೆಗೆ ಪಾತ್ರವಾಗಲಿದೆ.

ಕೃತಕ ಬುದ್ಧಿಮತ್ತೆ ತಂತ್ರಜ್ಞಾನ ಅತಿವೇಗದಲ್ಲಿ ಬೆಳೆಯುತ್ತಿದ್ದು, ಎಐ ಆಧಾರಿತ ಬೆದರಿಕೆಗಳು, ತಂತ್ರಜ್ಞಾನಗಳ ಹ್ಯಾಕ್ ಮಾಡುವ ಕೃತ್ಯಗಳು ಜಾಸ್ತಿಯಾಗುತ್ತಿವೆ. ಮೆಟ್ರೊದಲ್ಲಿ ಹೀಗಾಗಬಾರದು ಎಂಬ ಕಾರಣಕ್ಕೆ ಎಐ ತಂತ್ರಜ್ಞಾನವುಳ್ಳ ಒಳಗೊಂಡ ಎಸ್‌ಒಸಿ ಸ್ಥಾಪಿಸಲು ಬಿಎಂಆರ್‌ಸಿಎಲ್ ತೀರ್ಮಾನಿಸಿದೆ. ಇದಕ್ಕೆ ಸಂಬಂಧಿಸಿದಂತೆ ಟೆಂಡರ್ ಪ್ರಕ್ರಿಯೆಗಳು ನಡೆಯುತ್ತಿವೆ.

ನಮ್ಮ ಮೆಟ್ರೊ ನೇರಳೆ, ಹಸಿರು ಮತ್ತು ಹಳದಿ ಮಾರ್ಗಗಳಲ್ಲಿ ರೈಲುಗಳು ಸಂಚರಿಸುತ್ತಿವೆ. ಈ ಮೂರು ಮಾರ್ಗಗಳು ಒಟ್ಟು ಸುಮಾರು 93 ಕಿ.ಮೀ. ಉದ್ದ ಇವೆ. 83 ನಿಲ್ದಾಣಗಳಿವೆ. ಪ್ರತಿ ನಿಲ್ದಾಣದಲ್ಲಿ 200 ಸಿಸಿಟಿವಿ ಕ್ಯಾಮೆರಾಗಳಿವೆ. ಇದಲ್ಲದೇ ಮೆಟ್ರೊ ರೈಲಿನಲ್ಲಿ ಪ್ರತಿ ಬೋಗಿಯಲ್ಲಿ ನಾಲ್ಕು ಕ್ಯಾಮೆರಾದಂತೆ ಆರು ಬೋಗಿಗಳಲ್ಲಿ 24 ಕ್ಯಾಮೆರಾಗಳಿವೆ. ಸದ್ಯ 62 ರೈಲುಗಳು ಮೆಟ್ರೊ ಮಾರ್ಗದಲ್ಲಿ ಸಂಚರಿಸುತ್ತಿದ್ದು, 1488 ಸಿಸಿಟಿವಿ ಕ್ಯಾಮೆರಾಗಳು ರೈಲುಗಳಲ್ಲಿವೆ. ಡಿಜಿಟಲ್ ತಂತ್ರಜ್ಞಾನದ ಇವುಗಳನ್ನು ಸೈಬರ್ ವಂಚಕರು ಯಾವಾಗ ಬೇಕಾದರೂ ದುರುಪಯೋಗಪಡಿಸಿಕೊಳ್ಳುವ ಸಾಧ್ಯತೆ ಇರುತ್ತದೆ. ಅದನ್ನು ತಡೆಯುವುದಕ್ಕಾಗಿಯೇ ಎಸ್‌ಒಸಿ ಸ್ಥಾಪಿಸಲಾಗುತ್ತಿದೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಭದ್ರತಾ ಕಾರ್ಯಾಚರಣೆ ಕೇಂದ್ರವು ದಿನದ 24 ಗಂಟೆಯೂ ಕಮಾಂಡ್ ಸೆಂಟರ್ ಆಗಿ ಕಾರ್ಯನಿರ್ವಹಿಸಲಿದೆ. ಸಿಗ್ನಲಿಂಗ್, ಟ್ರ್ಯಾಕ್ ನಿರ್ವಹಣೆ, ಟಿಕೆಟ್ ವ್ಯವಸ್ಥೆ ಸೇರಿದಂತೆ ಎಲ್ಲ ಮಾಹಿತಿ ಮತ್ತು ತಂತ್ರಜ್ಞಾನ ವ್ಯವಸ್ಥೆಯನ್ನು ಸುರಕ್ಷಿತವಾಗಿಡಲು, ತಂತ್ರಜ್ಞಾನದ ಲೋಪವನ್ನು ಪತ್ತೆ ಹಚ್ಚಲು ಎಸ್‌ಒಸಿ ನೆರವಾಗಲಿದೆ.

ರೈಲಿನ ಒಳಗೆ ಮತ್ತು ಹೊರಗಡೆ ಅಳವಡಿಸಿದ ಎಲ್ಲ ಸಿಸಿಟಿವಿ ಕ್ಯಾಮೆರಾಗಳ ಮೇಲ್ವಿಚಾರಣೆಯನ್ನು ಸುರಕ್ಷಿತ ಸೈಬರ್ ಭದ್ರತಾ ಚೌಕಟ್ಟಿನಲ್ಲಿ ನಡೆಸಲಿದ್ದಾರೆ. ಮೆಟ್ರೊ ನಿಲ್ದಾಣದಲ್ಲಿ ನಡೆಯುವ ಅಹಿತಕರ ಘಟನೆಗಳನ್ನು ಮತ್ತು ನಿಲ್ದಾಣಗಳಲ್ಲಿ ಭದ್ರತೆ ಮೇಲೆ ನಿರಂತರ ಕಣ್ಗಾವಲಿರಲಿದೆ.

ಪ್ರತಿದಿನ ಸರಾಸರಿ 9.50 ಲಕ್ಷ ಪ್ರಯಾಣಿಕರು ಮೆಟ್ರೊದಲ್ಲಿ ಸಂಚರಿಸುತ್ತಿದ್ದಾರೆ. ಇದು ಮೆಟ್ರೊ ಮೇಲಿನ ಪ್ರಯಾಣಿಕರ ಒಲವನ್ನು ತೋರಿಸುತ್ತದೆ. ವಾಹನದಟ್ಟಣೆಯಿಂದ ಬಸವಳಿದ ಜನರು ಸ್ವಂತ ವಾಹನ ಬಿಟ್ಟು ಇತರ ಸಾರ್ವಜನಿಕ ಸಾರಿಗೆಗಿಂತ ಮೆಟ್ರೊದಲ್ಲಿ ಸಂಚರಿಸಲು ಬಯಸುತ್ತಿದ್ದಾರೆ. ಉತ್ತಮ ಸಂಚಾರದ ಜೊತೆಗೆ ಉತ್ತಮ ಸೈಬರ್ ಸುರಕ್ಷತೆಯನ್ನು ನೀಡುವುದು ಬಿಎಂಆರ್‌ಸಿಎಲ್ ಆದ್ಯತೆಯಾಗಿದೆ ಎಂದು ನಮ್ಮ ಮೆಟ್ರೊದ ಹಿರಿಯ ಅಧಿಕಾರಿಯೊಬ್ಬರು ಅಭಿಪ್ರಾಯಪಟ್ಟರು.

ಅಂಕಿ ಅಂಶಗಳು

92.86 ಕಿ.ಮೀ. ನಮ್ಮ ಮೆಟ್ರೊ ಈಗಿರುವ (ನೇರಳೆ, ಹಸಿರು, ಹಳದಿ) ಜಾಲ

83 ಒಟ್ಟು ನಿಲ್ದಾಣಗಳು

74 ಎತ್ತರಿಸಿದ ಮಾರ್ಗದಲ್ಲಿರುವ ನಿಲ್ದಾಣಗಳು

8 ಸುರಂಗ ಮಾರ್ಗದಲ್ಲಿರುವ ನಿಲ್ದಾಣಗಳು

1 ಭೂಮಟ್ಟದಲ್ಲಿರುವ ನಿಲ್ದಾಣಗಳು

89 ಗುಲಾಬಿ, ನೀಲಿ, ಕೆಂಪು, ಕಿತ್ತಳೆ ಮಾರ್ಗಗಳಲ್ಲಿ ನಿರ್ಮಾಣಗೊಳ್ಳಲಿರುವ ನಿಲ್ದಾಣಗಳು

ಆರು ಮೆಟ್ರೊ ನಿಲ್ದಾಣಗಳಲ್ಲಿ ಅಳವಡಿಸಿರುವ ಸುಧಾರಿತ ಸಿ.ಸಿ.ಟಿ.ವಿ ಕ್ಯಾಮೆರಾ ನಿಗಾ ವ್ಯವಸ್ಥೆ ಮತ್ತು ಕೃತಕ ಬುದ್ಧಿಮತ್ತೆ (ಎಐ) ತಂತ್ರಜ್ಞಾನದ ನಿಯಂತ್ರಣ ಕೊಠಡಿ

ಟೆಂಡರ್ ಪ್ರಕ್ರಿಯೆ

ವಿದೇಶಗಳಲ್ಲಿ ಸೈಬರ್ ದಾಳಿ ಮೂಲಕ ಮೆಟ್ರೊ ಸಂಚಾರ ಸ್ಥಗಿತಗೊಳಿಸುವುದು, ವಿದ್ಯುತ್ ಸರಬರಾಜು ವ್ಯವಸ್ಥೆಯಲ್ಲಿ ವ್ಯತ್ಯಾಸ ಮಾಡುವುದು ನಡೆದಿತ್ತು. ರೈಲು ವ್ಯವಸ್ಥೆಗಳಲ್ಲಿಯೂ ಹ್ಯಾಕಿಂಗ್‌ಗಳಾಗಿದ್ದವು. ಸೈಬರ್ ಭದ್ರತೆಯನ್ನು ಹೆಚ್ಚಿಸುವ ಬಗ್ಗೆ ಜಾಗತಿಕ ಮಟ್ಟದಲ್ಲಿ ಚರ್ಚೆಗಳಾಗಿದ್ದವು. ಭಾರತದಲ್ಲಿಯೂ ಈ ಬಗ್ಗೆ ಅರ್ಬನ್ ರೈಲು ಸಮಾವೇಶದಲ್ಲಿ ಚರ್ಚೆಗಳು ನಡೆದಿದ್ದವು. ಅದರ ಭಾಗವಾಗಿ ಬಿಎಂಆರ್‌ಸಿಎಲ್ ಈ ಉಪಕ್ರಮ ಕೈಗೊಂಡಿದೆ. ಟೆಂಡರ್ ಪ್ರಕ್ರಿಯೆಗಳು ನಡೆಯುತ್ತಿವೆ. ಟೆಂಡರ್ ಪೂರ್ಣಗೊಂಡ ಬಳಿಕ ಮೂರು ತಿಂಗಳ ಒಳಗೆ ಎಸ್‌ಒಸಿ ಸ್ಥಾಪನೆಗೊಳ್ಳಲಿದೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

ಎಸ್‌ಒಸಿ ಕಾರ್ಯ

ಅನುಮಾನಾಸ್ಪದ ಚಟುವಟಿಕೆಯನ್ನು ತಕ್ಷಣಕ್ಕೆ ಗುರುತಿಸಲಿದೆ. ದುರುದ್ದೇಶದಿಂದ ಹಾನಿ ಉಂಟು ಮಾಡುವ ಮೊದಲೇ ನಿಯಂತ್ರಿಸುವ ಕೃತಕ ಬುದ್ಧಿಮತ್ತೆ ಸಾಫ್ಟ್‌ವೇರ್ ಇಲ್ಲಿ ಬಳಕೆಯಾಗಲಿದೆ. ಸಂಭಾವ್ಯ ಬೆದರಿಕೆಗಳನ್ನು ಗುರುತಿಸುವ, ವಿಶ್ಲೇಷಿಸುವ ಬಹು ವಿಧಾನಗಳ ತಂತ್ರಜ್ಞಾನ ಇದಾಗಿದೆ.

ಆರು ನಿಲ್ದಾಣಗಳಲ್ಲಿ ಸುಧಾರಿತ ವ್ಯವಸ್ಥೆ

ಬೈಯಪ್ಪನಹಳ್ಳಿ ಮತ್ತು ಎಂ.ಜಿ. ರಸ್ತೆ ನಡುವಿನ ಆರು ಮೆಟ್ರೊ ನಿಲ್ದಾಣಗಳಲ್ಲಿ ಸುಧಾರಿತ ಸಿಸಿಟಿವಿ ಕ್ಯಾಮೆರಾ ನಿಗಾ ವ್ಯವಸ್ಥೆ ಮತ್ತು ಕೃತಕ ಬುದ್ಧಿಮತ್ತೆ (ಎಐ) ತಂತ್ರಜ್ಞಾನವನ್ನು ಈಗಾಗಲೇ ಅಳವಡಿಸಲಾಗಿದೆ.

ನಿಲ್ದಾಣದ ಒಳ ಭಾಗಗಳ ಜೊತೆಗೆ ಸುತ್ತಲಿನ ಪ್ರದೇಶಗಳೂ ಕ್ಯಾಮೆರಾ ನಿಗಾ ವ್ಯಾಪ್ತಿಗೆ ಒಳಪಡಲಿದ್ದು, ಎಐ ತಂತ್ರಜ್ಞಾನದಿಂದ ಅಪಾಯಗಳನ್ನು ತಕ್ಷಣ ಗುರುತಿಸಿ, ಪ್ರಯಾಣಿಕರ ಸುರಕ್ಷತೆ ಹೆಚ್ಚಿಸಲು ನೆರವಾಗಲಿದೆ. ನಿಲ್ದಾಣದ ಮುಂದೆ ಇರುವ ವಾಹನಗಳ ಸಂಖ್ಯಾ ಫಲಕಗಳನ್ನು ಗುರುತಿಸಲು 'ಆಟೋಮ್ಯಾಟಿಕ್ ನಂಬರ್ ಪ್ಲೇಟ್ ರೆಕಗ್ನಿಷನ್' (ಎಎನ್‌ಪಿಆರ್) ತಂತ್ರಜ್ಞಾನವನ್ನು ಬಳಕೆ ಮಾಡಲಾಗಿದೆ. ಎಐ ಆಧಾರಿತ ವಿಡಿಯೊ ವಿಶ್ಲೇಷಣೆಯೊಂದಿಗೆ, ಈ ತಂತ್ರಜ್ಞಾನ ಶಂಕಾಸ್ಪದ ಚಟುವಟಿಕೆಗಳು, ಅನುಮಾನಾಸ್ಪದ ಘಟನೆಗಳನ್ನು ತಕ್ಷಣ ಪತ್ತೆಹಚ್ಚಲು ಸಹಕಾರಿಯಾಗಿದೆ. ಇದೇ ವ್ಯವಸ್ಥೆ ಮೆಟ್ರೊಜಾಲದ ಎಲ್ಲ ಮಾರ್ಗಗಳಿಗೂ ಅನ್ವಯವಾಗುವಂತೆ ದೊಡ್ಡಮಟ್ಟದಲ್ಲಿ ಮಾಡಲಾಗುತ್ತಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದರು.

ಚರಕದ ಕೈಮಗ್ಗ ಉತ್ಪನ್ನ ಪ್ರದರ್ಶನ, ಮಾರಾಟ 7ರಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭೀಮನಕೋಣೆ-ಹೊನ್ನೇಸರದ ಚರಕ ಮಹಿಳಾ ವಿವಿಧೋದ್ದೇಶ ಕೈಗಾರಿಕಾ ಸಹಕಾರ ಸಂಘ, ರಾಜ್ಯ ಕೈಮಗ್ಗ ಮತ್ತು ಜವಳಿ ಇಲಾಖೆ ಸಹಯೋಗದಲ್ಲಿ ಬೆಂಗಳೂರಿನ ಚಿತ್ರಕಲಾ ಪರಿಷತ್ತಿನಲ್ಲಿ ನವೆಂಬರ್ 7 ರಿಂದ 9ರವರೆಗೆ ಕೈಮಗ್ಗ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟ ಮೇಳ ಹಾಗೂ ಕರಕುಶಲ ಕಾರ್ಯಾಗಾರ ಹಮ್ಮಿಕೊಂಡಿದೆ.

7ರಂದು ಬೆಳಿಗ್ಗೆ 11ಕ್ಕೆ ಕರ್ನಾಟಕ ಪ್ರದೇಶ ಮಹಿಳಾ ಕಾಂಗ್ರೆಸ್ ರಾಜ್ಯ ಘಟಕದ ಅಧ್ಯಕ್ಷೆ ಸೌಮ್ಯಾ ರೆಡ್ಡಿ ಅವರು ಚಾಲನೆ ನೀಡಲಿದ್ದು, ಅತಿಥಿಗಳಾಗಿ ಕೈಮಗ್ಗ ಮತ್ತು ಜವಳಿ ಇಲಾಖೆಯ ಅಭಿವೃದ್ಧಿ ಆಯುಕ್ತರಾದ ಕೆ. ಜ್ಯೋತಿ, ಚನ್ನಪಟ್ಟಣ ಕ್ರಾಫ್ಟ್ ಪಾರ್ಕ್‌ನ ಸಿಇಒ ಶ್ರೀಕಲಾ ಕಡಿದಾಳು ಅವರು ಭಾಗವಹಿಸುವರು. ಇದೇ ಸಂದರ್ಭದಲ್ಲಿ ಚರಕ ಕುರಿತ 'ದಿ ಚರಕ ಸ್ಟೋರಿ' ಕಾಫಿ ಟೇಬಲ್ ಪುಸ್ತಕವನ್ನು ಲೇಖಕಿ ಸಾಧನಾ ರಾವ್ ಅವರು ಬಿಡುಗಡೆ ಮಾಡಲಿದ್ದಾರೆ.

ಚರಕದ ಸಂಸ್ಥಾಪಕ, ರಂಗಕರ್ಮಿ ಪ್ರಸನ್ನ ಅವರು ಉಪಸ್ಥಿತರಿರಲಿದ್ದಾರೆ. ಅಲ್ಲದೇ, ಮೇಳದಲ್ಲಿ ಕೈಮಗ್ಗ ಕ್ಷೇತ್ರದ ಸಂಪನ್ಮೂಲ ವ್ಯಕ್ತಿಗಳು, ನೇಕಾರರು ಪಾಲ್ಗೊಳ್ಳಲಿದ್ದಾರೆ.

ಚರಕದ ವಿನೂತನ ವಿನ್ಯಾಸದ ನೈಸರ್ಗಿಕ ಬಣ್ಣದ ಕೈಮಗ್ಗದ ಸಿದ್ಧ ಉಡುಪು-ಬಟ್ಟೆಗಳ ಜತೆಗೆ ಚೆನ್ನೈನ ತುಲಾ ಸಂಸ್ಥೆಯ ಕೈಮಗ್ಗ ವಸ್ತುಗಳು, ಶಿರಸಿಯ ಚೇತನಾ ಫೌಂಡೇಷನ್ ಅವರ ಬಾಳೆನಾರಿನ ಉತ್ಪನ್ನಗಳು, ಆಂಧ್ರಪ್ರದೇಶದ ಟಿಂಬಕ್ಟು ಕಲೆಕ್ಟಿವ್‌ನ ಸಾವಯವ ಆಹಾರ ಪದಾರ್ಥಗಳು, ಕೈಮಗ್ಗ ವಸ್ತುಗಳು, ನಾಸಿಕ್‌ನ ಸ್ವಮೇದಾ ಖಾದಿ ಸಿಲ್ಕ್ ಸೀರೆಗಳು, ಬೆಂಗಳೂರಿನ ಮರಳಿ ಮಣ್ಣಿಗೆಯ ಕೈಮಗ್ಗ ಮತ್ತು ಕರಕುಶಲ ವಸ್ತುಗಳು, ಉತ್ತರ ಕರ್ನಾಟಕದ ದಖನಿ ಡೈರಿಯ ಉಣ್ಣೆಯ ವಸ್ತುಗಳು, ಸಹನಾ ರೀಡ್ಸ್‌ನ ಹುಲ್ಲಿನ ಬ್ಯಾಗ್‌ಗಳು, ಜಿಯೋಸ್ಮಿನ್ ಕರಕುಶಲ ವಸ್ತುಗಳು, ನೇಚರ್ ಅಲಿಯ ಸಹಜ ಬಣ್ಣದ ಉಡುಪುಗಳು, ಉತ್ತರ ಕರ್ನಾಟಕದ ವಿವಿಧ ನೇಕಾರರು ಸಿದ್ಧಪಡಿಸಿದ ತರಹೇವಾರಿ ಉಡುಪುಗಳು ಲಭ್ಯ ಇರಲಿವೆ.

ಮೇಳದಲ್ಲಿ ಕರಕುಶಲ ಕಾರ್ಯಾಗಾರ ಆಯೋಜಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ. ಮಾಹಿತಿಗೆ: 63638 85215/ 74111 20862.

ಉದ್ಯಮಿಗಳ ಕಾರ್ಯಾಗಾರ 7ಕ್ಕೆ

ರಾಮನಗರ: ಬೆಂಗಳೂರಿನ ಟಿಇಸಿಎಚ್‌ಎಸ್‌ಒಕೆ ಹಾಗೂ ಬೆಂಗಳೂರು ದಕ್ಷಿಣ ಜಿಲ್ಲಾ ಕೈಗಾರಿಕಾ ಕೇಂದ್ರದ ವತಿಯಿಂದ ಕೇಂದ್ರ ಸರ್ಕಾರದ ಆರ್‌ಎಎಂಪಿ ಯೋಜನೆಯಡಿ, ಬಿಡಿಎಸ್‌ಪಿ (ಡೆವಲಪ್‌ಮೆಂಟ್ ಸರ್ವೀಸ್ ಪ್ರೊವೈಡರ್) ಕುರಿತು, ಕನಕಪುರದ ರೂರಲ್ ಕಾಲೇಜಿನಲ್ಲಿ (ಆರ್‌ಇಎಸ್) ಒಂದು ದಿನದ ಕಾರ್ಯಾಗಾರವನ್ನು ನ. 7ರಂದು ಬೆಳಿಗ್ಗೆ 10:30ಕ್ಕೆ ಆಯೋಜಿಸಲಾಗಿದೆ.

ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಅಥವಾ ಹೊಸ ವ್ಯವಹಾರಗಳಿಗೆ ಅಭಿವೃದ್ಧಿ ಸೇವೆಗಳನ್ನು ಒದಗಿಸುವ ವ್ಯಕ್ತಿ ಅಥವಾ ಸಂಸ್ಥೆಯ ವ್ಯವಹಾರ ಬೆಳವಣಿಗೆಗೆ ಬೇಕಾದ ಸಲಹೆ, ಉದ್ಯಮಿಗಳಿಗೆ ವ್ಯವಹಾರ ವೃದ್ಧಿ ತಂತ್ರಜ್ಞಾನ, ಮಾರುಕಟ್ಟೆ ಮತ್ತು ಹಣಕಾಸು ಮಾರ್ಗದರ್ಶನ ಇನ್ನಿತರ ಸೌಲಭ್ಯಗಳ ಕುರಿತು ವಿಷಯ ತಜ್ಞರು ಮಾಹಿತಿ ನೀಡಲಿದ್ದಾರೆ.

ಮಾಹಿತಿಗೆ ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ, ಕಂದಾಯ ಭವನ, ಕೊಠಡಿ ಸಂಖ್ಯೆ: 302,303 ಮತ್ತು 304, 2ನೇ ಮಹಡಿ, ಬಿ.ಎಂ ರಸ್ತೆ, ಬೆಂಗಳೂರು ದಕ್ಷಿಣ ಜಿಲ್ಲೆ- 562159. ಸಂಪರ್ಕ ಸಂಖ್ಯೆ: 080-22220122/0212/ 8884569687ಕ್ಕೆ ಕರೆ ಮಾಡಬಹುದು ಎಂದು ಪ್ರಕಟಣೆ ತಿಳಿಸಿದೆ.

'ನಗು, ಸಂಗೀತವೇ ದಿವ್ಯೌಷಧ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಾತಿ ಭೇದವಿಲ್ಲದೆ, ಗಡಿಯ ಹಂಗಿಲ್ಲದೆ ನಮ್ಮ ಮುಖದಲ್ಲಿ ಅರಳುವ ನಗು ಹಾಗೂ ಸಂಗೀತವೇ ಜಗತ್ತಿನ ದಿವ್ಯೌಷಧ ಎಂದು ಸಂಸದ ಡಾ. ಸಿ.ಎನ್. ಮಂಜುನಾಥ್ ಹೇಳಿದರು.

ಕೆ.ಎಸ್. ನರಸಿಂಹ ಸ್ವಾಮಿ ಟ್ರಸ್ಟ್ ಆಯೋಜಿಸಿದ್ದ 'ನಿನ್ನೊಲುಮೆಯಿಂದಲೇ' ಗೌರವ ಪುರಸ್ಕಾರ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಕೆಎಸ್ ನರಸಿಂಹ ಸ್ವಾಮಿ ಟ್ರಸ್ಟ್ ವಿಶ್ವದಲ್ಲೇ ಮೊಟ್ಟ ಮೊದಲ ಬಾರಿಗೆ ಕವಿ ಪತ್ನಿ ದಿನಾಚರಣೆ ಮಾಡಿ ಕೆ.ಎಸ್. ನರಸಿಂಹ ಸ್ವಾಮಿ ಅವರ ಪತ್ನಿ ವೆಂಕಮ್ಮನವರ ಹೆಸರಿನಲ್ಲಿ ಕವಿ ವ್ಯಾಸರಾವ್ ಅವರ ಪತ್ನಿ ಸಾವಿತ್ರಿ ವ್ಯಾಸರಾವ್ ಅವರಿಗೆ ಪ್ರಶಸ್ತಿ ನೀಡಿ ಗೌರವಿಸಿದೆ ಎಂದು ಶ್ಲಾಘಿಸಿದರು.

ಕೆ.ಎಸ್. ನರಸಿಂಹ ಸ್ವಾಮಿ ಟ್ರಸ್ಟ್ ವತಿಯಿಂದ ಸಾವಿತ್ರಿ ವ್ಯಾಸರಾವ್ ಅವರಿಗೆ 'ನಿನ್ನೊಲುಮೆಯಿಂದಲೇ' ಪ್ರಶಸ್ತಿ ನೀಡಿ ಗೌರವಿಸಲಾಯಿತು

ಟ್ರಸ್ಟಿಗಳಾದ ಅಪ್ಪಗೆರೆ ತಿಮ್ಮರಾಜು, ಮೇಖಲಾ ವೆಂಕಟೇಶ್, ಬಲರಾಮ್, ಸುಬ್ರಹ್ಮಣ್ಯ, ಗಾಯಕ ಕಿಕ್ಕೇರಿ ಕೃಷ್ಣಮೂರ್ತಿ, ಸಾಹಿತಿಗಳಾದ ಬಿ.ಆರ್. ಲಕ್ಷ್ಮಣರಾವ್, ಅನಸೂಯ ಮಂಜುನಾಥ್, ಚಂದ್ರಅಶ್ವಥ್ ಉಪಸ್ಥಿತರಿದ್ದರು.

ಚಿಟಿಕೆ ಸುದ್ದಿ

ಕಾಲೇಜು ವಿದ್ಯಾರ್ಥಿಗಳಿಗೆ ಕಲಾ ಸ್ಪರ್ಧೆ

ಬೆಂಗಳೂರು: ಕರ್ನಾಟಕ ಲಲಿತಕಲಾ ಅಕಾಡೆಮಿಯು ಕಲಾ ಕಾಲೇಜುಗಳ ವಿದ್ಯಾರ್ಥಿಗಳಿಗೆ ರಾಜ್ಯಮಟ್ಟದ ಕಲಾ ಸ್ಪರ್ಧೆಯನ್ನು ಆಯೋಜಿಸುತ್ತಿದ್ದು, 200ಕ್ಕೂ ಅಧಿಕ ಕಾಲೇಜುಗಳು ಅರ್ಜಿ ಸಲ್ಲಿಸಿವೆ. ಪ್ರಥಮ ಹಂತದಲ್ಲಿ 30 ವಿದ್ಯಾರ್ಥಿಗಳನ್ನು ಆಯ್ಕೆ ಮಾಡಲಾಗಿದೆ ಎಂದು ಅಕಾಡೆಮಿ ತಿಳಿಸಿದೆ.

ಸ್ಪರ್ಧೆಯಲ್ಲಿ ವಿದ್ಯಾರ್ಥಿಗಳ ಪ್ರತಿಭೆ, ಅಧ್ಯಯನ ಮತ್ತು ಅಭಿವ್ಯಕ್ತಿಯ ಸಾಮರ್ಥ್ಯವನ್ನು ಮೌಲ್ಯಮಾಪನ ಮಾಡಲಾಗುತ್ತದೆ. ಅತ್ಯುತ್ತಮ ಸಾಧನೆ ಮಾಡಿದ 10 ಕಲಾ ವಿದ್ಯಾರ್ಥಿಗಳನ್ನು '2025ರ ಪ್ರತಿಭಾವಂತ ವಿದ್ಯಾರ್ಥಿ' ಎಂದು ಘೋಷಿಸಲಾಗುವುದು. ಅವರಿಗೆ ತಲಾ ₹ 15,000 ನಗದು ಬಹುಮಾನ ನೀಡಲಾಗುವುದು.

ವಿಜೇತ ವಿದ್ಯಾರ್ಥಿಗಳಿಗೆ ತಮ್ಮ ಕಲಾ ವೃತ್ತಿಯನ್ನು ಮುಂದುವರಿಸಲು ವಿಶೇಷ ಸೌಲಭ್ಯಗಳನ್ನು ಅಕಾಡೆಮಿ ಕಲ್ಪಿಸಲಿದೆ. ಯಾವುದೇ ಹಿರಿಯ ಕಲಾವಿದರ ಮಾರ್ಗದರ್ಶನದಲ್ಲಿ ಅಲ್ಪ ಅವಧಿಗೆ ಅಧ್ಯಯನ, ತರಬೇತಿ ಅಥವಾ ವಿಶೇಷ ಕಲಾ ಸಂಶೋಧನೆ ನಡೆಸಲು ಬಯಸಿದರೆ, ಅದಕ್ಕೆ ಸಂಬಂಧಿಸಿದ ವೆಚ್ಚವನ್ನು ಅಕಾಡೆಮಿಯೇ ಭರಿಸಲಿದೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ವಿವಿಧ ತರಬೇತಿಗೆ ಅರ್ಜಿ ಆಹ್ವಾನ

ಬೆಂಗಳೂರು: ಉದಯಭಾನು ಕಲಾಸಂಘದಿಂದ ಕಂಪ್ಯೂಟರ್ ಬೇಸಿಕ್ ತರಗತಿಗಳು ಮತ್ತು ಟ್ಯಾಲಿ ಅಕೌಂಟಿಂಗ್, ಟಿಡಿಎಸ್, ಜಿಎಸ್‌ಟಿ ತರಬೇತಿಗೆ ಅರ್ಜಿ ಆಹ್ವಾನಿಸಲಾಗಿದೆ.

ನವೆಂಬರ್ 5ರಿಂದ ಎರಡು ತಿಂಗಳ ಕಾಲ ನಡೆಯುವ ಈ ತರಬೇತಿಗೆ ಎಸ್‌ಎಸ್‌ಎಲ್‌ಸಿ ಆಗಿರುವ ಆಸಕ್ತರು ಅರ್ಜಿ ಸಲ್ಲಿಸಬಹುದು. ಮಹಿಳೆಯರಿಗೆ ಹೊಲಿಗೆ ಮತ್ತು ಕಸೂತಿ ತರಗತಿಗಳಿಗೆ ಪ್ರವೇಶ ಪ್ರಾರಂಭವಾಗಿದೆ. ಹೊಲಿಗೆ ತರಬೇತಿ ಆರು ತಿಂಗಳು ನಡೆಯಲಿದ್ದು, ಬೆಳಿಗ್ಗೆ ಮತ್ತು ಸಂಜೆ ವೇಳೆ ತರಬೇತಿ ನೀಡಲಾಗುತ್ತದೆ ಎಂದು ಕಲಾಸಂಘದ ಗೌರವ ಕಾರ್ಯದರ್ಶಿ ರಾಧಾಕೃಷ್ಣ ಕೌಂಡಿನ್ಯ ತಿಳಿಸಿದ್ದಾರೆ. ಮಾಹಿತಿಗೆ: 080-26609343/26601831.

'ನೊಬೆಲ್' ಪುರಸ್ಕೃತರ ಜತೆ ಸಂವಾದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಮಾಜದ ಅಭ್ಯುದಯ ಮತ್ತು ಪ್ರಗತಿಯ ಸಾಧ್ಯತೆಗಳು ಸದ್ಯ ತಿರುವು ದಾರಿಗೆ ಬಂದು ನಿಂತಿವೆ ಎಂದು ನೊಬೆಲ್ ಪ್ರಶಸ್ತಿ ಪುರಸ್ಕೃತ ಜೇಮ್ಸ್ ರಾಬಿನ್‌ಸನ್ ಅಭಿಪ್ರಾಯಪಟ್ಟರು.

ಟಾಟಾ ಟ್ರಸ್ಟ್ ಸಹಭಾಗಿತ್ವದಲ್ಲಿ ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿ ಸೋಮವಾರ ಆಯೋಜಿಸಿದ್ದ ಸಂವಾದದಲ್ಲಿ ಅವರು ಮಾತನಾಡಿದರು.

'ಒನ್ ವೇ ಸ್ಟ್ರೀಟ್' ಸಿದ್ಧಾಂತವನ್ನು ವಿವರಿಸಿದ ಅವರು, 'ನಾನು ಸಮೃದ್ಧಿ ಮತ್ತು ಪ್ರಗತಿ ಬಗ್ಗೆ ಯೋಚಿಸುವಾಗ, ಈ ವಿಚಾರಗಳ ಕುರಿತ ಚಿಂತನೆ ಯಾವಾಗ ಪ್ರಾರಂಭವಾಯಿತು' ಎಂಬ ಪ್ರಶ್ನೆ ತಲೆದೋರುತ್ತದೆ. ಇದನ್ನು ವಿಶ್ವ ಇತಿಹಾಸದ ಅನೇಕ ಹಂತಗಳಲ್ಲಿ ಪರಿಗಣಿಸಬಹುದು. ಆದರೆ, ಅದಕ್ಕೆ ಒಂದು ಉಲ್ಲೇಖದ ಬಿಂದುವಾಗಿ ಇಬ್ಬರು ಸ್ಕಾಟ್‌ಲೆಂಡ್ ಚಿಂತಕರು 18ನೇ ಶತಮಾನದಲ್ಲಿ ನಡೆದ ನಗರೀಕರಣ, ಕೈಗಾರೀಕರಣ, ಸಾಮಾಜಿಕ ಬದಲಾವಣೆ ಗಮನಿಸುತ್ತಾ ಒಂದು ಸಿದ್ಧಾಂತ ರೂಪಿಸಿದರು. ಅದನ್ನು 'ಒನ್ ವೇ ಸ್ಟ್ರೀಟ್ ಸಿದ್ಧಾಂತ' ಎಂದು ಕರೆಯುವೆ' ಎಂದರು.

ಜೇಮ್ಸ್ ರಾಬಿನ್‌ಸನ್

ನೊಬೆಲ್ ಪ್ರಶಸ್ತಿ ಪುರಸ್ಕೃತ ಡೇವಿಡ್ ಮ್ಯಾಕ್‌ಮಿಲನ್, ಯೋಜನಾ ಆಯೋಗದ ಮಾಜಿ ಉಪಾಧ್ಯಕ್ಷ ಮಾಂಟೆಕ್‌ಸಿಂಗ್ ಅಹ್ಲುವಾಲಿಯಾ ಹಾಜರಿದ್ದರು.

ಕಾಳೇನ ಅಗ್ರಹಾರದಿಂದ ನಾಗವಾರಕ್ಕೆ ಸಂಪರ್ಕ: ಡಿಸಿಎಂ ಡಿ.ಕೆ. ಶಿವಕುಮಾರ್ ಮಾಹಿತಿ

ಗುಲಾಬಿ ಮಾರ್ಗ: ಮೇ ತಿಂಗಳಲ್ಲಿ ಮೆಟ್ರೊ ಶುರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಮ್ಮ ಮೆಟ್ರೊದ ಗುಲಾಬಿ ಮಾರ್ಗದಲ್ಲಿ 2026ರ ಮೇ ತಿಂಗಳಲ್ಲಿ ಸಂಚಾರ ಆರಂಭವಾಗಲಿದೆ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದ್ದಾರೆ.

ಈ ಬಗ್ಗೆ 'ಎಕ್ಸ್' ಖಾತೆಯಲ್ಲಿ ಅವರು ಮಾಹಿತಿ ಹಂಚಿಕೊಂಡಿದ್ದಾರೆ. ಕಾಳೇನ ಅಗ್ರಹಾರದಿಂದ ನಾಗವಾರ ಸಂಪರ್ಕಿಸುವ ನಮ್ಮ ಮೆಟ್ರೊ ಗುಲಾಬಿ ಮಾರ್ಗವು 13.76 ಕಿ.ಮೀ ಉದ್ದದ ಸುರಂಗವನ್ನು ಒಳಗೊಂಡಿದೆ. ಈ ಮಾರ್ಗ ದಕ್ಷಿಣ ಹಾಗೂ ಉತ್ತರ ಬೆಂಗಳೂರನ್ನು ಬೆಸೆಯಲಿದೆ. ಉತ್ತಮ ಸಂಪರ್ಕಕ್ಕೆ ನಮ್ಮ ಬದ್ಧತೆ ಮುಂದುವರಿಯಲಿದೆ ಎಂದು ಅವರು ಹೇಳಿದ್ದಾರೆ.

ಅರೆ ಸಂಚಾರ?: ಅತಿ ಉದ್ದದ ಭೂಗತ ಮಾರ್ಗವನ್ನು ಹೊಂದಿರುವ 'ನಮ್ಮ ಮೆಟ್ರೊ' ಗುಲಾಬಿ ಮಾರ್ಗದಲ್ಲಿ ಭೂಗತ ಸಿವಿಲ್ ಕಾಮಗಾರಿ ಪೂರ್ಣಗೊಂಡಿದ್ದರೂ ತಾಂತ್ರಿಕ ಕೆಲಸಗಳು ಬಾಕಿ ಇರುವುದರಿಂದ ಇನ್ನೂ ಒಂದು ವರ್ಷ ಭೂಗತ ಮಾರ್ಗದಲ್ಲಿ ಮೆಟ್ರೊ ಸಂಚಾರ ಆರಂಭವಾಗುವುದಿಲ್ಲ. ಎತ್ತರಿಸಿದ ಮಾರ್ಗದಲ್ಲಿ ಆರು ತಿಂಗಳ ಒಳಗೆ ಮೆಟ್ರೊ ರೈಲು ಸಂಚರಿಸಲಿದೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ಸ್ಪಷ್ಟಪಡಿಸಿದ್ದಾರೆ.

ಗುಲಾಬಿ ಮಾರ್ಗವು 21.26 ಕಿ.ಮೀ. ಉದ್ದ ಹೊಂದಿದ್ದು, ಅದರಲ್ಲಿ 13.76 ಕಿ.ಮೀ. ಸುರಂಗ ಮಾರ್ಗವಾಗಿದೆ. ಭೂಗತ ಮಾರ್ಗದಲ್ಲಿ 12 ನಿಲ್ದಾಣಗಳು ಹಾಗೂ ಎತ್ತರಿಸಿದ ಮಾರ್ಗದಲ್ಲಿ 6 ನಿಲ್ದಾಣಗಳು ನಿರ್ಮಾಣಗೊಂಡಿವೆ. ತಾವರೆಕೆರೆಯಿಂದ ಕಾಳೇನ ಅಗ್ರಹಾರದವರೆಗೆ 7.5 ಕಿ.ಮೀ. ಉದ್ದದ ಎತ್ತರಿಸಿದ ಮಾರ್ಗದಲ್ಲಿ ಸಿವಿಲ್ ಕಾಮಗಾರಿಗಳು, ಹಳಿ ಅಳವಡಿಕೆ ಸಹಿತ ಬಹುತೇಕ ಕಾರ್ಯಗಳು ಪೂರ್ಣಗೊಂಡಿವೆ. ತಾಂತ್ರಿಕ ಕೆಲಸಗಳಷ್ಟೇ ಬಾಕಿ ಉಳಿದಿದ್ದು, ಆರು ತಿಂಗಳಲ್ಲಿ ಸಂಚಾರಕ್ಕೆ ತಯಾರಾಗಲಿದೆ.

ಸುರಂಗ ಮಾರ್ಗದಲ್ಲಿ ಸಿವಿಲ್ ಕಾಮಗಾರಿಗಳು ಮುಗಿದಿದ್ದರೂ ಟ್ರ್ಯಾಕಿಂಗ್ ಕೆಲಸ, ವಿದ್ಯುತ್ ಸಂಪರ್ಕ ವ್ಯವಸ್ಥೆ, ಹವಾ ನಿಯಂತ್ರಣ ವ್ಯವಸ್ಥೆ ಸೇರಿದಂತೆ ತಾಂತ್ರಿಕ ಕಾಮಗಾರಿಗಳು ಪೂರ್ಣಗೊಳ್ಳಲು ಕನಿಷ್ಠ ಒಂದು ವರ್ಷ ಬೇಕು ಎಂದು ವಿವರ ನೀಡಿದ್ದಾರೆ.

ಮೂರು ಇಂಟರ್‌ಚೇಂಜ್

ಗುಲಾಬಿ ಮಾರ್ಗದಲ್ಲಿ ಕಾಳೇನ ಅಗ್ರಹಾರ, ಹುಳಿಮಾವು, ಐಐಎಂಬಿ, ಜೆ.ಪಿ. ನಗರ ನಾಲ್ಕನೇ ಹಂತ, ಜಯದೇವ ಆಸ್ಪತ್ರೆ, ಸ್ವಾಗತ್ ರೋಡ್ ಕ್ರಾಸ್, ಡೇರಿ ಸರ್ಕಲ್, ಮೈಕೊ ಇಂಡಸ್ಟ್ರೀಸ್, ಲ್ಯಾಂಗ್‌ಫೋರ್ಡ್ ಟೌನ್, ವೆಲ್ಲಾರ, ಎಂ.ಜಿ. ರಸ್ತೆ, ಶಿವಾಜಿನಗರ, ಕಂಟೋನ್ಮೆಂಟ್, ಪಾಟರಿ ಟೌನ್, ಟ್ಯಾನರಿ ರಸ್ತೆ, ವೆಂಕಟೇಶಪುರ, ಅರೇಬಿಕ್ ಕಾಲೇಜು, ನಾಗವಾರ ಸೇರಿ ಒಟ್ಟು 18 ನಿಲ್ದಾಣಗಳಿವೆ. ಎಂ.ಜಿ. ರಸ್ತೆ, ಜಯದೇವ ಆಸ್ಪತ್ರೆ, ನಾಗವಾರದಲ್ಲಿ ಇಂಟರ್‌ಚೇಂಜ್ ನಿಲ್ದಾಣಗಳು ನಿರ್ಮಾಣಗೊಳ್ಳಲಿವೆ. ಎಂ.ಜಿ. ರಸ್ತೆಯಲ್ಲಿ ನೇರಳೆ ಮಾರ್ಗವನ್ನು, ಜಯದೇವ ಆಸ್ಪತ್ರೆ ನಿಲ್ದಾಣದಲ್ಲಿ ಹಳದಿ ಮಾರ್ಗವನ್ನು, ನಾಗವಾರದಲ್ಲಿ ನೀಲಿ ಮಾರ್ಗವನ್ನು ಈ ಗುಲಾಬಿ ಮಾರ್ಗವು ಸಂಪರ್ಕಿಸಲಿದೆ.

'ಎಂ.ಜಿ. ರಸ್ತೆ ನಿಲ್ದಾಣದಲ್ಲಿ ಮಾತ್ರ ನಾಲ್ಕು ಕಡೆಗಳಿಗೆ ಪ್ರವೇಶ/ನಿರ್ಗಮನ ಇರಲಿದ್ದು, ಉಳಿದ ನಿಲ್ದಾಣಗಳಲ್ಲಿ ಎರಡು ದಿಕ್ಕುಗಳಿಗೆ ಮಾತ್ರ ಪ್ರವೇಶ/ನಿರ್ಗಮನ ಇರಲಿದೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

ಎಂ.ಜಿ. ರಸ್ತೆ ಬಳಿ ನಿರ್ಮಾಣಗೊಂಡಿರುವ ಸುರಂಗ ಮಾರ್ಗ (ಸಾಂದರ್ಭಿಕ ಚಿತ್ರ)

ಅಂಕಿ ಅಂಶಗಳು

21.26 ಕಿ.ಮೀ. ನಮ್ಮ ಮೆಟ್ರೊ ಗುಲಾಬಿ ಮಾರ್ಗದ ಉದ್ದ

18 ಒಟ್ಟು ನಿಲ್ದಾಣಗಳು

13.76 ಕಿ.ಮೀ. ಸುರಂಗ ಮಾರ್ಗ

₹12,000 ಕೋಟಿ ಯೋಜನೆಯ ಒಟ್ಟು ವೆಚ್ಚ

₹5,000 ಕೋಟಿ ಸುರಂಗ ಮಾರ್ಗ ನಿರ್ಮಾಣದ ವೆಚ್ಚ

ಫುಟ್‌ಬಾಲ್: ಅಗ್ನಿಪುತ್ರ ತಂಡಕ್ಕೆ ಸುಲಭ ಜಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಫ್‌ಸಿ ಅಗ್ನಿಪುತ್ರ ತಂಡವು ಕೆಎಸ್‌ಎಫ್‌ಎ ಸೂಪರ್ ಡಿವಿಷನ್ ಲೀಗ್ ಫುಟ್‌ಬಾಲ್ ಚಾಂಪಿಯನ್‌ಷಿಪ್ ಪಂದ್ಯದಲ್ಲಿ 6-0ಯಿಂದ ಎಂಇಜಿ ಆ್ಯಂಡ್ ಸೆಂಟರ್ ಎಫ್‌ಸಿ ತಂಡವನ್ನು ಮಣಿಸಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ಸೋಮವಾರ ನಡೆದ ಪಂದ್ಯದಲ್ಲಿ ಅಗ್ನಿಪುತ್ರ ತಂಡದ ಅಫ್ಜರ್ ನೂರಾನಿ (26ನೇ ನಿ. ಮತ್ತು 82ನೇ ನಿ.) ಹಾಗೂ ರಣೋಯ್ ಎಸ್. (39ನೇ ನಿ. ಮತ್ತು 65ನೇ ನಿ.) ಅವಳಿ ಗೋಲು ದಾಖಲಿಸಿದರು. ಕ್ರಿಸ್ಪಿನ್ ಕ್ಲೀಟಸ್ (20ನೇ ನಿ.) ಹಾಗೂ ಆರ್ಯನ್ ಆಮ್ಲಾ (48ನೇ ನಿ.) ಗೆಲುವಿನ ಅಂತರ ಹಿಗ್ಗಿಸಿದರು.

ಮತ್ತೊಂದು ಪಂದ್ಯದಲ್ಲಿ ಬಿಎಫ್‌ಸಿ ತಂಡವು 5-1ರಿಂದ ಯುನೈಟೆಡ್ ಸ್ಪಾರ್ಸ್ ಎಫ್‌ಸಿ ಎದುರು ನಿರಾಯಾಸ ಗೆಲುವು ಸಾಧಿಸಿತು. ರಕ್ಷಿತ್ ಪಿ. ಅನಿಲ್ (49ನೇ ಹಾಗೂ 73ನೇ ನಿ.) ಅವಳಿ ಗೋಲು ಗಳಿಸಿದರೆ, ಶಾಮ್ನಾದ್ ಕೆ.ಪಿ. (41ನೇ ನಿ.), ವೈ.ಎ.ಚಿಂಗಖಂ (77ನೇ ನಿ.) ಮತ್ತು ಮೊಹಮ್ಮದ್ ಅರ್ಬಾಷ್ (90 + 3ನೇ ನಿ.) ತಲಾ ಒಂದು ಗೋಲು ಹೊಡೆದರು. ಯುನೈಟೆಡ್ ತಂಡದ ಪರ ಶರವಣ ಕುಮಾರ್ ಜಿ.(6ನೇ ನಿ.) ಏಕೈಕ ಗೋಲು ಗಳಿಸಿದರು. ಪರಿಕ್ರಮ ಎಫ್‌ಸಿ ಹಾಗೂ ಬೆಂಗಳೂರು ಡ್ರೀಮ್ ಯುನೈಟೆಡ್ ಎಫ್‌ಸಿ ತಂಡಗಳು 2-2 ಡ್ರಾ ಸಾಧಿಸಿದವು.

ಬೆಂಗಳೂರು ಡ್ರೀಮ್ ಯುನೈಟೆಡ್‌ನ ಕೆ. ಲಾಲ್ರಿನ್‌ಫೆಲಾ ಹೊಡೆದ ಚೆಂಡನ್ನು ಪರಿಕ್ರಮ ಎಫ್‌ಸಿಯ ಗೋಲ್‌ಕೀಪರ್ ಜೀವನ್ ಕುಮಾರ್ ತಡೆಯಲು ಯತ್ನಿಸಿದರು ಪ್ರಜಾವಾಣಿ ಚಿತ್ರ: ಪುಷ್ಕರ್ ವಿ.

ಅಂತರ ಶಾಲಾ ಟೇಬಲ್ ಟೆನಿಸ್ 17ರಿಂದ

ಬೆಂಗಳೂರು: ಬೆಂಗಳೂರು ನಗರ ಜಿಲ್ಲಾ ಟೇಬಲ್ ಟೆನಿಸ್ ಸಂಸ್ಥೆಯು ಇದೇ 17 ಮತ್ತು 18ರಂದು ಅಂತರ ಶಾಲಾ ಟೇಬಲ್ ಟೆನಿಸ್ ಚಾಂಪಿಯನ್‌ಷಿಪ್ ಅನ್ನು ಆಯೋಜಿಸುತ್ತಿದೆ. ರಾಜ್ಯ ಟೇಬಲ್ ಟೆನಿಸ್ ಸಂಸ್ಥೆಯ ಆಶ್ರಯದಲ್ಲಿ ಈ ಚಾಂಪಿಯನ್‌ಷಿಪ್ ನಡೆಯಲಿದೆ.

1ರಿಂದ 7ನೇ ತರಗತಿವರೆಗಿನ ವಿದ್ಯಾರ್ಥಿಗಳು ಸಬ್‌ಜೂನಿಯರ್ ವಿಭಾಗದಲ್ಲಿ ಹಾಗೂ 8ರಿಂದ 10ನೇ ತರಗತಿಯ ವಿದ್ಯಾರ್ಥಿಗಳು ಜೂನಿಯರ್ ವಿಭಾಗದಲ್ಲಿ ಸ್ಪರ್ಧಿಸಬಹುದಾಗಿದೆ.

ಬಾಲಕ ಮತ್ತು ಬಾಲಕಿಯರಿಗೆ ಪ್ರತ್ಯೇಕ ಸ್ಪರ್ಧೆಗಳು ಇರಲಿವೆ. ಬೆಂಗಳೂರು ನಗರ ಜಿಲ್ಲಾ ವ್ಯಾಪ್ತಿಯಲ್ಲಿರುವ ಶಾಲೆಗಳ ವಿದ್ಯಾರ್ಥಿಗಳು ಮಾತ್ರ ಟೂರ್ನಿಯಲ್ಲಿ ಭಾಗವಹಿಸಬಹುದಾಗಿದೆ.

ನೋಂದಣಿಗೆ ಇದೇ 12 ಕೊನೆಯ ದಿನ. ವಿವರಗಳಿಗೆ ಮೊಬೈಲ್ ಸಂ. 98863 11359 ಅಥವಾ 99450 22469 ಅನ್ನು ಸಂಪರ್ಕಿಸಬಹುದು.

ಲಾಲ್‌ಬಾಗ್‌ನಲ್ಲಿ ನಿರ್ಮಾಣದ ವಿವರ ಕೇಳಿರುವ ತೋಟಗಾರಿಕೆ ಇಲಾಖೆ; ಸಮಯಾವಕಾಶ ಕೋರಿದ ಬಿ-ಸ್ಮೈಲ್

ಸುರಂಗ ರಸ್ತೆ: ಇನ್ನೂ ಸಲ್ಲಿಕೆಯಾಗದ ವರದಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲಾಲ್‌ಬಾಗ್‌ನಲ್ಲಿ ನಿರ್ಮಾಣ ಮಾಡಲು ಉದ್ದೇಶಿಸಿರುವ ಸುರಂಗ ರಸ್ತೆ ಸಂಪೂರ್ಣ ಮಾಹಿತಿಯನ್ನು ತೋಟಗಾರಿಕೆ ಇಲಾಖೆ ಕೇಳಿದ್ದು, ಇದನ್ನು ಒದಗಿಸಲು ಬಿ-ಸ್ಮೈಲ್ ಸಮಯಾವಕಾಶ ಕೇಳಿದೆ.

ಲಾಲ್‌ಬಾಗ್‌ನಲ್ಲಿ ಸುಮಾರು ಆರು ಎಕರೆ ಭೂಮಿಯನ್ನು ಬಳಸಿಕೊಂಡು ಸುರಂಗ ರಸ್ತೆ ನಿರ್ಮಿಸಲಾಗುತ್ತದೆ ಎಂದು ಸುರಂಗ ಮಾರ್ಗ ನಿರ್ಮಾಣದ ಹೊಣೆ ಹೊತ್ತಿರುವ ಬೆಂಗಳೂರು ಸ್ಮಾರ್ಟ್ ಇನ್‌ಫ್ರಾಸ್ಟ್ರಕ್ಚರ್ ನಿಯಮಿತದ (ಬಿ-ಸ್ಮೈಲ್) ವತಿಯಿಂದ ತೋಟಗಾರಿಕೆ ಇಲಾಖೆಗೆ 15 ದಿನಗಳ ಹಿಂದೆ ಪತ್ರ ಬರೆಯಲಾಗಿತ್ತು.

'ಸುರಂಗ ರಸ್ತೆ ಯೋಜನೆಗೆ ಸಂಬಂಧಿಸಿದಂತೆ ಯಾವ ಭಾಗದಲ್ಲಿ ಯಾವ ರೀತಿಯ ನಿರ್ಮಾಣ ಕಾಮಗಾರಿಗಳು ನಡೆಯಲಿವೆ ಎಂಬುದರ ಸಂಪೂರ್ಣ ಮಾಹಿತಿಯನ್ನು ಒದಗಿಸಿ' ಎಂದು ತೋಟಗಾರಿಕೆ ಇಲಾಖೆಯಿಂದ ಬಿ-ಸ್ಮೈಲ್‌ಗೆ ಮರುಪತ್ರ ಬರೆಯ ಲಾಗಿದೆ. ಆದರೆ, ಈವರೆಗೆ ಬಿ-ಸ್ಮೈಲ್ ಸಂಪೂರ್ಣ ಮಾಹಿತಿಯನ್ನು ಒದಗಿಸಿಲ್ಲ.

'ಬಿ-ಸ್ಮೈಲ್ ಸಂಪೂರ್ಣ ವರದಿ ಸಲ್ಲಿಸಿದ ಮೇಲೆ ಅದನ್ನು ಆಧರಿಸಿ ಲಾಲ್‌ಬಾಗ್ ಉದ್ಯಾನದ ಮೇಲಾಗುವ ಪರಿಣಾಮವನ್ನು ತಜ್ಞರ ಸಲಹೆ-ಅಭಿಪ್ರಾಯಗಳೊಂದಿಗೆ ವಾಸ್ತವ ವರದಿ ತಯಾರಿಸಲಾಗುತ್ತದೆ. ಈ ವರದಿಯನ್ನು ತೋಟಗಾರಿಕೆ ಇಲಾಖೆ ಕಾರ್ಯದರ್ಶಿಯವರ ಮೂಲಕ ಇಲಾಖೆ ಸಚಿವರಿಗೆ ತಲುಪಿಸಲಾಗುತ್ತದೆ' ಎಂದು ತೋಟಗಾರಿಕೆ ಇಲಾಖೆ ಅಧಿಕಾರಿಗಳು ಮಾಹಿತಿ ನೀಡಿದರು.

ಲಾಲ್‌ಬಾಗ್‌ನೊಳಗೆ ನಿರ್ಮಾಣವಾಗಲಿರುವ ಶಾಫ್ಟ್ ಮಾದರಿ

ಶಾಫ್ಟ್: ಸುರಂಗ ಮಾರ್ಗಕ್ಕೆ ಬೆಂಗಳೂರು ಉತ್ತರ ತಾಲ್ಲೂಕು ಕಸಬಾ ಹೋಬಳಿಯ ನಾಲ್ಕು ಸರ್ವೆ ನಂಬರ್‌ಗಳಲ್ಲಿ ಲಾಲ್‌ಬಾಗ್‌ನ ಆರು ಎಕರೆ ಪ್ರದೇಶವನ್ನು ಸ್ವಾಧೀನಪಡಿಸಿಕೊಳ್ಳಲು ವಿಸ್ತೃತ ಯೋಜನಾ ವರದಿಯಲ್ಲಿ (ಡಿಪಿಆರ್) ಪ್ರವೇಶ-ನಿರ್ಗಮನದ ರ‍್ಯಾಂಪ್‌ನೊಂದಿಗೆ ಅಲೈನ್‌ಮೆಂಟ್ ವಿವರಿಸಲಾಗಿದೆ.

ಲಾಲ್‌ಬಾಗ್ ಸಿದ್ದಾಪುರ ಮುಖ್ಯ-ರಸ್ತೆಯಲ್ಲಿ ಲಾಲ್‌ಬಾಗ್ ದಕ್ಷಿಣ ಗೇಟ್ (ಸಿದ್ದಾಪುರ ಗೇಟ್) ಪ್ರವೇಶದ್ವಾರ ಸೇರಿದಂತೆ ಕಸಬಾ ಹೋಬಳಿಯ ಲಾಲ್‌ಬಾಗ್, ಅಣ್ಣಿಪುರ, ಅರೆಕೆಂಪನ-ಹಳ್ಳಿ, ಸಿದ್ದಾಪುರ ಗ್ರಾಮಗಳು ಬರುವ ವಿಶ್ವೇಶ್ವರ ಪುರ ವಾರ್ಡ್‌ನಲ್ಲಿ 2.56 ಲಕ್ಷಕ್ಕೂ ಹೆಚ್ಚು ಚದರಡಿ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲು ಡಿಪಿಆರ್‌ನಲ್ಲಿ ಅಲೈನ್‌ಮೆಂಟ್ ಅನ್ನು ಗುರುತಿಸಲಾಗಿದೆ. ಸುರಂಗ ರಸ್ತೆಯ ಪ್ರವೇಶ ಮತ್ತು ನಿರ್ಗಮನ ಪ್ರದೇಶದಲ್ಲಿ ಬಸ್ ನಿಲ್ದಾಣ, ಆಟೊ-ಟ್ಯಾಕ್ಸಿ ನಿಲ್ದಾಣ, ಮಾರುಕಟ್ಟೆಯಂತಹ ಸೌಲಭ್ಯಗಳನ್ನು ಕಲ್ಪಿಸಲು ಸಿದ್ದಾಪುರ ಗೇಟ್ ಒಳಗಿನ ಲಾಲ್‌ಬಾಗ್‌ನಲ್ಲಿ 'ಶಾಫ್ಟ್' ನಿರ್ಮಿಸಲು ಯೋಜಿಸಲಾಗಿದೆ.

'ಜನರಿಗೆ ಉತ್ತರ ನೀಡಿ'

ಬೆಂಗಳೂರು: 'ನಗರದಲ್ಲಿ ಸುರಂಗ ರಸ್ತೆ ನಿರ್ಮಿಸುವುದಕ್ಕೆ ಸಂಬಂಧಿಸಿದಂತೆ ಸರ್ಕಾರ ಯಾವುದೇ ಮಾಹಿತಿ ನೀಡುತ್ತಿಲ್ಲ. ಜನರ ಪ್ರಶ್ನೆಗಳಿಗೆ ಉತ್ತರ ನೀಡುತ್ತಿಲ್ಲ' ಎಂದು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್.ಅಶೋಕ ದೂರಿದರು.

ಸುದ್ದಿಗಾರರ ಜತೆ ಸೋಮವಾರ ಮಾತನಾಡಿದ ಅವರು, 'ಈ ಯೋಜನೆಗೆ ಸಂಬಂಧಿಸಿದಂತೆ ಸರ್ಕಾರ ಸಾರ್ವಜನಿಕರ ಎಲ್ಲ ಪ್ರಶ್ನೆಗಳಿಗೂ ಉತ್ತರಿಸಬೇಕು' ಎಂದು ಅವರು ಆಗ್ರಹಿಸಿದರು.



ಆರ್. ಅಶೋಕ

'ನಾನು ಈ ಯೋಜನೆ ಬಗ್ಗೆ ಅಧಿಕಾರಿಗಳನ್ನು ಪ್ರಶ್ನಿಸಿದಾಗ 124 ಇಲಾಖೆಗಳಿಂದ ಅನುಮತಿ ಪಡೆಯಬೇಕಿದೆ ಎಂದು ತಿಳಿದು ಬಂತು. ನನ್ನನ್ನೇ ಸಮಿತಿ ಅಧ್ಯಕ್ಷ ಮಾಡುತ್ತೇನೆ ಎಂದು ಉಪ ಮುಖ್ಯಮಂತ್ರಿ ಹೇಳಿದ್ದಾರೆ. ಇಂತಹ ಯೋಜನೆ ಮಾಡಲು ಅಗತ್ಯ ನೈಪುಣ್ಯ ಇದೆಯೇ ಎಂದು ಸಾಬೀತುಪಡಿಸಲು ಮೊದಲಿಗೆ ಮುಖ್ಯಮಂತ್ರಿ ಮತ್ತು ಉಪಮುಖ್ಯಮಂತ್ರಿ ರಸ್ತೆ ಗುಂಡಿಗಳನ್ನು ಮುಚ್ಚಿಸಲಿ. ಗುಂಡಿ ಮುಚ್ಚಲು ಆಗದವರು ಸುರಂಗ ಹೇಗೆ ಮಾಡುತ್ತಾರೆ? ಇದಕ್ಕೆ ಹಣ ಎಲ್ಲಿದೆ' ಎಂದು ಪ್ರಶ್ನಿಸಿದರು.

'ಬಿಜೆಪಿಯವರು ಅಭಿವೃದ್ಧಿ ವಿರೋಧಿಗಳಲ್ಲ. ಲಾಲ್‌ಬಾಗ್, ಕೆಂಪೇಗೌಡ ಗೋಪುರ ಹಾಳು ಮಾಡಬಾರದು. ಪರಿಸರ ನಾಶ ಮಾಡಬಾರದು. ಸರ್ಕಾರ ನನಗೆ ಉತ್ತರ ಕೊಡುವ ಬದಲು ಜನರಿಗೆ ಉತ್ತರ ನೀಡಬೇಕು. ನಾವು ಜನರ ಧ್ವನಿಯಾಗಿ ಮಾತನಾಡುತ್ತಿದ್ದೇವೆ' ಎಂದರು.

'ನವೆಂಬರ್ ಕ್ರಾಂತಿಯ ಬಗ್ಗೆ ಮಾಜಿ ಸಚಿವ ರಾಜಣ್ಣ ಹೇಳಿದ್ದಾರೆ. ರಾಮನಗರ, ದಾವಣಗೆರೆ ಶಾಸಕರು ಮುಖ್ಯಮಂತ್ರಿ ಬದಲಾವಣೆ ಬಗ್ಗೆ ಹೇಳಿದ್ದಾರೆ. ಯಾರೇ ಮುಖ್ಯಮಂತ್ರಿ ಆದರೂ ಜನರಿಗೆ ಒಳಿತು ಮಾಡಬೇಕೆಂದು ಒತ್ತಾಯಿಸುತ್ತೇವೆ. ಕ್ರಾಂತಿ ಹಾಗೂ ಭ್ರಾಂತಿ ಎರಡೂ ಕಾಂಗ್ರೆಸ್ ಪಕ್ಷದೊಳಗೆ ನಡೆಯುತ್ತಿದೆ. ಕಾಂಗ್ರೆಸ್ ನಾಯಕರೇ ಇಂತಹ ಮಾತನಾಡುತ್ತಿದ್ದಾರೆ' ಎಂದರು.

Prestige GROUP
Add Prestige to your life

This is to inform you that residential development with Club house , at Sy Nos. 4(P) Srinivagilu Amanikere Village, Begur Hobli, Bengaluru South Taluk, Bengaluru has been accorded Environment Clearance Certificate from the Ministry of Environment Forest and Climate Change, Govt. of India vide EC Identification No. EC25C3801KA5407723N & File No. – SEIAA 238 CON 2025 dtd. 02/11/2025. Copies of the Clearance Certificates are available with Karnataka State Pollution Control Board and can also be seen on the website of the Environment, Forest and Climate Change at http://environmentclearance.nic.in and http//seiaa.karnataka.gov.in

Prestige Estates Projects Ltd (Panathur)
Prestige Falcon Towers, No.19, Brunton Road, Bangalore -560025
CREDAI BENGALURU

‘ಪೆಥಾಲಜಿ’ ಎಂಬ ಮಾಯಾಲೋಕ

• ಡಾ. ಶ್ರೀನಿವಾಸ ಹರಪನಹಳ್ಳಿ

‘ಡಾಕ್ಟ್ರೇ, ರಕ್ತಪರೀಕ್ಷೆ ರಿಪೋರ್ಟ್ ಬಂತಾ?’
‘ಬಂತಮ್ಮ, ಮಗೂಗೆ ಸೋಂಕು ಇರುವುದು ಖಚಿತವಾಯ್ತು. ಆದ್ರೆ ಚಿಂತಿಸಬೇಡ, ಮಾತ್ರೆ ಬರೆದು ಕೊಡ್ತೀನಿ ಗುಣವಾಗುತ್ತೆ’.

‘ಆಪರೇಷನಿಂದ ಚೇತರಿಸಿಕೊಂಡಿದ್ದೇನೆ ಡಾಕ್ಟ್ರೇ; ಗಡ್ಡೆಯ ಲ್ಯಾಬ್ ರಿಪೋರ್ಟ್ ಏನನ್ನುತ್ತೆ?’

‘ನಿಮ್ಮ ಗರ್ಭಾಶಯದ ಗಡ್ಡೆ ಕ್ಯಾನ್ಸರ್ ಅಲ್ಲ ಅಂತಾ ರಿಪೋರ್ಟ್ ಬಂದಿದೆ, ಮುಂದೇನೂ ತೊಂದರೆ ಇಲ್ಲ.’

ಇಂಥ ಸಂಭಾಷಣೆಗಳನ್ನ ನಾವು ಅನೇಕ ಬಾರಿ ಕೇಳಿರುತ್ತೇವೆ; ಅಥವಾ ಇಂಥ ಅನುಭವ ನಮಗೇ ಆಗಿರುತ್ತದೆ. ಈ ರಿಪೋರ್ಟ್ ಎಂದರೇನು, ಚಿಕಿತ್ಸೆಯ ದಿಕ್ಕನ್ನು ನಿರ್ದೇಶಿಸುವ ಈ ರಿಪೋರ್ಟುಗಳ ಹಿಂದಿನ ಶಕ್ತಿಯೇನು?

ಜೀವನದಲ್ಲಿ ಒಂದಲ್ಲ ಒಂದು ದಿನ ಆಸ್ಪತ್ರೆಗೆ ಹೋಗಲೇಬೇಕಾದ ಪರಿಸ್ಥಿತಿಗಳು ಅನೇಕರಿಗೆ ಬಂದೇ ಬಂದಿರುತ್ತವೆ. ಹಾಗಾಗಿ ಎಷ್ಟೋ ಜನರು ಮೆಡಿಸಿನ್, ಸರ್ಜರಿ, ಸ್ತ್ರೀ-ರೋಗ ಅಥವಾ ಚಿಕ್ಕಮಕ್ಕಳ ವಿಭಾಗಗಳನ್ನು ಆಸ್ಪತ್ರೆಯಲ್ಲಿ ನೋಡಿರುತ್ತಾರೆ. ಮೆಡಿಕಲ್ ಕಾಲೇಜಿನ ಆಸ್ಪತ್ರೆಗಳಲ್ಲಂತೂ ಸುಮಾರು ಇಪ್ಪತ್ತರಿಂದ ಮೂವತ್ತು ವಿಭಾಗಗಳಿರುತ್ತವೆ. ಆಸ್ಪತ್ರೆಯ ಇನ್ನೂ ಕೆಲವು ವಿಭಾಗಗಳು ಸಾಮಾನ್ಯವಾಗಿ ಜನರ ಕಣ್ಣಿಗೆ ಬೀಳದಿದ್ದರೂ ಅವು ತೆರೆಮರೆಯಲ್ಲಿಯೇ ರೋಗಿಗಳ ಕಾಯಿಲೆಗಳನ್ನು ಕಂಡುಹಿಡಿಯಲು, ಸೂಕ್ತ ಚಿಕಿತ್ಸೆಯನ್ನು ನೀಡಲು ಶ್ರಮಿಸುತ್ತವೆ. ಉದಾಹರಣೆಗೆ ಬಯೋ-ಕೆಮಿಸ್ಟ್ರಿ, ಪೆಥಾಲಜಿ ಮತ್ತು ಮೈಕ್ರೋ ಬಯಾಲಜಿ ಎಂಬ ವಿಭಾಗಗಳು.

‘ರೋಗಶಾಸ್ತ್ರ’ ಅಥವಾ ‘ರೋಗಲಕ್ಷಣಶಾಸ್ತ್ರ’ ಎಂದು ಕರೆಯಲ್ಪಡುವ ಪೆಥಾಲಜಿ ವಿಭಾಗವು ವೈದ್ಯಕೀಯರಂಗದಲ್ಲಿ ಒಂದು ಮುಖ್ಯ ಶಾಖೆಯಾಗಿದೆ. ಹೆಸರೇ ಹೇಳುವಂತೆ ಇದು ರೋಗವನ್ನು ಪತ್ತೆ ಮಾಡಲು ವೈದ್ಯರಿಗೆ ಸಹಾಯಮಾಡುವ ಒಂದು ಪ್ರಯೋಗಾಲಯ. ಫಿಸಿಷಿಯನ್, ಸರ್ಜನ್ ಎನ್ನುವಂತೆ ಈ ವಿಭಾಗದ ತಜ್ಞವೈದ್ಯರು ‘ಪೆಥಾಲಜಿಸ್ಟ್’ ಅಥವಾ ‘ರೋಗ-ಶಾಸ್ತ್ರಜ್ಞ’ರು ಎಂದೇ ಹೆಸರುವಾಸಿಯಾಗಿದ್ದಾರೆ. ಈ ಪೆಥಾಲಜಿ ವಿಭಾಗವೇ ಈ ರಿಪೋರ್ಟುಗಳನ್ನು ತಯಾರು ಮಾಡುವುದು. ಇದು ರೋಗಿಯ ಕಾಯಿಲೆಯನ್ನು ಗುರುತಿಸಿ ಮುಂದಿನ ಚಿಕಿತ್ಸೆಗೆ ಸಹಾಯ ಮಾಡುತ್ತದೆ.

ವೈದ್ಯಕೀಯ ವಿದ್ಯಾಲಯಗಳು ಸೇರಿದಂತೆ ಅನೇಕ ದೊಡ್ಡ ಆಸ್ಪತ್ರೆಗಳಲ್ಲಿ ಪೆಥಾಲಜಿ ಪ್ರಯೋಗಾಲಯ ವಿಭಾಗವು ಒಂದು ಬಹುಮುಖ್ಯ ಅಂಗವಾಗಿರುತ್ತದೆ. ವೈದ್ಯರು ಅನೇಕ ಬಾರಿ ನಿಮ್ಮ ರಕ್ತದ ಪರೀಕ್ಷೆಯಾಗಬೇಕು, ಮಲ-ಮೂತ್ರಗಳ ಪರೀಕ್ಷೆಯಾಗಬೇಕು ಅಥವಾ ದೇಹದಲ್ಲಿರುವ ಗಡ್ಡೆಯ, ದುರ್ಮಾಂಸದ ಪರೀಕ್ಷೆಯಾಗಬೇಕು ಎಂದಾಗ ರೋಗಿಗಳು ಭೇಟಿ ನೀಡುವುದು ಈ ಪ್ರಯೋಗಾಲಯಕ್ಕೇ. ರೋಗಿಯ ರಕ್ತ-ಮಲ-ಮೂತ್ರಾದಿ-ಗಳನ್ನು ಪರೀಕ್ಷಿಸಿ ಅವುಗಳಲ್ಲೇನಾದರೂ ನ್ಯೂನತೆಗಳಿವೆಯೇ, ಇದ್ದರೆ ಅವುಗಳನ್ನು ವಿಂಗಡಿಸಿ ರೋಗ ಯಾವ ಹಂತದಲ್ಲಿರ-ಬಹುದು ಎಂಬ ರಿಪೋರ್ಟನ್ನು ಕೊಡುವುದೇ ಈ ವಿಭಾಗದ ಮುಖ್ಯ ಕೆಲಸ. ಈ ರಿಪೋರ್ಟುಗಳನ್ನು ಆಧರಿಸಿ ವೈದ್ಯರು ಮುಂದಿನ ಚಿಕಿತ್ಸೆಯನ್ನು ರೋಗಿಗೆ ಸೂಚಿಸುತ್ತಾರೆ. ತಜ್ಞವೈದ್ಯರ ಜೊತೆ ಲ್ಯಾಬ್ ತಂತ್ರಜ್ಞರೂ ಕೂಡ ಇಲ್ಲಿ ರೋಗಪತ್ತೆಗೆ ಸಹಾಯ ಮಾಡುತ್ತಾರೆ. ವೈದ್ಯಕೀಯ ತಂತ್ರಜ್ಞಾನ ಮುಂದುವರೆದಂತೆ ಪೆಥಾಲಜಿ ವಿಭಾಗವೂ ಕೂಡ ಅಭಿವೃದ್ಧಿ ಹೊಂದಿದ್ದು ಈಗ ಅತ್ಯಾಧುನಿಕ ಉಪಕರಣಗಳು ರೋಗಿಯ ರಕ್ತ-ಮಲ-ಮೂತ್ರಗಳ ಫಲಿತಾಂಶವನ್ನು ನಿಖರವಾಗಿ ಹೇಳುತ್ತವೆ.

ಆಟೋ-ಅನಾಲೈಸರ್‌ನಂತಹ ಸ್ವಯಂಚಾಲಿತ ಯಂತ್ರಗಳನ್ನು ಬಳಸಿ ರಿಪೋರ್ಟುಗಳನ್ನು ನೀಡಬಹುದಾದರೂ ಪೆಥಾಲಜಿ ಪ್ರಯೋಗಾಲಯದಲ್ಲಿರುವ ಸೂಕ್ಷ್ಮದರ್ಶಕ ಯಂತ್ರ ರೋಗಶಾಸ್ತ್ರಜ್ಞರ ಬಹುಮುಖ್ಯ ಅಸ್ತ್ರವೆನ್ನಬಹುದು. ರೋಗಗ್ರಸ್ತ ಅಂಗಾಂಶವನ್ನು ಈ ಸೂಕ್ಷ್ಮದರ್ಶಕ ಯಂತ್ರದಲ್ಲಿ ನೋಡಿದರೆ ಒಂದು ಅದ್ಭುತ ಮಾಯಾಲೋಕವೇ ತೆರೆದುಕೊಳ್ಳುತ್ತದೆ. ವಿವಿಧ ಜೀವಕಣಗಳ ಚಿತ್ತಾರ ನಮ್ಮ ಊಹೆಗೂ ನಿಲುಕದ ರಂಗೋಲಿಯಂತೆ ಇಲ್ಲಿ ಕಾಣುತ್ತದೆ. ಬರಿಗಣ್ಣಿಗೆ ಕಾಣಿಸದ ಅನೇಕ ಮಿಣಿಜೀವಿಗಳು, ಸತ್ತ ಮತ್ತು ರೋಗಗ್ರಸ್ತ ಜೀವಕಣಗಳು ಇಲ್ಲಿ ಸ್ಫುಟವಾಗಿ ಕಾಣುತ್ತವೆ. ಈ ಜೀವಕಣಗಳ ರಚನೆ, ವೈವಿಧ್ಯ ಹಾಗೂ ಸಂಖ್ಯೆಗಳನ್ನು ಆಧರಿಸಿ ರೋಗಶಾಸ್ತ್ರಜ್ಞರು ಕಾಯಿಲೆಯನ್ನು ನಿರ್ಧರಿಸುತ್ತಾರೆ.

ಶಸ್ತ್ರಚಿಕಿತ್ಸೆ ಮೂಲಕ ಬೇರ್ಪಡಿಸಿದ ತರಹೇವಾರಿ ಗಡ್ಡೆ-ಗ್ರಂಥಿಗಳನ್ನು ರೋಗಶಾಸ್ತ್ರಜ್ಞರು ಸೂಕ್ಷ್ಮದರ್ಶಕದಡಿಯಲ್ಲಿ ನೋಡಿ ಅವು ಕ್ಯಾನ್ಸರ್ ಇರಬಹುದೇ, ಇದ್ದರೆ ಯಾವ ಥರದ ಕ್ಯಾನ್ಸರ್ ಎಂದು ನಿಖರವಾಗಿ ಹೇಳಬಲ್ಲರು. ಮುಂದಿನ ಹಂತದ ಚಿಕಿತ್ಸೆಗೆ ಇಂಥ ರಿಪೋರ್ಟ್ ತುಂಬ ಅವಶ್ಯ. ಕೆಲವು ಸಂದರ್ಭಗಳಲ್ಲಿ ಶಸ್ತ್ರಚಿಕಿತ್ಸೆಯು ನಡೆಯುತ್ತಿರುವಾಗಲೇ ಗಡ್ಡೆಯ ತುಣುಕೊಂದನ್ನು ಫ್ರೋಜನ್ ಸೆಕ್ಷನ್ ತಂತ್ರಜ್ಞಾನದಿಂದ ಪರೀಕ್ಷಿಸಿ ಕೆಲವೇ ನಿಮಿಷಗಳಲ್ಲಿ ರಿಪೋರ್ಟ್ ನೀಡುವುದರಿಂದ ಶಸ್ತ್ರಚಿಕಿತ್ಸೆ ಯಾವ ಹಂತದವರೆಗೆ ಮುಂದುವರಿಸಬಹುದು ಎಂದು ಶಸ್ತ್ರಚಿಕಿತ್ಸಕರು ನಿರ್ಧರಿಸಲು ಅನುಕೂಲವಾಗುತ್ತದೆ. ಇದೇ ರೀತಿ ರಕ್ತದ ಕಾಯಿಲೆಗಳು, ರಕ್ತದ ಕ್ಯಾನ್ಸರ್ ಇತ್ಯಾದಿಗಳ ಪತ್ತೆಗೂ ಈ ಸೂಕ್ಷ್ಮದರ್ಶಕವೇ ಬೇಕು.

ರೋಗಶಾಸ್ತ್ರಜ್ಞರು ಅಲ್ಟ್ರಾ ಸೌಂಡ್ ತಂತ್ರಜ್ಞಾನವನ್ನು ಕೂಡ ಬಳಸಿ ಚಿಕ್ಕ ಸೂಜಿಯ ಮೂಲಕ ದೇಹದ ತೀರ ಒಳಭಾಗದ-ಲ್ಲಿರುವ ಗಡ್ಡೆಗಳ ಮಾದರಿಯನ್ನು ಕೂಡ ಸಂಗ್ರಹಿಸುತ್ತಾರೆ. ಇದನ್ನು ಸೂಕ್ಷ್ಮದರ್ಶಕದಲ್ಲಿ ಪರೀಕ್ಷಿಸಿ ಗಡ್ಡೆಯ ಪ್ರವರಗಳನ್ನೆಲ್ಲ ತಿಳಿಸುವುದರಿಂದ ಶಸ್ತ್ರಚಿಕಿತ್ಸೆಗೂ ಮುನ್ನವೇ ರೋಗ ಪತ್ತೆಯಾ-ಗುತ್ತದೆ. ಅಲ್ಲದೇ ಸೂಕ್ತ ಶಸ್ತ್ರಚಿಕಿತ್ಸಾ ವಿಧಾನವನ್ನು ನಿರ್ಧರಿಸಲು ಅನುಕೂಲವಾಗುತ್ತದೆ.

ಅಸ್ವಾಭಾವಿಕ ಸಾವು ಸಂಭವಿಸಿದಾಗ ಮರಣೋತ್ತರ ಪರೀಕ್ಷೆಯಲ್ಲಿ ಸಂಗ್ರಹಿಸಿದ ಮಾದರಿಗಳನ್ನು ರೋಗಶಾಸ್ತ್ರ-ಜ್ಞರು ಪ್ರಯೋಗಾಲಯದಲ್ಲಿ ಪರೀಕ್ಷಿಸಿ ಮರಣದ ಸಂಭಾವ್ಯ ಕಾರಣಗಳನ್ನು ಹೇಳಬಲ್ಲರು. ದೊಡ್ಡದೊಡ್ಡ ಊರುಗಳಲ್ಲಿ ‘ಬ್ಲಡ್ ಬ್ಯಾಂಕ್’ ಎಂಬ ರಕ್ತಸಂಗ್ರಹಾಲಯ ಇರುವುದು ಎಲ್ಲರಿಗೂ ಗೊತ್ತೇ ಇದೆ. ಇಲ್ಲಿ ವಿವಿಧ ಗುಂಪಿನ ರಕ್ತದ ಶೇಖರಣೆ ಹಾಗೂ ರಕ್ತದಲ್ಲಿರುವ ವಿವಿಧ ರಕ್ತಕಣಗಳ ವಿಂಗಡಣೆಯನ್ನು ಮಾಡಲಾಗುತ್ತದೆ. ಇದರ ಮೇಲ್ವಿಚಾರಣೆಯನ್ನು ಕೂಡ ರೋಗ-ಶಾಸ್ತ್ರಜ್ಞರೇ ನಿಭಾಯಿಸುತ್ತಾರೆ.

ಹೀಗೆ ರೋಗಪತ್ತೆಯ ಹಿಂದೆ ರೋಗಶಾಸ್ತ್ರಜ್ಞರ ಕೊಡುಗೆ ಮಹತ್ತರವಾಗಿದೆ. ಡಯಾಗ್ನೋಸಿಸ್ ನಿಖರವಾಗಿದ್ದರೆ ಮಾತ್ರ ಸೂಕ್ತ ಚಿಕಿತ್ಸೆ ನೀಡಲು ಸಾಧ್ಯವಲ್ಲವೇ!

ಪ್ರತಿವರ್ಷ ನವೆಂಬರಿನಲ್ಲಿ ‘ಅಂತರರಾಷ್ಟ್ರೀಯ ಪೆಥಾಲಜಿಸ್ಟ್ ದಿನ’ವನ್ನು ಆಚರಿಸಲಾಗುತ್ತದೆ. ಬೆಳಗಾವಿಯ ಕೆ.ಎಲ್.ಇ. ವೈದ್ಯಕೀಯ ಕಾಲೇಜಿನ ಪೆಥಾಲಜಿ ಸಂಗ್ರಹಾಲಯಕ್ಕೆ ನಮ್ಮ ನಾಡು ಕಂಡ ಶ್ರೇಷ್ಠ ರೋಗಶಾಸ್ತ್ರಜ್ಞರಾದ ಡಾ ಸ. ಜ. ನಾಗಲೋಟಿಮಠ ಅವರ ಹೆಸರನ್ನೇ ಇಟ್ಟು ಗೌರವಿಸಿದ್ದಾರೆ. ❖

ಮನಸ್ಸನ್ನು ಪಳಗಿಸೋಣ ಬನ್ನಿ

• ಸುಧಾ ಶರ್ಮಾ ಚವತ್ತಿ

ಈಗಿನ ಬಹುದೊಡ್ಡ ಸವಾಲು ಯಾವುದು ಎಂದು ಯಾರನ್ನಾದರೂ ಕೇಳಿದರೆ ‘ಪರಸ್ಪರ ಸಂಬಂಧಗಳನ್ನು ನಿರ್ವಹಿಸುವುದು’ ಎನ್ನುತ್ತಾರೆ. ಪರಸ್ಪರ ಸಂಬಂಧ ಎಂದರೆ ಯಾರೋ ಅಪರಿಚಿತರ ಜೊತೆಗಲ್ಲ, ಅವರು ಗಂಡನೋ ಹೆಂಡತಿಯೋ ತಂದೆಯೋ ತಾಯಿಯೋ ಮಕ್ಕಳೋ ಒಡಹುಟ್ಟಿದವರೋ – ಒಟ್ಟಿನಲ್ಲಿ ಹತ್ತಿರದ ಬಂಧುಗಳು, ಸ್ನೇಹಿತರು, ಆಫೀಸಿನಲ್ಲಿ ನಿತ್ಯವೂ ಒಡನಾಡುವವರು, ನಮಗೆ ಬೇಕಾದವರು. ಇದನ್ನು ಹೀಗೆ ಹೇಳಬಹುದು: ‘ಯಾವುದು ನಮ್ಮ ಸಂತೋಷದ ಮೂಲವೋ, ಅದೇ ನಮ್ಮ ಅಸಂತೋಷದ ಮೂಲವಾಗುತ್ತಿದೆ!’

ನಾವೆಲ್ಲ ಅಂದುಕೊಂಡಿದ್ದೆವು, ಹಣ ಇದ್ದರೆ, ಅಧಿಕಾರ ಇದ್ದರೆ, ಹೆಸರಿದ್ದರೆ, ಬೇಕಾದಷ್ಟು ಆಸ್ತಿ ಇದ್ದರೆ ನಾವು ಸಂತೋಷದಿಂದ ಇರಬಹುದು ಎಂದು. ಆದರೆ ಈಗ ಎಲ್ಲರಿಗೂ ಹಣ ಇದೆ, ಬೇಕಾದಷ್ಟು ಆಸ್ತಿಯೂ ಇದೆ, ಮೇಲ್ನೋಟಕ್ಕೆ ಎಲ್ಲರೂ ಅತ್ಯಂತ ಸಂತೋಷದಿಂದ ಇರುವಂತೆ ಕಾಣುತ್ತಾರೆ. ಆದರೆ ಎಲ್ಲರೊಳಗೂ ಒಂದು ಖಾಲಿತನ, ಒಂಟಿತನ ಆವರಿಸುತ್ತಿದೆ. ಮೊದಲು ಕೇವಲ ವಯಸ್ಸಾದವರಲ್ಲಿ, ಹೊರಗೆಲ್ಲೂ ಓಡಾಡದವರಲ್ಲಿ ಇಂತಹ ಒಂಟಿತನ ಕಾಡುತ್ತಿದೆ ಎನ್ನು-ತ್ತಿದ್ದರು. ಆದರೆ ಈಗ ಹದಿಹರೆಯದವರು ‘ಲೋನ್ಲಿನೆಸ್ ಪೆಂಡಮಿಕ್’ ಬಗೆಗೆ ಮಾತನಾಡುತ್ತಿದ್ದಾರೆ. ಇದೊಂದು ಜಾಗತಿಕ ಪಿಡುಗಾಗಿದೆ. ಜನರ ನಡುವೆಯೇ ಇದ್ದರೂ ಒಂಟಿ ಆಗುತ್ತಿದ್ದಾರೆ. ಸಮುದ್ರದಲ್ಲಿಯೇ ಇದ್ದರೂ ಉಪ್ಪು ನೀರಿಗೆ ಬರ ಎಂದ ಹಾಗಾಗಿದೆ.

ಯಾಕೆ ಹೀಗೆ?

ಮನುಷ್ಯನಿಗೆ ಸ್ವಭಾವತಃ ಇನ್ನೊಂದು ಮನುಷ್ಯ ಜೀವಿಯ ಸಹವಾಸ ಇದ್ದಾಗ, ಅದರಲ್ಲೂ ಗುಂಪುಗಳಲ್ಲಿ ಇದ್ದಾಗ ಅವನು ಹೆಚ್ಚು ಸುರಕ್ಷಿತತೆಯ, ನೆಮ್ಮದಿಯ ಭಾವನೆ ಹೊಂದುತ್ತಾನೆ. ನಾವು ಇತ್ತೀಚಿನ ವರ್ಷಗಳಲ್ಲಿ ಹಣಕ್ಕೆ, ಸಂಪತ್ತಿಗೆ ಕೊಟ್ಟ ಮಹತ್ವವನ್ನು ಸಂಬಂಧಗಳಿಗೆ ಕೊಡಲಿಲ್ಲ. ಸಂಬಂಧಗಳು ಅಮೂಲ್ಯ ಎನ್ನುವುದನ್ನು ನಾವು ಅರ್ಥಮಾಡಿಕೊಳ್ಳಬೇಕಾಗಿದೆ. ಹಾಗಾದಾಗ ಮಾತ್ರ ಅದನ್ನು ಉಳಿಸಿಕೊಳ್ಳಲು ಪ್ರಯತ್ನಿಸುತ್ತೇವೆ.

ಮನಸ್ಸೇ ಕಾರಣ

ನಮ್ಮ ಸಂತೋಷಕ್ಕೂ, ನಮ್ಮ ದುಃಖಕ್ಕೂ ನಮ್ಮ ಮನಸ್ಸೇ ಕಾರಣ, ಇದನ್ನೇ ಭಗವದ್ಗೀತೆಯಲ್ಲಿ ಕೃಷ್ಣ ‘ಯಾರು ಬುದ್ಧಿಯ ಮೂಲಕ ಮನಸ್ಸನ್ನು ಪಳಗಿಸುತ್ತಾರೋ ಅವರಿಗೆ ಅವರ ಮನಸ್ಸೇ ಮಿತ್ರ; ಯಾರಿಗೆ ಬುದ್ಧಿಯ ಮೂಲಕ ಮನಸ್ಸನ್ನು ಪಳಗಿಸಲು ಸಾಧ್ಯ ಇಲ್ಲವೋ ಅವರಿಗೆ ಅವರ ಮನಸ್ಸೇ ಶತ್ರು’ ಎಂದಿರುವುದು. ಎಂದರೆ ನಮ್ಮ ಮಿತ್ರರು–ಶತ್ರುಗಳು ಹೊರಗಿಲ್ಲ, ನಮ್ಮ ಒಳಗೇ ಇದ್ದಾರೆ.

ಎಲ್ಲರೊಂದಿಗೂ ಸಂತೋಷವಾಗಿ ಇರುವುದು ಯಾರಿಗೆ ಬೇಡ, ಇದು ನಮ್ಮ ಬಯಕೆ ಆದರೂ ಇದನ್ನು ಹೊಂದಲು ನಮ್ಮ ಮನಸ್ಸೇ ಅಡ್ಡಿ ಆಗಿದೆ. ನಮ್ಮ ಮನಸ್ಸಿನಲ್ಲಿ ನಿರಂತರವಾಗಿ ಆಲೋಚನೆಗಳು ಬರುತ್ತಲೇ ಇರುತ್ತವೆ, ಇದು ಸಮುದ್ರದಲ್ಲಿ ಅಲೆಗಳು ಬಂದ ಹಾಗೆ. ವಿಜ್ಞಾನಿಗಳು ಹೇಳುವ ಪ್ರಕಾರ ಪ್ರತಿ ದಿನ ಒಬ್ಬ ವ್ಯಕ್ತಿಯಲ್ಲಿ ಸರಾಸರಿಯಾಗಿ 17 ಸಾವಿರದಿಂದ 69 ಸಾವಿರದ ವರೆಗೆ ಆಲೋಚನೆಗಳು ಬರುತ್ತವೆ! ಈ ಆಲೋಚನೆಗಳಲ್ಲಿ ಬಹುತೇಕ ಆಲೋಚನೆಗಳು ನಕಾರಾತ್ಮಕವಾಗಿ ಇರುತ್ತವೆ, ಸುಳ್ಳಾಗಿರುತ್ತವೆ; ಎಂದರೆ ಅದು ಕೇವಲ ನಮ್ಮ ಊಹೆ ಮಾತ್ರವೇ ಆಗಿರುತ್ತವೆ.

ನಕಾರಾತ್ಮಕವಾಗಿರುವುದನ್ನು ಕಚ್ಚಿ ಹಿಡಿಯುವ ನಮ್ಮ ಮನಸ್ಸಿನ ಸಹಜ ಗುಣದಿಂದಾಗಿ ಎಂದೋ ನಡೆದ ಘಟನೆ, ಯಾವಾಗಲೋ ಆಡಿದ ಮಾತು, ಮತ್ತೆಲ್ಲೋ ಘಟಿಸಿದ ಸಂಗತಿ ನಮಗಾದ ಸೋಲು, ಅಪಮಾನ, ಇನ್ಯಾರದ್ದೋ ತಿರಸ್ಕಾರ – ಹೀಗೆ ನಕಾರಾತ್ಮಕವಾದ ಘಟನೆ, ಮಾತು, ಸನ್ನಿವೇಶ, ತೀವ್ರ ಸಂವೇದನೆ ಉಳ್ಳ ಎಷ್ಟೋ ವಿಷಯಗಳು ಮನಸ್ಸಿನಲ್ಲಿ ಗಟ್ಟಿಯಾಗಿ ಉಳಿದುಬಿಡುತ್ತವೆ. ಹೀಗೆ ನಾವು ನಕಾರಾತ್ಮಕ ನೆನಪುಗಳ ಬಲೆಯಲ್ಲಿ ಸಿಕ್ಕಿ ಬೀಳುತ್ತೇವೆ.

ಮನಸ್ಸು ಯಾವಾಗಲೂ ಕಳೆದು ಹೋಗಿರುವುದನ್ನು, ಅದೂ ನಕಾರಾತ್ಮಕವಾಗಿರುವುದನ್ನು ಮೆಲುಕು ಹಾಕುತ್ತಿರುತ್ತದೆ. ಮುಗಿದು ಹೋಗಿರುವುದನ್ನು ಪಶ್ಚಾತ್ತಾಪ, ದುಃಖದಿಂದ, ಮರುಕದಿಂದ ನೆನಪಿಸಿಕೊಳ್ಳುತ್ತೇವೆ. ಹಾಗೆಯೇ ಭವಿಷ್ಯದ ಬಗ್ಗೆ ಭಯದಿಂದ, ಆತಂಕದಿಂದ, ಉದ್ವೇಗದಿಂದ ನಕಾರಾತ್ಮಕವಾಗಿ ಯೋಚಿಸುತ್ತದೆ.

ಏನು ಮಾಡಬೇಕು?

ಇದಕ್ಕಿರುವ ಏಕೈಕ ಪರಿಹಾರವೇ ನಾವು ನಮ್ಮ ಮನಸ್ಸನ್ನು ಅರ್ಥ ಮಾಡಿಕೊಳ್ಳುವ ಮೂಲಕ ನಮ್ಮನ್ನೇ ಅರ್ಥ ಮಾಡಿಕೊಳ್ಳುವುದು. ನಮ್ಮಲ್ಲಿ ಬರುತ್ತಿರುವ ಆಲೋಚನೆಗಳನ್ನು ಅವಲೋಕಿಸುವುದು. ನಮಗೆ ನಕಾರಾತ್ಮಕ ಆಲೋಚನೆ ಬಂದಿದ್ದು ಗೊತ್ತಾಗುತ್ತದೆ. ಆದರೆ ಅದನ್ನು ಹೇಗೆ ತಡೆಹಿಡಿಯುವುದು ಎನ್ನುವುದು ಗೊತ್ತಾಗುವುದಿಲ್ಲ. ಇದಕ್ಕಿರುವ ಏಕೈಕ ಸೂತ್ರ ‘ಮೈಂಡ್‌ಫುಲ್’ ಆಗಿರುವುದು. ಈಗ ‘ಮೈಂಡ್‌ಫುಲ್‌ನೆಸ್’ ಎನ್ನುವ ಪದವನ್ನು ನಾವೆಲ್ಲರೂ ಕೇಳಿದ್ದೇವೆ. ಇಲ್ಲಿನ ಪ್ರಮುಖ ಸಂಗತಿ ಏನೆಂದರೆ ವರ್ತಮಾನದಲ್ಲಿ ಬದುಕುವುದು. ಎಂದರೆ ನಾವು ಏನು ಮಾಡುತ್ತಿದ್ದೇವೋ ಅದರತ್ತಲೇ ಸಂಪೂರ್ಣ ಗಮನವನ್ನು ಹರಿಸುವುದು. ದೇಹ ಮತ್ತು ಮನಸ್ಸುಗಳೆರಡೂ, ಸದ್ಯ ಮಾಡುತ್ತಿರುವ ಕೆಲಸದಲ್ಲಿಯೇ ಮಗ್ನವಾಗುವುದು. ಒಮ್ಮೊಮ್ಮೆ ನಾವು ಏನೂ ಮಾಡುತ್ತಿರುವುದಿಲ್ಲ; ಹಾಗಿದ್ದಾಗಲೂ ನಾವು ನಮ್ಮೊಳಗೆ ಏನು ನಡೆಯುತ್ತದೆ ಎನ್ನುವುದರ ಬಗೆಗೆ ಪ್ರಜ್ಞೆಯನ್ನು ಹೊಂದಿರುವುದು.

‘ಮೈಂಡ್‌ಫುಲ್‌ನೆಸ್’ನ ಇನ್ನೊಂದು ಮುಖ್ಯ ಸಂಗತಿ ಏನೆಂದರೆ ಯಾವುದೇ ಪೂರ್ವಗ್ರಹವೂ ಇಲ್ಲದೇ ಎಲ್ಲವನ್ನೂ ನೋಡುವುದು. ಈಗ ನಮಗೆ ಏನಾಗುತ್ತಿದೆ ಎಂದರೆ ನಮ್ಮ ಒಡನಾಟದಲ್ಲಿ ಇರುವವರು, ಪರಸ್ಪರ ಸಂಬಂಧಗಳಲ್ಲಿ ನಮಗೆ ಬೇರೆಯವರ ಜೊತೆಗಿನ ಎಷ್ಟೋ ಘಟನೆಗಳು, ಮಾತುಗಳು ಇವೆಲ್ಲವೂ ನೆನಪಾಗುತ್ತದೆ. ಈ ಹಿಂದಿನ ಅನುಭವದಿಂದ ನಾವು ತಪ್ಪು–ಸರಿ ಎನ್ನುವ ತೀರ್ಮಾನಕ್ಕೆ ಬರುತ್ತೇವೆ. ಇವರು ಒಳ್ಳೆಯವರು, ಕೆಟ್ಟವರು, ಸ್ವಾರ್ಥಿಗಳು – ಹೀಗೆ ತೀರ್ಮಾನಕ್ಕೆ ಬಂದು ಯೋಚಿಸುವುದು, ವರ್ತಿಸುವುದು.

‘ಮೈಂಡ್ ಫುಲ್’ ಆಗಿರುವುದನ್ನು ಅಭ್ಯಾಸ ಮಾಡಬೇಕು. ಮನಸ್ಸನ್ನು ಉತ್ತಮ ಅಭ್ಯಾಸಗಳಿಂದ ಪಳಗಿಸಬೇಕು. ಊಟ ಮಾಡುವಾಗ ಸಂಪೂರ್ಣ ಗಮನವನ್ನು ಅದರತ್ತಲೇ ಕೊಡುವುದು, ಮಕ್ಕಳ ಜೊತೆ ಮಾತನಾಡುವಾಗ, ಆಟ ಆಡುವಾಗ, ಏನಾದರೂ ಹವ್ಯಾಸಗಳಲ್ಲಿ ತೊಡಗಿಕೊಂಡಾಗ – ಹೀಗೆ ಯಾವುದೂ ಆಗಬಹುದು – ಒಟ್ಟಿನಲ್ಲಿ ನಮ್ಮ ದೇಹ ಮತ್ತು ಮನಸ್ಸುಗಳು ಒಂದೆಡೆ ಇರಬೇಕು; ತತ್ಪರತೆಯಿಂದ ಕಾರ್ಯನಿರ್ವಹಿಸಬೇಕು. ಆಗ ಸಂತೋಷ ಎನ್ನುವುದು ಸಹಜವಾಗುತ್ತದೆ. ❖

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ — ಗಣಿತ
ಪಿಯುಸಿ ಪರೀಕ್ಷೆ ದಿಕ್ಸೂಚಿ — MATHS

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

ಅಧ್ಯಾಯ–5 ಸಮಾಂತರ ಶ್ರೇಢಿ

ಅಭ್ಯಾಸ 5.1

2) ಮೊದಲನೆ ಪದ **a**, ಸಾಮಾನ್ಯ ವ್ಯತ್ಯಾಸ **d** ಈ ಕೆಳಗಿನಂತಿರುವ ಸಮಾಂತರ ಶ್ರೇಢಿಯ ಮೊದಲ ನಾಲ್ಕು ಪದಗಳನ್ನು ಕಂಡುಹಿಡಿಯಿರಿ.

i) $a = 10,\ d = 10$ ii) $a = -2,\ d = 0$
iii) $a = -1,\ d = ½$

ಪರಿಹಾರ:
(i) $a = 10, d = 10$
ಸಮಾಂತರ ಶ್ರೇಢಿಯು ಕೆಳಗಿನ ರೂಪದಲ್ಲಿದೆ
$a,\ a+d,\ a+2d,\ a+3d, \ldots$
$10,\ 10+10,\ 10+2(10),\ 10+3(10), \ldots$
$10, 20, 30, 40, \ldots$

ಪರಿಹಾರ: (ii) $a = -2,\ d = 0$
ಸಮಾಂತರ ಶ್ರೇಢಿಯು ಕೆಳಗಿನ ರೂಪದಲ್ಲಿದೆ
$a,\ a+d,\ a+2d,\ a+3d, \ldots$
$-2,\ -2+0,\ -2+0,\ -2+0, \ldots$
$-2, -2, -2, -2 \ldots$

ಪರಿಹಾರ: (iii) $a = -1,\ d = \frac{1}{2}$
ಸಮಾಂತರ ಶ್ರೇಢಿಯು ಕೆಳಗಿನ ರೂಪದಲ್ಲಿದೆ
$a,\ a+d,\ a+2d,\ a+3d, \ldots$
$-1, -1+\frac{1}{2}, -1+2\left(\frac{1}{2}\right), -1+3\left(\frac{1}{2}\right), \ldots$
$-1, -\frac{1}{2}, -1+\frac{1}{4}, -1+\frac{3}{2} \ldots$
$\Rightarrow -1, -\frac{1}{2}, -\frac{3}{4}, \frac{1}{2}, \ldots$

3) ಇವುಗಳಲ್ಲಿ ಯಾವುವು ಸಮಾಂತರ ಶ್ರೇಢಿಗಳಾಗಿವೆ? ಸಮಾಂತರ ಶ್ರೇಢಿಗಳಾಗಿದ್ದಲ್ಲಿ ಸಾಮಾನ್ಯ ವ್ಯತ್ಯಾಸ ಕಂಡುಹಿಡಿದು ಅದರ ಮುಂದಿನ ಮೂರು ಪದಗಳನ್ನು ಬರೆಯಿರಿ

(i) $2, 4, 8, 16, \ldots$
(ii) $2,\ 5/2,\ 3,\ 7/2 \ldots$
(iii) $-1.2, -3.2, -5.2, -7.2, \ldots$
(iv) $-10, -6, -2, 2, \ldots$
(v) $3,\ 3+\sqrt{2},\ 3+2\sqrt{2},\ 3+3\sqrt{2}, \ldots$
(vi) $0.2, 0.22, 0.222, 0.2222, \ldots$
(vii) $0, -4, -8, -12, \ldots$
(viii) $-\frac{1}{2}, -\frac{1}{2}, -\frac{1}{2}, -\frac{1}{2} \ldots$
(ix) $1, 3, 9, 27,$
(x) $a, 2a, 3a, 4a, \ldots$
(xi) $a, a^2, a^3, a^4, \ldots$
(xii) $\sqrt{2}, \sqrt{8}, \sqrt{18}, \sqrt{32} \ldots$
(xiii) $\sqrt{3}, \sqrt{6}, \sqrt{9}, \sqrt{12} \ldots$
(xiv) $1^2, 3^2, 5^2, 7^2 \ldots$
(xv) $1^2, 5^2, 7^2, 73, \ldots$

ಪರಿಹಾರ: (i) $2, 4, 8, 16, \ldots$
$a_2 - a_1 = 4 - 2 = 2 \Rightarrow a_3 - a_2 = 8 - 4 = 4$
$a_4 - a_3 = 16 - 8 = 8$
ಇಲ್ಲಿ $a_2 - a_1 \neq a_3 - a_2$ ಆದ್ದರಿಂದ ಸಮಾಂತರ ಶ್ರೇಢಿಯನ್ನುಂಟು ಮಾಡಲಾರದು

(ii) 2, 5/2, 3, 7/2 …
ಪರಿಹಾರ:
$2, \frac{5}{2}, 3, \frac{7}{2}, \ldots$
$a_2 - a_1 = \frac{5}{2} - 2 = \frac{1}{2}$
$a_3 - a_2 = 3 - \frac{5}{2} = \frac{1}{2}$
$a_4 - a_3 = \frac{7}{2} - 3 = \frac{1}{2}$
ಪ್ರತಿಯೊಂದು ಹಂತದಲ್ಲಿಯೂ $a_{n+1} - a_n$ ಒಂದೇ ಆಗಿದೆ ಮೇಲೆ ತಿಳಿಸಿದ ಸಂಖ್ಯೆಗಳು ಸಾಮಾನ್ಯ ವ್ಯತ್ಯಾಸ $d = \frac{1}{2}$ ಹೊಂದಿದ್ದು ಸಮಾಂತರ ಶ್ರೇಢಿಗೆ ಸೇರಿವೆ.
ಮುಂದಿನ ಮೂರು ಪದಗಳು
$\frac{7}{2} + \frac{1}{2} = 4$
$4 + \frac{1}{2} = \frac{9}{2}$
$\frac{9}{2} + \frac{1}{2} = 5$

(iii) – 1.2, – 3.2, – 5.2, – 7.2, …
ಪರಿಹಾರ:
$-1.2, -3.2, -5.2, -7.2, \ldots$
$a_2 - a_1 = -3.2 - (-1.2) = -3.2 + 1.2 = 2.0$
$a_3 - a_2 = 5.2 - (-3.2) = -5.2 + 3.2 = 2.0$
$a_4 - a_3 = -7.2 - (-5.2) = -7.2 + 5.2 = 2.0$
ಪ್ರತಿಯೊಂದು ಹಂತದಲ್ಲಿಯೂ $a_{n+1} - a_n$ ಒಂದೇ ಆಗಿದೆ ಮೇಲೆ ತಿಳಿಸಿದ ಸಂಖ್ಯೆಗಳು ಸಾಮಾನ್ಯ ವ್ಯತ್ಯಾಸ $d = -2.0$ ಹೊಂದಿದ್ದು ಸಮಾಂತರ ಶ್ರೇಢಿಗೆ ಸೇರಿದೆ.
ಮುಂದಿನ ಮೂರು ಪದಗಳು
$-7.2 + (-2.0) = -9.2$
$-9.2 + (-2.0) = -11.2$
$-11.2 + (-2.0) = -13.2$

(iv) – 10, – 6, – 2, 2, …
ಪರಿಹಾರ:
$-10, -6, -2, 2, \ldots$
$a_2 - a_1 = -6 - (-10) = -6 + 10 = 4$
$a_3 - a_2 = -2 - (-6) = -2 + 6 = 4$
$a_4 - a_3 = 2 - (-2) = 2 + 2 = 4$
ಪ್ರತಿಯೊಂದು ಹಂತದಲ್ಲಿಯೂ $a_{n+1} - a_n$ ಒಂದೇ ಆಗಿದೆ ಮೇಲೆ ತಿಳಿಸಿದ ಸಂಖ್ಯೆಗಳು ಸಾಮಾನ್ಯ ವ್ಯತ್ಯಾಸ $d = 4$ ಹೊಂದಿದ್ದು ಸಮಾಂತರ ಶ್ರೇಢಿಗೆ ಸೇರಿದೆ.
ಮುಂದಿನ ಮೂರು ಪದಗಳು
$2 + 4 = 6$
$6 + 4 = 10$
$10 + 4 = 14$

(ಮುಂದುವರಿಯುವುದು)

Inverse trigonometric functions

23. Prove that
Soln:- (……Contd|)

$$\sin^{-1}\frac{3}{5} + \cos^{-1}\frac{12}{13} = \cos^{-1}\frac{33}{65}$$

From the above fig; we find that

$\therefore \cos(\alpha+\beta) = \frac{4}{5}$ and $\sin\beta = \frac{5}{13}$

Now consider,

$$\cos(\alpha+\beta) = \cos\alpha\cos\beta - \sin\alpha\sin\beta$$
$$= \frac{4}{5}\cdot\frac{12}{13} - \frac{3}{5}\cdot\frac{5}{13}$$
$$= \frac{48}{65} - \frac{15}{65} = \frac{33}{65}$$
$$\therefore \alpha+\beta = \cos^{-1}\frac{33}{65}$$
$$\Rightarrow \sin^{-1}\frac{3}{5} + \cos^{-1}\frac{12}{13} = \cos^{-1}\frac{33}{65}$$

24. If $\tan^{-1}x + \tan^{-1}y + \tan^{-1}z = \pi$, prove that $x+y+z = xyz$.

Soln:- **We know that**

$$\tan^{-1}x + \tan^{-1}y + \tan^{-1}z = \tan^{-1}\frac{x+y+z-xyz}{1-(xy+yz+zx)}$$

And also, $\tan^{-1}\left\{\frac{x+y+z-xyz}{1-(xy+yz+zx)}\right\} = \pi$

$$\Rightarrow \frac{x+y+z-xyz}{1-(xy+yz+zx)} = \tan\pi = 0$$
$$\Rightarrow x+y+z-xyz = 0$$
$$\Rightarrow x+y+z = xyz$$

25. Prove that

$$\tan^{-1}\frac{a-b}{1+ab} + \tan^{-1}\frac{b-c}{1+bc} + \tan^{-1}\frac{c-a}{1+ca} = 0.$$

Soln: – Consider,

$$\tan^{-1}\frac{a-b}{1+ab} + \tan^{-1}\frac{b-c}{1+bc} + \tan^{-1}\frac{c-a}{1+ca}$$
$$\Rightarrow (\tan^{-1}a - \tan^{-1}b) + (\tan^{-1}b - \tan^{-1}c) + (\tan^{-1}c - \tan^{-1}a)$$
$$\Rightarrow 0 = \text{RHS}$$

26. If $\cos^{-1}x + \cos^{-1}y + \cos^{-1}z = \pi$, prove that $x^2+y^2+z^2+2xyz = 1$

Soln: – Let $\cos^{-1}z = \theta$, so that $\cos\theta = z$

$$\Rightarrow \cos^{-1}x + \cos^{-1}y = \pi - \cos^{-1}z$$

We also know that,

$$\cos^{-1}\left\{xy - \sqrt{1-x^2}\sqrt{1-y^2}\right\} = \pi - \theta$$
$$\therefore xy - \sqrt{1-x^2}\sqrt{1-y^2} = \cos(\pi-\theta)$$
$$\Rightarrow xy - \sqrt{1-x^2}\sqrt{1-y^2} = -\cos\theta = -z$$
$$\therefore xy + z = -\sqrt{1-x^2}\sqrt{1-y^2}$$

Squaring both sides, we get

$$(xy+z)^2 = (1-x^2)^2(1-y^2)^2$$
$$x^2y^2 + 2xyz + z^2 = 1 - x^2 - y^2 + x^2y^2$$
$$\therefore x^2 + y^2 + z^2 + 2xyz = 1$$

27. Prove that:

$$\sin^{-1}x = \cos^{-1}\sqrt{1-x^2} = \tan^{-1}\frac{x}{\sqrt{1-x^2}} = \sec^{-1}\frac{1}{\sqrt{1-x^2}} = \cot^{-1}\frac{\sqrt{1-x^2}}{x} = \operatorname{cosec}^{-1}\frac{1}{x}$$

Proof: (i) Let $\sin^{-1}x = \theta$

$\Rightarrow \sin\theta = x$ where

$\theta \in \left[-\frac{\pi}{2}, \frac{\pi}{2}\right]$ and $x \in [-1, 1]$

$$\therefore \cos\theta = \sqrt{1-\sin^2\theta} = \sqrt{1-x^2};$$
$$\tan\theta = \frac{\sin\theta}{\cos\theta} = \frac{x}{\sqrt{1-x^2}};$$
$$\operatorname{cosec}\theta = \frac{1}{\sin\theta} = \frac{1}{x};$$
$$\sec\theta = \frac{1}{\cos\theta} = \frac{1}{\sqrt{1-x^2}};$$
$$\cot\theta = \frac{1}{\tan\theta} = \frac{\sqrt{1-x^2}}{x}$$
$$\Rightarrow \theta = \cos^{-1}\sqrt{1-x^2};\quad \theta = \sec^{-1}\frac{1}{\sqrt{1-x^2}}$$
$$\theta = \tan^{-1}\frac{x}{\sqrt{1-x^2}};\quad \theta = \cot^{-1}\frac{\sqrt{1-x^2}}{x}$$
$$\theta = \operatorname{cosec}^{-1}\frac{1}{x};$$

Thus, $\sin^{-1}x = \cos^{-1}\sqrt{1-x^2} = \tan^{-1}\frac{x}{\sqrt{1-x^2}}$

$$\Rightarrow \operatorname{cosec}^{-1}\frac{1}{x} = \sec^{-1}\frac{1}{\sqrt{1-x^2}} = \cot^{-1}\frac{\sqrt{1-x^2}}{x}$$

(Each $= \theta$); $x \neq 0$ and $x \neq \pm 1$.

28. Prove that : $\tan^{-1}x + \tan^{-1}y = \tan^{-1}\frac{x+y}{1-xy}$;

$(|x| < 1, |y| < 1)$ [i.e., $xy < 1$]

(Contd.....)

‘ಮಸಣ ಕಾರ್ಮಿಕರಿಗೆ ನೀಡಲು ಸರ್ಕಾರದಲ್ಲಿ ಹಣವಿಲ್ಲ’

ಪ್ರಜಾವಾಣಿ ವಾರ್ತೆ

ಶೋಭಾ ಕರಂದ್ಲಾಜೆ

ಗೌರಿಬಿದನೂರು (ಚಿಕ್ಕಬಳ್ಳಾಪುರ): ರಾಜ್ಯ ಸರ್ಕಾರದ ಖಜಾನೆ ಖಾಲಿ ಆಗಿದ್ದು ಸ್ಮಶಾನ ಕಾರ್ಮಿಕರಿಗೂ ಸಂಬಳ ನೀಡಲು ಸರ್ಕಾರದ ಬಳಿ ಹಣವಿಲ್ಲ ಎಂದು ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಟೀಕಿಸಿದ್ದಾರೆ.

ತಾಲ್ಲೂಕಿನ ಮುದುಗೆರೆಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ವೇತನಕ್ಕಾಗಿ ಅಂಗನವಾಡಿ ಹಾಗೂ ಆಶಾ ಕಾರ್ಯಕರ್ತೆಯರು ಧರಣಿ ನಡೆಸುವ ದುಸ್ಥಿತಿ ಬಂದಿದೆ ಎಂದರು.

ಮೂರು ತಿಂಗಳಿನಿಂದ ಸಂಬಳವಾಗಿಲ್ಲ. ಜೀವನ ನಿರ್ವಹಣೆ ಕಷ್ಟವಾಗಿದೆ ಎಂದು ಸ್ಮಶಾನದ ಸಿಬ್ಬಂದಿ ಅಳಲು ತೋಡಿಕೊಂಡರು. ಆದರೆ, ಸರ್ಕಾರ ನಡೆಸುವ ಒಬ್ಬರು ಕುರ್ಚಿ ಉಳಿಸಿಕೊಳ್ಳಲು ಹೋರಾಟ ನಡೆಸಿದ್ದರೆ, ಮತ್ತೊಬ್ಬರು ಮುಖ್ಯಮಂತ್ರಿಯಾಗಲು ಹಣಾಹಣಿ ನಡೆಸಿದ್ದಾರೆ ಎಂದು ಟೀಕಿಸಿದರು.

ಬೆಂಗಳೂರಿನಲ್ಲಿ ಸುರಂಗ ರಸ್ತೆ ನಿರ್ಮಾಣಕ್ಕೆ ಸಂಬಂಧಪಟ್ಟಂತೆ ಭೂವಿಜ್ಞಾನಿಗಳು ಮತ್ತು ತಜ್ಞ ಎಂಜಿನಿಯರ್‌ಗಳ ಮೂಲಕ ಕಾರ್ಯಸಾಧ್ಯತೆ ಅಧ್ಯಯನ ಮಾಡಿಸಬೇಕು. ಸಾಧಕ ಬಾಧಕಗಳ ಬಗ್ಗೆ ವರದಿ ತಯಾರಿಸಿದ ನಂತರ ಈ ಬಗ್ಗೆ ಯೋಚನೆ ಮಾಡಬಹುದು ಎಂದು ತಿಳಿಸಿದರು.

ಕೂಲಿಗೆ ಬಂದು ವೀಣೆಗೆ ಜೀವ ತುಂಬಿದರು!

ರಾಜ್ಯೋತ್ಸವ ಪ್ರಶಸ್ತಿ ಸ್ವೀಕರಿಸಲು ಬಂದಾಗಲೇ ಆಸ್ಪತ್ರೆಗೆ ದಾಖಲು

• ನಟರಾಜ ನಾಗಸಂದ್ರ

ದೊಡ್ಡಬಳ್ಳಾಪುರ (ಬೆಂಗಳೂರು ಗ್ರಾಮಾಂತರ): ವೀಣೆ ತಯಾರಿಸುವ ರಾಜ್ಯದ ಏಕೈಕ ಗ್ರಾಮ ತಾಲ್ಲೂಕಿನ ಸಿಂಪಾಡಿಪುರ. ಪೆನ್ನ ಓಬಳಯ್ಯ ಜನಿಸಿದ್ದು ಇಲ್ಲಿನ ಕೃಷಿ ಕುಟುಂಬದಲ್ಲಿ. ಬೇಸಾಯ ಅವರ ಕುಲ ಕಸುಬು. ಆದರೆ, 40 ವರ್ಷದ ಹಿಂದೆ ಕೂಲಿ ಮಾಡಲು ಹೋಗಿ ವೀಣೆ ತಯಾರಿಸುವ ವಿದ್ಯೆಯನ್ನು ಕರಗತ ಮಾಡಿಕೊಂಡಿದ್ದರು.

ಕೂಲಿ ಮಾಡಲು ಬೆಂಗಳೂರಿಗೆ ಹೋಗಿದ್ದ ಅವರು ಆಕಸ್ಮಿಕವಾಗಿ ವೀಣೆ ತಯಾರಿಸುವ ಮನೆಯಕೆಲಸಕ್ಕೆ ಸೇರಿದ್ದರು. ವೀಣೆ ತಯಾರಿಕೆಯನ್ನು ಕುತೂಹಲದಿಂದ ಗಮನಿಸುತ್ತಿದ್ದ ಓಬಳಯ್ಯ ಅವರ ಆಸಕ್ತಿ ಗಮನಿಸಿದ ಆ ಕುಟುಂಬದವರು ಇವರಿಗೂ ಈ ಕಲೆಯನ್ನು ಧಾರೆ ಎರೆದರು.

ಪ್ರಸಕ್ತ ಸಾಲಿನ ರಾಜ್ಯೋತ್ಸವ ಪ್ರಶಸ್ತಿಗೆ ಭಾಜನರಾಗಿದ್ದ ವೀಣೆ ತಯಾರಕ ಪೆನ್ನ ಓಬಳಯ್ಯ ಅವರ ನಿಧನ ಅತೀವ ದುಃಖ ತಂದಿದೆ. ಅಗಲಿಕೆಯಿಂದ ನಾಡು ಬಡವಾಗಿದೆ

ಸಿದ್ದರಾಮಯ್ಯ, ಮುಖ್ಯಮಂತ್ರಿ

ಐದಾರು ವರ್ಷ ಅಲ್ಲಿಯೇ ವೀಣೆ ತಯಾರಿಕೆ ಕರಗತ ಮಾಡಿಕೊಂಡ ಅವರು ಬಳಿಕ ಸಿಂಪಾಡಿಪುರಕ್ಕೆ ಹಿಂದಿರುಗಿ ವೀಣೆ ತಯಾರಿಕೆಯಲ್ಲಿ ತೊಡಗಿದ್ದರು.

ವೀಣೆ ತಯಾರಿಕೆ ಕಲಿಸಿ ಕೊಟ್ಟ ಪೆನ್ನ ಓಬಳಯ್ಯ (ಸಂಗ್ರಹ ಚಿತ್ರ)

ಯಾವುದೇ ಜಾತಿ, ಬೇಧ ಇಲ್ಲದೆ ಎಲ್ಲರಿಗೂ ವೀಣೆ ತಯಾರಿಕೆ ಕಲೆಯನ್ನು ಧಾರೆ ಎರೆದಿದ್ದಾರೆ. ಸದ್ಯ ಸಿಂಪಾಡಿಪುರದಲ್ಲಿ 40 ಕುಟುಂಬಗಳು ವೀಣೆ ತಯಾರಿಕೆಯನ್ನು ಕಸುಬು ಮಾಡಿಕೊಂಡಿವೆ. ವೀಣೆ ತಯಾರಿಸಿ ಬಣ್ಣ ಬಳಿದು, ಚಿತ್ತಾರ ಬಿಡಿಸಿ ಬೆಂಗಳೂರಿನ ಸಂಗೀತ ಪರಿಕರ ಅಂಗಡಿಗೆ ಮಾರಾಟ ಮಾಡುತ್ತಾರೆ. ಅಲ್ಲಿ ತಂತಿ ಕಟ್ಟಿ ನಾದ ಹೊರಡಿಸುತ್ತಾರೆ. ನಂತರ ವಿವಿಧ ರಾಜ್ಯ ಹಾಗೂ ವಿದೇಶಕ್ಕೂ ರಫ್ತು ಆಗುತ್ತದೆ.

70 ವರ್ಷಗಳಿಂದ ವೀಣೆ ತಯಾರಿಸುತ್ತಾ ಬಂದಿರುವ ಸಿಂಪಾಡಿಪುರ ವೀಣೆ ತಯಾರಿಸುತ್ತಿರುವ ರಾಜ್ಯದ ಏಕಮಾತ್ರ ಗ್ರಾಮ. ಇವರ ನಂತರ ಇಂದಿನ ತಲೆಮಾರಿನ ಯುವಕರು ಸಹ ವೀಣೆ ತಯಾರಿಕೆಯನ್ನೇ ವೃತ್ತಿಯಾಗಿಸಿಕೊಂಡು ಜೀವನ ರೂಪಿಸಿಕೊಂಡಿದ್ದಾರೆ. ‘ಜೀವನಕ್ಕೆ ದಾರಿಯಾಗುತ್ತದೆ ಕಲಿಯಿರಿ’ ಎಂದು ತಾವು ಕಲಿತ ವೀಣೆ ತಯಾರಿಕೆ ವಿದ್ಯೆಯನ್ನು ಊರಿನ ಜನಕ್ಕೆ ಹೇಳಿಕೊಟ್ಟ ಪೆನ್ನ ಓಬಳಯ್ಯ ಅವರನ್ನು ಗ್ರಾಮದ ಜನರು ಸದಾ ಸ್ಮರಿಸುತ್ತಾರೆ.

ಪೆನ್ನ ಓಬಳಯ್ಯ ಇನ್ನಿಲ್ಲ

ದೊಡ್ಡಬಳ್ಳಾಪುರ(ಬೆಂಗಳೂರು ಗ್ರಾಮಾಂತರ): ಪ್ರಸಕ್ತ ಸಾಲಿನ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ವೀಣೆ ತಯಾರಕ, ಸಿಂಪಾಡಿಪುರದ ಪೆನ್ನ ಓಬಳಯ್ಯ(105) ಭಾನುವಾರ ತಡರಾತ್ರಿ ವಯೋಸಹಜ ಅನಾರೋಗ್ಯದಿಂದ ನಿಧನರಾದರು.

ಮೃತರಿಗೆ ಮೂರು ಪುತ್ರರು, ಇಬ್ಬರು ಪುತ್ರಿಯರು ಇದ್ದಾರೆ. ಸೋಮವಾರ ಮಧ್ಯಾಹ್ನ 12 ಗಂಟೆಗೆ ಸಿಂಪಾಡಿಪುರ ಗ್ರಾಮದ ತೋಟದಲ್ಲಿ ಅಂತ್ಯಕ್ರಿಯೆ ನಡೆಯಿತು.

ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ನ.1ರಂದು ನಡೆದ ರಾಜ್ಯೋತ್ಸವ ಪ್ರಶಸ್ತಿ ಪ್ರದಾನ ಸಮಾರಂಭಕ್ಕೆ ಪ್ರಶಸ್ತಿ ಸ್ವೀಕರಿಸಲು ತೆರಳಿದ್ದ ಓಬಳಯ್ಯ ಅವರಿಗೆ ಕಲಾಕ್ಷೇತ್ರದ ಒಳಗೆ ಹೋಗುವಾಗ ಉಸಿರಾಟದ ಸಮಸ್ಯೆ ಕಾಣಿಸಿಕೊಂಡಿತ್ತು. ಅಸ್ವಸ್ಥರಾದ ಅವರಿಗೆ ವೇದಿಕೆ ಹತ್ತಲು ಆಗಲಿಲ್ಲ. ಕೂಡಲೇ ಆಂಬುಲೆನ್ಸ್‌ನಲ್ಲಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ‘ಓಬಳಯ್ಯ ಅವರ ಪರವಾಗಿ ಕುಟುಂಬದ ಸದಸ್ಯರು ಪ್ರಶಸ್ತಿ ಸ್ವೀಕರಿಸಿದ್ದರು’ ಎಂದು ಸಂಬಂಧಿ ರಘು ತಿಳಿಸಿದರು.

ಆರ್‌ಎಸ್‌ಎಸ್ ಮುಖ್ಯಸ್ಥರಿಗೆ ಅತಿ ಭದ್ರತೆ ಏಕೆ: ಖರ್ಗೆ ಪ್ರಶ್ನೆ

ಪ್ರಜಾವಾಣಿ ವಾರ್ತೆ

ಪ್ರಿಯಾಂಕ್ ಖರ್ಗೆ

ಬೆಂಗಳೂರು: ‘ಈ ದೇಶದಲ್ಲಿ ಕಾರ್ಯನಿರ್ವಹಿಸುತ್ತಿರುವ ಸರ್ಕಾರೇತರ ಸಂಸ್ಥೆಗಳೆಲ್ಲವೂ (ಎನ್‌ಜಿಒ) ನೋಂದಣಿ ಮಾಡಿಸಿಕೊಂಡಿವೆ. ಪ್ರತಿವರ್ಷ ಆದಾಯ ತೆರಿಗೆಯ ಮಾಹಿತಿ ನೀಡುತ್ತವೆ. ತಮ್ಮ ಆದಾಯ ಅಥವಾ ದೇಣಿಗೆಯ ಮಾಹಿತಿಗಳನ್ನು ಸರ್ಕಾರಕ್ಕೆ ತಿಳಿಸುತ್ತವೆ. ಆರ್‌ಎಸ್‌ಎಸ್ ಎನ್‌ಜಿಒ ಆಗಿದ್ದರೆ ಈ ಪ್ರಕ್ರಿಯೆ ನಡೆಸದೆ ಇರುವುದೇಕೆ’ ಎಂದು ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ಪ್ರಶ್ನಿಸಿದ್ದಾರೆ.

ತಮ್ಮ ‘ಎಕ್ಸ್’ ಖಾತೆಯಲ್ಲಿ ಪೋಸ್ಟ್ ಮಾಡಿರುವ ಪ್ರಿಯಾಂಕ್, ‘ಒಂದು ಎನ್‌ಜಿಒ ಮುಖ್ಯಸ್ಥರಿಗೆ ಉನ್ನತ ಮಟ್ಟದ ಶಿಷ್ಟಾಚಾರ ವ್ಯವಸ್ಥೆಯಡಿ ಭದ್ರತೆ ನೀಡುತ್ತಿರುವುದೇಕೆ? ಒಂದೇ ಒಂದು ರೂಪಾಯಿ ತೆರಿಗೆ ನೀಡದ ಯಾಕಸ್ತಿಗೆ ಎನ್‌ಜಿಒ ಮುಖ್ಯಸ್ಥರಿಗೆ ಸಾರ್ವಜನಿಕರ ತೆರಿಗೆ ಹಣ ಪೋಲು ಮಾಡುವಂಥ ಅನಿವಾರ್ಯ ಏನಿದೆ? ಇವರ ಕೈಯಲ್ಲೇ ದೊಣ್ಣೆ, ಬಡಿಗೆಗಳು ಇರುವಾಗ ಹೆಚ್ಚಿನ ಭದ್ರತೆ ಯಾವ ಕಾರಣಕ್ಕೆ?’ ಎಂದು ಕೇಳಿದ್ದಾರೆ.

‘ನಾವು ಆರ್‌ಎಸ್‌ಎಸ್‌ನಿಂದ ಅಕೌಂಟಬಿಲಿಟಿ (ಉತ್ತರದಾಯಿತ್ವ) ಕೇಳಿದರೆ ಮೈ ಮೇಲೆ ಚೇಳು ಬಿದ್ದವರಂತೆ ಆಡುವುದೇಕೆ’ ಎಂದು ವಾಗ್ದಾಳಿ ನಡೆಸಿದ್ದಾರೆ.

‘ಈ ದೇಶದ ಬಹುಸಂಖ್ಯಾತರು ಆರ್‌ಎಸ್‌ಎಸ್ ಅನ್ನು ಅಪ್ಪಿಕೊಂಡೂ ಇಲ್ಲ, ಒಪ್ಪಿಕೊಂಡೂ ಇಲ್ಲ. ಇವರು ಈ ದೇಶಕ್ಕಿಂತ, ಸಂವಿಧಾನಕ್ಕಿಂತ, ಕಾನೂನಿಗಿಂತ ದೊಡ್ಡವರೂ ಅಲ್ಲ. ಅತೀತರೂ ಅಲ್ಲ’ ಎಂದಿದ್ದಾರೆ.

ಕರ್ನಾಟಕ ಸರ್ಕಾರ
ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆ
ಆಯುಕ್ತರವರ ಕಛೇರಿ, ಕೆ.ಆರ್. ವೃತ್ತ, ಬೆಂಗಳೂರು–560001,
ದೂರವಾಣಿ ಸಂಖ್ಯೆ: 91–080–22212408, ಫ್ಯಾಕ್ಸ್ ನಂ.: 91–080–22277528
ಸಂಖ್ಯೆ:SSLR:E-1944440/2025-26 ದಿನಾಂಕ: 03.11.2025

ಇ–ಟೆಂಡರ್ ಪ್ರಕಟಣೆ

ವಿಷಯ: ಭೂಮಾಪನ ಇಲಾಖೆಯಲ್ಲಿ ಅಧುನಿಕ ತಂತ್ರಜ್ಞಾನ ಆಧಾರಿತ ಭೂಮಾಪನ ಉಪಕರಣವಾದ Rovers ಗಳನ್ನು (500 Nos) ಖರೀದಿಸುವ ಸಂಬಂಧ ಟೆಂಡರ್ ಆಹ್ವಾನಿಸುತ್ತಿರುವ ಬಗ್ಗೆ.

ಭೂಮಾಪನ ಇಲಾಖೆಯಲ್ಲಿ ಅಧುನಿಕ ತಂತ್ರಜ್ಞಾನ ಆಧಾರಿತ ಭೂಮಾಪನ ಉಪಕರಣವಾದ Rovers ಗಳನ್ನು (500 Nos) ಖರೀದಿಸುವ ಸಂಬಂಧ ಅರ್ಹ ಪ್ರತಿಷ್ಠಿತ ಸಂಸ್ಥೆಗಳಿಂದ ಟೆಂಡರನ್ನು ಆಹ್ವಾನಿಸಲಾಗಿದೆ.

ಇಲಾಖೆಯು 500 Rover ಒದಗಿಸಲು ಆಸಕ್ತಿಹೊಂದಿರುವಂತಹ ಸಂಸ್ಥೆಗಳಿಂದ ಆರ್ ಎಫ್ ಪಿ ಯಲ್ಲಿ ಒಳಗೊಂಡಿರುವ ನಿಯಮಗಳು ಮತ್ತು ಷರತ್ತುಗಳ ಅನ್ವಯ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದು, ದಿನಾಂಕ: **03.11.2025** ರಿಂದ **http://www.eproc.karnataka.gov.in** ರಲ್ಲಿ ಲಭ್ಯವಿರುತ್ತದೆ. ಆಸಕ್ತ ಸಂಸ್ಥೆಗಳು ಇ–ಆಡಳಿತ ಕೇಂದ್ರದಲ್ಲಿ ನೋಂದಾಯಿಸಿಕೊಂಡು ಬಿಡ್ಡಿಂಗ್ ಪ್ರಕ್ರಿಯೆಯಲ್ಲಿ ಭಾಗವಹಿಸಬಹುದಾಗಿದೆ. ಪ್ರಸ್ತಾವನೆಯನ್ನು ಸಲ್ಲಿಸಲು ಕೊನೆಯ ದಿನಾಂಕ: **04.12.2025** ಆಗಿರುತ್ತದೆ.

ಸಂಪರ್ಕಿಸಬೇಕಾದ ಅಧಿಕಾರಿ:
ಕೆ.ಜಯಪ್ರಕಾಶ ಬಿ.ಇ. ಕೆಜಿಎಸ್, ಅಪರ ನಿರ್ದೇಶಕರು,
ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆ, ಬೆಂಗಳೂರು–560001.
ದೂರವಾಣಿ ಸಂಖ್ಯೆ: 080–22214715

ಸಹಿ/– ಕೆ.ಜಯಪ್ರಕಾಶ
ಅಪರ ನಿರ್ದೇಶಕರು,
ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆ, ಬೆಂಗಳೂರು
ವಾಸಾಸಂಇ/ವಾ.ಪ್ರ/3553/ಎಸ್‌ಎಸ್‌ಸಿ/2025–26

ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು
ನ್ಯಾಕ್ ಎ' ಮಾನ್ಯತೆ
ಆಸ್ತಿ ಅಧಿಕಾರಿಗಳ ಕಛೇರಿ, ನಾಯಕ್ ಭವನ, ಗಾಂಧಿ ಕೃಷಿ ವಿಜ್ಞಾನ ಕೇಂದ್ರ
ಸಂಖ್ಯೆ.ಇ.ಒ/ಎಸ್.ಪಿ.ಒ/ಕೆಪಿಪಿಪಿ/10/2025–26 ದಿನಾಂಕ: 28–10–2025

ಟೆಂಡರ್ ಪ್ರಕಟಣೆ (ಕೆಪಿಪಿ ಪೋರ್ಟಲ್ ಮೂಲಕ)

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯವು ಜಿಕೆವಿಕೆ, ಬೆಂಗಳೂರು, ಅವಶ್ಯವಿರುವ ಉಪಕರಣಗಳು ಸರಬರಾಜು ಕೆ.ಜಿ–1 ಮತ್ತು ಕೆ.ಜಿ–2, ಟೆಂಡರ್ ನಿಬಂಧನೆಗೊಳಪಟ್ಟಂತೆ ಟೆಂಡರನ್ನು ಆಹ್ವಾನಿಸಲಾಗಿದೆ.

ವಿವರ: ಟೆಂಡರ್ ಸಲ್ಲಿಸುವ ಕೊನೆಯ **ದಿನಾಂಕ: 10.11.2025 ರಂದು ಸಂಜೆ 4:00 ಘಂಟೆಯವರೆಗೆ ಮತ್ತು ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 12.11.2025, ಸಮಯ ಬೆಳಿಗ್ಗೆ 10:30ಕ್ಕೆ ಮತ್ತು ಆರ್ಥಿಕ ಬಿಡ್ ತೆರೆಯುವ ದಿನಾಂಕ: 17.11.2025 ಸಮಯ : ಬೆಳಿಗ್ಗೆ 10:30ಕ್ಕೆ.** ಆಸ್ತಿ ಅಧಿಕಾರಿಗಳ ಕಛೇರಿಯ ಟೆಂಡರ್ ಕಮಿಟಿ ಕೊಠಡಿಯಲ್ಲಿ ನಡೆಯುತ್ತದೆ. ಸೂಚನೆ: ಯಾವುದೇ ಟೆಂಡರನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ವಿಶ್ವವಿದ್ಯಾನಿಲಯವು ಕಾಯ್ದಿರಿಸಿಕೊಂಡಿದೆ. ಹೆಚ್ಚಿನ ಮಾಹಿತಿಗಾಗಿ ಟೆಂಡರ್ ಪ್ರಕಟಣೆಯ ವಿವರಗಳು ವೆಬ್‌ಸೈಟ್: **www.kppp.karnataka.gov.in** ರಲ್ಲಿ ದೊರೆಯುತ್ತದೆ ಹಾಗೂ ಈ ಕಚೇರಿಯನ್ನು, ಕಚೇರಿಯ ವೇಳೆಯಲ್ಲಿ ಸಹಾಯವಾಣಿ ದೂರವಾಣಿ ಸಂಖ್ಯೆ: **91-8046010000, + 91-8068948777 support@eprochelpdesk.com** ಅಥವಾ **www.uasbangalore.edu.in** ದೂರವಾಣಿ ಸಂಖ್ಯೆ: **23630128** ಸಂಪರ್ಕಿಸಬಹುದು.

ಸಹಿ/–
ಆಸ್ತಿ ಅಧಿಕಾರಿಗಳು
DIPR/CP/RO3548/AAPL/2025-26

ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಕರ್ನಾಟಕ
4ನೇ ಟಿ ಬ್ಲಾಕ್, ಜಯನಗರ, ಬೆಂಗಳೂರು 560041
registrar@rguhs.ac.in +91–80–29601928
No. RGUHSB/PROC/GEN/153/2025 ದಿನಾಂಕ: 03/11/2025

ಇ–ಟೆಂಡರ್ ಪ್ರಕಟಣೆ

ಕುಲಸಚಿವರು, ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯಕ್ಕೆ 10 ಪುಟಗಳನ್ನು ಒಳಗೊಂಡ ಪ್ರಾಯೋಗಿಕ ಉತ್ತರ ಪತ್ರಿಕೆಗಳನ್ನು ಮುದ್ರಿಸಿ ಸರಬರಾಜು ಮಾಡಲು ಟೆಂಡರ್ ಆಹ್ವಾನಿಸಿದ್ದಾರೆ. ಸೇವೆಗಳ ಬಗ್ಗೆ ಹೆಚ್ಚಿನ ವಿವರಗಳನ್ನು ಲಗತ್ತಿಸಿರುವ ಉಲ್ಲೇಖಿತ ಷರತ್ತುಗಳಲ್ಲಿ ಒದಗಿಸಲಾಗಿದೆ.

Tender No. RGUHSK/2025-26/IND0022

1	ಡೌನ್‌ಲೋಡ್‌ಗಾಗಿ ಟೆಂಡರ್ ಡಾಕ್ಯೂಮೆಂಟ್‌ಗಳ ಲಭ್ಯತೆ	03/11/2025, 12:46 ಗಂಟೆ
2	ಬಿಡ್ ಪೂರ್ವಭಾವಿ ಸಭೆ	06/11/2025, 11:00 ಗಂಟೆ
3	ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ	13/11/2025, 17:29 ಗಂಟೆ
4	ಮಾದರಿಯನ್ನು ಸಲ್ಲಿಸುವ ದಿನಾಂಕ	13/11/2025, 17:30 ಗಂಟೆ
5	ತಾಂತ್ರಿಕ ಬಿಡ್ ತೆರೆಯುವುದು	15/11/2025, 11:00 ಗಂಟೆ
6	ಆರ್ಥಿಕ ಬಿಡ್ ತೆರೆಯುವುದು	17/11/2025, 11:30 ಗಂಟೆ
7	ಟೆಂಡರ್ ತೆರೆಯುವ ಸ್ಥಳ	ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಬೆಂಗಳೂರು

ಹೆಚ್ಚಿನ ವಿವರಗಳನ್ನು https://kppp.karnataka.gov.in ವೆಬ್‌ಸೈಟ್‌ನಿಂದ ಪಡೆದುಕೊಳ್ಳಬಹುದು.

ಸಹಿ/–
ಕುಲಸಚಿವರು
ವಾ.ಸಾ.ಸಂ.ಇ/ವಾಪ್ರ/3551/ಆಕಾರ್/2025–26

ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
MESCOM
ಕಾರ್ಪೊರೇಟ್ ಕಚೇರಿ, "ಮೆಸ್ಕಾಂ ಭವನ", ಬಿಜೈ, ಮಂಗಳೂರು–575004
ದೂರವಾಣಿ: 0824–2885796 CIN: U40109 KA 2002 SGC 030425
ಸಂಖ್ಯೆ: ಮ.ವಿ.ಸ.ಕಂ/ಅ.ಇಂ(ಯೋ)/ಕಾನಿಇಂ(ಕಾ)/2025–26/2138 ದಿನಾಂಕ: 30.10.2025

ಅಲ್ಪಾವಧಿ ಟೆಂಡರ್ ಪ್ರಕಟಣೆ (ಕೆ.ಪಿ.ಪಿ ಪೋರ್ಟಲ್ ವಿಧಾನದಲ್ಲಿ ಮಾತ್ರ)

ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪೆನಿಯು ಬಿಡ್ ವಿಚಾರಣಾ ಸಂಖ್ಯೆ MESCOM/2025-26/EL/WORK_INDENT378 ರನ್ವಯ ಪುತ್ತೂರು ವಿಭಾಗದ ಪುತ್ತೂರು ನಗರ ಉಪ ವಿಭಾಗದಲ್ಲಿರುವ 33/11 ಕೆವಿ ನೆಲ್ಯಾಡಿ ಉಪಕೇಂದ್ರಕ್ಕೆ ಪರ್ಯಾಯ ಮಾರ್ಗ ನಿರ್ಮಿಸಲು ಉದ್ದೇಶಿತ 33/11ಕೆವಿ ಕೊಯಿಲಾ ಉಪಕೇಂದ್ರದಿಂದ ಸುಮಾರು 7.4 ಕಿ.ಮೀ. ಉದ್ದದ 33 ಕೆವಿ ಏಕ ವಿದ್ಯುತ್ ಲಿಂಕ್ ಲೈನ್ ಅನ್ನು ಹಾಲಿ ಇರುವ 33 ಕೆವಿ ಪುತ್ತೂರು–ನೆಲ್ಯಾಡಿ ಮಾರ್ಗದ ಅಲಂಕಾರ್ ಜಂಕ್ಷನ್‌ವರೆಗೆ ಜೋಡಿಸುವ ಕಾಮಗಾರಿಯನ್ನು ಪೂರ್ಣ ಗುತ್ತಿಗೆ ಆಧಾರದಡಿಯಲ್ಲಿ ನಿರ್ವಹಿಸಲು ಟೆಂಡರನ್ನು ಆಹ್ವಾನಿಸುತ್ತಿದೆ.

ಅಸಕ್ತಿಯುಳ್ಳ ಅರ್ಹ ಬಿಡ್ಡುದಾರರು ವೆಬ್‌ಸೈಟ್ **https://kppp.karnataka.gov.in** ಗೆ **ದಿನಾಂಕ: 05.11.2025** ಅಥವಾ ನಂತರ ಲಾಗ್ ಆನ್ ಮಾಡಬಹುದು.

ಸಹಿ/–, ಅಧೀಕ್ಷಕ ಇಂಜಿನಿಯರ್(ವಿ)(ಯೋಜನೆಗಳು)
DIPR/DK/KSMCA/1028/25-26 dt: .10.2025
ವಿದ್ಯುತ್ ಸಂಬಂಧಿತ ದೂರು ಮತ್ತು ಸಹಾಯಕ್ಕಾಗಿ ಉಚಿತ ದೂರವಾಣಿ ಸಂಖ್ಯೆ **1912**ಕ್ಕೆ ಕರೆ ಮಾಡಿ

ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಮಂಡ್ಯ–571 401
(Autonomous Medical Institution, Government of Karnataka)
Phone: 08232-231003, 222086, 231197, 224040, Fax: 08232-231001
E-Mail Address: mimsmandyaoffice@gmail.com, mimsmandya@gmail.com

ಇ–ಟೆಂಡರ್ ಪ್ರಕಟಣೆ – (ದ್ವಿಲಕೋಟೆ ಪದ್ಧತಿ)

ಸಂಖ್ಯೆ:ಮಿಮ್ಸ್/ಸರಬ–1/ಬ್ಲಡ್ ಬ್ಯಾಂಕ್/ಉಪಕರಣ/ಇ–ಟೆಂ/03/2025-26
ದಿ:27.10.2025

ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ರಕ್ತನಿಧಿ ಕೇಂದ್ರಕ್ಕೆ ರಕ್ತಸಂಗ್ರಹಣಾ ಕಾರ್ಯನಿರ್ವಹಣೆಗಾಗಿ ಅವಶ್ಯವಿರುವ ವಿವಿಧ ಉಪಕರಣಗಳನ್ನು ಸರಬರಾಜು ಮಾಡಲು ಉತ್ಪಾದಕರವರಿಂದ/ನೊಂದಾಯಿಸಲ್ಪಟ್ಟ ಅಧಿಕೃತ ಮಾರಾಟಗಾರರಿಂದ ದ್ವಿ–ಲಕೋಟೆ ಪದ್ಧತಿಯಲ್ಲಿ ಇ–ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಟೆಂಡರ್‌ನ ಅಂದಾಜು ಮೊತ್ತ ರೂ.98.00 ಲಕ್ಷಗಳು. ಟೆಂಡರ್ ಸಂಬಂಧಪಟ್ಟತೆ ಹೆಚ್ಚಿನ ಮಾಹಿತಿಯನ್ನು ಕರ್ನಾಟಕ ಸರ್ಕಾರದ ಅಂತರ್ಜಾಲ ತಾಣ https://kppp.karnataka.gov.in ರಲ್ಲಿ ಪಡೆದುಕೊಳ್ಳಹುದು ಹಾಗೂ ಕರ್ತವ್ಯದ ದಿನಗಳಲ್ಲಿ ಮಿಮ್ಸ್ ಸಂಸ್ಥೆಯ ಕಛೇರಿಯಲ್ಲಿ ಪಡೆದುಕೊಳ್ಳಬಹುದು.

ಸಹಿ/–ನಿರ್ದೇಶಕರು,
ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಮಂಡ್ಯ
ವಾಸಾಸಂಇ/ಸನಿ–ಮಂ/ಕೆಎಸ್‌ಎಂಸಿ&ಎ/540/2025–26

ಅಚ್ಚುಕಟ್ಟು ಅಭಿವೃದ್ಧಿ ಪ್ರಾಧಿಕಾರ
ಕಾವೇರಿ ಜಲಾನಯನ ಯೋಜನೆಗಳು
ಕಾರ್ಯಪಾಲಕ ಅಭಿಯಂತರರವರ ಕಛೇರಿ, ಕಾಡಾ ನಂ.1 ವಿಭಾಗ, ತುಮಕೂರು.
ಟೆಂಡರ್ ಪ್ರಕಟಣೆ ಸಂಖ್ಯೆ :02/2025–26 ದಿನಾಂಕ: 28–10–2025 K/W-4)
(Through Karnataka Public Procurement Portal Only

ತುಮಕೂರು ಜಿಲ್ಲೆ ವ್ಯಾಪ್ತಿಯಲ್ಲಿ ಬರುವ ಕಾವೇರಿ ಜಲಾನಯನ ಯೋಜನೆಯ ಅಚ್ಚುಕಟ್ಟು ವ್ಯಾಪ್ತಿಯಲ್ಲಿ ಬರುವ ಅಯಕಟ್ಟು ರಸ್ತೆ ಕಾಮಗಾರಿಗಳಿಗೆ ಟೆಂಡರ್‌ಗಿಟ್ಟ ಮೊತ್ತ **ರೂ.397.84 ಲಕ್ಷ**ಗಳ **ಒಟ್ಟು 01** ಕಾಮಗಾರಿಯನ್ನು ಕೈಗೊಳ್ಳಲು KPPP-portal ಮೂಲಕ ಐಟಂವಾರು ದ್ವಿ–ಲಕೋಟೆಯಲ್ಲಿ ಟೆಂಡರ್ ಕರೆಯಲಾಗಿದೆ. ಅರ್ಹ ಗುತ್ತಿಗೆದಾರರು ಇ–ಆಡಳಿತಾ ಕೇಂದ್ರ ಅಥವಾ ವೆಬ್‌ಸೈಟ್ http://kppp.karnataka.gov.in ನಲ್ಲಿ ಪ್ರಕಟಿಸಿದಂತೆ ದಿನಾಂಕ ಹಾಗೂ ಸಂಕ್ಷಿಪ್ತ ವಿವರಗಳನ್ನು ಖಚಿತ ಪಡಿಸಿಕೊಂಡು ಟೆಂಡರ್‌ನಲ್ಲಿ ಭಾಗವಹಿಸಬಹುದು.

1. ಟೆಂಡರ್ ದಸ್ತಾವೇಜುಗಳನ್ನು ಕರ್ನಾಟಕ ಸಾರ್ವಜನಿಕ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಡೌನ್‌ಲೋಡ್ ಮಾಡಿಕೊಳ್ಳಬಹುದಾದ **ದಿನಾಂಕ:31–10–2025 ರಿಂದ ದಿನಾಂಕ: 29–11–2025ರ ಸಂಜೆ 4.00 ಗಂಟೆವರೆಗೆ**
2. ಭರ್ತಿ ಮಾಡಿದ ಟೆಂಡರ್‌ಗಳನ್ನು ಕರ್ನಾಟಕ ಸಾರ್ವಜನಿಕ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಸಲ್ಲಿಸುವ ಕೊನೆಯ **ದಿನಾಂಕ:29–11–2025 ಸಂಜೆ 4.00 ಗಂಟೆವರೆಗೆ**
3. ಭರ್ತಿ ಮಾಡಿದ ಟೆಂಡರನ್ನು ಕರ್ನಾಟಕ ಸಾರ್ವಜನಿಕ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಭಾಗವಹಿಸಿರುವ ತಾಂತ್ರಿಕ ಬಿಡ್‌ನ್ನು ತೆರೆಯುವ **ದಿನಾಂಕ:01–12–2025 ಬೆಳಗ್ಗೆ 11.00 ಗಂಟೆಯ** ನಂತರ
4. ಭರ್ತಿ ಮಾಡಿದ ಟೆಂಡರನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಭಾಗವಹಿಸಿರುವ ಆರ್ಥಿಕ ಬಿಡ್‌ನ್ನು ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ ತೆರೆಯಲಾಗುವುದು.

ಭರ್ತಿ ಮಾಡಿದ ಟೆಂಡರ್ ಅನ್ನು ತೆರೆಯುವ ದಿನಾಂಕವು ಸಾರ್ವತ್ರಿಕ ರಜಾದಿನವಾಗಿದ್ದಲ್ಲಿ ಮುಂದಿನ ಕೆಲಸದ ದಿನದಂದು ಪರಿಗಣಿಸಲಾಗುವುದು. ನಿಬಂಧನೆಗಳು ಹಾಗೂ ಹೆಚ್ಚಿನ ವಿವರಗಳಿಗೆ, ಕಛೇರಿ ವೇಳೆಯಲ್ಲಿ ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಕಾಡಾ ನಂ.1 ವಿಭಾಗ, ವಿಭಾಗ, ತುಮಕೂರು ರವರನ್ನು ಸಂಪರ್ಕಿಸಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು
ಕಾಡಾ ನಂ.1 ವಿಭಾಗ,
ಕಾವೇರಿ ಜಲಾನಯನ ಯೋಜನೆಗಳು
ತುಮಕೂರು
DIPR/TUM/RO-150/25-26/Oysters

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯನಿರ್ವಾಹಕ ಇಂಜಿನೀಯರವರ ಕಛೇರಿ,
ಕನೀನಿನಿ, ಸಿಂಗಟಾಲೂರು ಏತ ನೀರಾವರಿ ಯೋಜನೆ, ವಿಭಾಗ ನಂ–1, ಮುಂಡರಗಿ, ಗದಗ ಜಿಲ್ಲೆ. Ph No: 08371 – 295016
E-mail : eeslis1mdg@gmail.com

ಟೆಂಡರ್ ಪ್ರಕಟಣೆ (2ನೇ ಕರೆ)
(ONLY THROUGH “KPP-Procurement” SYSTEM)

ಉಲ್ಲೇಖ : 1. ಈ ಕಛೇರಿ ಟೆಂಡರ್ ಪ್ರಕಟಣೆ ಪತ್ರ ಸಂಖ್ಯೆ:940/2025–26 ದಿನಾಂಕ : 31.10.2025

ಸಿಂಗಟಾಲೂರು ಏತ ನೀರಾವರಿ ಯೋಜನೆ ಮುಂಡರಗಿ ವಿಭಾಗ–01 ಕಛೇರಿ ವತಿಯಿಂದ Proposed Placements of Lingus for Trikota Lingeshwara Temple in the Premises of Mukti Mandir near Lakshmeshwar Gadag District ಅಭಿವೃದ್ಧಿ ಕಾಮಗಾರಿಗೆ ಲೆಕ್ಕಶೀರ್ಷಿಕೆ–4701ರಡಿ ಉಲ್ಲೇಖ (1) ರಲ್ಲಿನ ಟೆಂಡರ್ ಪ್ರಕಟಣೆಯಲ್ಲಿ ಸೂಚಿಸಿರುವಂತೆ, **KPP-Portal Indent No.2805/CALL-2** ರಂತೆ ಅರ್ಹ ಗುತ್ತಿಗೆದಾರರಿಂದ ದ್ವಿ–ಲಕೋಟೆ ಪದ್ಧತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಸದರಿ ಕಾಮಗಾರಿಯ ಟೆಂಡರಿಗಿಟ್ಟ ಮೊತ್ತವು (ಜಿ.ಎಸ್.ಟಿ. ಸೇರಿ) ರೂ. **491.75** ಲಕ್ಷ ಇದ್ದು, ಇ.ಎಂ.ಡಿ. ಮೊತ್ತವು ರೂ.**7.38** ಲಕ್ಷಗಳು ಆಗಿರುತ್ತವೆ.

ಇನ್ನುಳಿದಂತೆ, ಸದರಿ ಟೆಂಡರಿಗಳಿಗೆ ಸಂಬಂಧಿಸಿದ ಷರತ್ತು/ನಿಯಮಾವಳಿಗಳ ಮಾಹಿತಿಯನ್ನು ಕೆಳಗೆ ಸಹಿ ಮಾಡಿರುವ ಅಧಿಕಾರಿಯವರ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ ಹಾಗೂ ದಿನಾಂಕ : 31.10.2025ರ ನಂತರ **“https://kppp.karnataka.gov.in”**,ವೆಬ್‌ಸೈಟ್‌ನಲ್ಲಿ ಟೆಂಡರ್ ಡಾಕ್ಯೂಮೆಂಟ್ ಅನ್ನು ಡೌನ್‌ಲೋಡ್ ಮಾಡಿಕೊಂಡು ಬಿಡ್‌ನ್ನು ಸಲ್ಲಿಸಬಹುದಾಗಿರುತ್ತದೆ. ಸದರಿ ಟೆಂಡರ್‌ಗೆ ಬಿಡ್ಡನ್ನು ಸಲ್ಲಿಸಲು ಕೊನೆಯ ದಿನಾಂಕ : **24.11.2025** ಎಂದು ಮತ್ತು ಟೆಂಡರ್‌ಗಳ ತಾಂತ್ರಿಕ ಬಿಡ್ಡನ್ನು ತೆರೆಯುವ ದಿನಾಂಕ : **26.11.2025** ಎಂದು ನಿಗದಿಪಡಿಸಲಾಗಿದೆ. ಅದರಂತೆ, ಸದರಿ ಟೆಂಡರ್‌ನ ಕುರಿತು Pre-bid ಸಭೆಯನ್ನು ದಿನಾಂಕ : **11.11.2025** ರಂದು ಕಾರ್ಯಪಾಲಕ ಇಂಜನೀಯರ್‌ರವರ ಕಛೇರಿ, ಸಿಂಗಟಾಲೂರು ಏತ ನೀರಾವರಿ ಯೋಜನೆ, ವಿಭಾಗ–01 ಮುಂಡರಗಿ ಕಛೇರಿಯಲ್ಲಿ ನಿಗದಿಪಡಿಸಲಾಗಿರುತ್ತದೆ ಇನ್ನಿತರೆ ಹೆಚ್ಚಿನ ಮಾಹಿತಿಯನ್ನು **KPP-Procurement Helpdesk Phone No's: +91-80-46010000, +91-80-68948777** ಸಂಪರ್ಕಿಸಿ ಪಡೆಯಬಹುದಾಗಿದೆ. ನಿಬಂಧನೆಗೊಳಪಟ್ಟ ಟೆಂಡರ್‌ಗಳನ್ನು ತಿರಸ್ಕರಿಸಲಾಗುವುದು. ಟೆಂಡರ್‌ಗಳನ್ನು ಸ್ವೀಕರಿಸುವ ಅಧಿಕಾರ ಪಡೆದಿರುವ ಅಧಿಕಾರಿಯು ಎಲ್ಲಾ ಅಥವಾ ಯಾವುದೇ ಟೆಂಡರ್‌ನ್ನು ಕಾರಣ ನೀಡದೆ ತಿರಸ್ಕರಿಸುವ ಅಧಿಕಾರಿವನ್ನು ಹೊಂದಿರುತ್ತಾರೆ.

ಸಹಿ/– ಕಾರ್ಯಪಾಲಕ ಅಭಿಯಂತರರು,
ಕ.ನೀ.ನಿ.ನಿ., ಸಿಂ.ಏ.ನೀ.ಯೋ., ವಿಭಾಗ–01,
ಮುಂಡರಗಿ ಗದಗ ಜಿಲ್ಲೆ.
ವಾಸಾಸಂಇ/ಗದಗ/ಕೆಎಸ್‌ಎಂಸಿಎ/355/2025–26

ಬೆಂಗಳೂರು ಘನ ತ್ಯಾಜ್ಯ ನಿರ್ವಹಣೆ ನಿಯಮಿತ
ಉಪ ಪ್ರಧಾನ ವ್ಯವಸ್ಥಾಪಕರ ಕಚೇರಿ–3, 1ನೇ ಮಹಡಿ, ತಿಮ್ಮಯ್ಯ ರಸ್ತೆ, ವಸಂತ ನಗರ, ಬೆಂಗಳೂರು–560052.
ಸಂಖ್ಯೆ:ಉಪ್ರವ್ಯ-3/ಬೆಂಘತ್ಯಾನಿನಿ/ಟೆಂಡರ್/14/2025-26 ದಿನಾಂಕ: 03-11-2025

ಅಲ್ಪಾವಧಿ ಟೆಂಡರ್‌ಗಳ ಆಹ್ವಾನ (ಐಎಫ್‌ಟಿ)
(ಕೆಪಿಪಿ ಪೋರ್ಟಲ್ ಮೂಲಕ) ವೆಬ್‌ಸೈಟ್ **https://kppp.karnataka.gov.in**

ಉಪ ಪ್ರಧಾನ ವ್ಯವಸ್ಥಾಪಕರು-3 ಘನತ್ಯಾಜ್ಯ ನಿರ್ವಹಣಾ ನಿಯಮಿತ ರವರು ವ್ಯವಸ್ಥಾಪಕ ನಿರ್ದೇಶಕರ ಬೆಂಘತ್ಯಾನಿನಿದ ಬೆಂಗಳೂರು ಪರವಾಗಿ ಕೆಳಗೆ ಉಲ್ಲೇಖಿಸಲಾದ ಕಾಮಗಾರಿಗಳ ಸಲಹಾ ಸೇವೆಗಳಿಗಾಗಿ ಅರ್ಹ ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಿದ್ದಾರೆ.

ಕಾಮಗಾರಿಯ ಹೆಸರು	ಟೆಂಡರ್‌ಗೆ ಇಟ್ಟ ಮೊತ್ತ (ಲಕ್ಷ ರೂಗಳಲ್ಲಿ)	ಇಎಂಡಿ ಮೊತ್ತ (ರೂಗಳಲ್ಲಿ)	ಅವಧಿ
ಬಿಬಿಎಂಪಿ ಮಿತಿಯ 7 ಸ್ಥಳಗಳಲ್ಲಿ ಸಿ ಮತ್ತು ಡಿ ತ್ಯಾಜ್ಯಗಳ ವರ್ಗಾವಣೆ ಕೇಂದ್ರಗಳ ಸ್ಥಾಪನೆಯ ಕಾಮಗಾರಿಗೆ ವಿವರವಾದ ಯೋಜನಾ ವರದಿಯನ್ನು ಸಿದ್ಧಪಡಿಸುವುದು.	2800.00	56,000/-	02 ತಿಂಗಳು

ಟೆಂಡರ್‌ನ ಕಾರ್ಯಸೂಚಿ: 1) ಪೂರ್ವ ಬಿಡ್ ವಿಚಾರಣೆಗಳಿಗೆ ಕೊನೆಯ **ದಿನಾಂಕ: 10–11–2025ರ ಸಂಜೆ 5:30 ಗಂಟೆಯವರೆಗೆ** (ಕೆಪಿಪಿ ಪೋರ್ಟಲ್ ಮೂಲಕ). **2)** ಪೂರ್ವ ಬಿಡ್ ಸಭೆಯ **ದಿನಾಂಕ: 11–11–2025ರ ಮಧ್ಯಾಹ್ನ 3:00 ಗಂಟೆಗೆ.** ಮುಖ್ಯ ಅಭಿಯಂತರರು ಮತ್ತು ಮುಖ್ಯ ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ) ಬೆಂಘತ್ಯಾನಿನಿರವರ ಕಛೇರಿ, ತಿಮ್ಮಯ್ಯ ರಸ್ತೆ, ವಸಂತ ನಗರ, ಬೆಂಗಳೂರು. **3)** ಬಿಡ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕ: **14–11–2025ರ ಸಂಜೆ 4:00 ಗಂಟೆಯವರೆಗೆ. 4)** ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ: **15–11–2025ರ ಸಂಜೆ 4:30 ಗಂಟೆಗೆ. 5)** ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ತಾಂತ್ರಿಕ ಬಿಡ್‌ಗಳ ಅನುಮೋದನೆಯ ನಂತರ.

ಸೂಚನೆ: ಯಾವುದೇ ತಿದ್ದುಪಡಿ/ಅನುಬಂಧವನ್ನು ಕೆಪಿಪಿ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.

ಸಹಿ/–
ಉಪ ಪ್ರಧಾನ ವ್ಯವಸ್ಥಾಪಕರು–3, ಬೆಂಘತ್ಯಾನಿನಿ.
DIPR/CP/RO3566/AAPL/2025-26

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ
ಸಂಖ್ಯೆ: 16ಸಿ-1, ಮಿಲ್ಲರ್ ಟ್ಯಾಂಕ್ ಬೆಡ್ ಏರಿಯ, ವಸಂತನಗರ, ಬೆಂಗಳೂರು-52.
ದೂರವಾಣಿ: 080-22268677/78/79 ಫ್ಯಾಕ್ಸ್: 080-22268667
ಇ-ಮೇಲ್ : kerc-ka@nic.in ವೆಬ್‌ಸೈಟ್: www.kerc.karnataka.gov.in
ಸಂ: ಕವಿನಿಆ/ಉನಿ(ಜಕಾತಿ)/2025–26/ಆರ್.ಪಿ.08–2025/ 1008 ದಿನಾಂಕ: 13.10.2025

ಸಾರ್ವಜನಿಕ ವಿಚಾರಣೆಯ ಪ್ರಕಟಣೆ

ವಿಷಯ: ನೀರಾವರಿ ಪಂಪ್ ಸೆಟ್‌ಗಳು, ವಾಣಿಜ್ಯ ಮತ್ತು ಕೈಗಾರಿಕಾ ಗ್ರಾಹಕ ವರ್ಗಗಳಿಗೆ ಸಂಬಂಧಿಸಿದಂತೆ ಜಕಾತಿ ದರಗಳಲ್ಲಿ ಮಾರ್ಪಾಡು ಕೋರಿ ವಿದ್ಯುತ್ ಸರಬರಾಜು ಕಂಪನಿಗಳು (ಎಸ್ಕಾಂಗಳು) ಸಲ್ಲಿಸಿದ ಪರಿಶೀಲನಾ ಅರ್ಜಿ ಸಂಖ್ಯೆ ಆರ್.ಪಿ.08/2025 ರ ವಿಷಯದ ಕುರಿತಂತೆ.

ಆಯೋಗದ ಜಕಾತಿ ಆದೇಶ–2025 ದಿನಾಂಕ 27.03.2025 ರಲ್ಲಿ ನಿರ್ಧರಿಸಲಾಗಿರುವ ಜಕಾತಿ ದರಗಳಿಗೆ ವಿರುದ್ಧವಾಗಿ ವಿದ್ಯುತ್ ಸರಬರಾಜು ಕಂಪನಿಗಳು (ಬೆಸ್ಕಾಂ, ಮೆಸ್ಕಾಂ, ಸೆಸ್ಕ್, ಹೆಸ್ಕಾಂ ಮತ್ತು ಜೆಸ್ಕಾಂ), 2025–26ರ ಆರ್ಥಿಕ ವರ್ಷಕ್ಕೆ ಸಂಬಂಧಿಸಿದಂತೆ, ನೀರಾವರಿ ಪಂಪ್ ಸೆಟ್‌ಗಳು, ವಾಣಿಜ್ಯ ಮತ್ತು ಕೈಗಾರಿಕಾ ಗ್ರಾಹಕ ವರ್ಗಗಳಿಗೆ ಜಕಾತಿ ದರಗಳಲ್ಲಿ ಮಾರ್ಪಾಡು ಕೋರಿ ಆಯೋಗದ ಮುಂದೆ ಪರಿಶೀಲನಾ ಅರ್ಜಿ ಸಂಖ್ಯೆ ಆರ್.ಪಿ.08/2025 ನ್ನು ಸಲ್ಲಿಸಿವೆ.

ವಿದ್ಯುತ್ ಸರಬರಾಜು ಕಂಪನಿಗಳು ತಮ್ಮ ಪರಿಶೀಲನಾ ಅರ್ಜಿಗಳ ಸಾರಾಂಶವನ್ನು ಪತ್ರಿಕೆಗಳಲ್ಲಿ ಪ್ರಕಟಿಸಿ, ಪಾಲುದಾರರು ಮತ್ತು ಸಾರ್ವಜನಿಕರಿಂದ ಆಕ್ಷೇಪಣೆಗಳನ್ನು ಆಹ್ವಾನಿಸಿವೆ. ಈ ಪರಿಶೀಲನಾ ಅರ್ಜಿಗಳ ವಿವರಗಳು ಆಯಾ ಎಸ್ಕಾಂಗಳ ಮತ್ತು ಆಯೋಗದ ವೆಬ್‌ಸೈಟ್ (https://kerc.karnataka.gov.in) ಗಳಲ್ಲಿ ಲಭ್ಯವಿದೆ. ಪಾಲುದಾರರು / ಸಾರ್ವಜನಿಕರ ಅಭಿಪ್ರಾಯಗಳನ್ನು ಪಡೆಯಲು, ಆಯೋಗವು ದಿನಾಂಕ 12.11.2025 ರಂದು ಬೆಳಿಗ್ಗೆ 11.00 ಕ್ಕೆ ಬೆಂಗಳೂರಿನ ಆಯೋಗದ ನ್ಯಾಯಾಲಯದ ಸಭಾಂಗಣದಲ್ಲಿ ಸಾರ್ವಜನಿಕ ವಿಚಾರಣೆಯನ್ನು ನಡೆಸಲಿದೆ.

ಸಾರ್ವಜನಿಕ ವಿಚಾರಣೆಯನ್ನು, ಆಯೋಗವು ದಿನಾಂಕ 18.09.2025 ರಂದು ಪ್ರಕಟಿಸಿರುವ ಪ್ರಮಾಣಿತ ಕಾರ್ಯಾಚರಣಾ ಕಾರ್ಯವಿಧಾನದ ಪ್ರಕಾರ, ಹೈಬ್ರಿಡ್ ವಿಧಾನದ ಮೂಲಕ, ಅಂದರೆ ಭೌತಿಕ ಮತ್ತು ಆನ್‌ಲೈನ್ / ವರ್ಚುಯಲ್ ಎರಡೂ ವಿಧಾನದಲ್ಲಿ, ನಡೆಸಲಾಗುವುದು.

ಆನ್‌ಲೈನ್ / ವರ್ಚುಯಲ್ ವಿಧಾನದ ವಿಚಾರಣೆಯ ಮೂಲಕ ಪ್ರತಿನಿಧಿಸಲು ಆಸಕ್ತಿ ಹೊಂದಿರುವ ಪಕ್ಷಗಳು, ಪಾಲುದಾರರು ಮತ್ತು ಸಾರ್ವಜನಿಕರು ತಮ್ಮ ಹೆಸರುಗಳು, ಇಮೇಲ್ ಐಡಿಗಳು ಮತ್ತು ಫೋನ್ ಸಂಖ್ಯೆಗಳನ್ನು ಆಯೋಗದ ನೋಂದಾವಣೆಗೆ ಇ–ಮೇಲ್ ವಿಳಾಸ **asst.secykerc@gmail.com ಮೂಲಕ 10.11.2025 ರಂದು ಅಥವಾ ಅದಕ್ಕೂ ಮೊದಲು ಬೆಳಿಗ್ಗೆ 11.00 ರಿಂದ ಸಂಜೆ 05.00 ರ ನಡುವೆ** ಸಲ್ಲಿಸಬೇಕು.

ವಿಚಾರಣೆಗೆ ಖುದ್ದಾಗಿ ಅಥವಾ ಆನ್‌ಲೈನ್‌ನಲ್ಲಿ ಹಾಜರಾಗಲು ಸಾಧ್ಯವಾಗದ ಪಾಲುದಾರರು / ಸಾರ್ವಜನಿಕರು ಎಸ್ಕಾಂಗಳ ಮೂಲಕ ಭಾಗವಹಿಸಬಹುದು. ಎಸ್ಕಾಂಗಳು ತಮ್ಮ ಕಾರ್ಪೊರೇಟ್ ಕಚೇರಿಯಲ್ಲಿ ಅಥವಾ ತಮ್ಮ ಪ್ರಧಾನ ಕಚೇರಿಯಲ್ಲಿರುವ ಯಾವುದೇ ಸೂಕ್ತ ಸ್ಥಳದಲ್ಲಿ ಆನ್‌ಲೈನ್ / ವರ್ಚುಯಲ್ ಸಭೆಗಳನ್ನು ಏರ್ಪಡಿಸಿ, ಪಾಲುದಾರರು / ಸಾರ್ವಜನಿಕರು ದೂರದಿಂದಲೇ ಭಾಗವಹಿಸಲು ವ್ಯವಸ್ಥೆಗೊಳಿಸುವುದು.

ಆಸಕ್ತ ಪಾಲುದಾರರು/ ವ್ಯಕ್ತಿಗಳು ಸಾರ್ವಜನಿಕ ವಿಚಾರಣೆಯಲ್ಲಿ ಭಾಗವಹಿಸಬಹುದು ಮತ್ತು ಸಾರ್ವಜನಿಕ ವಿಚಾರಣೆಯ ಸಮಯದಲ್ಲಿ ತಮ್ಮ ಮೌಖಿಕ/ಲಿಖಿತ ಆಕ್ಷೇಪಣೆಗಳನ್ನು ಆಯೋಗಕ್ಕೆ ಸಲ್ಲಿಸಬಹುದು.

ಸಹಿ/–ಕಾರ್ಯದರ್ಶಿ, ಕವಿನಿಆ, ಬೆಂಗಳೂರು.
ವಾಸಾಸಂಇ/ಉನಿ–ಸಿ.ಪಿ/3547/ಕೆಎಸ್‌ಎಂಸಿಎ/2025–26

ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ
ಉಪ ಪ್ರಧಾನ ವ್ಯವಸ್ಥಾಪರು–4 ರವರ ಕಛೇರಿ, 1ನೇ ಮಹಡಿ, ಬಿಬಿಎಂಪಿ ಕಟ್ಟಡ,
ತಿಮ್ಮಯ್ಯ ರಸ್ತೆ, ವಸಂತ ನಗರ, ಬೆಂಗಳೂರು – 560052. ಇ–ಮೇಲ್: Email:dgm4bswml25@gmail.com
ಸಂಖ್ಯೆ: ಡಿಜಿಎಂ–4/ಬಿಎಸ್‌ಡಬ್ಲ್ಯೂಎಂಎಲ್/ಟೆಂಡರ್/03/2025–26 ದಿನಾಂಕ: 03–11–2025

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ) (ಜಿಓಕೆ ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

1) **ಉಪ ಪ್ರಧಾನ ವ್ಯವಸ್ಥಾಪಕರು–4, ಬೆಂಗಳೂರು** ಘನತ್ಯಾಜ್ಯ ನಿರ್ವಹಣೆ ನಿಯಮಿತ ಇವರು ಈ ಕೆಳಗೆ ವಿವರಿಸಿರುವ ಕಾಮಗಾರಿಗಳಿಗೆ ಅರ್ಹ ಬಿಡ್‌ದಾರರಿಂದ ವ್ಯವಸ್ಥಾಪಕ ನಿರ್ದೇಶಕರು, ಬಿಎಸ್‌ಡಬ್ಲ್ಯೂಎಂಎಲ್, ಬೆಂಗಳೂರು ಇವರ ಪರವಾಗಿ ಬಿಡ್‌ಗಳನ್ನು ಆಹ್ವಾನಿಸಿದ್ದಾರೆ. ಬಿಡ್‌ದಾರರು ಈ ಕೆಳಗೆ ವಿವರಿಸಿರುವ ಕಾಮಗಾರಿಗಳಿಗೆ ಟೆಂಡರ್‌ಗಳನ್ನು ಕರ್ನಾಟಕ ಸರ್ಕಾರದ ಕೆಪಿಪಿಪಿ ಪೋರ್ಟಲ್ ಮೂಲಕ (ಎಂದರೆ **https://kppp.karnataka.gov.in**) ಸಲ್ಲಿಸಬಹುದು. ಬಿಡ್‌ದಾರರು ಗುತ್ತಿಗೆ ನೀಡಿಕೆಗೆ ಅರ್ಹರಾಗಲು ಬಿಡ್‌ದಾರರಿಗೆ ಸೂಚನೆಗಳ ಕಲಂ 3 ರಲ್ಲಿ ನಿರ್ದಿಷ್ಟಪಡಿಸಿರುವ ಕನಿಷ್ಠ ಅರ್ಹತಾ ಅಗತ್ಯಗಳನ್ನು ಗಮನಿಸಲು ಕೋರಿದೆ.
2) ಟೆಂಡರ್ ದಸ್ತಾವೇಜನ್ನು ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್‌ನಿಂದ **06.11–2025 ರಿಂದ** ಡೌನ್‌ಲೋಡ್ ಮಾಡಿಕೊಳ್ಳಬಹುದು.
3) ಇತರೆ ವಿವರಗಳನ್ನು ಟೆಂಡರ್ ದಸ್ತಾವೇಜುಗಳಲ್ಲಿ ನೋಡಬಹುದು.

ಕ್ರ. ಸಂ.	ಕಾಮಗಾರಿಯ ಹೆಸರು	ಟೆಂಡರಿಗಿಟ್ಟಿರುವ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ) ಜಿಎಸ್‌ಟಿ ಹೊರತುಪಡಿಸಿ	ಇಎಂಡಿ ಮೊತ್ತ (ರೂ. ಗಳಲ್ಲಿ)	ಟೆಂಡರ್ ದಸ್ತಾವೇಜು ಬೆಲೆ	ಗುತ್ತಿಗೆ ಪೂರ್ಣ ಗೊಳಿಸಲು ಅವಧಿ
1	ಸ್ವಚ್ಛ ಭಾರತ ಮಿಷನ್ 2.0 ಅಡಿಯಲ್ಲಿ ಜಿಬಿಎ ವ್ಯಾಪ್ತಿಯಲ್ಲಿ ಸಾರ್ವಜನಿಕ ಮತ್ತು ಸಮುದಾಯ ಶೌಚಾಲಯಗಳ ನಿರ್ಮಾಣ	1350.00	ರೂ.13,50,000/–	ಕೆಪಿಪಿಪಿ ಪೋರ್ಟಲ್ ಅನುಸಾರ	6 ತಿಂಗಳು

ವೇಳಾಪಟ್ಟಿ 1. ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ **ದಿನಾಂಕ 21.11.2025 ರಂದು ಸಂಜೆ 4.00 ಗಂಟೆಯವರೆಗೆ.** 2. ಕೆಪಿಪಿ ಪೋರ್ಟಲ್‌ನಲ್ಲಿ ಪ್ರಶ್ನೆಗಳನ್ನು ಅಪ್‌ಲೋಡ್ ಮಾಡಲು ಕೊನೆಯ **ದಿನಾಂಕ 12.11.2025 ರಂದು ಸಂಜೆ 4.00 ಗಂಟೆಯವರೆಗೆ.** 3. ಮುಖ್ಯ ಎಂಜಿನಿಯರ್ ಮತ್ತು ಮುಖ್ಯ ಜನರಲ್ ಮ್ಯಾನೇಜರ್ (ತಂತ್ರಜ್ಞಾನ), ಬಿಎಸ್‌ಡಬ್ಲ್ಯೂಎಂಎಲ್ ಅವರ ಅಧ್ಯಕ್ಷತೆಯಲ್ಲಿ **ದಿನಾಂಕ: 13.11.2025 ರಂದು ಸಂಜೆ 4.00 ಗಂಟೆಗೆ** ಸಭೆ ಸಭಾಂಗಣ, ಬಿಬಿಎಂಪಿ ಕಟ್ಟಡ, ತಿಮ್ಮಯ್ಯ ರಸ್ತೆ, ವಸಂತ ನಗರ, ಬೆಂಗಳೂರು – 52 ರಲ್ಲಿ ಪೂರ್ವ–ಬಿಡ್ ಸಭೆ ನಡೆಯಲಿದೆ. 4. ತಾಂತ್ರಿಕ ಬಿಡ್‌ಗಳನ್ನು ತೆರೆಯುವ **ದಿನಾಂಕ: 24.11.2025 ರಂದು ಸಂಜೆ 4.00 ಗಂಟೆಯೊಳಗೆ** ಅಥವಾ ಮುಂದಿನ ಕೆಲಸದ ದಿನದಂದು. 5. ತಾಂತ್ರಿಕ ಬಿಡ್‌ಗಳನ್ನು ತೆರೆಯುವ ಬಗ್ಗೆ ತಾಂತ್ರಿಕವಾಗಿ ಅರ್ಹ ಬಿಡ್‌ದಾರರಿಗೆ ತಿಳಿಸಲಾಗುವುದು.

ಷರತ್ತು ಮತ್ತು ನಿಯಮಗಳು: 1) ಉದ್ಯೋಗದಾತನು ತನ್ನ ನಿಯಂತ್ರಣ ಮೀರಿದ ವ್ಯವಸ್ಥೆಯ ವೈಫಲ್ಯದಿಂದಾಗಿ ಉಂಟಾಗುವ ಯಾವುದೇ ವಿಳಂಬಗಳಿಗೆ ಹೊಣೆಗಾರನಾಗಿರುವುದಿಲ್ಲ. ಯಾವುದೇ ಟೆಂಡರ್ ನವೀಕರಣಗಳ ಬಗ್ಗೆ ವ್ಯವಸ್ಥೆಯು ಟೆಂಡರ್‌ದಾರರಿಗೆ ತಿಳಿಸಲು ಪ್ರಯತ್ನಿಸಿದರೂ, ಟೆಂಡರ್‌ದಾರರು ಸ್ವೀಕರಿಸದ ಯಾವುದೇ ಮಾಹಿತಿಗೆ ಉದ್ಯೋಗದಾತನು ಜವಾಬ್ದಾರನಾಗಿರುವುದಿಲ್ಲ. ಟೆಂಡರ್‌ಗೆ ಸಂಬಂಧಿಸಿದ ಇತ್ತೀಚಿನ ಮಾಹಿತಿಗಾಗಿ ಕೆಪಿಪಿಪಿ ಪೋರ್ಟಲ್ ಅನ್ನು ಪರಿಶೀಲಿಸುವುದು ಟೆಂಡರ್‌ದಾರರ ಜವಾಬ್ದಾರಿಯಾಗಿದೆ, ಸಹಾಯವಾಣಿಯ ಇ–ಮೇಲ್ ವಿಳಾಸ **hphelpdesk.blr@intarvo.com** ಕೆಪಿಪಿ ಪೋರ್ಟಲ್ ಸಹಾಯವಾಣಿ ದೂರವಾಣಿ ಸಂಖ್ಯೆಗಳು: 080–22371090 / 22373788. ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯಕ್ಕೆ ಮುಂಚಿತವಾಗಿ ಟೆಂಡರ್ದಾರರು ಕಂಪ್ಯೂಟರ್‌ನ ಬ್ರೌಸರ್ ಸಾಮರ್ಥ್ಯವನ್ನು ಖಚಿತಪಡಿಸಿಕೊಳ್ಳಬೇಕು. **2.** ಇಂಟರ್‌ನೆಟ್ ಸಂಪರ್ಕ ಸಮಸ್ಯೆಗಳು ಮತ್ತು ತಾಂತ್ರಿಕ ದೋಷಗಳಿಂದಾಗಿ ಕೆಪಿಪಿಪಿ ಪೋರ್ಟಲ್ ಪ್ರವೇಶಿಸಲಾಗದಿದ್ದರೆ ಉದ್ಯೋಗದಾತರು ಜವಾಬ್ದಾರರಾಗಿರುವುದಿಲ್ಲ. **3.** ಯಾವುದೇ ತಿದ್ದುಪಡಿ/ಅನುಬಂಧವನ್ನು ಕೆ ಪಿಪಿಪಿ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುತ್ತದೆ.

ಸಹಿ/–
ಉಪ ಪ್ರಧಾನ ವ್ಯವಸ್ಥಾಪಕರು–4, ಬಿಎಸ್‌ಡಬ್ಲ್ಯೂಎಂಎಲ್
ವಾಸಾಸಂಇ/ವಾ.ಪ್ರ/3549/ಎಎಎ/2025–26

ಕರ್ನಾಟಕ ಸರ್ಕಾರ
ಬೀದರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಬೀದರ
(ಕರ್ನಾಟಕ ಸರಕಾರದ ಸ್ವಾಯತ್ತ ಸಂಸ್ಥೆ)
ದೂರವಾಣಿ ಸಂಖ್ಯೆ: 08482–228366, ಫ್ಯಾಕ್ಸ್: 08482–240322
website: www.bimsbidar.karnataka.gov.in e-mail Id- directorbrimsbidar2007@gmail.com
ಸಂಖ್ಯೆ:/ಬಿ.ವೈ.ವಿ.ಸಂ/ಟೆಂಡರ್/ಇಂಜಕ್ಷನ್/ಸಿ.ಆರ್–02/2025–26/1151 ದಿನಾಂಕ: 01–11–2025

ಟೆಂಡರ್ ಪ್ರಕಟಣೆ

ಬೀದರ್ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಮತ್ತು ಬೋಧಕ ಆಸ್ಪತ್ರೆ ಬೀದರ್‌ಗೆ 2025–26ನೇ ಸಾಲಿಗಾಗಿ ಅವಶ್ಯಕವಿರುವ ಔಷಧಿ (INJECTIONS, EYE/EAR/NASAL DROPS AND TABLETS, SYRUPS AND OINTMENTS) ಗಳ ಸರಬರಾಜುವಿಗಾಗಿ ಇ–ಟೆಂಡರ್ ಕರೆಯಲಾಗಿದೆ. ಇಚ್ಛೆಯುಳ್ಳ ಗುತ್ತಿಗೆದಾರರು ದಿನಾಂಕ: **19–11–2025** ರ ವರೆಗೆ ಇ–ಟೆಂಡರ್‌ನಲ್ಲಿ ನಮೂದಿಸಿದ ಸಮಯದ ಅನುಗುಣವಾಗಿ ಟೆಂಡರ್ ಭರಿಸಲು ಅವಕಾಶವಿರುತ್ತದೆ. ಹಾಗೂ ಇ– ಸಂಗ್ರಹಣೆಯ ಪೋರ್ಟಲ್ ಮೂಲಕ ಸದರಿ ಟೆಂಡರಿನ ವಿವರ ವಿಕ್ಷೀಸಬಹುದು/ ಡೌನಲೋಡ್ ಮಾಡಿಕೊಂಡು ಇ–ಪ್ರೋಕ್ಯುರ್‌ಮೇಂಟ್ ಮೂಲಕ ಸಲ್ಲಿಸಬಹುದು www.kppp.karnataka.gov.in ಮತ್ತು ಟೆಂಡರಿನ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಈ ಸಂಸ್ಥೆಯ ಅಂತರ್ಜಾಲ ತಾಣವಾದ www.bimsbidar.karnataka.gov.in ನಲ್ಲಿ ಸಹ ನೋಡಬಹುದಾಗಿದೆ.

ಕ್ರ. ಸಂ	ಇಂಡೆಂಟ್ ಸಂಖ್ಯೆ	ಟೆಂಡರ್ ವಿವರ	ಇ.ಎಂ.ಡಿ
01	DME/2025-26/IND1806	SUPPLY OF INJECTIONS AND EYE /EAR/NASAL DROPS TO BRIMS BIDAR -2025-26	1 ಲಕ್ಷ
02	DME/2025-26/IND1818	SUPPLY OF TABLETS, SYRUPS & OINTMENTS TO BRIMS BIDAR FOR THE YEAR 2025-26	1 ಲಕ್ಷ

ಗಮನಿಸಿ:– 1. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸುವ ವಿಳಾಸ. ನಿರ್ದೇಶಕರು ಬೀದರ್ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಬೀದರ್. 2.ಇನ್ನು ಮುಂದೆ ಟೆಂಡರ್ ಪ್ರಕ್ರಿಯೆಗಳಲ್ಲಿ ಬದಲಾವಣೆಗಳನ್ನು ದಿನ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ. ಬದಲಾವಣೆಗಳು ಕೇವಲ ವಿದ್ಯುನ್ಮಾನ ಸಂಗ್ರಹಣೆ www. kppp .kar nata ka .gov.in ವೇದಿಕೆಯಲ್ಲಿ ಮಾತ್ರ ಪ್ರಕಟಿಸಲಾಗುವುದು.

ಸಹಿ/– ನಿರ್ದೇಶಕರು,
ಬೀದರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಬೀದರ.
ವಾ.ಸಾ.ಸಂ.ಇ/ಬೀದರ/220/ಕೆ.ಎಸ್.ಎಂ.ಸಿ.&ಎ/2025–26

ದರ್ಶನ್ ವಿರುದ್ಧ ದೋಷಾರೋಪ ನಿಗದಿ

ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಪ್ರಕರಣ: ಆರೋಪ ನಿರಾಕರಿಸಿದ ನಟ ದರ್ಶನ್, ಪವಿತ್ರಾಗೌಡ

ಬೆಂಗಳೂರಿನ 57ನೇ ಎಸಿಎಂಎಂ ನ್ಯಾಯಾಲಯದಲ್ಲಿ ಸೋಮವಾರ ವಿಚಾರಣೆಗೆ ಹಾಜರಾದ ನಟ ದರ್ಶನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಪ್ರಕರಣದ ಆರೋಪಿಗಳಾದ ನಟ ದರ್ಶನ್ ಹಾಗೂ ಪವಿತ್ರಾಗೌಡ ಸೇರಿ 17 ಆರೋಪಿಗಳ ಮೇಲೆ ದೋಷಾರೋಪ ನಿಗದಿ ಪ್ರಕ್ರಿಯೆ ಮುಕ್ತಾಯಗೊಳಿಸಿರುವ ನ್ಯಾಯಾಲಯವು ನ.10ಕ್ಕೆ ವಿಚಾರಣೆ ಮುಂದೂಡಿತು.

ಕೊಲೆ ಪ್ರಕರಣದಲ್ಲಿ ಆರೋಪಿಗಳ ವಿರುದ್ಧ ತನಿಖಾಧಿಕಾರಿಗಳು ಸಲ್ಲಿಸಿರುವ ದೋಷಾರೋಪ ಪಟ್ಟಿಯಲ್ಲಿ ಹೊರಿಸಲಾಗಿರುವ ಆರೋಪ ನಿಗದಿ ಸಂಬಂಧ ದರ್ಶನ್, ಪವಿತ್ರಾ ಸೇರಿ 17 ಆರೋಪಿಗಳನ್ನು 64ನೇ ಸಿಸಿಎಚ್ ನ್ಯಾಯಾಲಯಕ್ಕೆ ಸೋಮವಾರ ಪೊಲೀಸ್ ಭದ್ರತೆಯಲ್ಲಿ ಹಾಜರು ಪಡಿಸಲಾಯಿತು. ಬಳಿಕ ಎಲ್ಲ ಆರೋಪಿಗಳನ್ನು ಕೋರ್ಟ್ ಆವರಣದೊಳಗೆ ನಿಲ್ಲಿಸಿ ಹಾಜರಾತಿ ಪಡೆಯಲಾಯಿತು.

ಆ ನಂತರ ಆರೋಪಪಟ್ಟಿ ನಿಗದಿ ಪ್ರಕ್ರಿಯೆ ಆರಂಭಿಸಿದ ಕೋರ್ಟ್, ಎಲ್ಲ ಆರೋಪಿಗಳ ಹೆಸರು ಉಲ್ಲೇಖಿಸಿ ಅವರ ಮೇಲಿರುವ ಆರೋಪಗಳ ಸಾರಾಂಶವನ್ನು ಓದಿ, ಈ ಬಗ್ಗೆ ಅಭಿಪ್ರಾಯ ತಿಳಿಸುವಂತೆ ಸೂಚಿಸಿತು.

‘ಅಕ್ರಮ ಕೂಟ ರಚಿಸಿಕೊಂಡು ರೇಣುಕಸ್ವಾಮಿ ಅವರನ್ನು ಚಿತ್ರದುರ್ಗದಿಂದ ಅಪಹರಿಸಿ, ಬೆಂಗಳೂರಿಗೆ ಕರೆತಂದು ಶೆಡ್‌ಗೆ ಕರೆದೊಯ್ದು ಅವರ ಚಿನ್ನಾಭರಣ ಕಸಿದುಕೊಂಡು ಮೇಲಕ್ಕೆ ಎತ್ತಿ ಕುಕ್ಕಿ ಕೊಲೆ ಮಾಡಿದ್ದೀರಿ’ ಎಂದು ತನಿಖಾಧಿಕಾರಿಗಳು ದೋಷಾರೋಪ ಪಟ್ಟಿ ಸಲ್ಲಿಸಿದ್ದಾರೆ. ಇದನ್ನು ಒಪ್ಪಿಕೊಳ್ಳುತ್ತೀರಾ’ ಎಂದು ಆರೋಪಿಗಳನ್ನು ನ್ಯಾಯಾಧೀಶರು ಪ್ರಶ್ನಿಸಿದರು.

‘ಎರಡು, ಮೂರು ಹಾಗೂ 10ನೇ ಆರೋಪಿಗಳ ಜತೆಗೆ ಸೇರಿಕೊಂಡು ಒಳಸಂಚು ರೂಪಿಸಿರುವ ಬಗ್ಗೆ ದೋಷಾರೋಪ ಪಟ್ಟಿಯಲ್ಲಿ ಉಲ್ಲೇಖಿಸಲಾಗಿದೆ’ ಎಂದು ಪವಿತ್ರಾ ಅವರನ್ನೂ ಇದೇ ವೇಳೆ ಪ್ರಶ್ನಿಸಲಾಯಿತು.

ಆಗ ದರ್ಶನ್, ಪವಿತ್ರಾ ಸೇರಿ ಇತರೆ ಆರೋಪಿಗಳು, ‘ತಮ್ಮ ಮೇಲಿರುವ ಎಲ್ಲ ಆರೋಪಗಳು ಸುಳ್ಳು’ ಎಂದು ಹೇಳಿದರು.

ಆರೋಪ ನಿರಾಕರಿಸಿದ್ದರಿಂದ ಮುಂದಿನ ವಿಚಾರಣೆಯನ್ನು ನ.10ಕ್ಕೆ ಮುಂದೂಡಿ ನ್ಯಾಯಾಲಯ ಆದೇಶಿಸಿತು. ಮುಂದಿನ ಸೋಮವಾರದಿಂದ ಸಾಕ್ಷಿಗಳ ವಿಚಾರಣೆ ಆರಂಭ ಆಗಲಿದೆ.

ಪ್ರಕರಣದ 11ನೇ ಆರೋಪಿ ನಾಗರಾಜ್ ಅವರು ಇದೇ ವೇಳೆ ವಕೀಲರನ್ನು ಬದಲಾವಣೆ ಮಾಡಿಕೊಳ್ಳಲು ಅವಕಾಶ ನೀಡುವಂತೆ ನ್ಯಾಯಾಧೀಶರಲ್ಲಿ ಮನವಿ ಮಾಡಿದರು.

ಕೋರ್ಟ್‌ಗೆ ಬಂದಿದ್ದ ಕುಟುಂಬಸ್ಥರು: ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹಕ್ಕೆ ತೆರಳಿ ಯೋಗಕ್ಷೇಮ ವಿಚಾರಿಸಲು ಹೆಚ್ಚಿನ ಅವಕಾಶವಿಲ್ಲದ ಕಾರಣಕ್ಕೆ ದರ್ಶನ್, ಪವಿತ್ರಾ ಹಾಗೂ ಇತರೆ ಆರೋಪಿಗಳ ಕುಟುಂಬಸ್ಥರು ಕೋರ್ಟ್ ಆವರಣಕ್ಕೆ ಬಂದಿದ್ದರು.

ಕೈಬೀಸಿದ ದರ್ಶನ್: ಕೋರ್ಟ್ ಆವರಣದಲ್ಲೂ ದರ್ಶನ್ ಅಭಿಮಾನಿಗಳು ಅಪಾರ ಸಂಖ್ಯೆಯಲ್ಲಿ ಜಮಾಯಿಸಿದ್ದರು. ದರ್ಶನ್ ಅವರು ವಿಚಾರಣೆ ಮುಗಿಸಿ ಪೊಲೀಸ್ ವಾಹನದತ್ತ ತೆರಳಿದಾಗ ‘ಡಿ ಬಾಸ್’ ಎಂದು ಅಭಿಮಾನಿಗಳು ಘೋಷಣೆ ಕೂಗಿದರು. ಆಗ ದರ್ಶನ್ ಅವರು ಅಭಿಮಾನಿಗಳತ್ತ ಕೈಬೀಸಿ ಮೌನದಿಂದಲೇ ವಾಹನ ಹತ್ತಿದರು.

ಮುಂದೆ ಬರುವಂತೆ ಕರೆದ ಪವಿತ್ರಾ

ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ದರ್ಶನ್ ಅವರು ಕ್ವಾರಂಟೈನ್ ಸೆಲ್‌ನಲ್ಲಿದ್ದಾರೆ. ಪವಿತ್ರಾ ಅವರು ಮಹಿಳಾ ಬ್ಯಾರಕ್‌ನಲ್ಲಿ ಇದ್ದಾರೆ. ಎರಡನೇ ಬಾರಿಗೆ ಜೈಲಿಗೆ ತೆರಳಿದ ಮೇಲೆ ಆರೋಪಿಗಳು ನ್ಯಾಯಾಲಯಕ್ಕೆ ಖುದ್ದು ಹಾಜರಾಗಿರಲಿಲ್ಲ. ಸೋಮವಾರ ನಡೆದ ವಿಚಾರಣೆ ವೇಳೆ ಇಬ್ಬರೂ ಮುಖಾಮುಖಿಯಾದರು.

ವಿಚಾರಣೆಗೂ ಮುನ್ನ ದರ್ಶನ್ ಅವರನ್ನು ಮುಂದೆ ಬರುವಂತೆ ಪವಿತ್ರಾ ಕರೆದರು.

ಅಪಾರ ಸಂಖ್ಯೆಯಲ್ಲಿ ವಕೀಲರ ಜಮಾವಣೆ

ಪ್ರಕರಣದ ವಿಚಾರಣೆಯನ್ನು ಸಮೀಪದಿಂದಲೇ ಗಮನಿಸಲು ಹೆಚ್ಚಿನ ಸಂಖ್ಯೆಯಲ್ಲಿ ವಕೀಲರು ಹಾಲ್‌ನಲ್ಲಿ ಜಮಾಯಿಸಿದ್ದರು. ಕಿಕ್ಕಿರಿದು ಜಮಾಯಿಸಿದ್ದ ವಕೀಲರನ್ನು ಕಂಡ ನ್ಯಾಯಾಧೀಶರು, ಮುಗುಳ್ನಗೆ ಬೀರಿದರು.

ಇಷ್ಟು ಮಂದಿ ಸೇರಿದರೆ ದೋಷಾರೋಪ ಹೊರಿಸುವುದು ಹೇಗೆ? ಆರೋಪಿಗಳನ್ನು ಕರೆದು ನಿಲ್ಲಿಸು-ವುದಾದರೂ ಎಲ್ಲಿ? ಪ್ರಕರಣಕ್ಕೆ ಸಂಬಂಧಿಸಿದ ವಕೀಲರು ಮಾತ್ರವೇ ಹಾಲ್‌ನಲ್ಲಿ ಇರಬೇಕು. ಹೀಗಾದರೆ ವಿಚಾರಣೆ ಮುಂದೂಡಲಾಗುವುದು ಎಂದು ನ್ಯಾಯಾಧೀಶರು ಎಚ್ಚರಿಸಿದರು.

ನ್ಯಾಯಾಧೀಶರ ಕೊಠಡಿಯಲ್ಲಿ ವಿಚಾರಣೆ ನಡೆಸುವಂತೆ ಆರೋಪಿಗಳ ಪರ ವಕೀಲರು ಮನವಿ ಮಾಡಿದರು. ಸ್ವಲ್ಪ ಮಂದಿ ಹೊರಕ್ಕೆ ಹೋದ ಮೇಲೆ ವಿಚಾರಣೆ ಆರಂಭವಾಯಿತು.

‘ಪ್ರಕರಣದಲ್ಲಿ ಬಂಧನಕ್ಕೆ ಒಳಗಾಗಿರುವವರು ಅಮಾಯಕರು. ಕೆಲವು ಸಂದರ್ಭದಲ್ಲಿ ಪೊಲೀಸರು ಸುಮ್ಮನೆ ಪ್ರಕರಣ ದಾಖಲಿಸುತ್ತಾರೆ. ನಟ ದರ್ಶನ್ ಅವರು ಕೊಲೆ ಮಾಡುವ ವ್ಯಕ್ತಿಯಲ್ಲ. ಈ ಪ್ರಕರಣದಲ್ಲಿ ರಾಜಕೀಯ ಒತ್ತಡ ಇದೆ’ ಎಂದು ಪವಿತ್ರಾ ಪರ ವಕೀಲ ನಾರಾಯಣಸ್ವಾಮಿ ಆರೋಪಿಸಿದರು.

‘ಈ ಪ್ರಕರಣದಲ್ಲಿ ಕೆಲವರು ವಿಶೇಷ ಆಸಕ್ತಿ ಇಟ್ಟುಕೊಂಡಿದ್ದಾರೆ. ಈ ಪ್ರಕರಣದಲ್ಲಿ ಇರುವವರನ್ನು ಗುರಿಯಾಗಿಸಿ ದೋಷಾರೋಪ ಪಟ್ಟಿ ಸಲ್ಲಿಸಲಾಗಿದೆ. ರಾಜಕೀಯ ಹಿತಾಸಕ್ತಿಯಿರುವ ಪ್ರಕರಣ ಇದಾಗಿದೆ. ಪೊಲೀಸರು ಸಹ ದೋಷಾರೋಪ ಪಟ್ಟಿಯನ್ನು ದೊಡ್ಡ ಗ್ರಂಥದಂತೆ ಬರೆದಿದ್ದಾರೆ’ ಎಂದು ದೂರಿದರು.

ಸುದ್ದಿ 2 ನಿಮಿಷ

ಕೆಂಭಾವಿ: ಪಥಸಂಚಲನಕ್ಕೆ ಸಮ್ಮತಿ

ಕೆಂಭಾವಿ (ಯಾದಗಿರಿ ಜಿಲ್ಲೆ): ಕೆಂಭಾವಿ ಪಟ್ಟಣದಲ್ಲಿ ಮಂಗಳವಾರ (ನ.4) ಪಥಸಂಚಲನ ನಡೆಸಲು ಆರ್‌ಎಸ್‌ಎಸ್ ಸಂಘಟನೆಗೆ ಜಿಲ್ಲಾಧಿಕಾರಿ ಹರ್ಷಲ್ ಭೋಯರ್ ಷರತ್ತು ಬದ್ಧ ಅನುಮತಿ ನೀಡಿದ್ದಾರೆ.

‘ಆರ್‌ಎಸ್‌ಎಸ್‌ಗೆ ಲಾಠಿ ಹಿಡಿದು ಅನುಮತಿ ನೀಡಬಾರದು. ಅನುಮತಿಸಿದರೆ ನಮಗೂ ಅದೇ ದಿನ ಪಥಸಂಚಲನಕ್ಕೆ ಅವಕಾಶ ಕೊಡಬೇಕು’ ಎಂದು ದಸಂಸ (ಸ್ವಾಭಿಮಾನಿ ಪ್ರೊ. ಜಿ.ಕೃಷ್ಣಪ್ಪ ಬಣ) ಹಾಗೂ ರಾಜ್ಯ ದಲಿತ ಸಂಘರ್ಷ ಸಮಿತಿ ಅರ್ಜಿ ಸಲ್ಲಿಸಿದ್ದವು.

‘ನ. 4ರಂದು ಆರ್‌ಎಸ್‌ಎಸ್ ಪಥಸಂಚಲನ ನಡೆಸಲಿದೆ. ಬೇರೆ ದಿನ ಮಾಡುವಂತೆ ದಲಿತ ಸಂಘಟನೆಗಳಿಗೆ ಹೇಳಿದ್ದೇವೆ. ಮಿಕ್ಕಿದ್ದು ಪೊಲೀಸರಿಗೆ ಬಿಟ್ಟಿದ್ದು’ ಎಂದು ಜಿಲ್ಲಾಧಿಕಾರಿ ತಿಳಿಸಿದ್ದಾರೆ.

‘ಅನುಮತಿ ಇಲ್ಲದೆ ಪಥಸಂಚಲನ ಮಾಡಿದರೆ ಕಾನೂನು ರೀತಿ ಕ್ರಮ ತೆಗೆದುಕೊಳ್ಳಲಾಗುವುದು’ ಎಂದು ಎಸ್‌ಪಿ ಪೃಥ್ವಿಕ್ ಶಂಕರ್ ಅವರು ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದರು.

ಪಟ್ಟು ಬಿಡದ ರೈತರು: 6ನೇ ದಿನಕ್ಕೆ ಅಹೋರಾತ್ರಿ ಧರಣಿ

ಬೆಳಗಾವಿ: ಕಬ್ಬಿಗೆ ₹3,500 ದರ ನೀಡುವಂತೆ ಆಗ್ರಹಿಸಿ ಜಿಲ್ಲೆಯ ರೈತರು ವಿವಿಧೆಡೆ ಹಮ್ಮಿಕೊಂಡ ಧರಣಿ ಸೋಮವಾರ ಐದು ದಿನ ಪೂರೈಸಿತು. ಮೂಡಲಗಿ ತಾಲ್ಲೂಕಿನ ಗುರ್ಲಾಪುರದ ಬಳಿ 10 ಸಾವಿರಕ್ಕೂ ಹೆಚ್ಚು ರೈತರು ಅಹೋರಾತ್ರಿ ಧರಣಿ ನಡೆಸಿದ್ದಾರೆ.

ಬೆಳಗಾವಿ, ಬಾಗಲಕೋಟೆ, ವಿಜಯಪುರ, ಕಲಬುರಗಿ, ಯಾದಗಿರಿ, ರಾಯಚೂರು, ಧಾರವಾಡ, ಶಿವಮೊಗ್ಗ ಜಿಲ್ಲೆಗಳ ರೈತರೂ ಈ ಧರಣಿಯಲ್ಲಿ ಪಾಲ್ಗೊಂಡಿದ್ದಾರೆ. 25ಕ್ಕೂ ಹೆಚ್ಚು ಮಠಾಧೀಶರು, ವಿದ್ಯಾರ್ಥಿಗಳು, ವಕೀಲರು, ಮಾಜಿ ಸೈನಿಕರು, ನಿವೃತ್ತ ಸರ್ಕಾರಿ ನೌಕರರು, ಪತ್ರಕರ್ತರು ಹೀಗೆ ವಿವಿಧ ಸಂಘಟನೆಗಳ ಸದಸ್ಯರೂ ಹೋರಾಟಕ್ಕೆ ಬೆಂಬಲ ನೀಡಿದ್ದಾರೆ.

ಗುರ್ಲಾಪುರ ಬಳಿ ರಾಜ್ಯ ಹೆದ್ದಾರಿ ಐದು ದಿನಗಳಿಂದ ಸಂಪೂರ್ಣ ಬಂದ್ ಆಗಿದೆ. ವಾಹನ ಸವಾರರು 20 ಕಿ.ಮೀ ಸುತ್ತಿ-ಬಳಸಿ ಪರ್ಯಾಯ ಮಾರ್ಗದಲ್ಲಿ ಸಂಚರಿಸಬೇಕಾಗಿದೆ.

ಆತ್ಮಹತ್ಯೆಗೆ ಯತ್ನ: ತಾಲ್ಲೂಕಿನ ಗುರ್ಲಾಪುರ ಗ್ರಾಮದ ರಾಜ್ಯ ಹೆದ್ದಾರಿಯಲ್ಲಿ ಸೋಮವಾರ ರೈತರು ಧರಣಿ ನಡೆಸುತ್ತಿದ್ದ ವೇಳೆ ಲಕ್ಕಪ್ಪ ಗುಣದಾಳ (30) ಎಂಬುವರು ಸಂಸದ ಜಗದೀಶ ಶೆಟ್ಟರ್ ಎದುರೇ ವಿಷ ಕುಡಿದು, ಆತ್ಮಹತ್ಯೆಗೆ ಯತ್ನಿಸಿದರು. ಅವರನ್ನು ಆಸ್ಪತ್ರೆಗೆ ಸೇರಿಸಲಾಗಿದೆ.

ಚಿಟಿಕೆ ಸುದ್ದಿ

ಲಲಿತಾ ನಾಯಕ್, ಶಿವರುದ್ರಯ್ಯಗೆ ‘ಬರಗೂರು ಪ್ರಶಸ್ತಿ’

ಬೆಂಗಳೂರು: ನಾಡೋಜ ಡಾ. ಬರಗೂರು ಪ್ರತಿಷ್ಠಾನ ನೀಡುವ ‘ಬರಗೂರು ಪ್ರಶಸ್ತಿ’ಗೆ ಸಾಹಿತಿ ಬಿ.ಟಿ. ಲಲಿತಾ ನಾಯಕ್, ನಿರ್ದೇಶಕ ಶಿವರುದ್ರಯ್ಯ ಆಯ್ಕೆಯಾಗಿದ್ದಾರೆ.

ಪ್ರಶಸ್ತಿಯು ತಲಾ ₹10 ಸಾವಿರ ನಗದು, ಪ್ರಶಸ್ತಿ ಫಲಕ ಒಳಗೊಂಡಿದೆ. ಇದೇ 14ರಂದು ಬೆಂಗಳೂರಿನ ಸರ್ಕಾರಿ ಕಲಾ ಕಾಲೇಜಿನ ಬಾಪೂಜಿ ಸಭಾಂಗಣದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ನಿವೃತ್ತ ಐಎಎಸ್ ಅಧಿಕಾರಿ ಐ.ಎಂ. ವಿಠಲಮೂರ್ತಿ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ ಎಂದು ಪ್ರತಿಷ್ಠಾನದ ಕಾರ್ಯದರ್ಶಿ ಎ.ವಿ. ಲಕ್ಷ್ಮೀನಾರಾಯಣ ತಿಳಿಸಿದ್ದಾರೆ.

ಹಂಗಾಮಿ ಅಧ್ಯಕ್ಷರಾಗಿ ಶಶಿಧರ ನೇಮಕ

ಬೆಂಗಳೂರು: ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಹಂಗಾಮಿ ಅಧ್ಯಕ್ಷರನ್ನಾಗಿ ಶಶಿಧರ ಕೋಸಂಬೆ ಅವರನ್ನು ನೇಮಕ ಮಾಡಲಾಗಿದೆ.

ಶಶಿಧರ ಕೋಸಂಬೆ

ರಾಜ್ಯ ಮಕ್ಕಳ ಹಕ್ಕುಗಳ ಆಯೋಗದ ಅಧ್ಯಕ್ಷರಾಗಿದ್ದ ಕೆ.ನಾಗಣ್ಣ ಗೌಡ ಅವರ ಅಧಿಕಾರ ಅವಧಿ ಅಕ್ಟೋಬರ್ 20ರಂದು ಮುಕ್ತಾಯವಾಗಿತ್ತು. ಆಯೋಗದ ಸದಸ್ಯರ ಶಶಿಧರ ಕೋಸಂಬೆ ಅವರನ್ನು ಹಂಗಾಮಿ ಅಧ್ಯಕ್ಷರನ್ನಾಗಿ ನೇಮಿಸಲಾಗಿದೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ತನ್ನ ಆದೇಶದಲ್ಲಿ ತಿಳಿಸಿದೆ.

ಘಟಿಕೋತ್ಸವ ನಾಳೆ

ಹುಬ್ಬಳ್ಳಿ: ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯದ 7ನೇ ಘಟಿಕೋತ್ಸವ ನ.5ರಂದು ಧಾರವಾಡ ಕೃಷಿ ವಿ.ವಿ ಸಭಾಂಗಣದಲ್ಲಿ ನಡೆಯಲಿದೆ.

‘7,716 ಪದವೀಧರರಿಗೆ ಪ್ರಮಾಣಪತ್ರ, 150 ವಿದ್ಯಾರ್ಥಿಗಳಿಗೆ ರ್‍ಯಾಂಕ್ ಪ್ರಮಾಣಪತ್ರ, ಇಬ್ಬರಿಗೆ ಪಿಎಚ್.ಡಿ ಮತ್ತು 28 ವಿದ್ಯಾರ್ಥಿಗಳಿಗೆ ಚಿನ್ನದ ಪದಕ ಪ್ರದಾನ ನೀಡಲಾಗುವುದು’ ಎಂದು ಕುಲಪತಿ ಪ್ರೊ. ಸಿ.ಬಸವರಾಜು ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

‘ಆಂಧ್ರಪ್ರದೇಶದ ರಾಜ್ಯಪಾಲ ಎಸ್. ಅಬ್ದುಲ್ ನಜೀರ್ ಮತ್ತು ಹಿರಿಯ ವಕೀಲ ವಿ.ಸುಧೀಶ್ ಪೈ ಅವರಿಗೆ ಗೌರವ ಡಾಕ್ಟರೇಟ್ ಪ್ರದಾನ ಮಾಡಲಾಗುವುದು’ ಎಂದರು.

ಒಂದೇ ಕುಟುಂಬದ ಮೂವರ ನೇತ್ರದಾನ

ಹನೂರು (ಚಾಮರಾಜನಗರ): ನಂಜನಗೂಡಿನಲ್ಲಿ ನಡೆದ ಅಪಘಾತದಲ್ಲಿ ಮೃತಪಟ್ಟಿದ್ದ ಒಂದೇ ಕುಟುಂಬದ ಮೂವರ ನೇತ್ರಗಳನ್ನು ಕುಟುಂಬದವರು ಮೈಸೂರಿನ ಕೆ.ಆರ್.ಆಸ್ಪತ್ರೆಗೆ ದಾನ ಮಾಡಿದ್ದಾರೆ.

ತಾಲ್ಲೂಕಿನ ಉದ್ದನೂರು ಗ್ರಾಮದ ಶಿವಮೂರ್ತಿ, ಅವರ ಪತ್ನಿ ಚೆನ್ನಾಜಮ್ಮ, ಪುತ್ರ ಸಿದ್ಧಾರ್ಥ್ ದ್ವಿಚಕ್ರವಾಹನದಲ್ಲಿ ಬರುವಾಗ ನಂಜನಗೂಡಿನ ಚಾಮುಂಡಿ ಟೌನ್‌ಶಿಪ್ ಬಳಿ ಅಪಘಾತವಾಗಿತ್ತು. ಗುಂಡ್ಲುಪೇಟೆ ಕಡೆಗೆ ಹೋಗುತ್ತಿದ್ದ ಕೆಎಸ್‌ಆರ್‌ಟಿಸಿ ಬಸ್ ಹೊಡೆದಿತ್ತು.

ಒಳ ಮೀಸಲು ಪ್ರಶ್ನಿಸಿ ರಿಟ್: ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿರುವ 101 ಪರಿಶಿಷ್ಟ ಜಾತಿಗಳನ್ನು ಪ್ರವರ್ಗವಾರು ವರ್ಗೀಕರಿಸಿ ಒಳಮೀಸಲಾತಿ ಹಂಚಿಕೆ ಮಾಡಿ ಹೊರಡಿಸಲಾದ ಆದೇಶವನ್ನು ಆಕ್ಷೇಪಿಸಿ ಬಂಜಾರ, ಭೋವಿ, ಕೊರಮ ಮತ್ತು ಕೊರಚ ಸಮುದಾಯಗಳು ಸಲ್ಲಿಸಿರುವ ಅರ್ಜಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರಕ್ಕೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

‘ಬಂಜಾರ, ಭೋವಿ, ಕೊರಚ ಮತ್ತು ಕೊರಮ ಸಮಾಜಗಳ ಕಲ್ಯಾಣ ಸಂಘ’ದ ಅಧ್ಯಕ್ಷ ಶಾಮರಾವ್ ಕೆ.ಪವಾರ್ ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು. ವಿಚಾರಣೆ ವೇಳೆ ಅರ್ಜಿದಾರರ ಪರ ಪದಾಂಕಿತ ಹಿರಿಯ ವಕೀಲ ಎಸ್.ಶಂಕರನಾರಾಯಣ ಅವರು, ‘ಈ ಪ್ರಕರಣದಲ್ಲಿ ಮಧ್ಯಂತರ ತಡೆ ನೀಡಬೇಕು’ ಎಂದು ನ್ಯಾಯಪೀಠಕ್ಕೆ ಮನವಿ ಮಾಡಿದರು. ಇದಕ್ಕೆ ಪೀಠವು ‘ಒಳ ಮೀಸಲಾತಿ ನಿರ್ಣಯದ ಅನ್ವಯ ನೇಮಕಾತಿ ಮಾಡದಂತೆ ತಡೆ ನೀಡಿರುವುದರಿಂದ ಈ ಅರ್ಜಿಯಲ್ಲಿ ಮತ್ತೊಮ್ಮೆ ಮಧ್ಯಂತರ ಆದೇಶ ಪರಿಗಣಿಸುವ ಅಗತ್ಯವಿಲ್ಲ ಎಂಬ ಅಭಿಪ್ರಾಯ ವ್ಯಕ್ತಪಡಿಸಿತು.

ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ ಪ್ರಧಾನ ಕಾರ್ಯದರ್ಶಿ, ಆಯುಕ್ತ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಆಯೋಗದ ಮುಖ್ಯಸ್ಥರಿಗೆ ನೋಟಿಸ್ ನೋಟಿಸ್ ಜಾರಿಗೊಳಿಸಲು ಆದೇಶಿಸಿದ ನ್ಯಾಯಪೀಠ ವಿಚಾರಣೆ ಮುಂದೂಡಿತು.

ಅಂತೆಯೇ, ನ್ಯಾ.ನಾಗಮೋಹನ ದಾಸ್ ವರದಿ ಅನುಸಾರ ಹಂಚಿಕೆ ಮಾಡಲಾಗಿರುವ ಮೀಸಲಾತಿ ಅನ್ವಯ ಹೊಸ ನೇಮಕಾತಿ ಮಾಡುವುದಕ್ಕೆ ತಡೆ ನೀಡಲಾಗಿರುವ ಅರ್ಜಿಯನ್ನೂ ಇದರ ಜೊತೆ ವಿಚಾರಣೆಗೆ ಪಟ್ಟಿ ಮಾಡುವಂತೆ ಆದೇಶಿಸಿತು.

ಅರ್ಜಿಯಲ್ಲಿ ಏನಿದೆ?: ನ್ಯಾ. ಎಚ್. ಎನ್. ನಾಗಮೋಹನದಾಸ್ ಆಯೋಗ ಸಲ್ಲಿರುವ ವರದಿಯಲ್ಲಿನ ಜಾತಿವಾರು ವರ್ಗೀಕರಣವನ್ನು ಪರಿಷ್ಕರಿಸಿ 101 ಪರಿಶಿಷ್ಟ ಜಾತಿಗಳನ್ನು ಮೂರು ಗುಂಪುಗಳಾಗಿ ಅಂದರೆ ಎಡಗೈ, ಬಲಗೈ ಮತ್ತು ಸ್ಪೃಶ್ಯ ಎಂದು ವರ್ಗೀಕರಿಸಿ ಸಚಿವ ಸಂಪುಟದಲ್ಲಿ ತೀರ್ಮಾನಿಸಲಾಗಿತ್ತು. ಅದರಂತೆ ಪರಿಶಿಷ್ಟ ಜಾತಿಗೆ ಇರುವ ಒಟ್ಟು ಶೇ 17ರ ಮೀಸಲಾತಿಯಲ್ಲಿ ಎಡಗೈ-ಬಲಗೈ ಸಮುದಾಯಗಳಿಗೆ ತಲಾ ಶೇ 6, ಕೊರಚ, ಕೊರಮ, ಭೋವಿ, ಲಂಬಾಣಿ ಜಾತಿಗಳನ್ನೊಳಗೊಂಡ ಸ್ಪೃಶ್ಯ ಗುಂಪುಗಳಿಗೆ ಶೇ 5ರಷ್ಟು ಮೀಸಲಾತಿ ನಿಗದಿಪಡಿಸಲಾಗಿತ್ತು. 2025ರ ಆಗಸ್ಟ್ 19ರಂದು ಮೀಸಲಾತಿ ಹಂಚಿಕೆ ಮಾಡಿರುವ ಸರ್ಕಾರದ ಕ್ರಮವನ್ನು ಅರ್ಜಿದಾರರು ಪ್ರಶ್ನಿಸಿದ್ದಾರೆ. ಅರ್ಜಿದಾರರ ಪರ ಹೈಕೋರ್ಟ್ ವಕೀಲ ಎಸ್.ಹರೀಶ್ ವಕಾಲತ್ತು ವಹಿಸಿದ್ದಾರೆ.

ಅಗ್ನಿ ಸುರಕ್ಷಾ ಪ್ರಮಾಣಪತ್ರ ಕಡ್ಡಾಯ

ಬೆಂಗಳೂರು: ಖಾಸಗಿ ಶಾಲೆಗಳ ಮಾನ್ಯತೆ ನವೀಕರಣ ಸಂದರ್ಭದಲ್ಲಿ ಶಾಲಾ ಕಟ್ಟಡದ ಸುರಕ್ಷತೆಯ ಪ್ರಮಾಣಪತ್ರ, ನಕ್ಷೆ ಅನುಮೋದನೆ ಮತ್ತು ಅಗ್ನಿ ಸುರಕ್ಷತಾ ಪ್ರಮಾಣ ಪತ್ರ ಸಲ್ಲಿಕೆಯನ್ನು ಕಡ್ಡಾಯಗೊಳಿಸಿದ್ದ ಸರ್ಕಾರದ ಕ್ರಮವನ್ನು ಎತ್ತಿಹಿಡಿ-ದಿದ್ದ ಏಕಸದಸ್ಯ ನ್ಯಾಯಪೀಠದ ಆದೇಶಕ್ಕೆ ತಡೆ ನೀಡಲು ವಿಭಾಗೀಯ ನ್ಯಾಯಪೀಠ ನಿರಾಕರಿಸಿದೆ.

ಏಕದಸದಸ್ಯ ನ್ಯಾಯಪೀಠದ ಆದೇಶ ಪ್ರಶ್ನಿಸಿ, ಅನುದಾನರಹಿತ, ಮಾನ್ಯತೆ ಪಡೆದ ಶಾಲೆಗಳ ಸಂಘದ ಕಾರ್ಯದರ್ಶಿ ಎನ್.ಪ್ರಭಾಕರ ಅರಸ್ ಸೇರಿದಂತೆ ಮೂರು ಸಂಸ್ಥೆಗಳು ಸಲ್ಲಿಸಿರುವ ರಿಟ್ ಮೇಲ್ಮನವಿಯನ್ನು ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ನೇತೃತ್ವದ ವಿಭಾಗೀಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

‘ಅನುದಾನರಹಿತ ಮಾನ್ಯತೆ ಪಡೆದ ಶಾಲೆಗಳ ಸಂಘಗಳ ಅಧೀನದಲ್ಲಿ ಎಷ್ಟು ಶಾಲೆಗಳಿಗೆ ಏಕಸದಸ್ಯ ನ್ಯಾಯಪೀಠದ ಆದೇಶ ಜಾರಿ ಮಾಡಲು ಆಗುವುದಿಲ್ಲ ಮತ್ತು ಯಾವ ಕಟ್ಟಡಗಳಲ್ಲಿ ಸರ್ಕಾರದ ಸುತ್ತೋಲೆ ಮತ್ತು ಏಕಸದಸ್ಯ ನ್ಯಾಯಪೀಠದ ಆದೇಶವನ್ನು ಜಾರಿಗೊಳಿಸಲು ಸಾಧ್ಯವಿಲ್ಲ ಎಂಬುದರ ವಿವರವನ್ನು ಸಂಘದ ಸದಸ್ಯರ ಸಹಿ ಹೊಂದಿದ ವಿವರವಾದ ಪ್ರಮಾಣ ಪತ್ರದ ಮೂಲಕ ನ್ಯಾಯಾಲಯಕ್ಕೆ ಸಲ್ಲಿಸಬೇಕು’ ಎಂದು ಅರ್ಜಿದಾರರ ಪರ ವಕೀಲರಿಗೆ ಸೂಚಿಸಿದ ನ್ಯಾಯಪೀಠ ವಿಚಾರಣೆಯನ್ನು ನಾಲ್ಕು ವಾರಗಳ ಕಾಲ ಮುಂದೂಡಿದೆ.

ಪ್ರಕರಣವೇನು?: ಸುಪ್ರೀಂ ಕೋರ್ಟ್ ನಿರ್ದೇಶನದಂತೆ ರಾಜ್ಯ ಸರ್ಕಾರ 2022ರ ಜೂನ್ 6ರಂದು ಸುತ್ತೋಲೆ ಹೊರಡಿಸಿ, ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ಎಲ್ಲ ಖಾಸಗಿ ಶಾಲೆಗಳು ಮಾನ್ಯತೆ ನವೀಕರಣಕ್ಕಾಗಿ ಅರ್ಜಿ ಸಲ್ಲಿಸುವಾಗ ಅಗ್ನಿ ಸುರಕ್ಷತಾ ಕ್ರಮಗಳನ್ನು ಅಳವಡಿಸಿಕೊಂಡಿರುವ ಪ್ರಮಾಣ ಪತ್ರವನ್ನು ಸಲ್ಲಿಸಬೇಕು ಎಂದು ನಿರ್ದೇಶನ ನೀಡಿತ್ತು. ಇದನ್ನು ಪ್ರಶ್ನಿಸಿ ಹೈಕೋರ್ಟ್ ಮೆಟ್ಟಿಲೇರಲಾಗಿತ್ತು.

ತಂತ್ರಾಂಶ ಅಭಿವೃದ್ಧಿಗೆ ಆಗ್ರಹ

ಬೆಂಗಳೂರು: ‘ಒಳಮೀಸಲಾತಿ ಕಲ್ಪಿಸುವ ಕುರಿತು ಆದೇಶದ ಅನ್ವಯ ಅಗತ್ಯ ತಂತ್ರಾಂಶ ರೂಪಿಸದೇ ಸರ್ಕಾರ ಉಡಾಫೆ ಧೋರಣೆ ಪ್ರದರ್ಶಿಸಿದೆ’ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಟೀಕಿಸಿದ್ದಾರೆ.

ಜಾತಿ ಪ್ರಮಾಣಪತ್ರ ವಿತರಿಸಲು ತಂತ್ರಾಂಶ ಅಭಿವೃದ್ಧಿಪಡಿಸದ ಕುರಿತ ‘ಪ್ರಜಾವಾಣಿ’ ವರದಿಯನ್ನು ಉಲ್ಲೇಖಿಸಿ ‘ಎಕ್ಸ್’ ಮೂಲಕ ಅವರು ಸರ್ಕಾರವನ್ನು ತರಾಟೆಗೆ ತೆಗೆದುಕೊಂಡಿದ್ದಾರೆ.

‘ಸ್ಥಳೀಯ ಸಂಸ್ಥೆ ಮೀಸಲು ನಿಗದಿಗೆ 150 ದಿನ ಬೇಕು’

ಒಂದನೇ ಪುಟದಿಂದ...

ವಿಚಾರಣೆ ವೇಳೆ ಸರ್ಕಾರದ ಪರ ಹೆಚ್ಚುವರಿ ಅಡ್ವೊಕೇಟ್ ಜನರಲ್ ಪ್ರತಿಮಾ ಹೊನ್ನಾಪುರ ಅವರು, ‘ವಾರ್ಡ್‌ವಾರು ಮೀಸಲಾತಿಯ ಅಂತಿಮ ಅಧಿಸೂಚನೆ ಹೊರಡಿಸಲು ಕನಿಷ್ಠ 150 ದಿನಗಳಾದರೂ ಬೇಕಾಗುತ್ತದೆ’ ಎಂದು ಲಿಖಿತ ಹೇಳಿಕೆ ಸಲ್ಲಿಸಿದರು.

‘ಈಗಾಗಲೇ 52 ಸ್ಥಳೀಯ ಸಂಸ್ಥೆಗಳಿಂದ ಮಾಹಿತಿ ಲಭ್ಯವಾಗಿದೆ. ಉಳಿದ 136ರ ಮಾಹಿತಿಯನ್ನು ನಿರೀಕ್ಷಿಸಲಾಗುತ್ತಿದೆ. ಮೀಸಲಾತಿ ಅಂತಿಮ ಅಧಿಸೂಚನೆ ಬಳಿಕ ಪಟ್ಟಿಯನ್ನು ರಾಜ್ಯ ಚುನಾವಣಾ ಆಯೋಗಕ್ಕೆ ಸಲ್ಲಿಸಲಾಗುವುದು. ನಂತರ ಆಯೋಗವು ಮುಂದಿನ ಪ್ರಕ್ರಿಯೆಯನ್ನು ಪ್ರಾರಂಭಿಸಬಹುದು’ ಎಂದು ನ್ಯಾಯಪೀಠಕ್ಕೆ ತಿಳಿಸಿದರು.

ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿದ ರಾಜ್ಯ ಚುನಾವಣಾ ಆಯೋಗದ ಪರ ಪದಾಂಕಿತ ಹಿರಿಯ ವಕೀಲ ಕೆ.ಎನ್. ಫಣೀಂದ್ರ, ‘ಸ್ಥಳೀಯ ಸಂಸ್ಥೆಗಳಿಗೆ ಕಾಲಮಿತಿಯೊಳಗೆ ಚುನಾವಣೆ ನಡೆಸುವ ಹಾಗೂ ಅವಧಿ ಮುಗಿದ ಸ್ಥಳೀಯ ಸಂಸ್ಥೆಗಳಿಗೆ ಆಡಳಿತಾಧಿಕಾರಿ ನೇಮಕ ಮಾಡುವ ವಿಚಾರದಲ್ಲಿ ಸುಪ್ರೀಂ ಕೋರ್ಟ್ ಸ್ಪಷ್ಟವಾಗಿ ಹೇಳಿದೆ’ ಎಂಬ ಅಂಶವನ್ನು ಪುನರುಚ್ಚರಿಸಿದರು.

‘ಕೆಲ ನಗರ ಸ್ಥಳೀಯ ಸಂಸ್ಥೆಗಳಿಗಷ್ಟೇ ವಾರ್ಡ್‌ವಾರು ಪುನರ್ ವಿಂಗಡಣೆ ಮಾಡಬೇಕಿದೆ. ಹಾಗಾಗಿ, ಮೀಸಲಾತಿ ನಿಗದಿ ಪ್ರಕ್ರಿಯೆ ಆರಂಭಿಸುತ್ತಿದ್ದಂತೆಯೇ, ಅದರ ಜೊತೆಯಲ್ಲೇ ಮತದಾರರ ಪಟ್ಟಿ ತಯಾರಿಸಲು ಆಯೋಗಕ್ಕೆ ಅನುಮತಿ ನೀಡಬೇಕು’ ಎಂದು ನ್ಯಾಯಪೀಠಕ್ಕೆ ಮನವಿ ಮಾಡಿದರು.

ವಾದ–ಪ್ರತಿವಾದ ಆಲಿಸಿದ ನ್ಯಾಯಪೀಠ, ‘ನಗರ ಸ್ಥಳೀಯ ಸಂಸ್ಥೆಗಳಿಗೆ ಯಾವಾಗ ಚುನಾವಣೆ ನಡೆಸುತ್ತೀರಿ? ವಾರ್ಡ್‌ವಾರು ಮರುವಿಂಗಡಣೆ ಮತ್ತು ಮೀಸಲಾತಿ ಪ್ರಕ್ರಿಯೆ ಯಾವ ಕಾಲಮಿತಿಯಲ್ಲಿ ಮುಗಿಯಲಿದೆ? ಈ ಪ್ರಕ್ರಿಯೆ ನಡೆಯುವಾಗಲೇ ಆಯೋಗ ಮತದಾರರ ಪಟ್ಟಿ ತಯಾರಿಸುವ ಕಾರ್ಯ ನಡೆಸಬಹುದೇ ಎಂಬ ಬಗ್ಗೆ ಚರ್ಚಿಸಲು ರಾಜ್ಯ ಸರ್ಕಾರ ಮತ್ತು ರಾಜ್ಯ ಚುನಾವಣಾ ಆಯೋಗ ಇದೇ 5ರಂದು ರಾಜ್ಯ ಚುನಾವಣಾ ಆಯೋಗದ ಕಚೇರಿಯಲ್ಲಿ ಸಭೆ ನಡೆಸಿ ಅದರ ಮಾಹಿತಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಬೇಕು’ ಎಂದು ಸೂಚಿಸಿ ವಿಚಾರಣೆಯನ್ನು ಇದೇ 11ಕ್ಕೆ ಮುಂದೂಡಿತು.

‘ಸರ್ಕಾರಕ್ಕೆ ಚುನಾವಣೆ ಬೇಕಿಲ್ಲ’

‘ವಾರ್ಡ್‌ವಾರು ಮರು ವಿಂಗಡಣೆ ಮತ್ತು ಮೀಸಲಾತಿ ನಿಗದಿಗೆ ನಮ್ಮದೇನೂ ಅಡ್ಡಿಯಿಲ್ಲ. ಒಂದೊಮ್ಮೆ ಚುನಾವಣಾ ವೇಳಾಪಟ್ಟಿ ಪ್ರಕಟಿಸಿದ್ದೇ ಆದಲ್ಲಿ, ಎಲ್ಲ ಅರ್ಜಿದಾರರೂ ತಮ್ಮ ಮನವಿಯಿಂದ ಹಿಂದೆ ಸರಿಯಲಿದ್ದಾರೆ. ಆದರೆ, ಅಸಲಿಗೆ ಸರ್ಕಾರಕ್ಕೆ ಸ್ಥಳೀಯ ಸಂಸ್ಥೆಗಳ ಚುನಾವಣೆಯೇ ಬೇಕಿಲ್ಲ’ ಎಂದು ಅರ್ಜಿದಾರರೊಬ್ಬರ ಪರ ವಾದ ಮಂಡಿಸಿದ ಪದಾಂಕಿತ ಹಿರಿಯ ವಕೀಲ ಎಸ್.ಬಸವರಾಜ್ ಆರೋಪಿಸಿದರು.

ವಿಚಾರಣೆ ವೇಳೆ ವಾದ ಮಂಡಿಸಿದ ಅವರು, ‘ಎಷ್ಟು ಸಾಧ್ಯವೋ ಅಷ್ಟು ಬೇಗ ಸ್ಥಳೀಯ ಸಂಸ್ಥೆಗಳನ್ನು ಆಡಳಿತಾಧಿಕಾರಿಗಳ ವಶಕ್ಕೆ ಒಪ್ಪಿಸುವ ಉದ್ದೇಶ ಸರ್ಕಾರಕ್ಕೆ ಇದ್ದಂತಿದೆ. ಆಡಳಿತಾಧಿಕಾರಿಗಳ ನೇಮಕಕ್ಕೆ ಯಾಕಿಷ್ಟು ಆತುರ-ಪಡುತ್ತಿದೆ ಎಂಬುದೇ ಅರ್ಥವಾಗುತ್ತಿಲ್ಲ. ಗ್ರೇಟರ್ ಬೆಂಗಳೂರು ಪ್ರಾಧಿಕಾರಕ್ಕೆ (ಜಿಬಿಎ) ಏಳೆಂಟು ವರ್ಷಗಳಿಂದ ಚುನಾವಣೆ ನಡೆದಿಲ್ಲ. ಪಂಚಾಯಿತಿಗಳಿಗೂ ನಾಲ್ಕು ವರ್ಷಗಳಿಂದ ಚುನಾವಣೆ ಆಗಿಲ್ಲ. ಈಗ ನಗರ ಸ್ಥಳೀಯ ಸಂಸ್ಥೆಗಳಿಗೆ ಆಡಳಿತಾಧಿಕಾರಿ ನೇಮಕ ಮಾಡಿದರೆ, ಕನಿಷ್ಠ ಒಂದು ವರ್ಷದ ತನಕ ಸರ್ಕಾರ ಚುನಾವಣೆ ನಡೆಸುವುದಿಲ್ಲ’ ಎಂದು ಆತಂಕ ವ್ಯಕ್ತಪಡಿಸಿದರು.

‘ಕಾಡಿನಲ್ಲಿ ಜನರ ಓಡಾಟ ಹೆಚ್ಚಿದೆ’

ಪ್ರಜಾವಾಣಿ ವಾರ್ತೆ

ಮೈಸೂರು: ಅರಣ್ಯದಲ್ಲಿ ಜನರ ಓಡಾಟ ಹೆಚ್ಚಿದೆ, ರೆಸಾರ್ಟ್‌ಗಳಾಗಿವೆ. ಸಫಾರಿ ಜಾಸ್ತಿ ಆಗುತ್ತಿದೆ. ಕಾಡೊಳಗೆ ನೀರು, ಮೇವು ಇಲ್ಲದಿರುವುದು, ಚಿರತೆಗಳ ಹಾವಳಿ ಮೊದಲಾದ ಕಾರಣದಿಂದ ಕಾಡುಪ್ರಾಣಿಗಳು ಹೊರಗೆ ಬರುತ್ತಿವೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇಲ್ಲಿ ತಿಳಿಸಿದರು.

ಸುದ್ದಿಗಾರರ ಜೊತೆಗೆ ಮಾತನಾಡಿದವರು, ಸರಗೂರು ತಾಲ್ಲೂಕಿನಲ್ಲಿ ಹುಲಿ ದಾಳಿಯಿಂದ ಇಬ್ಬರು ರೈತರು ಮೃತರಾಗಿರುವ ಕುರಿತ ಪ್ರಶ್ನೆಗೆ ‘ನಿಜ ಹೇಳ್ಲಾ?’ ಎಂದು ಹೀಗೆ ಪ್ರತಿಕ್ರಿಯೆ ನೀಡಿದರು.

‘ವನ್ಯಜೀವಿ ಮಾನವ ಸಂಘರ್ಷ ತಡೆ ಸಂಬಂಧ ಸಚಿವರಾದ ಈಶ್ವರ ಖಂಡ್ರೆ, ಡಾ.ಎಚ್.ಸಿ. ಮಹದೇವಪ್ಪ, ಕೆ.ವೆಂಕಟೇಶ್ ಚಾಮರಾಜನಗರದಲ್ಲಿ ಸಭೆ ನಡೆಸಿದ್ದಾರೆ. ಶೀಘ್ರದಲ್ಲೇ ನಾನೂ ಸಭೆ ನಡೆಸಲಿದ್ದೇನೆ’ ಎಂದು ಅವರು ಹೇಳಿದರು.

‘ಅಕ್ರಮ ರೆಸಾರ್ಟ್‌ಗಳ ವಿರುದ್ಧ ಕ್ರಮ ಕೈಗೊಳ್ಳುತ್ತೇವೆ. ರೆಸಾರ್ಟ್‌ಗಳು ಜಾಸ್ತಿ ಆಗಿದ್ದರಿಂದಲೇ ಕಾಡುಪ್ರಾಣಿಗಳು ನಾಡಿಗೆ ಬರುತ್ತಿವೆ ಎಂಬುದೂ ಒಂದು ಕಾರಣವಷ್ಟೇ ಹೊರತು, ಅದೇ ಮುಖ್ಯ ಕಾರಣವಲ್ಲ. ಸಫಾರಿ ಟ್ರಿಪ್ ಕಡಿಮೆ ಮಾಡುವಂತೆಯೂ ಸೂಚಿಸಿದ್ದೇನೆ’ ಎಂದರು.

ಸಿನಿತಾರೆಗಳ ಪ್ರಶಸ್ತಿ ಸಂಭ್ರಮ

ರಾಜ್ಯ ಚಲನಚಿತ್ರ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಉಮಾಶ್ರೀ, ಜೆ.ಕೆ. ಶ್ರೀನಿವಾಸಮೂರ್ತಿ ಅವರಿಗೆ ‘ಡಾ.ರಾಜ್‌ಕುಮಾರ್ ಪ್ರಶಸ್ತಿ’, ಎನ್‌.ಆರ್‌.ನಂಜುಂಡೇಗೌಡ, ಪಿ.ಶೇಷಾದ್ರಿ ಅವರಿಗೆ ‘ಪುಟ್ಟಣ್ಣ ಕಣಗಾಲ್ ಪ್ರಶಸ್ತಿ’, ರಿಚರ್ಡ್ ಕ್ಯಾಸ್ಟಲಿನೊ, ಬಿ.ಎಸ್‌.ಬಸವರಾಜು ಅವರಿಗೆ ‘ಡಾ.ವಿಷ್ಣುವರ್ಧನ್ ಪ್ರಶಸ್ತಿ’ ಪ್ರದಾನ ಮಾಡಿದರು

ಪ್ರಜಾವಾಣಿ ವಾರ್ತೆ

ಮೈಸೂರು: ‘ಚಂದನವನ’ದ ತಾರೆಗಳ ಸಮಾಗಮದಲ್ಲಿ 2018, 2019ನೇ ಸಾಲಿನ ರಾಜ್ಯ ಚಲನಚಿತ್ರ ಪ್ರಶಸ್ತಿ ಪ್ರದಾನ ನಗರದ ಕೆಎಸ್‌ಒಯು ಘಟಿಕೋತ್ಸವ ಭವನದಲ್ಲಿ ಸಂಭ್ರಮದಿಂದ ನಡೆಯಿತು.

ಕನ್ನಡ ಚಲನಚಿತ್ರ ರಂಗದ ಕಲಾವಿದರು, ನಿರ್ದೇಶಕರು ಹಾಗೂ ತಂತ್ರಜ್ಞರು ಸೇರಿದಂತೆ ವಿವಿಧ ವಿಭಾಗದ 83 ಪ್ರಶಸ್ತಿಗಳನ್ನು ಸೋಮವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರದಾನ ಮಾಡಿದರು.

‘ಮೈಸೂರಿನಲ್ಲಿ ಚಿತ್ರನಗರಿ ನಿರ್ಮಾಣ ಕುರಿತು ವರ್ಷಾಂತ್ಯಕ್ಕೆ ಡಿಪಿಆರ್ ಸಲ್ಲಿಕೆಯಾಗಲಿದೆ. 3 ವರ್ಷದ ಸಿನಿಮಾ ಸಬ್ಸಿಡಿಯನ್ನು ಶೀಘ್ರ ಬಿಡುಗಡೆ ಮಾಡಲಾಗುವುದು’ ಎಂದು ಭರವಸೆ ನೀಡಿದರು.

ನಟರಾದ ಉಮಾಶ್ರೀ, ಜೆ.ಕೆ. ಶ್ರೀನಿವಾಸಮೂರ್ತಿ ಅವರಿಗೆ ‘ಡಾ.ರಾಜ್‌ಕುಮಾರ್ ಪ್ರಶಸ್ತಿ’, ನಿರ್ದೇಶಕರಾದ ಪಿ.ಶೇಷಾದ್ರಿ, ಎನ್. ಆರ್.ನಂಜುಂಡೇಗೌಡ ಅವರಿಗೆ ‘ಪುಟ್ಟಣ್ಣ ಕಣಗಾಲ್ ಪ್ರಶಸ್ತಿ’, ಬಿ.ಎಸ್. ಬಸವರಾಜು, ರಿಚರ್ಡ್ ಕ್ಯಾಸ್ಟಲಿನೊ ಅವರಿಗೆ ‘ಡಾ.ವಿಷ್ಣುವರ್ಧನ್ ಪ್ರಶಸ್ತಿ’ ಪ್ರದಾನ ಮಾಡಲಾಯಿತು. ಈ ಪ್ರಶಸ್ತಿಗಳು ತಲಾ 50 ಗ್ರಾಂ ಚಿನ್ನದ ಪದಕ ಮತ್ತು ₹5 ಲಕ್ಷ ನಗದು ಒಳಗೊಂಡಿವೆ.

ಅತ್ಯುತ್ತಮ ನಟ ಪ್ರಶಸ್ತಿಗೆ ರಾಘವೇಂದ್ರ ರಾಜ್‌ಕುಮಾರ್ (ಅಮ್ಮನ ಮನೆ), ಅತ್ಯುತ್ತಮ ನಟಿ ಪ್ರಶಸ್ತಿಗೆ ಮೇಘನಾ ರಾಜ್ (ಇರುವುದೆಲ್ಲವ ಬಿಟ್ಟು- 2018), ಅನುಪಮಾ ಗೌಡ (ತ್ರಯಂಬಕಂ-2019) ಪ್ರಶಸ್ತಿ ಸ್ವೀಕರಿಸಿದರು.

‘ಬೆಳ್ಳಿತೊರೆ- ಸಿನಿಮಾ ಪ್ರಬಂಧಗಳು’ ಕೃತಿಗೆ ‘ಪ್ರಜಾವಾಣಿ’ಯ ಅಭಿಮತ ಸಂಪಾದಕ ರಘುನಾಥ ಚ.ಹ. ಹಾಗೂ ಪ್ರಕಾಶಕ ಅಂಕಿತ ಪುಸ್ತಕದ ಪ್ರಕಾಶ ಕಂಬತ್ತಳ್ಳಿ ‘ಚಲನಚಿತ್ರ ಸಾಹಿತ್ಯ ಪ್ರಶಸ್ತಿ’ಗೆ ಭಾಜನರಾದರು. ₹20ಸಾವಿರ ಮತ್ತು 50 ಗ್ರಾಂ. ಬೆಳ್ಳಿ ಪದಕ ಒಳಗೊಂಡಿದೆ.

‘ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಕಾಸರಗೋಡು’ ಚಿತ್ರಕ್ಕೆ ಅತ್ಯುತ್ತಮ ಜನಪ್ರಿಯ ಮನರಂಜನಾ ಚಿತ್ರ ಪ್ರಶಸ್ತಿ ಪಡೆದ ಚಲನಚಿತ್ರ ನಟ ರಿಷಬ್ ಶೆಟ್ಟಿ ಅವರು,‘ ಪ್ರಶಸ್ತಿಯನ್ನು ಎಲ್ಲ ಸರ್ಕಾರಿ ಶಾಲೆಯ ಮಕ್ಕಳಿಗೆ ಅರ್ಪಿಸುವೆ’ ಎಂದು ಹೇಳಿದರು.

ಜಯಂತ ಕಾಯ್ಕಿಣಿ, ಡಾರ್ಲಿಂಗ್ ಕೃಷ್ಣ, ಡಿ.ಸತ್ಯಪ್ರಕಾಶ್, ದಯಾಳ್ ಪದ್ಮನಾಭನ್, ಬಾಲಾಜಿ ಮನೋಹರ್, ತಬಲಾ ನಾಣಿ ಸೇರಿ ವಿವಿಧ ಕಲಾವಿದರು ವಿವಿಧ ವಿಭಾಗಗಳ ಪ್ರಶಸ್ತಿ ಸ್ವೀಕರಿಸಿದರು.

‘ಪ್ರಶಸ್ತಿ: ಆಯಾ ವರ್ಷವೇ ಪ್ರದಾನ’

‘ಪ್ರಶಸ್ತಿ ವಿಳಂಬಕ್ಕೆ ಹಿಂದಿನ ಸರ್ಕಾರ ಕಾರಣ. ಕೆಲವೇ ತಿಂಗಳಲ್ಲಿ 2020, 2021ನೇ ಸಾಲಿನ ಪ್ರಶಸ್ತಿ ಪ್ರದಾನ ಮಾಡಲಾಗುವುದು. ಆಯಾ ವರ್ಷವೇ ಪ್ರಶಸ್ತಿ ಪ್ರದಾನ ಮಾಡಲು ವಾರ್ತಾ ಇಲಾಖೆಗೆ ಸೂಚಿಸಿರುವೆ’ ಎಂದು ಸಿ.ಎಂ ಹೇಳಿದರು.

ಶೃಂಗೇರಿಯ ಕೆರೆಕಟ್ಟೆಯಲ್ಲಿ ಸೆರೆಸಿಕ್ಕ ಆನೆ • ಕೊಡಗಿನ ದುಬಾರೆ ಶಿಬಿರಕ್ಕೆ ರವಾನೆ

ಉಪಟಳ: ಕಡೆಗೂ ಒಂಟಿ ಸಲಗ ಸೆರೆ

ಪ್ರಜಾವಾಣಿ ವಾರ್ತೆ

ಕೆರೆಗದ್ದೆಯಲ್ಲಿ ಇಬ್ಬರು ರೈತರನ್ನು ಕೊಂದು ಹಾಕಿ ಕುದುರೆಮುಖದ ಭಗವತಿ ಅರಣ್ಯದಲ್ಲಿ ಬೀಡು ಬಿಟ್ಟಿದ್ದ ಕಾಡಾನೆಯನ್ನು ಭಾನುವಾರ ರಾತ್ರಿ ಸೆರೆ ಹಿಡಿಯಲಾಯಿತು

ಶೃಂಗೇರಿ (ಚಿಕ್ಕಮಗಳೂರು): ಕುದುರೆಮುಖ ರಾಷ್ಟ್ರೀಯ ಉದ್ಯಾನದ ತಾಲ್ಲೂಕಿನ ಕೆರೆಕಟ್ಟೆ ಗ್ರಾಮ ಭಾಗದಲ್ಲಿ ಹಲವು ದಿನಗಳಿಂದ ಉಪಟಳ ನೀಡುತ್ತಿದ್ದ ಒಂಟಿ ಸಲಗವನ್ನು ಭಾನುವಾರ ರಾತ್ರಿ ನಡೆದ ಕಾರ್ಯಾಚರಣೆಯಲ್ಲಿ ಸೆರೆ ಹಿಡಿಯಲಾಯಿತು.

ಆನೆ ಉಪಟಳದಿಂದ ಕೆರೆಗದ್ದೆಯಲ್ಲಿ ಇತ್ತೀಚೆಗೆ ಇಬ್ಬರು ರೈತರು ಮೃತಪಟ್ಟಿದ್ದರು. ಕಾಡಾನೆ ಸೆರೆ ಕಾರ್ಯಾಚರಣೆಗೆ ದುಬಾರೆ ಹಾಗೂ ಹಾರಂಗಿ ಆನೆ ಶಿಬಿರಗಳಿಂದ 5 ಆನೆಗಳನ್ನು ಭಾನುವಾರ ಬೆಳಿಗ್ಗೆ ಕೆರೆಕಟ್ಟೆಗೆ ಕರೆತರಲಾಗಿತ್ತು.

ಭಾನುವಾರ ಬೆಳಿಗ್ಗೆ ಕುದುರೆಮುಖದ ಭಗವತಿ ಅರಣ್ಯದಲ್ಲಿ ಆನೆ ಇರುವುದು ಖಚಿತವಾಯಿತು. ಇದನ್ನು ಗಮನಿಸಿದ ಅರಣ್ಯ ಇಲಾಖೆಯವರು ಸಂಜೆ ವೇಳೆ ಶಿಬಿರದ ಆನೆಗಳನ್ನು ಭಗವತಿಗೆ ಸ್ಥಳಾಂತರಿಸಿದರು.

ಆನೆಯ ನೆಲೆ ಪತ್ತೆಗೆ ಅರಿವಳಿಕೆ ತಜ್ಞ ಡಾ.ಮುಜೀಬ್, ಶಾರ್ಪ್‌ಶೂಟರ್ ಅಕ್ರಮ್ ಅವರಿದ್ದ ಹೆಚ್ಚುವರಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಮನೋಜ್ ರಾಜನ್, ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಕರಿಕಾಳನ್ ನೇತೃತ್ವದ ಅಧಿಕಾರಿಗಳ ತಂಡ ತೆರಳಿತ್ತು.

ಮಧ್ಯಾಹ್ನ 3 ಗಂಟೆಗೆ ಭಗವತಿ ಭಾಗದ ಅರಣ್ಯದಲ್ಲಿ ಆನೆಯ ನೆಲೆ ಪತ್ತೆ ಆಗಿತ್ತು ಬಂದೂಕು ಬಳಸಿ ಅರಿವಳಿಕೆ ಚುಚ್ಚುಮದ್ದು ನೀಡಲಾಯಿತು. ಪ್ರಜ್ಞೆ ತಪ್ಪಿದ್ದ ಆನೆಯನ್ನು ಸರಪಳಿ ಬಿಗಿದು ರಾತ್ರಿ 11 ಗಂಟೆ ವೇಳೆಗೆ ಅರಣ್ಯದಿಂದ ಗ್ರಾಮದ ವ್ಯಾಪ್ತಿಗೆ ತರಲಾಯಿತು.

‘ಜಿಲ್ಲಾ ಉಸ್ತುವಾರಿ ಸಚಿವರು ಮತ್ತು ಅರಣ್ಯ ಸಚಿವರ ಮೇಲೆ ಒತ್ತಡ ತಂದು ಕಾರ್ಯಾಚರಣೆ ನಡೆಸಿ ಸೆರೆ ಹಿಡಿಯಲಾಗಿದ್ದು, ಅದನ್ನು ದುಬಾರೆ ಆನೆ ಶಿಬಿರಕ್ಕೆ ಬಿಡಲಾಗುತ್ತದೆ. ಕ್ಷೇತ್ರದಲ್ಲಿ ಕಾಡಾನೆಗಳ ದಾಳಿಯಿಂದ 7 ಜನ ಮೃತಪಟ್ಟಿದ್ದಾರೆ’ ಎಂದು ಶಾಸಕ ಟಿ.ಡಿ. ರಾಜೇಗೌಡ ‘ಪ್ರಜಾವಾಣಿ’ಗೆ ತಿಳಿಸಿದರು.

ಆನೆಗಳ ಸಾವು: ತನಿಖೆಗೆ ಸಚಿವ ಆದೇಶ

ಖಾನಾಪುರ (ಬೆಳಗಾವಿ ಜಿಲ್ಲೆ): ತಾಲ್ಲೂಕಿನ ಸುಳೆಗಾಳಿ ಬಳಿ ಭಾನುವಾರ ವಿದ್ಯುತ್ ಸ್ಪರ್ಶದಿಂದ ಎರಡು ಕಾಡಾನೆಗಳ ಸಾವು ಪ್ರಕರಣದ ತನಿಖೆಗೆ ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ಆದೇಶಿಸಿದ್ದಾರೆ.

‘ಪ್ರಕರಣದ ತನಿಖೆ ಮಾಡಬೇಕು. ಸಾವಿಗೆ ಕಾರಣರಾದವರ ವಿರುದ್ಧ ಕಾನೂನು ಕ್ರಮ ಜರುಗಿಸಬೇಕು. ಕರ್ತವ್ಯಲೋಪ ಎಸಗಿದ ಅಧಿಕಾರಿ, ಸಿಬ್ಬಂದಿ ಶಿಸ್ತು ಕ್ರಮ ಜರುಗಿಸಬೇಕು’ ಎಂದು ಸೂಚಿಸಿದ್ದಾರೆ.

ಈ ಬಗ್ಗೆ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗೆ ಸೂಚನೆ ನೀಡಿರುವ ಅವರು, ‘ಖಾನಾಪುರ ತಾಲ್ಲೂಕಿನಲ್ಲಿ ಆನೆಗಳ ಓಡಾಟವಿರುವ ಸ್ಥಳದಲ್ಲಿ ಇಲಾಖೆಯ ಅಧಿಕಾರಿಗಳು, ಸಿಬ್ಬಂದಿ ಕರ್ತವ್ಯಲೋಪ ಎಸಗಿರುವ ಆರೋಪವಿದೆ. ಆನೆ ಸಾವಿನ ಕಾರಣ ಪತ್ತೆ ಮಾಡಬೇಕು’ ಎಂದಿದ್ದಾರೆ.

ಜಮೀನಿನ ಮಾಲೀಕ ಗಣಪತಿ ಸಾತೇರಿ ಗುರವ ಅವರನ್ನು ಅರಣ್ಯ ಇಲಾಖೆಯ ಅಧಿಕಾರಿಗಳು ಸೋಮವಾರ ಬಂಧಿಸಿದ್ದು, ಇನ್ನೊಬ್ಬ ರೈತ ಶಿವಾಜಿ ಗಣಪತಿ ಗುರವ ನಾಪತ್ತೆಯಾಗಿದ್ದಾರೆ. ಹೆಸ್ಕಾಂ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ವಿದ್ಯುತ್ ಪರಿಕರಗಳನ್ನು ಪರಿಶೀಲಿಸಿದರು.

ಚಿಟಿಕೆ ಸುದ್ದಿ

₹200 ಕೋಟಿ ಅಕ್ರಮ ವರ್ಗಾವಣೆ 6 ಮಂದಿ ಬಂಧನ

ಅಹಮದಾಬಾದ್ (ಪಿಟಿಐ): ದುಬೈ ಮೂಲದ ಸೈಬರ್ ಅಪರಾಧಿಗಳಿಗೆ ₹200 ಕೋಟಿ ಅಕ್ರಮ ವರ್ಗಾವಣೆ ಮಾಡಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಗುಜರಾತ್‌ನ ಸಿಐಡಿ ಅಪರಾಧ ವಿಭಾಗದ ಪೊಲೀಸರು ಆರು ಆರೋಪಿಗಳನ್ನು ಬಂಧಿಸಿದ್ದಾರೆ.

ಖಚಿತ ಮಾಹಿತಿ ಆಧರಿಸಿ, ಸೂರತ್, ಅಮರೇಲಿ ಜಿಲ್ಲೆಯಲ್ಲಿ ದಾಳಿ ನಡೆಸಿ, ಮಹೇಂದ್ರ ಸೋಲಂಕಿ, ರೂಪೇನ್ ಭಾಟಿಯಾ, ರಾಕೇಶ್ ಲಾನಿಯಾ, ರಾಕೇಶ್ ದೆಕಿವಾಡಿಯಾ, ವಿಜಯ್ ಖಂಭಲ್ಯ ಹಾಗೂ ಪಂಕಜ್ ಕತಿರಿಯಾ ಅವರನ್ನು ಬಂಧಿಸಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಆರೋಪಿಗಳ ಮೊಬೈಲ್ ವಶಪಡಿಸಿಕೊಂಡಿದ್ದು, 100ಕ್ಕೂ ಅಧಿಕ ಬ್ಯಾಂಕ್ ಖಾತೆಗಳ ಮಾಹಿತಿಯೂ ದೊರೆತಿದೆ ಎಂದಿದ್ದಾರೆ.

‘ಜುಬಿನ್ ಗರ್ಗ್ ಹತ್ಯೆ’: ಡಿ. 8ರೊಳಗೆ ದೋಷಾರೋಪ

ಜುಬಿನ್ ಗರ್ಗ್

ತೇಜಪುರ (ಪಿಟಿಐ): ಸಿಂಗಪುರದಲ್ಲಿ ಮೃತಪಟ್ಟ ಖ್ಯಾತ ಗಾಯಕ ಜುಬಿನ್ ಗರ್ಗ್ ಸಾವಿನ ಕುರಿತ ತನಿಖೆ ನಡೆದಿರುವಾಗಲೇ, ‘ಅವರನ್ನು ಹತ್ಯೆ ಮಾಡಲಾಗಿದೆ’ ಎಂದು ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮ ಹೇಳಿದ್ದಾರೆ.

‘ಗರ್ಗ್ ಸಾವನ್ನು ನಾನು ಆಕಸ್ಮಿಕ ಎನ್ನಲ್ಲ. ಹತ್ಯೆ ಪ್ರಕರಣದ ದೋಷಾರೋಪ ಪಟ್ಟಿಯನ್ನು ಡಿ. 17ರೊಳಗೆ ಸಲ್ಲಿಸಬೇಕು. ಆದರೆ ನಾವು ಡಿ. 8ರೊಳಗೆ ಸಲ್ಲಿಸುವ ಗುರಿ ಹೊಂದಿದ್ದೇವೆ. ಅದಕ್ಕೆ ಸಿದ್ಧರಾಗಿದ್ದೇವೆ’ ಎಂದು ಇಲ್ಲಿ ವರದಿಗಾರರಿಗೆ ತಿಳಿಸಿದರು.

‘ನಾರ್ತ್ ಈಸ್ಟ್ ಇಂಡಿಯಾ ಫೆಸ್ಟಿವಲ್’ಗಾಗಿ ಸಿಂಗಪುರಕ್ಕೆ ತೆರಳಿದ್ದ ಜುಬೀನ್, ಸೆ.19ರಂದು ಅಲ್ಲಿ ಸ್ಕೂಬಾ ಡೈವಿಂಗ್ ಮಾಡುತ್ತಿದ್ದ ವೇಳೆ ನಿಗೂಢವಾಗಿ ಮೃತಪಟ್ಟಿದ್ದರು.

ವೈಎಸ್‌ಆರ್‌ಸಿಪಿ ಮುಖಂಡನ ಬಂಧನ

ಅಮರಾವತಿ (ಪಿಟಿಐ): ನಕಲಿ ಮದ್ಯವನ್ನು ತಯಾರಿಸಿ ಮಾರಾಟ ಮಾಡುತ್ತಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ವೈಎಸ್‌ಆರ್‌ಸಿಪಿಯ ಹಿರಿಯ ನಾಯಕ ಜೋಗಿ ರಮೇಶ್ ಮತ್ತು ಅವರ ಸಹೋದರನನ್ನು ಬಂಧಿಸಲಾಗಿದೆ.

ಅಬಕಾರಿ ಇಲಾಖೆಯ ಅಧಿಕಾರಿಗಳು ಜೋಗಿ ರಮೇಶ್ ಮತ್ತು ಅವರ ಕಿರಿಯ ಸಹೋದರ ಜೋಗಿ ರಾಮು ಅವರನ್ನು ಭಾನುವಾರ ಬೆಳಗ್ಗೆ ಬಂಧಿಸಿದ್ದು, ತಡರಾತ್ರಿ ಸ್ಥಳೀಯ ನ್ಯಾಯಾಲಯಕ್ಕೆ ಹಾಜರುಪಡಿಸಿದರು ಎಂದು ಆಂಧ್ರಪ್ರದೇಶದ ಅಧಿಕಾರಿಗಳು ತಿಳಿಸಿದ್ದಾರೆ.

ಜೋಗಿ ಬಂಧನವನ್ನು ವೈಎಸ್‌ಆರ್‌ಸಿಪಿ ಮುಖ್ಯಸ್ಥ ವೈ.ಎಸ್. ಜಗನ್ ಮೋಹನ್ ರೆಡ್ಡಿ ಖಂಡಿಸಿದ್ದು, ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ವಿರುದ್ಧ ವಾಗ್ದಾಳಿ ನಡೆಸಿದ್ದಾರೆ.

₹42 ಕೋಟಿ ಮೌಲ್ಯದ ಗಾಂಜಾ ವಶ: ಬಂಧನ

ಮುಂಬೈ (ಪಿಟಿಐ): ಇಲ್ಲಿನ ಛತ್ರಪತಿ ಶಿವಾಜಿ ಮಹಾರಾಜ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ, ₹42 ಕೋಟಿ ಮೌಲ್ಯದ 42.34 ಕೆ.ಜಿ ಹೈಡ್ರೋಪೋನಿಕ್ ಗಾಂಜಾವನ್ನು ಕಂದಾಯ ಗುಪ್ತಚರ ನಿರ್ದೇಶನಾಲಯದ (ಡಿಆರ್‌ಐ) ಅಧಿಕಾರಿಗಳು ಭಾನುವಾರ ವಶಪಡಿಸಿಕೊಂಡಿದ್ದಾರೆ.

ಬ್ಯಾಂಕಾಕ್‌ನಿಂದ ಬಂದಿಳಿದ ಇಬ್ಬರು ಪ್ರಯಾಣಿಕರ ಬ್ಯಾಗ್‌ಗಳಿಂದ ಮಾದಕವಸ್ತುವನ್ನು ವಶಪಡಿಸಿಕೊಂಡಿರುವುದಾಗಿ ಅಧಿಕಾರಿಗಳು ಸೋಮವಾರ ತಿಳಿಸಿದರು.

ಗಾಂಜಾವನ್ನು ನೂಡಲ್ಸ್ ಹಾಗೂ ಬಿಸ್ಕತ್ತಿನ 21 ಪೊಟ್ಟಣಗಳಲ್ಲಿ ತುಂಬಿ ಸಾಗಿಸಲಾಗಿತ್ತು. ವಶಪಡಿಸಿಕೊಳ್ಳಲಾಗಿದೆ ಎಂದು ತಿಳಿಸಿದರು.

ಖಬೂತರ್‌ಖಾನಾ ಬಂದ್: ಮುಷ್ಕರ

ಮುಂಬೈ (ಪಿಟಿಐ): ಜೈನ ಸಮುದಾಯದವರು ಪಾರಿವಾಳಗಳಿಗೆ ಆಹಾರ ನೀಡುತ್ತಿದ್ದ ದಾದರ್ ಖಬೂತರ್‌ಖಾನಾ ಮೈದಾನವನ್ನು ಮುಚ್ಚಿ ಮುಂಬೈ ಪಾಲಿಕೆಯು ಆದೇಶ ಹೊರಡಿಸಿದೆ.

ಪಾಲಿಕೆಯ ನಿರ್ಧಾರವನ್ನು ವಿರೋಧಿಸಿ ಜೈನ ಗುರು ನಿಲೇಶ್ಚಂದ್ರ ವಿಜಯ್ ಅವರು ಬೃಹತ್ ಮುಂಬೈ ಮಹಾನಗರ ಪಾಲಿಕೆ (ಬಿಎಂಸಿ) ಕೇಂದ್ರ ಕಚೇರಿ ಬಳಿಯ ಅಜಾದ್ ಮೈದಾನದಲ್ಲಿ ಸೋಮವಾರ ಅನಿರ್ದಿಷ್ಟಾವಧಿ ಉಪವಾಸವನ್ನು ಆರಂಭಿಸಿದರು.

ಈ ವೇಳೆ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಪಾಲಿಕೆಯು ತನ್ನ ನಿರ್ಧಾರವನ್ನು ಹಿಂತೆಗೆದುಕೊಳ್ಳುವವರೆಗೂ ಉಪವಾಸ ಪ್ರತಿಭಟನೆ ಮುಂದುವರಿಸುತ್ತೇನೆ’ ಎಂದು ಹೇಳಿದರು.

ಗೆಲುವಿಗೆ ಎನ್‌ಡಿಎ–ಮಹಾಮೈತ್ರಿ ಏದುಸಿರು

ಬಿಹಾರ ವಿಧಾನಸಭಾ ಚುನಾವಣೆ: ವಿರೋಧಪಕ್ಷಗಳ ಮೈತ್ರಿಕೂಟದಲ್ಲಿನ ಒಡಕು ಎನ್‌ಡಿಎಗೆ ನೆರವಾಗುವುದೇ?

• ಮಂಜುನಾಥ ಹೆಬ್ಬಾರ್

ಬಿಹಾರ ಪ್ರಜಾಮತ ಜನತಂತ್ರದ ಹಬ್ಬ
ವಿಧಾನಸಭಾ ಚುನಾವಣೆ - 2025

ನವದೆಹಲಿ: ಬಿಹಾರ ವಿಧಾನಸಭಾ ಚುನಾವಣೆಯ ಮೊದಲ ಹಂತದ ಮತದಾನಕ್ಕೆ ಮೂರೇ ದಿನಗಳು ಬಾಕಿ. ಆಳುವ ಎನ್‌ಡಿಎ ಮತ್ತು ವಿರೋಧ ಪಕ್ಷಗಳ ಮಹಾಮೈತ್ರಿಕೂಟದ ನಡುವಣ ಸ್ಪರ್ಧೆ ತೀವ್ರ ತುರುಸು ಪಡೆದಿದೆ. ಎನ್‌ಡಿಎ ಮೈತ್ರಿಕೂಟ ಪುನಃ ಅಧಿಕಾರ ಹಿಡಿಯುತ್ತದೆಂದು ನಿಶ್ಚಿತವಾಗಿ ಹೇಳುವ ಸ್ಥಿತಿ ಇಲ್ಲ.

ವಿರೋಧ ಪಕ್ಷಗಳ ನಡುವಿನ ಒಡಕು ಎನ್‌ಡಿಎಗೆ ಉಳಿವಿನ ಆಸರೆಯಾಗಿ ಪರಿಣಮಿಸಿದೆ. ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರ ಸಾಂಪ್ರದಾಯಿಕ ಬೆಂಬಲ ನೆಲೆ ಈಗಲೂ ಭದ್ರವಾಗಿದೆ. ನಿತೀಶ್ ಅವರು ಈ ರಾಜ್ಯದಲ್ಲಿ 20 ವರ್ಷಗಳಿಂದ ಅಧಿಕಾರ ನಡೆಸಿದ್ದಾರೆ. ಆಡಳಿತ ವಿರೋಧಿ ಭಾವನೆ ಸ್ವಾಭಾವಿಕ. ಅದನ್ನು ಅಡಗಿಸುವಷ್ಟು ಪ್ರಖರ ಸಾಧನೆ ಮಾಡಿಲ್ಲ. ಸಮೀಕ್ಷೆಗಳ ಪ್ರಕಾರ, ಮುಖ್ಯಮಂತ್ರಿಯಾಗಲು ತೇಜಸ್ವಿ ಯಾದವ್ ಅರ್ಹ ಎಂದು ಶೇ 33ರಷ್ಟು ಮಂದಿ ಅಭಿಪ್ರಾಯಪಟ್ಟಿದ್ದಾರೆ. ನಿತೀಶ್ ಕುಮಾರ್ ಎರಡನೇ ಸ್ಥಾನದಲ್ಲಿದ್ದಾರೆ. ಪ್ರಬಲ ವರ್ಗದ ಮತಗಳ ಮೇಲೆ ಕಣ್ಣಿಟ್ಟು ಪೂರ್ವ ತಯಾರಿ ನಡೆಸಿದ್ದ ಪ್ರಶಾಂತ್ ಕಿಶೋರ್ ಅವರು ಚುನಾವಣೆ ಹತ್ತಿರವಾಗುತ್ತಿದ್ದಂತೆ ಮಂಕಾಗಿದ್ದಾರೆ.

ಮೈತ್ರಿಕೂಟದ ಶಾಸಕರ ಜನಪ್ರಿಯತೆ ಕುಸಿದಿದೆ. ಹೊಸಬರಿಗೆ ಟಿಕೆಟ್ ನೀಡುವ ಮೂಲಕ ಈ ವ್ಯತಿರಿಕ್ತ ಅಂಶವನ್ನು ಮೆಟ್ಟಿನಿಲ್ಲುವ ಪ್ರಯತ್ನ ನಡೆಸಿದೆ. ಒಟ್ಟಾರೆಯಾಗಿ, ಎನ್‌ಡಿಎ ಮೈತ್ರಿಕೂಟವು 114 ಹೊಸಬರಿಗೆ ಟಿಕೆಟ್ ನೀಡಿದೆ. ಕಳೆದ ಬಾರಿ ಸ್ಪರ್ಧಿಸಿದ್ದ 129 ಮಂದಿಗೆ (ಕಳೆದ ಬಾರಿ ಸೋತಿದ್ದ 39 ಮಂದಿ ಸೇರಿ) ಮತ್ತೆ ಮಣೆ ಹಾಕಿದೆ.

2020ರ ವಿಧಾನಸಭಾ ಚುನಾವಣೆಯಲ್ಲಿ ತೇಜಸ್ವಿ ಭಾರಿ ಜನಸಮೂಹವನ್ನು ಆಕರ್ಷಿಸಿದ್ದರು. ಎನ್‌ಡಿಎ 243 ಸ್ಥಾನಗಳಲ್ಲಿ 125 ಸ್ಥಾನಗಳನ್ನು ಗಳಿಸಿ ಶೇ 37.26ರಷ್ಟು ಮತಗಳನ್ನು ಗಳಿಸಿತು. ಆದರೆ, ಮಹಾಮೈತ್ರಿಕೂಟ 110 ಸ್ಥಾನಗಳನ್ನು ಗಳಿಸಿತ್ತು. ಆದಾಗ್ಯೂ, ಎರಡೂ ರಂಗಗಳ ನಡುವಿನ ಮತಗಳ ವ್ಯತ್ಯಾಸವು ಕೇವಲ ಶೇ 0.03ರಷ್ಟಿತ್ತು.

160 ಕ್ಷೇತ್ರಗಳಲ್ಲಿ ಗೆಲುವಿನ ಅಂತರ 20 ಸಾವಿರ ಮತಗಳಿಗಿಂತ ಕಡಿಮೆ ಇತ್ತು. ಈ ಸಲವೂ ಎನ್‌ಡಿಎ- ಮಹಾಮೈತ್ರಿ ಕೂಟದ ನಡುವೆ ತುರುಸಿನ ಪೈಪೋಟಿ ಏರ್ಪಡಲಿದೆ ಎಂದು ಬಹುತೇಕ ಸಮೀಕ್ಷೆ ಹೇಳಿವೆ. ಹೀಗಾಗಿ, ತಮ್ಮ ಅಭ್ಯರ್ಥಿಗಳನ್ನು ಗೆಲ್ಲಿಸಲು ಮೈತ್ರಿಕೂಟಗಳ ನಾಯಕರು ಬೆವರು ಹರಿಸುತ್ತಿದ್ದಾರೆ.

ತೇಜಸ್ವಿ ಯಾದವ್ ಅವರ ‘ಕುಟುಂಬಕ್ಕೊಂದು ಸರ್ಕಾರಿ ಉದ್ಯೋಗ’ ಹಾಗೂ ನಿತೀಶ್ ಅವರ ‘ಮಹಿಳೆಯರಿಗೆ ₹10 ಸಾವಿರ ನಗದು ವರ್ಗಾವಣೆ’– ಈ ಎರಡು ಭರವಸೆಗಳು ಚುನಾವಣಾ ಕಣದಲ್ಲಿ ಹೆಚ್ಚು ಸದ್ದು ಮಾಡುತ್ತಿವೆ. ತೇಜಸ್ವಿ ಅವರು ಯುವಕರನ್ನು ಆಕರ್ಷಿಸುತ್ತಿದ್ದಾರೆ. ಆದರೆ, ನಿತೀಶ್ ತಮ್ಮ ನಿಷ್ಠಾವಂತ ಮಹಿಳಾ ಮತದಾರರ ನೆಲೆಯನ್ನು ಅವಲಂಬಿಸಿದ್ದಾರೆ. ಈ ಬಾರಿ 14 ಲಕ್ಷಕ್ಕೂ ಹೆಚ್ಚು ಹೊಸ ಮತದಾರರು ಸೇರ್ಪಡೆಯಾಗಿದ್ದಾರೆ.

ಜೆಡಿಯು, ಬಿಜೆಪಿ, ಆರ್‌ಜೆಡಿ ಹಾಗೂ ಪ್ರಶಾಂತ್ ಕಿಶೋರ್ ಅವರ ಜನ ಸುರಾಜ್ ಪಕ್ಷ ಸೇರಿದಂತೆ ಎಲ್ಲ ಪ್ರಮುಖ ಪಕ್ಷಗಳು ಉದ್ಯೋಗ ಸೃಷ್ಟಿ, ವಲಸೆ ತಡೆ ಹಾಗೂ ಸುಭದ್ರ ಆರ್ಥಿಕತೆ ಬಗ್ಗೆ ಭರಪೂರ ಭರವಸೆಗಳನ್ನು ನೀಡುತ್ತಿವೆ. ಕಳೆದ 20 ವರ್ಷಗಳಲ್ಲಿ ಹೆಚ್ಚಿನ ಕಾಲ ಅಧಿಕಾರದಲ್ಲಿದ್ದ ಎನ್‌ಡಿಎ ಮೈತ್ರಿಕೂಟವು ಈಗ ಬಿಹಾರದ ಕೈಗಾರಿಕಾ ಅಭಿವೃದ್ಧಿಯ ಮಂತ್ರ ಜಪಿಸುತ್ತಿದೆ.

ಎನ್‌ಡಿಎಯಲ್ಲಿ ಮೋದಿ, ಅಮಿತ್ ಶಾ, ನಿತೀಶ್ ಮತ್ತು ಚಿರಾಗ್ ಪಾಸ್ವಾನ್ ಸೇರಿದಂತೆ ದೊಡ್ಡ ಪ್ರಚಾರಕರ ದಂಡೇ ಇದೆ. ಮತ್ತೊಂದೆಡೆ, ಮಹಾಮೈತ್ರಿಕೂಟದಲ್ಲಿ ಹೆಚ್ಚಿನ ಭಾರವನ್ನು ತೇಜಸ್ವಿ ಅವರೇ ಹೊತ್ತಿದ್ದಾರೆ. ಉದ್ಯೋಗ ಸೃಷ್ಟಿಯ ಘೋಷಣೆಯ ಮೂಲಕ ಯುವಕರನ್ನು ಆಕರ್ಷಿಸುತ್ತಾರೆ. ಮುಸ್ಲಿಂ-ಯಾದವ ನೆಲೆಯನ್ನು ಮೀರಿ ಮಹಿಳೆಯರು ಸೇರಿದಂತೆ ಸಮಾಜದ ಎಲ್ಲ ವರ್ಗಗಳಿಗೆ ಪಕ್ಷದ ವ್ಯಾಪ್ತಿಯನ್ನು ವಿಸ್ತರಿಸಲು ಶ್ರಮಿಸುತ್ತಿದ್ದಾರೆ.

ಮಂಡಲ್ ಚಳವಳಿಯ ಬಳಿಕ ಜನಿಸಿದವರು ತೇಜಸ್ವಿ. ಆದರೆ, ನಿತೀಶ್ ಅವರು ದೇಶದ ರಾಜಕೀಯ ಚಿತ್ರಣ ಬದಲಾಯಿಸಿದ ಮಂಡಲ್ ಚಳವಳಿಯ ಮೂಲಕ ನಾಯಕನಾಗಿ ಹೊರಹೊಮ್ಮಿದವರು. ಮಹಿಳೆಯರಲ್ಲಿ ಅಥವಾ ಅತ್ಯಂತ ಹಿಂದುಳಿದ ವರ್ಗಗಳಲ್ಲಿ (ಇಬಿಸಿಗಳು) ತಮ್ಮದೇ ಆದ ಭದ್ರ ಮತ ನೆಲೆ ಹೊಂದಿದ್ದಾರೆ ಹಾಗೂ ಅವರನ್ನು ಸಂತೃಪ್ತಿಪಡಿಸಿದ್ದಾರೆ. ಚುನಾವಣೆಗೆ ಕೆಲವೇ ದಿನಗಳ ಮೊದಲು ಒಂದು ಕೋಟಿಗೂ ಹೆಚ್ಚು ಮಹಿಳೆಯರಿಗೆ ₹10,000 ವರ್ಗಾವಣೆ ಮಾಡಿರುವುದು ‘ಗೇಮ್ ಚೇಂಜರ್’ ಎಂದೂ ವ್ಯಾಖ್ಯಾನಿಸಲಾಗುತ್ತಿದೆ.

ಈ ಮತ ಬ್ಯಾಂಕ್‌ಅನ್ನು ಛಿದ್ರಗೊಳಿಸಲು ತೇಜಸ್ವಿ ಅವರು ಮಹಿಳೆಯರಿಗೆ ವಾರ್ಷಿಕ ₹30,000 ಸಹಾಯಧನ ಮತ್ತು ₹500 ಕ್ಕಿಂತ ಕಡಿಮೆ ಬೆಲೆಗೆ ಅಡುಗೆ ಅನಿಲ ಸಿಲಿಂಡರ್‌ಗಳನ್ನು ಒದಗಿಸುವ ವಾಗ್ದಾನ ಮಾಡಿದ್ದಾರೆ.

ನ. 15ರಂದು ಗೆಲುವಿನ ಮಾಲೆ ತಮ್ಮ ಕೊರಳಿಗೇ ಬೀಳಲಿದೆ ಎಂದು ನರೇಂದ್ರ ಮೋದಿ– ನಿತೀಶ್ ಕುಮಾರ್ ಜೋಡಿ ಎದೆ ಸೆಟೆಸಿ ಹೇಳುವ ಸ್ಥಿತಿ ಈ ಬಾರಿ ಇಲ್ಲ.

2020ರ ಗೆಲುವಿನ ಅಂತರ

ಕ್ಷೇತ್ರಗಳು	ಮತ ಅಂತರ
11	1 ಸಾವಿರಕ್ಕಿಂತ ಕಡಿಮೆ
41	1-5 ಸಾವಿರಗಳ ನಡುವೆ
32	5-10 ಸಾವಿರಗಳ ನಡುವೆ
76	10-20 ಸಾವಿರಗಳ ನಡುವೆ
65	20-40 ಸಾವಿರ ಮತಗಳ ನಡುವೆ
18	40 ಸಾವಿರಕ್ಕಿಂತ ಹೆಚ್ಚು

ಲಾಲೂ ಸುತ್ತ ಗಿರಕಿ



ಈ ಚುನಾವಣೆಯಲ್ಲಿ ಎನ್‌ಡಿಎ- ಇಂಡಿಯಾ ಮೈತ್ರಿಕೂಟಕ್ಕೆ ಲಾಲೂ ಪ್ರಸಾದ್ ಅವರೇ ಪ್ರಮುಖ ಚುನಾವಣಾ ವಿಷಯ. ಚುನಾವಣಾ ರಾಜಕಾರಣದಿಂದ ನಿವೃತ್ತರಾಗಿರುವ ಲಾಲೂ ಅವರು ಇಂಡಿಯಾ ಮೈತ್ರಿಕೂಟಕ್ಕೆ ಕೃಷ್ಣನಂತೆ ಸಾರಥ್ಯ ವಹಿಸಿದ್ದಾರೆ. ಇತ್ತೀಚಿನ ವಾರಗಳಲ್ಲಿ ಬಿಜೆಪಿ ನಾಯಕರು ‘ಜಂಗಲ್ ರಾಜ್’ ಟೀಕೆಯೊಂದಿಗೆ ಲಾಲು ವಿರುದ್ಧದ ದಾಳಿಯನ್ನು ತೀಕ್ಷ್ಣಗೊಳಿಸಿದ್ದಾರೆ. ‘ತಂದೆಗಿಂತ ತೇಜಸ್ವಿ ಹೇಗೆ ಭಿನ್ನ’ ಎಂದು ನರೇಂದ್ರ ಮೋದಿ, ಅಮಿತ್ ಶಾ, ನಿತೀಶ್ ಕುಮಾರ್, ಚಿರಾಗ್ ಪಾಸ್ವಾನ್ ಮತ್ತಿತರ ನಾಯಕರು ಕಣದಲ್ಲಿ ಪ್ರಶ್ನಿಸುತ್ತಿದ್ದಾರೆ.

ಕರೂರು ಕಾಲ್ತುಳಿತ ಟಿವಿಕೆ ಬಳಿ ವಿವರ ಕೇಳಿದ ಸಿಬಿಐ

ಚೆನ್ನೈ (ಪಿಟಿಐ): ಕರೂರಿನಲ್ಲಿ ತಮಿಳಗ ವೆಟ್ರಿ ಕಳಗಂ (ಟಿವಿಕೆ) ಪಕ್ಷದ ರ‍್ಯಾಲಿಯಲ್ಲಿ ಸಂಭವಿಸಿದ ಕಾಲ್ತುಳಿತದಲ್ಲಿ 41 ಮಂದಿ ಸಾವಿಗೀಡಾದ ಪ್ರಕರಣದ ತನಿಖೆ ನಡೆಸುತ್ತಿರುವ ಸಿಬಿಐ ಅಧಿಕಾರಿಗಳು ಇಲ್ಲಿನ ಪಣೈಯೂರ್‌ನಲ್ಲಿರುವ ಟಿವಿಕೆ ಕಚೇರಿಗೆ ಸೋಮವಾರ ಭೇಟಿ ನೀಡಿದರು.

‘ಕಾಲ್ತುಳಿತ ದುರಂತಕ್ಕೆ ಸಂಬಂಧಿಸಿದಂತೆ ಸಿಸಿಟಿವಿ ಕ್ಯಾಮೆರಾ ದೃಶ್ಯಾವಳಿಗಳು ಹಾಗೂ ಇತರ ಮಾಹಿತಿಯನ್ನು ಅಧಿಕಾರಿಗಳು ಕೇಳಿದರು’ ಎಂದು ಪಕ್ಷದ ಜಂಟಿ ಪ್ರಧಾನ ಕಾರ್ಯದರ್ಶಿ ಸಿ.ಟಿ.ಆರ್ ನಿರ್ಮಲ್ ಕುಮಾರ್ ತಿಳಿಸಿದರು.

‘ಅಧಿಕಾರಿಗಳು ವಿಚಾರಣೆಗಲ್ಲ, ಮಾಹಿತಿ ಕೇಳಲು ಬಂದಿದ್ದರು. ಮೂರ್ನಾಲ್ಕು ದಿನದೊಳಗಾಗಿ ಎಲ್ಲ ವಿವರ ನೀಡುವುದಾಗಿ ನಾವು ಒಪ್ಪಿಕೊಂಡಿದ್ದೇವೆ. ಕಾಲ್ತುಳಿತ ದುರಂತದ ತನಿಖೆಗಾಗಿ ಈ ಮೊದಲು ರಚಿಸಲಾಗಿದ್ದ ಎಸ್‌ಐಟಿ ತಂಡಕ್ಕೂ ಎಲ್ಲ ವಿವರ ನೀಡಿದ್ದೆವು’ ಎಂದರು.

ನಟ ವಿಜಯ್ ಸೆ. 27ರಂದು ರ‍್ಯಾಲಿ ನಡೆಸಿದ್ದ ವೇಳೆ ಕಾಲ್ತುಳಿತ ಸಂಭವಿಸಿತ್ತು.

ಬಿಹಾರ ಪ್ರಗತಿಗೆ ಆರ್‌ಜೆಡಿ ಅಡ್ಡಿ: ಮೋದಿ

2005ರಲ್ಲಿ ಯುಪಿಎ ಸರ್ಕಾರದ ಮೇಲೆ ಒತ್ತಡ ಹೇರಿ ಅಭಿವೃದ್ಧಿ ಕೆಲಸ ಸ್ಥಗಿತ: ಪ್ರಧಾನಿ ಆರೋಪ

ಸಹರ್ಸಾ (ಬಿಹಾರ) (ಪಿಟಿಐ): ಕೇಂದ್ರದಲ್ಲಿ ಈ ಹಿಂದೆ ಆಡಳಿತದಲ್ಲಿದ್ದ ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರದ ಮೇಲೆ ಒತ್ತಡ ಹೇರುವ ಮೂಲಕ ಆರ್‌ಜೆಡಿಯು ಬಿಹಾರದಲ್ಲಿ ಅಭಿವೃದ್ಧಿ ಯೋಜನೆಗಳನ್ನು ಸ್ಥಗಿತಗೊಳಿಸಿತ್ತು ಎಂದು ಪ್ರಧಾನಿ ನರೇಂದ್ರ ಮೋದಿ ಸೋಮವಾರ ಆರೋಪಿಸಿದರು.

ಉತ್ತರ ಬಿಹಾರದ ಸಹರ್ಸಾದಲ್ಲಿ ಚುನಾವಣಾ ರ‍್ಯಾಲಿಯಲ್ಲಿ ಪಾಲ್ಗೊಂಡ ಅವರು ವಿರೋಧ ಪಕ್ಷಗಳ ವಿರುದ್ಧ ಹರಿಹಾಯ್ದರು. ಕಾಂಗ್ರೆಸ್ ಪಕ್ಷವು ಆರ್‌ಜೆಡಿಯ ಬೆದರಿಕೆಗೆ ಮಣಿದು ತೇಜಸ್ವಿ ಯಾದವ್ ಅವರನ್ನು ಮುಖ್ಯಮಂತ್ರಿ ಅಭ್ಯರ್ಥಿಯನ್ನಾಗಿ ಘೋಷಿಸಲು ಒಪ್ಪಿಕೊಂಡಿತು ಎಂಬ ಹೇಳಿಕೆಯನ್ನು ಪ್ರಧಾನಿ ಪುನರುಚ್ಚರಿಸಿದರು.

‘ಬಿಹಾರದಲ್ಲಿ ಈಗಾಗಲೇ ಅಸ್ತಿತ್ವ ಕಳೆದುಕೊಂಡಿರುವ ಕಾಂಗ್ರೆಸ್, ಈ ಚುನಾವಣೆಯಲ್ಲಿ ಆರ್‌ಜೆಡಿಯನ್ನು ಮುಳುಗಿಸಲು ಪ್ರತಿಜ್ಞೆ ಮಾಡಿದೆ’ ಎಂದು ಟೀಕಿಸಿದರು. ಆರ್‌ಜೆಡಿ ಮಾಡಿರುವ ‘ಪಾಪ’ಗಳಿಗೆ ಜನರು ಈ ಚುನಾವಣೆಯಲ್ಲಿ ತಕ್ಕ ಶಿಕ್ಷೆ ವಿಧಿಸಬೇಕು ಎಂದು ಮನವಿ ಮಾಡಿದರು.

‘2005ರಲ್ಲಿ ಬಿಹಾರದಲ್ಲಿ ಅಧಿಕಾರ ಕಳೆದುಕೊಡ ಸಮಯದಲ್ಲಿ ಆರ್‌ಜೆಡಿಯು ಕೇಂದ್ರದಲ್ಲಿ ಯುಪಿಎ ಸರ್ಕಾರದ ಭಾಗವಾಗಿತ್ತು. ‘ಕೋಸಿ ಮಹಾಸೇತು’ನಂತಹ ಯೋಜನೆಗಳನ್ನು ವಾಜಪೇಯಿ ಸರ್ಕಾರ ಮಂಜೂರು ಮಾಡಿತ್ತು. 2005ರಲ್ಲಿ ನಿತೀಶ್ ಕುಮಾರ್ ಅವರು ಹೊಸ ಸರ್ಕಾರ ರಚಿಸಿದಾಗ ಆರ್‌ಜೆಡಿ ಎಷ್ಟು ಕೋಪಗೊಂಡಿತ್ತು ಎಂದರೆ, ಪ್ರಧಾನಿ ಮನಮೋಹನ ಸಿಂಗ್ ಮತ್ತು ಸೋನಿಯಾ ಗಾಂಧಿ ಅವರ ಮೇಲೆ ಒತ್ತಡ ಹೇರಿ ಬಿಹಾರದಲ್ಲಿ ಎಲ್ಲಾ ಯೋಜನೆಗಳನ್ನು ಸ್ಥಗಿತಗೊಳಿಸಿತ್ತು’ ಎಂದು ಆರೋಪಿಸಿದರು.

ಮುಸ್ಲಿಮರು ಹೆಚ್ಚಿನ ಸಂಖ್ಯೆಯಲ್ಲಿರುವ ಪ್ರದೇಶದಲ್ಲಿ ನಡೆದ ಪ್ರಚಾರ ಸಭೆಯಲ್ಲಿ ಮಾತನಾಡಿದ ಮೋದಿ, ‘ಆರ್‌ಜೆಡಿ-ಕಾಂಗ್ರೆಸ್ ಮೈತ್ರಿಕೂಟವು ನುಸುಳುಕೋರರ ಬಗ್ಗೆ ಮೃದು ಧೋರಣೆ ತಳೆಯುತ್ತಿದೆ. ಆದರೆ, ಅಯೋಧ್ಯೆಯ ರಾಮ ಮಂದಿರ ಮತ್ತು ಛತ್ ಉತ್ಸವದ ಬಗ್ಗೆ ತಿರಸ್ಕಾರದಿಂದ ವರ್ತಿಸುತ್ತಿದೆ’ ಎಂದು ದೂರಿದರು.

ಬಿಹಾರದ ಸಮಸ್ತಿಪುರದಲ್ಲಿ ರೋಡ್ ಶೋದಲ್ಲಿ ಪಾಲ್ಗೊಂಡ ಪ್ರಿಯಾಂಕಾ ಗಾಂಧಿ ಅವರು ಅಭಿಮಾನಿಯ ಕೈಕುಲುಕಿದರು ಪಿಟಿಐ ಚಿತ್ರ

> **ಎನ್‌ಡಿಎ ಮತ್ತೆ ಅಧಿಕಾರಕ್ಕೆ ಬಂದರೆ, ಬಿಜೆಪಿಯು ನಿತೀಶ್ ಕುಮಾರ್ ಅವರನ್ನು ಮುಖ್ಯಮಂತ್ರಿಯನ್ನಾಗಿ ಮಾಡುವುದಿಲ್ಲ. ಬದಲಿಗೆ, ತನ್ನದೇ ಪಕ್ಷದ ‘ಚೇಲಾ’ಗೆ ಹುದ್ದೆ ನೀಡುತ್ತದೆ**
> **ಮಲ್ಲಿಕಾರ್ಜುನ ಖರ್ಗೆ,** ಎಐಸಿಸಿ ಅಧ್ಯಕ್ಷ

‘ಅಭಿವೃದ್ಧಿ ಬಗ್ಗೆ ಮೋದಿ ಮಾತನಾಡಲ್ಲ’

ಕಾಂಗ್ರೆಸ್ ನಾಯಕಿ ಪ್ರಿಯಾಂಕಾ ಗಾಂಧಿ ಅವರು ಪ್ರಧಾನಿ ವಿರುದ್ಧ ವಾಗ್ದಾಳಿ ನಡೆಸಿದ್ದು, ‘ಮೋದಿ ಅವರು ವಿರೋಧ ಪಕ್ಷಗಳ ನಾಯಕರ ವಿರುದ್ಧ ಇಲ್ಲಸಲ್ಲದ ಆರೋಪಗಳನ್ನು ಮಾಡುತ್ತಾರೆ. ಆದರೆ ಅಭಿವೃದ್ಧಿಯ ವಿಚಾರದ ಬಗ್ಗೆ ಮಾತನಾಡುವುದಿಲ್ಲ’ ಎಂದು ದೂರಿದರು.

ಸಹರ್ಸಾ ಜಿಲ್ಲೆಯ ಸೋನ್‌ಬರ್ಸಾದಲ್ಲಿ ಮಾತನಾಡಿದ ಅವರು, ‘ಅನಗತ್ಯ ವಿಷಯಗಳ ಬಗ್ಗೆ ಮಾತನಾಡುವ ಪ್ರಧಾನಿ ಅವರು ಬಿಹಾರದಲ್ಲಿ ಎನ್‌ಡಿಎ ಸರ್ಕಾರದ ಭ್ರಷ್ಟಾಚಾರ ಅಥವಾ ದುರಾಡಳಿತದ ಬಗ್ಗೆ ಒಂದು ಮಾತನ್ನೂ ಹೇಳುವುದಿಲ್ಲ. ರಾಷ್ಟ್ರ ಹಾಗೂ ಬಿಹಾರವನ್ನು ಅವಮಾನ ಮಾಡುವುದರತ್ತ ಗಮನ ಕೇಂದ್ರೀಕರಿಸಿರುವ ಅವರು ‘ಅಪಮಾನ್ ಮಂತ್ರಾಲಯ’ ಹೆಸರಿನ ಹೊಸ ಸಚಿವಾಲಯ ಸ್ಥಾಪಿಸಲಿ’ ಎಂದರು.

ವಿರೋಧ ಪಕ್ಷಗಳಾದ ಕಾಂಗ್ರೆಸ್ ಹಾಗೂ ಆರ್‌ಜೆಡಿ ನಾಯಕರು ಬಿಹಾರದಲ್ಲಿ ‘ಛತಿ ಮೈಯಾ’ಗೆ (ಛತಿ ದೇವಿ) ಅವಮಾನಿಸುತ್ತಿದ್ದಾರೆ. ರಾಜ್ಯದ ಜನತೆ ಇವರನ್ನು ಕ್ಷಮಿಸುವುದಿಲ್ಲ’ ಎಂದು ಪ್ರಧಾನಿ ಕೆಲ ದಿನಗಳ ಹಿಂದೆ ಹೇಳಿದ್ದರು. ಅದಕ್ಕೆ ಪ್ರಿಯಾಂಕಾ ತಿರುಗೇಟು ನೀಡಿದ್ದಾರೆ.

‘ಚುನಾವಣೆಯ ಸಮಯದಲ್ಲಿ ಬಿಹಾರದ ಜನರಿಗೆ ವಿವಿಧ ಭರವಸೆಗಳನ್ನು ನೀಡುವ ಮೊದಲು, ಮೋದಿ ಮತ್ತು ಅಮಿತ್ ಶಾ ಅವರು ಎನ್‌ಡಿಎ ಸರ್ಕಾರ ಕಳೆದ 20 ವರ್ಷಗಳಲ್ಲಿ ರಾಜ್ಯಕ್ಕೆ ಏನು ಮಾಡಿದೆ ಎಂಬುದನ್ನು ತಿಳಿಸಬೇಕು’ ಎಂದು ಒತ್ತಾಯಿಸಿದರು.

ರಾಜಕೀಯ ಪಕ್ಷಗಳ ರ‍್ಯಾಲಿಗೆ ಎಸ್‌ಒಪಿ: ಸರ್ವ ಪಕ್ಷಗಳ ಸಭೆ

ಪ್ರಜಾವಾಣಿ ವಾರ್ತೆ

ಚೆನ್ನೈ: ರಾಜ್ಯದಲ್ಲಿ ರಾಜಕೀಯ ಸಭೆಗಳು ಮತ್ತು ರ‍್ಯಾಲಿ ಆಯೋಜಿಸಲು ಪ್ರಮಾಣೀಕೃತ ಕಾರ್ಯಾಚರಣೆ ವಿಧಾನ (ಎಸ್‌ಒಪಿ) ರಚಿಸುವುದಕ್ಕೆ ಸಂಬಂಧಿಸಿದಂತೆ ಚರ್ಚೆ ನಡೆಸಲು ತಮಿಳುನಾಡು ಸರ್ಕಾರವು ಸರ್ವ ಪಕ್ಷಗಳ ಸಭೆಯನ್ನು ಕರೆದಿದೆ.

ಎಸ್‌ಒಪಿ ರಚನೆಗೆ ಸಂಬಂಧಿಸಿದಂತೆ ಮದ್ರಾಸ್ ಹೈಕೋರ್ಟ್ ನೀಡಿರುವ ಗಡುವು ಮುಗಿಯಲು ಒಂದು ವಾರ ಬಾಕಿ ಇರುವಾಗಲೇ ಸರ್ಕಾರ ಸಭೆ ಕರೆದಿದೆ.

ಗುರುವಾರ ನಡೆಯಲಿರುವ ಸಭೆಯಲ್ಲಿ ಹಿರಿಯ ಸಚಿವರು ಮತ್ತು ಸರ್ಕಾರದ ಹಿರಿಯ ಅಧಿಕಾರಿಗಳು ಭಾಗಿಯಾಗಲಿದ್ದಾರೆ. ಚುನಾವಣಾ ಆಯೋಗದ ಮಾನ್ಯತೆ ಹೊಂದಿರುವ ರಾಜಕೀಯ ಪಕ್ಷಗಳಿಗೆ ಮಾತ್ರ ಆಹ್ವಾನ ನೀಡಲಾಗಿದೆ. ಆದರೆ ವಿಜಯ್ ಅವರ ತಮಿಳಗ ವೆಟ್ರಿ ಕಳಗಂ ಪಕ್ಷವು ಸಭೆಯಲ್ಲಿ ಭಾಗವಹಿಸುತ್ತಿಲ್ಲ.

ಇತ್ತೀಚೆಗೆ ಕರೂರಿನಲ್ಲಿ ನಟ ವಿಜಯ್ ಅವರು ನಡೆಸಿದ ರ‍್ಯಾಲಿಯಲ್ಲಿ ಕಾಲ್ತುಳಿತ ಸಂಭವಿಸಿ 41 ಮಂದಿ ಮೃತಪಟ್ಟ ದುರಂತದ ಬಳಿಕ ಇಂಥ ಅವಘಡಗಳನ್ನು ತಡೆಯುವ ಉದ್ದೇಶದಿಂದ ಎಸ್‌ಒಪಿ ರಚನೆಗೆ ನಿರ್ಧರಿಸಲಾಗಿದೆ.

ಸಭೆ ಬಳಿಕ ಸರ್ಕಾರವು ಎಸ್‌ಒಪಿ ಕರಡನ್ನು ಮುಖ್ಯ ನ್ಯಾಯಮೂರ್ತಿ ಎಂ.ಎಂ.ಶ್ರೀವಾತ್ಸವ ಮತ್ತು ನ್ಯಾಯಮೂರ್ತಿ ಜಿ.ಅರುಣ್ ಮುರುಗನ್ ಅವರಿರುವ ಪೀಠಕ್ಕೆ ನವೆಂಬರ್ 11ರಂದು ಸಲ್ಲಿಸುವ ಸಾಧ್ಯತೆ ಇದೆ.

‘ವ್ಯಾಪಾರ ಒಪ್ಪಂದ ಭಾರತಕ್ಕೆ ಅಗ್ನಿ ಪರೀಕ್ಷೆ’

ನವದೆಹಲಿ (ಪಿಟಿಐ): ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ವ್ಯಾಪಾರ ಒಪ್ಪಂದವನ್ನು ಬಳಸಿಕೊಂಡು ಭಾರತ–ಪಾಕಿಸ್ತಾನ ಸಂಘರ್ಷ ನಿಲ್ಲಿಸಿದೆ ಎಂದು ಪದೇ ಪದೇ ಹೇಳುತ್ತಿರುವ ವಿಚಾರವಾಗಿ ಕಾಂಗ್ರೆಸ್ ಪಕ್ಷವು ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರದ ವಿರುದ್ಧ ಸೋಮವಾರ ವಾಗ್ದಾಳಿ ನಡೆಸಿದೆ.

‘ಅಮೆರಿಕದೊಂದಿಗಿನ ಸಂಭಾವ್ಯ ವ್ಯಾಪಾರ ಒಪ್ಪಂದವು ಭಾರತಕ್ಕೆ ಅಗ್ನಿಪರೀಕ್ಷೆಯಾಗಲಿದೆ’ ಎಂದು ಅದು ಹೇಳಿದೆ. ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ (ಸಂವಹನ) ಜೈರಾಮ್ ರಮೇಶ್ ಅವರು, ‘ಭಾರತವು 2025ರ ನವೆಂಬರ್‌ನಲ್ಲಿ ಕ್ವಾಡ್ ಶೃಂಗಸಭೆಯ (ಅಮೆರಿಕ, ಜಪಾನ್, ಆಸ್ಟ್ರೇಲಿಯಾ ಮತ್ತು ಭಾರತ) ಆತಿಥ್ಯ ವಹಿಸಲಿದೆ ಎಂದು ಹೇಳಿದ್ದೆವು. ಅದು ಈಗ ಸಾಕಾರವಾಗುತ್ತಿದೆ’ ಎಂದು ಹೇಳಿದರು.

ಬಸ್–ಟಿಪ್ಪರ್ ಡಿಕ್ಕಿ; 19 ಸಾವು

ಒಂದನೇ ಪುಟದಿಂದ...

‘ಅಪಘಾತದಲ್ಲಿ ಟಿಪ್ಪರ್ ಹಾಗೂ ಬಸ್‌ನ ಚಾಲಕರು ಮೃತಪಟ್ಟಿದ್ದಾರೆ’ ಎಂದು ಸೈಬರಾಬಾದ್‌ನ ಪೊಲೀಸ್ ಕಮಿಷನರ್ ಅವಿನಾಶ್ ಮೊಹಾಂತಿ ತಿಳಿಸಿದ್ದಾರೆ.

‘ಜಲ್ಲಿ ತುಂಬಿದ ಟಿಪ್ಪರ್ ಚಾಲಕ ಅತೀ ವೇಗದಲ್ಲಿ ಬಂದಿದ್ದು, ಬಸ್‌ಗೆ ಡಿಕ್ಕಿ ಹೊಡೆಸಿದ. ನಂತರ ಬಸ್‌ನ ಮೇಲೆ ಟಿಪ್ಪರ್ ಮಗುಚಿಬಿದ್ದಿದೆ, ಆಗ ಜಲ್ಲಿಕಲ್ಲುಗಳು ಬಸ್‌ನ ಒಳಗಡೆ ತುಂಬಿರುವುದು ಮೇಲ್ನೋಟಕ್ಕೆ ಕಂಡುಬಂದಿದೆ. ಅಪಘಾತದ ನಿಖರ ಕಾರಣ, ತನಿಖೆಯ ಬಳಿಕವೇ ಗೊತ್ತಾಗಲಿದೆ’ ಎಂದು ಹೇಳಿದ್ದಾರೆ.

‘ರಸ್ತೆ ಕಿರಿದಾಗಿರುವುದೇ ಅಪಘಾತ ಸಂಭವಿಸಲು ಕಾರಣ’ ಎಂದು ಚೆವೆಲ್ಲಾದ ಶಾಸಕ ಕಾಳೆ ಯಡಯ್ಯ ತಿಳಿಸಿದ್ದಾರೆ.

‘ವೇಗವಾಗಿ ಬರುತ್ತಿದ್ದ ಲಾರಿಯು ಹತ್ತಿರ ಬರುತ್ತಿದ್ದಂತೆಯೇ, ಬಸ್ ಅನ್ನು ಚಾಲಕ ಪಕ್ಕಕ್ಕೆ ಒಯ್ದರೂ ಡಿಕ್ಕಿ ಹೊಡೆಯಿತು. ವಿದ್ಯಾರ್ಥಿಗಳು, ಪೊಲೀಸರು ಹಾಗೂ ಉದ್ಯೋಗಿಗಳೇ ಹೆಚ್ಚಿನ ಸಂಖ್ಯೆಯಲ್ಲಿದ್ದರು’ ಎಂದು ಬಸ್‌ನ ನಿರ್ವಾಹಕಿ ಕೆ.ರಾಧಾ ತಿಳಿಸಿದ್ದಾರೆ.

ರಾಧಾ ನೀಡಿದ ದೂರಿನಂತೆ ಚೆವೆಲ್ಲಾ ಪೊಲೀಸರು ಟಿಪ್ಪರ್ ಚಾಲಕ ಆಕಾಶ್ ಕಾಂಬ್ಳೆ ವಿರುದ್ಧ ಬಿಎನ್‌ಎಸ್ 106(1) ಅಡಿಯಲ್ಲಿ ಪ್ರಕರಣ ದಾಖಲಿಸಿದ್ದಾರೆ.

ನೆರವಿಗೆ ಸೂಚನೆ: ಅಪಘಾತದ ಕುರಿತು ತೀವ್ರ ಸಂತಾಪ ವ್ಯಕ್ತಪಡಿಸಿದ ತೆಲಂಗಾಣ ಮುಖ್ಯಮಂತ್ರಿ ಎ.ರೇವಂತ್ ರೆಡ್ಡಿ, ಯುದ್ಧೋಪಾದಿಯಲ್ಲಿ ರಕ್ಷಣಾ ಕಾರ್ಯದಲ್ಲಿ ತೊಡಗಿಸಿಕೊಳ್ಳುವಂತೆ ಮುಖ್ಯ ಕಾರ್ಯದರ್ಶಿ ಕೆ.ರಾಮಕೃಷ್ಣ ರಾವ್ ಹಾಗೂ ಡಿಜಿಪಿ ಶಿವಧರ್ ರೆಡ್ಡಿ ಅವರಿಗೆ ಸೂಚನೆ ನೀಡಿದ್ದಾರೆ ಎಂದು ಅಧಿಕೃತ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಅಲ್ಲದೇ, ಕೆಲವು ಸಚಿವರಿಗೂ ಸ್ಥಳಕ್ಕೆ ಭೇಟಿ ನೀಡುವಂತೆ ಸೂಚನೆ ನೀಡಿದರು. ಗಾಯಾಳುಗಳಿಗೆ ಹೈದರಾಬಾದ್‌ನಲ್ಲಿ ಉತ್ತಮ ರೀತಿಯ ಚಿಕಿತ್ಸೆಗೆ ವ್ಯವಸ್ಥೆ ಕಲ್ಪಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

ತಲಾ ₹9 ಲಕ್ಷ ಪರಿಹಾರ: ಅಪಘಾತದಲ್ಲಿ ಸಂಭವಿಸಿದ ಪ್ರಾಣಹಾನಿಗೆ ಪ್ರಧಾನಿ ನರೇಂದ್ರ ಮೋದಿ ಅವರು ‘ಎಕ್ಸ್’ನಲ್ಲಿ ಕಂಬನಿ ಮಿಡಿದಿದ್ದಾರೆ.

ಇದೇ ವೇಳೆ, ಅವರು ದುರಂತದಲ್ಲಿ ಮೃತಪಟ್ಟ ಕುಟುಂಬದ ಸದಸ್ಯರಿಗೆ ತಲಾ ₹2 ಲಕ್ಷ ಹಾಗೂ ಗಾಯಗೊಂಡವರಿಗೆ ತಲಾ ₹50 ಸಾವಿರ ಪರಿಹಾರ ಘೋಷಿಸಿದ್ದಾರೆ.

ಮುಖ್ಯಮಂತ್ರಿಯ ಸೂಚನೆಯಂತೆ ಚೆವೆಲ್ಲಾ ಆಸ್ಪತ್ರೆಗೆ ಭೇಟಿ ನೀಡಿದ ತೆಲಂಗಾಣ ಸಾರಿಗೆ ಸಚಿವ ಪೊನ್ನಂ ಪ್ರಭಾಕರ್ ಅವರು ಗಾಯಾಳುಗಳ ಆರೋಗ್ಯ ವಿಚಾರಿಸಿದರು.

ಮೃತರ ಕುಟುಂಬದ ಸದಸ್ಯರಿಗೆ ರಾಜ್ಯ ಸರ್ಕಾರದಿಂದ ತಲಾ ₹5 ಲಕ್ಷ, ತೆಲಂಗಾಣ ಸಾರಿಗೆ ಸಂಸ್ಥೆಯಿಂದ ₹2 ಲಕ್ಷ ನೀಡಲಾಗುವುದು. ಅಲ್ಲದೇ, ಗಾಯಾಳುಗಳಿಗೆ ಸರ್ಕಾರದಿಂದ ತಲಾ ₹2 ಲಕ್ಷ ನೆರವು ನೀಡಲಾಗುವುದು’ ಎಂದು ಸಚಿವರು ಘೋಷಿಸಿದ್ದಾರೆ.

ಮೂವರು ಹೆಣ್ಣುಮಕ್ಕಳನ್ನು ಕಳೆದುಕೊಂಡ ಹೆತ್ತವರು

ಚೆವೆಲ್ಲಾದ ತಾಂಡೂರ್ ಪಟ್ಟಣದ ನಿವಾಸಿ ಅಂಬಿಕಾ–ಯೆಲ್ಲಯ್ಯ ಗೌಡ್ ದಂಪತಿಯ ಮೂವರು ಹೆಣ್ಣು ಮಕ್ಕಳು ಕೂಡ ಅಪಘಾತದಲ್ಲಿ ಮೃತಪಟ್ಟಿದ್ದಾರೆ.

ಮೂವರೂ ಹೈದರಾಬಾದ್‌ನ ಕಾಲೇಜಿನಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದರು.

‘ಕಳೆದ ತಿಂಗಳಷ್ಟೇ ದೊಡ್ಡ ಮಗಳು ಅನುಷಾಳ ಮದುವೆಯನ್ನು ಅದ್ದೂರಿಯಾಗಿ ನೆರವೇರಿಸಿದ್ದೆವು. ಇಡೀ ಕುಟುಂಬವೇ ಸಂಭ್ರಮದಲ್ಲಿತ್ತು. ಇದಾದ ಕೆಲವೇ ದಿನದಲ್ಲಿ ನನ್ನ ಉಳಿದ ಮಕ್ಕಳನ್ನು ಕಳೆದುಕೊಂಡಿದ್ದೇನೆ. ನಾನು ಏಕೆ ಉಳಿದೆ ಎಂದು ಅರ್ಥವಾಗುತ್ತಿಲ್ಲ’ ಎಂದು ಯೆಲ್ಲಯ್ಯ ಗೌಡ್ ಕಣ್ಣೀರಿಟ್ಟರು.

ಊರಿನಲ್ಲಿ ನಡೆದಿದ್ದ ಮದುವೆ ಕಾರ್ಯಕ್ರಮವೊಂದರಲ್ಲಿ ಭಾಗಿಯಾಗಲು ಸಹೋದರಿಯರಾದ ನಂದಿನಿ, ಸಾಯಿಪ್ರಿಯಾ, ತನುಷಾ ಬಂದಿದ್ದರು. ಮತ್ತೆ ಕಾಲೇಜಿಗೆ ತೆರಳಲು ಬಸ್‌ನಲ್ಲಿ ಪ್ರಯಾಣಿಸುತ್ತಿದ್ದ ವೇಳೆ ಅಪಘಾತದಲ್ಲಿ ಮೃತಪಟ್ಟಿದ್ದಾರೆ.

ಅಪಘಾತದಲ್ಲಿ ಮೃತಪಟ್ಟ ನಂದಿನಿ, ಸಾಯಿಪ್ರಿಯಾ, ತನುಷಾ

ನಿಂತಿದ್ದ ವಾಹನಗಳಿಗೆ ಟಿಪ್ಪರ್ ಡಿಕ್ಕಿ; 13 ಸಾವು

ಒಂದನೇ ಪುಟದಿಂದ...

ಅಪಘಾತದ ಕುರಿತಂತೆ ರಾಜಸ್ಥಾನ ಮುಖ್ಯಮಂತ್ರಿ ಭಜನ್‌ಲಾಲ್ ಶರ್ಮಾ, ಉಪ ಮುಖ್ಯಮಂತ್ರಿಗಳಾದ ದಿಯಾ ಕುಮಾರಿ, ಪ್ರೇಮ್‌ಚಾಂದ್ ಬೈರ್‌ವಾ, ಮಾಜಿ ಮುಖ್ಯಮಂತ್ರಿ ಅಶೋಕ್ ಗೆಹ್ಲೋತ್ ಕಂಬನಿ ಮಿಡಿದಿದ್ದಾರೆ.

‘ಅಪಘಾತಕ್ಕೀಡಾದ ಕಾರಿನಿಂದ ಒಂದಾದ ನಂತರ ಮತ್ತೊಂದು ಮೃತದೇಹ ಹೊರತೆಗೆಯಲಾಯಿತು. ಎಲ್ಲೆಡೆ ಕಿರುಚಾಟ, ರಕ್ತ ಹರಿದಿರುವುದು ಕಂಡುಬಂತು’ ಎಂದು ಸ್ಥಳೀಯ ವ್ಯಾಪಾರಿ ಮಹೇಶ್ ಶರ್ಮಾ ತಿಳಿಸಿದ್ದಾರೆ.

‘ರಸ್ತೆ ನಂ.14ರಿಂದ ಲೊಹಾ ಮಂಡಿ ಪ್ರದೇಶದತ್ತ ವೇಗವಾಗಿ ಬಂದ ಟಿಪ್ಪರ್ ತನ್ನ ದಾರಿಯಲ್ಲಿ ಸಿಕ್ಕ ಹಲವು ವಾಹನಗಳಿಗೆ ಡಿಕ್ಕಿ ಹೊಡೆದಿದೆ. ಇದರಿಂದ, 13 ಮಂದಿ ಮೃತಪಟ್ಟಿದ್ದು, 10 ಮಂದಿ ಗಾಯಗೊಂಡಿದ್ದಾರೆ. ಗಾಯಗೊಂಡವರನ್ನು ಇಲ್ಲಿನ ಎಸ್‌ಎಂಎಸ್ ಆಸ್ಪತ್ರೆಯ ತೀವ್ರ ನಿಗಾ ಘಟಕಕ್ಕೆ ದಾಖಲಿಸಿ, ಚಿಕಿತ್ಸೆ ಮುಂದುವರಿಸಲಾಗಿದೆ. ಕೆಲವರ ಸ್ಥಿತಿ ಗಂಭೀರವಾಗಿದೆ’ ಎಂದು ಜೈಪುರ ಜಿಲ್ಲಾಧಿಕಾರಿ ಜಿತೇಂದ್ರ ಸೋನಿ ತಿಳಿಸಿದ್ದಾರೆ.

‘ಚಾಲಕ ಅಜಾಗರೂಕತೆಯಿಂದ ಟಿಪ್ಪರ್ ಚಲಾಯಿಸಿದ್ದೇ ಅಪಘಾತಕ್ಕೆ ಕಾರಣ’ ಎಂದು ಹೆಚ್ಚುವರಿ ಪೊಲೀಸ್ ಕಮಿಷನರ್ ರಾಜೀವ್ ಪಛಾರ್ ಹೇಳಿದ್ದಾರೆ. ಟಿಪ್ಪರ್ ತಾಸಿಗೆ 100 ಕಿ.ಮೀ ವೇಗದಲ್ಲಿ ಹೋಗಿ, ವಾಹನಗಳಿಗೆ ಡಿಕ್ಕಿ ಹೊಡೆದ ದೃಶ್ಯ ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ.

ಮಣಿಪುರ ಜನಾಂಗೀಯ ಹಿಂಸಾಚಾರ: ಎನ್. ಬಿರೇನ್ ಸಿಂಗ್ ವಿರುದ್ಧದ ಆರೋಪ

ತಿರುಚಲ್ಪಟ್ಟ ಆಡಿಯೊ ತುಣುಕು: ಎನ್‌ಎಫ್‌ಎಸ್‌ಎಲ್

ನವದೆಹಲಿ (ಪಿಟಿಐ): ಮಣಿಪುರದಲ್ಲಿನ ಜನಾಂಗೀಯ ಹಿಂಸಾಚಾರಕ್ಕೆ ಸಂಬಂಧಿಸಿದಂತೆ ಮಾಜಿ ಮುಖ್ಯಮಂತ್ರಿ ಎನ್. ಬಿರೇನ್ ಸಿಂಗ್ ಮಾತನಾಡಿದ್ದಾರೆ ಎನ್ನಲಾದ ಆಡಿಯೊ ತುಣುಕು ‘ತಿರುಚಲ್ಪಟ್ಟಿದೆ’ ಎಂದು ಎನ್‌ಎಫ್‌ಎಸ್‌ಎಲ್ ನೀಡಿದ ವರದಿಯನ್ನು ಸುಪ್ರೀಂ ಕೋರ್ಟ್ ಸೋಮವಾರ ಗಮನಿಸಿತು.

ಗುಜರಾತ್‌ನ ರಾಷ್ಟ್ರೀಯ ವಿಧಿ ವಿಜ್ಞಾನ ಪ್ರಯೋಗಾಲಯದ (ಎನ್‌ಎಫ್‌ಎಸ್‌ಎಲ್) ವರದಿಯ ಪ್ರಕಾರ, ‘ಆಡಿಯೊ ತುಣುಕು ಪರಿಷ್ಕರಣೆಗೊಳಗಾಗಿದ್ದು ತಿರುಚಲ್ಪಟ್ಟಿದೆ. ವಿಧಿವಿಜ್ಞಾನದ ಧ್ವನಿ ಹೋಲಿಕೆಗೆ ವೈಜ್ಞಾನಿಕವಾಗಿ ಸರಿಹೊಂದುತ್ತಿಲ್ಲ’ ಎಂದು ನ್ಯಾಯಮೂರ್ತಿಗಳಾದ ಸಂಜಯ್ ಕುಮಾರ್ ಮತ್ತು ಅಲೋಕ್ ಅರಾಧೆ ಅವರಿದ್ದ ನ್ಯಾಯಪೀಠವು ಅಭಿಪ್ರಾಯಪಟ್ಟಿದೆ.

ಮಣಿಪುರ ಜನಾಂಗೀಯ ಸಂಘರ್ಷದಲ್ಲಿ ಮಾಜಿ ಮುಖ್ಯಮಂತ್ರಿ ಬಿರೇನ್ ಸಿಂಗ್ ಅವರ ಪಾತ್ರ ಇದೆ ಎಂದು ಹೇಳಲಾದ ಸೋರಿಕೆಯಾದ ಆಡಿಯೊ ತುಣುಕು ಕುರಿತ ವಿಷಯಕ್ಕೆ ಸಂಬಂಧಿಸಿದಂತೆ, ಎಸ್‌ಐಟಿ ತನಿಖೆ ನಡೆಸುವಂತೆ ಆಗ್ರಹಿಸಿ ಕುಕಿ ಸಂಘಟನೆಯ ಮಾನವ ಹಕ್ಕು ಟ್ರಸ್ಟ್ ಸಲ್ಲಿಸಿದ್ದ ಅರ್ಜಿಯ ವಿಚಾರಣೆಯನ್ನು ನಡೆಸಿತು.

ಎನ್‌ಎಫ್‌ಎಸ್‌ಎಲ್ ವರದಿ ಪ್ರತಿಯನ್ನು ಅರ್ಜಿದಾರರಿಗೆ ನೀಡಬೇಕು. ಇದರಿಂದ ಅವರು ಅದಕ್ಕೆ ಪ್ರತಿಕ್ರಿಯಿಸಬಹುದು ಎಂದು ಕುಕಿ ಸಂಘಟನೆ ಪರ ವಕೀಲ ಪ್ರಶಾಂತ್ ಭೂಷಣ್ ಪೀಠವನ್ನು ಕೋರಿದರು.

ವರದಿಯ ಪ್ರತಿಯನ್ನು ಸಂಘಟನೆ ಪರ ವಕೀಲರಿಗೆ ನೀಡುವಂತೆ ಸುಪ್ರೀಂ ಕೋರ್ಟ್‌ನ ರಿಜಿಸ್ಟ್ರಿಗೆ ಸೂಚಿಸಿದ ನ್ಯಾಯಪೀಠವು, ವಿಚಾರಣೆಯನ್ನು ಡಿ. 8ಕ್ಕೆ ಮುಂದೂಡಿತು.

ಪರಿಹಾರ: ಅರ್ಜಿ ವಜಾ

ನವದೆಹಲಿ (ಪಿಟಿಐ): ಗುಂಪು ಹತ್ಯೆಯ ಸಂತ್ರಸ್ತರ ಕುಟುಂಬಗಳಿಗೆ ಪರಿಹಾರ ಕೊಡುವಂತೆ ಉತ್ತರ ಪ್ರದೇಶ ಸರ್ಕಾರಕ್ಕೆ ನಿರ್ದೇಶನ ನೀಡಬೇಕು ಎಂದು ಕೋರಿ ಜಮಿಯತ್ ಉಲಮಾ–ಇ–ಹಿಂದ್ ಸಲ್ಲಿಸಿದ್ದ ಅರ್ಜಿಯನ್ನು ಸುಪ್ರೀಂ ಕೋರ್ಟ್ ಸೋಮವಾರ ವಜಾಗೊಳಿಸಿದೆ.

ನ್ಯಾಯಮೂರ್ತಿಗಳಾದ ಜೆ.ಕೆ. ಮಾಹೇಶ್ವರಿ ಮತ್ತು ವಿಜಯ್ ಬಿಷ್ಣೋಯಿ ಅವರಿದ್ದ ಪೀಠವು ಅಲಹಾಬಾದ್ ಹೈಕೋರ್ಟ್‌ನ ಆದೇಶದಲ್ಲಿ ಹಸ್ತಕ್ಷೇಪ ಮಾಡಲು ನಿರಾಕರಿಸಿತು.

ಕರ್ನಾಟಕ ಸರಕಾರ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇಂಜೇನಿಯರಿಂಗ ವಿಭಾಗ, ಕಲಬುರಗಿ
ಲೋಕೋಪಯೋಗಿ ಇಲಾಖೆ ವಸತಿ ಗೃಹ ಸಂಖ್ಯೆ 110ಡಿ, ಐವಾನ್–ಇ–ಶಾಹಿ ಕಾಲೋನಿ,
ಹೆಚ್.ಕೆ.ಇ. ಶಿಕ್ಷಣ ಸಂಸ್ಥೆಯ ಮಹಿಳಾ ಪಾಲಿಟೆಕ್ನಿಕ್ ಎದುರುಗಡೆ ಕಲಬುರಗಿ –585102.
ದೂರವಾಣಿ/ ಫ್ಯಾಕ್ಸ ಸಂಖ್ಯೆ – 08472–241982 E –mail : ee.khsdrp.klb@gmail.com

ಸಂಖ್ಯೆ: ಆಕುಕ/ಕಾನಿಅ/ಇಂ.ವಿ.ಕ/ಸ.ಇಂ–2/ಸಮಾಲೋಚಕರ ಸೇವೆ/2025–26/1051 ದಿನಾಂಕ: 31.10.2025

:: ತಿದ್ದುಪಡಿ ಟೆಂಡರ ಪ್ರಕಟಣೆ ::

ಉಲ್ಲೇಖ: ಈ ಕಛೇರಿ ಟೆಂಡರ್ ಪ್ರಕಟಣೆ ಸಂಖ್ಯೆ: ಆಕುಕ/ಕಾನಿಅ/ಇಂ.ವಿ.ಕ/ಸ.ಇಂ–2/ಡಿಪಿಆರ್/2025–26/833 ದಿನಾಂಕ: 25.09.2025

ಈ ಕಛೇರಿ ಉಲ್ಲೇಖಿತ ಪ್ರಕಟಣೆಯನ್ವಯ ಟೆಂಡರ್ ಕರೆಯಲಾಗಿದ್ದು, ಅದರಲ್ಲಿ ಈ ಕೆಳಗಿನ ಕಾಮಗಾರಿಗಳನ್ನು ಪರಿಷ್ಕರಿಸಿ, ಆರ್ಕಿಟೆಕ್ಚರಲ್, ಸ್ಟ್ರಕ್ಚರಲ್, ಹಾಗೂ ಇನ್ನಿತರ ಸೌಲಭ್ಯಗಳ ನಕ್ಷೆ ತಯಾರಿಸುವ ಸಲುವಾಗಿ ಯೋಜನಾ ಸಮಾಲೋಚಕರನ್ನು ನೇಮಿಸಲು ವಿದ್ಯುನ್ಮಾನ ಸಂಗ್ರಹಣೆ ವೇದಿಕೆ (kppp portal) ಮೂಲಕ ಟೆಂಡರಗಳನ್ನು ಆಹ್ವಾನಿಸಲಾಗಿದೆ.

ಕ್ರ ಸಂ.	ಕಾಮಗಾರಿಯ ಹೆಸರು	ಟೆಂಡರಿಗಿಟ್ಟ ಮೊತ್ತ (GST ಹೊರತುಪಡಿಸಿ) (ರೂ.ಲಕ್ಷಗಳಲ್ಲಿ)	ಇ.ಎಂ.ಡಿ ಮೊತ್ತ (ರೂ. ಗಳಲ್ಲಿ)	ನಿಗದಿಪಡಿಸಿದ ಅವಧಿ
1	ಕಲಬುರಗಿ ವಿಶ್ವವಿದ್ಯಾಲಯ ಆವರಣದಲ್ಲಿ ನಿಮ್ಹಾನ್ಸ ಮತ್ತು ಡಿ–ಆಡಿಕ್ಷನ್ ಕೇಂದ್ರ ನಿರ್ಮಾಣ ಸಲುವಾಗಿ ಆರ್ಕಿಟೆಕ್ಚರಲ್, ಸ್ಟ್ರಕ್ಚರಲ್, ಹಾಗೂ ಇನ್ನಿತರ ಸೌಲಭ್ಯಗಳ ನಕ್ಷೆ ತಯಾರಿಸುವುದು. (ಇಂಡೆಂಟ ಸಂ: 313)	76.25	152500.00	20 ದಿನಗಳು
2	ಕಲಬುರಗಿ ವಿಶ್ವವಿದ್ಯಾಲಯ ಆವರಣದಲ್ಲಿ ಎಂಡೋಕ್ರೈನೊಲಾಜಿ ಕೇಂದ್ರ ನಿರ್ಮಾಣ ಸಲುವಾಗಿ ಡಿಪಿಆರ್, ಆರ್ಕಿಟೆಕ್ಚರಲ್, ಸ್ಟ್ರಕ್ಚರಲ್, ಹಾಗೂ ಇನ್ನಿತರ ಸೌಲಭ್ಯಗಳ ನಕ್ಷೆ ತಯಾರಿಸುವುದು. (ಇಂಡೆಂಟ ಸಂ: 174)	30.00	60,000.00	20 ದಿನಗಳು
3	ಕೊಪ್ಪಳ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಆವರಣದಲ್ಲಿ ಸೂಪರಸ್ಪೆಷಾಲಿಟಿ ಆಸ್ಪತ್ರೆ ನಿರ್ಮಾಣ ಸಲುವಾಗಿ ಡಿಪಿಆರ್, ಆರ್ಕಿಟೆಕ್ಚರಲ್, ಸ್ಟ್ರಕ್ಚರಲ್, ಹಾಗೂ ಇನ್ನಿತರ ಸೌಲಭ್ಯಗಳ ನಕ್ಷೆ ತಯಾರಿಸುವುದು (ಇಂಡೆಂಟ ಸಂ: 337)	76.25	152500.00	20 ದಿನಗಳು

ಟೆಂಡರ್ ಪ್ರಕ್ರಿಯೆಗಳ ದಿನಾಂಕಗಳು:
1. ಟೆಂಡರಗಳನ್ನು ಇ–ಪ್ರೊಕ್ಯೂರಮೆಂಟ ಮೂಲಕ ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯ : **19.11.2025 ರಂದು 16.00 ಗಂಟೆಯ ವರೆಗೆ,** 2. ಟೆಂಡರ ತೆರೆಯುವ ದಿನಾಂಕ ಮತ್ತು ಸಮಯ: **20.11.2025 ರಂದು 16.30 ಗಂಟೆಗೆ**

ಟಿಪ್ಪಣಿ: 1. ಈ ಕೆಳಗೆ ಸಹಿ ಮಾಡಿರುವವರು ಯಾವುದೇ ಕಾರಣಗಳನ್ನು ನೀಡದೇ ಟೆಂಡರ ಪ್ರಕ್ರಿಯೆಯನ್ನು ಮುಂದೂಡುವ/ಸಂಪೂರ್ಣವಾಗಿ ಟೆಂಡರ ರದ್ದುಗೊಳಿಸುವ/ಟೆಂಡರ ನಿರಾಕರಿಸುವ ಹಕ್ಕನ್ನು ಹೊಂದಿರುತ್ತಾರೆ. 2. ಇನ್ನು ಮುಂದೆ ಟೆಂಡರ ಪ್ರಕ್ರಿಯೆಯಲ್ಲಿ ಯಾವುದೇ ಬದಲಾವಣೆಗಳು ಇದ್ದಲ್ಲಿ ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ, ಬದಲಾಗಿ ವಿದ್ಯುನ್ಮಾನ ಸಂಗ್ರಹಣೆ ವೇದಿಕೆಯಲ್ಲಿ ಮಾತ್ರ ಬದಲಾವಣೆಗಳನ್ನು ಪ್ರಕಟಿಸಲಾಗುವುದು.

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರ್
ಆಕುಕ ಇಂಜಿನೀಯರಿಂಗ ವಿಭಾಗ ಕಲಬುರಗಿ

ವಾ.ಸಾ.ಸಂ.ಇ/ಕಲಬುರಗಿ/668/ಕೆ.ಎಸ್.ಎಂ.ಸಿ.&ವ/2025–26

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ

ಸುಭಾಷಿತ

ಪ್ರಜಾಪ್ರಭುತ್ವದಲ್ಲಿ ಬಲಿಷ್ಠನಿಗೆ ಇರುವ ಅವಕಾಶಗಳು ದುರ್ಬಲನಿಗೂ ಇರಬೇಕು. ಅದೇ ನಿಜವಾದ ಪ್ರಜಾಪ್ರಭುತ್ವ.

–ಮಹಾತ್ಮ ಗಾಂಧೀಜಿ

ಸಂಪಾದಕೀಯ

ಕೌರ್ ಪಡೆಯ 'ವಿಶ್ವಕಪ್' ವಿಕ್ರಮ ಮಹಿಳಾ ಕ್ರಿಕೆಟ್‌ನಲ್ಲಿ ಹೊಸ ಶಕೆ

ಹರ್ಮನ್‌ಪ್ರೀತ್ ಕೌರ್ ಬಳಗವು 'ಐಸಿಸಿ ಮಹಿಳಾ ಏಕದಿನ ಕ್ರಿಕೆಟ್ ವಿಶ್ವಕಪ್' ಟೂರ್ನಿಯಲ್ಲಿ ಚಾಂಪಿಯನ್ ಆಗಿ ಹೊರಹೊಮ್ಮಿರುವುದು ಭಾರತದ ಕ್ರೀಡಾಕ್ಷೇತ್ರದ ಇತಿಹಾಸದಲ್ಲೊಂದು ಚಾರಿತ್ರಿಕ ಸಾಧನೆ. ಈ ವಿಶ್ವಕಪ್ ಜಯದ ಮೂಲಕ ಭಾರತದ ಮಹಿಳಾ ಕ್ರಿಕೆಟ್‌ನಲ್ಲಿ ಸುವರ್ಣಯುಗವೊಂದು ಆರಂಭವಾದಂತಾಗಿದೆ. ಸುಮಾರು ಐದು ದಶಕಗಳಿಂದ ಕ್ರಿಕೆಟ್‌ಪ್ರಿಯರ ಕಣ್ಣುಗಳಲ್ಲಿ ಬಂದಿದ್ದ ಕನಸು ಸಹ ಸಾಕಾರಗೊಂಡಿದೆ. ಭಾರತದ ಸಾಮಾಜಿಕ ವ್ಯವಸ್ಥೆಯಲ್ಲಿ ಪುರುಷರಿಗೆ ದೊರೆಯುವ ಅವಕಾಶ ಹಾಗೂ ಬೆಂಬಲ ಮಹಿಳೆಯರಿಗೆ ದೊರೆಯುವುದು ಕಷ್ಟ. ಕ್ರಿಕೆಟ್ ಆಟಗಾರ್ತಿಯರು ಇಂತಹ ಸಾಮಾಜಿಕ ಅಡೆತಡೆಗಳನ್ನು ಅನುಭವಿಸುತ್ತ, ಮೀರುತ್ತ ಬೆಳೆದಿದ್ದಾರೆ. ಕ್ರಿಕೆಟ್ ಅಂಗಳದಲ್ಲಿ ಪುರುಷ ಆಟಗಾರರಿಗೆ ಸಿಗುತ್ತಿದ್ದ ಮಾನ್ಯತೆ, ಜನಪ್ರಿಯತೆಗೆ ಸಮಾನವಾದ ಗೌರವಾದರಗಳನ್ನು ಪಡೆಯಲು ಹೋರಾಟವನ್ನೂ ನಡೆಸಿದ್ದಾರೆ. ಶಾಂತಾ ರಂಗಸ್ವಾಮಿ, ಕಲ್ಪನಾ, ಡಯಾನಾ ಎಡುಲ್ಜಿ, ಮಿಥಾಲಿ ರಾಜ್, ಜೂಲನ್ ಗೋಸ್ವಾಮಿ ಮತ್ತು ಇನ್ನೂ ಹಲವು ಆಟಗಾರ್ತಿಯರು ತೋರಿದ ದಿಟ್ಟತನದ ಫಲವಾಗಿ ಭಾರತದಲ್ಲಿ ಮಹಿಳಾ ಕ್ರಿಕೆಟ್‌ನ ಬೇರುಗಳು ಗಟ್ಟಿಯಾಗಿ ಬೆಳೆದಿವೆ. ಅವರೆಲ್ಲರೂ ಕಟ್ಟಿದ ಸಾಧನೆಯ 'ಸೌಧ'ದ ಮೇಲೆ ಇದೀಗ ಹರ್ಮನ್‌ಪ್ರೀತ್ ಬಳಗವು ವಿಶ್ವಕಪ್ ಕಳಸವನ್ನಿಟ್ಟಿದೆ. 2005 ಮತ್ತು 2017ರ ವಿಶ್ವಕಪ್ ಫೈನಲ್‌ಗಳಲ್ಲಿ ಭಾರತ ತಂಡವು ಮುಗ್ಗರಿಸಿತ್ತು. ಈ ಸಲ ಹಾಗಾಗಲಿಲ್ಲ. ಇದೇ ಮೊದಲ ಸಲ ಫೈನಲ್‌ಗೆ ಪ್ರವೇಶಿಸಿದ್ದ ದಕ್ಷಿಣ ಆಫ್ರಿಕಾ ತಂಡದ ಸವಾಲನ್ನು ಭಾರತ ಮೀರಿ ನಿಂತಿತು. ಮಹಿಳಾ ಏಕದಿನ ವಿಶ್ವಕಪ್ ಜಯಿಸಿದ ನಾಲ್ಕನೇ ರಾಷ್ಟ್ರವೆಂಬ ಹೆಗ್ಗಳಿಕೆಗೆ ಪಾತ್ರವಾಗಿ, ಆಸ್ಟ್ರೇಲಿಯಾ, ಇಂಗ್ಲೆಂಡ್ ಮತ್ತು ನ್ಯೂಜಿಲೆಂಡ್ ತಂಡಗಳ ಸಾಲಿಗೆ ಸೇರಿತು. 1983ರಲ್ಲಿ ವಿಶ್ವಕಪ್ ವಿಜಯದ ನಂತರ ಭಾರತದ ಪುರುಷರ ಕ್ರಿಕೆಟ್‌ನಲ್ಲಿ ಹೊಸ ಯುಗ ಆರಂಭವಾಗಿತ್ತು. ಇದೀಗ ಹರ್ಮನ್ ಬಳಗದ ವಿಜಯವೂ ಮಹಿಳಾ ಕ್ರಿಕೆಟ್‌ನಲ್ಲಿ ಅಂತಹದ್ದೇ ಕ್ರಾಂತಿಗೆ ಮುನ್ನುಡಿ ಬರೆಯಲಿದೆ ಎಂಬ ನಿರೀಕ್ಷೆ ಮೂಡಿಸಿದೆ.

ಏಕದಿನ ವಿಶ್ವಕಪ್ ಕ್ರಿಕೆಟ್‌ನಲ್ಲಿ ಭಾರತದ ಆಟಗಾರ್ತಿಯರು ವಿಶ್ವ ಚಾಂಪಿಯನ್ನರು. ಈ ಗೆಲುವು ಕ್ರಿಕೆಟ್ ಜಗತ್ತಿಗೆ ಮಾತ್ರವಲ್ಲ, ದೇಶದ ಯುವತಿಯರಿಗೂ ಸ್ಫೂರ್ತಿದಾಯಕ.

ವಿಭಿನ್ನ ಸಂಸ್ಕೃತಿ, ಭಾಷೆ ಮತ್ತು ಧರ್ಮಗಳ ಹಿನ್ನೆಲೆಯಿಂದ ಬಂದ ಆಟಗಾರ್ತಿಯರು ಸಂಘಟಿತರಾಗಿ ಆಡಿದ್ದು ಗೆಲುವಿಗೆ ಪ್ರಮುಖ ಕಾರಣವಾಯಿತು. ಆಲ್‌ರೌಂಡರ್‌ಗಳಾದ ದೀಪ್ತಿ ಶರ್ಮಾ, ಸ್ನೇಹ ರಾಣಾ ಹಾಗೂ ಅಮನ್‌ಜೋತ್ ಕೌರ್ ಅವರು ಟೂರ್ನಿಯುದ್ದಕ್ಕೂ ತೋರಿದ ದಿಟ್ಟ ಆಟ ಅಮೋಘವಾದದ್ದು. ದೀಪ್ತಿ ಅವರಂತೂ ಫೈನಲ್‌ನಲ್ಲಿ ಅರ್ಧಶತಕ ಮತ್ತು ಐದು ವಿಕೆಟ್ ಪಡೆಯುವ ಮೂಲಕ ಗೆಲುವು ಕೈಜಾರದಂತೆ ನೋಡಿಕೊಂಡರು. 22 ವರ್ಷದ ಶಫಾಲಿ ವರ್ಮಾ ತಮಗೆ ಸಿಕ್ಕ ಅವಕಾಶವನ್ನು ಸಮರ್ಥವಾಗಿ ಬಳಸಿಕೊಂಡರು. ಸೆಮಿಫೈನಲ್‌ನಲ್ಲಿ ಆಸ್ಟ್ರೇಲಿಯಾ ಎದುರು ಜೆಮಿಮಾ ರಾಡ್ರಿಗಸ್ ಶತಕ ಮತ್ತು ಹರ್ಮನ್‌ಪ್ರೀತ್ ಅರ್ಧಶತಕ ಕೂಡ ಬಹುಕಾಲ ನೆನಪಿನಲ್ಲಿ ಉಳಿಯಲಿವೆ. ಸ್ಮೃತಿ ಮಂದಾನ, ರೇಣುಕಾ ಠಾಕೂರ್, ಕ್ರಾಂತಿ ಗೌಡ್ ಅವರ ಕಾಣಿಕೆಯೂ ಮಹತ್ವದ್ದು. ತಂಡವನ್ನು ಒಗ್ಗೂಡಿಸಿ ಮುನ್ನಡೆಸಿದ ಶ್ರೇಯ ತಂಡದ ಮುಖ್ಯ ಕೋಚ್ ಅಮೋಲ್ ಮಜುಂದಾರ್ ಅವರಿಗೆ ಸಲ್ಲಬೇಕು. ದೇಶಿ ಕ್ರಿಕೆಟ್‌ನ ಶ್ರೇಷ್ಠ ಆಟಗಾರರಲ್ಲಿ ಒಬ್ಬರಾಗಿದ್ದ ಅಮೋಲ್ ಅವರಿಗೆ ರಾಷ್ಟ್ರೀಯ ತಂಡದಲ್ಲಿ ಆಡುವ ಅವಕಾಶ ಸಿಕ್ಕಿರಲಿಲ್ಲ. ಆದರೆ, ಇದೀಗ ಮಹಿಳಾ ಕ್ರಿಕೆಟ್ ತಂಡವು ಚಾರಿತ್ರಿಕ ಸಾಧನೆ ಮಾಡಲು ಅವರ ಮಾರ್ಗದರ್ಶನ ಕಾರಣವಾಗಿದೆ. ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯು (ಬಿಸಿಸಿಐ) ಮಹಿಳೆಯರಿಗೂ ಸಮಾನ ವೇತನ, ಗುತ್ತಿಗೆ ಅವಕಾಶಗಳನ್ನು ನೀಡಿದೆ. ದೇಶಿ ಕ್ರಿಕೆಟ್‌ನಲ್ಲಿಯೂ ಹಲವು ಸುಧಾರಣೆಗಳನ್ನು ಮಾಡಿದೆ. ಮೂರು ವರ್ಷಗಳಿಂದ ಮಹಿಳಾ ಪ್ರೀಮಿಯರ್ ಲೀಗ್ ಆಯೋಜಿಸುತ್ತಿದೆ. ಇದರಿಂದ ಫಲವಾಗಿ ಮಹಿಳಾ ಕ್ರಿಕೆಟಿಗರೂ ಆರ್ಥಿಕವಾಗಿ ಸುಭದ್ರರಾಗುತ್ತಿದ್ದಾರೆ. ಶಾಲೆಗಳ ಸೌಲಭ್ಯ ಮತ್ತು ವೃತ್ತಿಪರ ಪಟ್ಟಿಯಿಂದ ಕ್ರಿಕೆಟ್ ಆಟದತ್ತ ಆಕರ್ಷಿತರಾಗುತ್ತಿರುವ ಬಾಲಕಿಯರ ಸಂಖ್ಯೆಯೂ ಹೆಚ್ಚುತ್ತಿದೆ.

ಭಾರತ ಮತ್ತು ಶ್ರೀಲಂಕಾ ಜಂಟಿಯಾಗಿ ಆಯೋಜಿಸಿದ್ದ ಈ ಟೂರ್ನಿಯಲ್ಲಿ ಅವಿಸ್ಮರಣೀಯ ಸಾಧನೆಗಳು ಮೂಡಿಬಂದವು. ಟೂರ್ನಿಯುದ್ದಕ್ಕೂ ಆಸ್ಟ್ರೇಲಿಯಾ ಮತ್ತು ದಕ್ಷಿಣ ಆಫ್ರಿಕಾ ತಂಡಗಳು ತೋರಿದ ವೃತ್ತಿಪರ ಮತ್ತು ಛಲದ ಹೋರಾಟ ಇತರ ತಂಡಗಳಿಗೂ ಮಾದರಿ ಆಗಬಲ್ಲದ್ದು. ಕೆಲವು ಕಹಿ ಪ್ರಸಂಗಗಳಿಗೂ ಟೂರ್ನಿ ಸಾಕ್ಷಿಯಾಯಿತು. ಪಾಕಿಸ್ತಾನದ ಆಟಗಾರ್ತಿಯರೊಂದಿಗೆ ಹರ್ಮನ್ ಬಳಗವು ಹಸ್ತಲಾಘವ ಮಾಡಲು ನಿರಾಕರಿಸಿದ್ದು ಕ್ರೀಡಾಸ್ಫೂರ್ತಿಗೆ ವಿರುದ್ಧವಾದ ನಡವಳಿಕೆಯಾಗಿತ್ತು. ಇಂದೋರ್‌ನಲ್ಲಿ ಆಸ್ಟ್ರೇಲಿಯಾದ ಆಟಗಾರ್ತಿಯರಿಗೆ ದುಷ್ಕರ್ಮಿಗಳು ನೀಡಿದ ಲೈಂಗಿಕ ಕಿರುಕುಳ ಕೂಡ ಒಂದು ಕಪ್ಪುಚುಕ್ಕೆ. ಇಂತಹ ದೌರ್ಜನ್ಯಗಳಿಗೆ ಸೊಪ್ಪು ಹಾಕದೆ, ಸಮಾಜದ ಇತರ ಅಡೆತಡೆಗಳಿಗೆ ಎದೆಗೊಟ್ಟು ಪುರುಷರಿಗೆ ಸರಿಸಮಾನವಾಗಿ ನಿಲ್ಲುವ ಶಕ್ತಿ ನಾರಿಯರಿಗೆ ಇದೆ ಎಂಬುದನ್ನು ವಿಶ್ವಕಪ್‌ನ ಯಶಸ್ಸು ತೋರಿಸಿಕೊಟ್ಟಿದೆ.

ಮೊಬೈಲ್ ಮಾಯೆ

ಮೊಬೈಲ್ ಅಂಗಳದಲ್ಲಿದ್ದಾರೆ ಮಕ್ಕಳು.
ಆಟದ ಬಯಲಿನಲ್ಲಿ ಮುದುಕರು ಸಿಕ್ಕರು!

ಅಲ್ಲಮಪ್ರಭು ಬೆಟ್ಟದೂರು
ಸಾಹಿತಿ,'ಫೇಸ್‌ಬುಕ್'ನಿಂದ

ಕಿಡಿನುಡಿ

ಬಿಹಾರದಲ್ಲಿ ನಿತೀಶ್‌ಕುಮಾರ್ ಅವರು, ಸರ್ಕಾರ ನಡೆಸುತ್ತಿಲ್ಲ. ದೆಹಲಿಯಿಂದಲೇ ಪ್ರಧಾನಿ ಮತ್ತು ಕೇಂದ್ರದ ನಾಯಕರು, 'ರಿಮೋಟ್ ಕಂಟ್ರೋಲ್' ಮೂಲಕ ಸರ್ಕಾರವನ್ನು ನಿಯಂತ್ರಿಸುತ್ತಿದ್ದಾರೆ.

ಪ್ರಿಯಾಂಕಾ ಗಾಂಧಿ, ಸಂಸದೆ

25 ವರ್ಷಗಳ ಹಿಂದೆ

ಶನಿವಾರ, 4-11-2000

● **ಮೋಸದಾಟ: ಐವರು ಆಟಗಾರರಿಗೆ ನಿಷೇಧ**

ನವದೆಹಲಿ, ನ. 3– ಮೋಸದಾಟಕ್ಕೆ ಸಂಬಂಧಿಸಿದಂತೆ ಸಿಬಿಐ ನಡೆಸಿದ ತನಿಖಾ ವರದಿಯಲ್ಲಿ ಹೆಸರಿಸಲಾಗಿರುವ ಐವರು ಕ್ರಿಕೆಟಿಗರು ಅಂತರರಾಷ್ಟ್ರೀಯ ಮತ್ತು ದೇಶದೊಳಗಿನ ಕ್ರಿಕೆಟ್‌ನಲ್ಲಿ ಆಡುವುದನ್ನು ನಿರ್ಬಂಧಿಸಿ, ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯು ತಾತ್ಕಾಲಿಕವಾಗಿ ಅಮಾನತು ಶಿಕ್ಷೆ ವಿಧಿಸಿದೆ.

ಭಾರತ ತಂಡದ ಮಾಜಿ ನಾಯಕ ಮಹಮದ್ ಅಜರುದ್ದೀನ್, ಅಜಯ್ ಜಡೇಜ, ನಯನ್ ಮೋಂಗಿಯ, ಅಜಯ್ ಶರ್ಮ ಮತ್ತು ಮನೋಜ್ ಪ್ರಭಾಕರ್ ಈ ಶಿಕ್ಷೆಗೆ ಒಳಗಾಗಿರುವ ಆಟಗಾರರಾಗಿದ್ದಾರೆ. ಇವರಲ್ಲಿ ಮನೋಜ್ ಪ್ರಭಾಕರ್ ಈಗಾಗಲೇ ಮೊದಲ ದರ್ಜೆ ಕ್ರಿಕೆಟ್‌ನಿಂದ ನಿವೃತ್ತರಾಗಿದ್ದಾರೆ.

● **ಬೆಂಕಿ ಹಚ್ಚಿಕೊಂಡು ಒಂದೇ ಕುಟುಂಬದ ಮೂವರ ಸಾವು**

ಕೋಲಾರ, ನ. 3– ನಗರದ ಹೃದಯ ಭಾಗದಲ್ಲಿರುವ ಕುರುಬರ ಪೇಟೆ ಮುಖ್ಯರಸ್ತೆಯಲ್ಲಿನ ಮಹಡಿ ಮನೆಯೊಂದರಲ್ಲಿ ಇಂದು ಮಧ್ಯಾಹ್ನ ಗಂಡ, ಹೆಂಡತಿ ಮತ್ತು ಮಗಳು, ಮೈಮೇಲೆ ಸೀಮೆಎಣ್ಣೆ ಸುರಿದುಕೊಂಡು ಬೆಂಕಿ ಹಚ್ಚಿಕೊಂಡು ಮೃತಪಟ್ಟಿರುವ ಘಟನೆ ನಡೆದಿದೆ.

ಇಲ್ಲಿನ ಪಿಎಲ್‌ಡಿ ಬ್ಯಾಂಕ್‌ನಲ್ಲಿ ಟೈಪಿಸ್ಟ್ ಆಗಿರುವ ಪ್ರಕಾಶ್ (50), ಅವರ ಪತ್ನಿ ಪದ್ಮಾ (38) ಮತ್ತು ಮಗಳು ಸಂಧ್ಯಾರಾಣಿ (12) ಮೃತ ದುರ್ದೈವಿಗಳು.

75 ವರ್ಷಗಳ ಹಿಂದೆ

ಶನಿವಾರ, 4-11-1950

● **ಟಿಬೆಟ್ ಆಕ್ರಮಣ ನ್ಯಾಯಬಾಹಿರ**

ನವದೆಹಲಿ, ನ. 3– ಟಿಬೆಟ್ ಸಮಸ್ಯೆಯ ಬಗ್ಗೆ ಭಾರತಕ್ಕೂ, ಚೀಣಕ್ಕೂ ನಡೆದ ರಾಜತಾಂತ್ರಿಕ ಪತ್ರ ವ್ಯವಹಾರದ ವಿವರಗಳನ್ನು ಇಂದು ಇಲ್ಲಿ ಪ್ರಕಟಿಸಲಾಯಿತು.

ಅಕ್ಟೋಬರ್ 31ರಂದು ಚೀಣಕ್ಕೆ ಭಾರತ ಕಳುಹಿಸಿದ ಕೊನೆಯ ಪತ್ರದಲ್ಲಿ 'ಅತ್ಯಾಶ್ಚರ್ಯ'ವನ್ನು ಸೂಚಿಸಿ, ಟಿಬೆಟ್ ವಿರುದ್ಧವಾಗಿ ಮಿಲಿಟರಿ ಕಾರ್ಯಾಚರಣೆ ನಡೆಸುವ ಅವಶ್ಯಕತೆ ಇರಲಿಲ್ಲವೆಂದು ತಿಳಿಸಲಾಗಿದೆ.

ಈ ಪರಿಸ್ಥಿತಿಯ ಸಲುವಾಗಿ ಚೀಣ ತನ್ನ ಪಡೆಗಳ ಮುನ್ನೋಟವನ್ನು ತಡೆದು ಶಾಂತಿಯುತ ಸಂಧಾನಗಳಿಗೆ ಅನುಕೂಲ ಮಾಡದಿದ್ದರೆ, ಪೀಕಿಂಗಿಗೆ ಹೊರಟಿರುವ ಟಿಬೆಟ್ಟಿನ ನಿಯೋಗಕ್ಕೆ ಭಾರತ ಸರ್ಕಾರ ಸಲಹೆ ನೀಡಲಾರದೆಂದು ಪತ್ರದಲ್ಲಿ ತಿಳಿಸಲಾಗಿದೆ.

ದಂತಕಥೆ: ನಮ್ಮ ನಡುವೆ ಏಕಿವೆ?

ವಿಶ್ಲೇಷಣೆ

ಜ್ಯೋತಿ

> ಕಥೆ ಕಟ್ಟುವ ಪ್ರಕ್ರಿಯೆ ಸೃಜನಶೀಲ ಆಗಿರುವಂತೆಯೇ, ರಾಜಕೀಯವೂ ಹೌದು. ಗೆಲುವು ಕಂಡ ಕಥೆಯ ಹಿಂದೆ ಒಂದು ರಾಜಕೀಯ ಸಮೀಕರಣವಿದ್ದರೆ, ಸೋತ ಕಥೆಯ ಹಿಂದೆಯೂ ಒಂದು ಕಥೆಯಿರುತ್ತದೆ. ಕಥೆಗಳ ಕಥೆಯ ಅವಲೋಕನ ಗತ, ವರ್ತಮಾನ ಹಾಗೂ ಭವಿಷ್ಯತ್ತನ್ನು ನಮಗೆ ಕಾಣಿಸುವ ಅಪೂರ್ವ ಬಿಂಬವೂ ಹೌದು.

ನಮ್ಮ ಸಂಸ್ಕೃತಿ, ಇತಿಹಾಸ ಮತ್ತು ಪುರಾಣದ ಕುರಿತಂತೆ ಇರುವ ದಂತಕಥೆಗಳು ಯಾಕೆ ಜನರ ಮನಸ್ಸನ್ನು ಇಷ್ಟೊಂದು ಅದಮ್ಯವಾಗಿ ಸೆಳೆಯುತ್ತವೆ? 'ಕಾಂತಾರ ಚಾಪ್ಟರ್–1' ಸಿನಿಮಾ ಅಭೂತಪೂರ್ವ ಯಶಸ್ಸು ಕಂಡಿರುವ ಸಂದರ್ಭದಲ್ಲಿ ಈ ಪ್ರಶ್ನೆ ಮೂಡುವುದು ಸಹಜ.

ನಾವೆಲ್ಲರೂ ರೋಮಾಂಚಕ ಕಥೆಗಳನ್ನು ಕೇಳುತ್ತಾ ನಂಬುತ್ತಾ ಬೆಳೆಯುತ್ತೇವೆ. ಆ ಕಥೆಗಳು ನಮ್ಮ ಕಲ್ಪನೆಯನ್ನು ಗರಿಗೆದರಿಸುವುದು ಮಾತ್ರವಲ್ಲ, ಮನರಂಜನೆಯನ್ನೂ ನೀಡುತ್ತವೆ. ನಮ್ಮ ಸುತ್ತಲಿನ ಪರಿಸರದ ಬಗ್ಗೆ, ಇತಿಹಾಸದ ಬಗ್ಗೆ, ದೇವರುಗಳ ಬಗ್ಗೆ, ನಾವು ಕಟ್ಟಿಕೊಳ್ಳಬೇಕಾದ ಬದುಕು ಮತ್ತು ಬದುಕಿನ ಅರ್ಥದ ಬಗ್ಗೆ ಬಹಳ ಸೊಗಸಾದ ಆಕರ್ಷಣೀಯ ಕಥೆಗಳಿವೆ. ನಮ್ಮ ಪ್ರಾಪಂಚಿಕ ಅನುಭವ ಹಿಗ್ಗಿದಂತೆ, ನಮಗಿಷ್ಟವಾಗುವ ಮತ್ತು ಅನುಕೂಲವಾದಂತಹ ಕಥೆಗಳನ್ನು ಒಪ್ಪಿಕೊಳ್ಳುತ್ತೇವೆ, ಉಳಿದವುಗಳನ್ನು ತಿರಸ್ಕರಿಸುತ್ತೇವೆ, ಇಲ್ಲವಾದಲ್ಲಿ ಅವುಗಳ ಕುರಿತು ಮೌನ ವಹಿಸುತ್ತೇವೆ. ಈ ರೀತಿ, ಅಮೂರ್ತವಾಗಿರುವ ಸಂಗತಿಗಳನ್ನು ಮೂರ್ತ ರೂಪದಲ್ಲಿ ನಮಗೆ ಪ್ರಸ್ತುತ ಪಡಿಸುವ ಕೆಲಸವನ್ನು ಕಥೆಗಳು ಮಾಡಿ, ನಮಗೊಂದು ಬದುಕಿನ ಚೌಕಟ್ಟನ್ನು ನೀಡುತ್ತವೆ. ಈ ಮೂಲಕ, ಕಥೆಗಳು ಬದುಕಲು ಭರವಸೆ ನೀಡುತ್ತವೆ ಮತ್ತು ನಮ್ಮ ನಂಬಿಕೆಗಳನ್ನು ಇನ್ನಷ್ಟು ಬಲಗೊಳಿಸುತ್ತವೆ.

ಕಥೆಗಳಿಲ್ಲದ ನಿರ್ವಾತದಲ್ಲಿ ಮನುಷ್ಯನಿಗೆ ಬದುಕಲು ಸಾಧ್ಯವೇ? ಇದಕ್ಕೆ ಉತ್ತರ, ಇಲ್ಲವೆನ್ನಬಹುದು. ಜನರ ಮನಸ್ಸಲ್ಲಿ ಬೇರು ಬಿಟ್ಟಿರುವ ಕಥೆಗಳು ನಮ್ಮ ವೈಯಕ್ತಿಕ ಬದುಕನ್ನು, ಜಾತಿ, ಧರ್ಮ, ಲಿಂಗ, ವರ್ಗ, ಭಾಷೆ ಮತ್ತು ಪ್ರಾದೇಶಿಕತೆಯ ಹೆಸರಲ್ಲಿ ನಮ್ಮನ್ನು ಉಸಿರುಗಟ್ಟಿಸಿದಾಗ, ಅವುಗಳ ವ್ಯಾಪ್ತಿಯನ್ನು ಮೀರಲು ಕೂಡ, ನಾವು ಗಿಟ್ಟಿಸಿಕೊಂಡ ಅರಿವಿನಿಂದ ಹೊಸ ಕಥೆಗಳನ್ನು, ಅಸ್ತಿತ್ವದಲ್ಲಿರುವ ಕಥೆಗಳಿಗಿಂತ ಹೆಚ್ಚು ಸ್ವಾರಸ್ಯವಾಗಿ ಹೆಣೆದು ಜನರು ಅದನ್ನು ನಂಬುವಂತೆ ಮಾಡಬೇಕಾಗುತ್ತದೆ.

ಈ ಹಿನ್ನೆಲೆಯಲ್ಲಿ, ಕಥೆಗಳ ಇತಿಹಾಸವನ್ನು ಅರಸುತ್ತಾ ಹೋದರೆ ನಾಗರಿಕತೆಯ ಆರಂಭದಿಂದಲೂ, ಮನುಷ್ಯ ಕಥೆಗಳ ಮೂಲಕ ಜಗತ್ತನ್ನು ಅರ್ಥ ಮಾಡಿಕೊಳ್ಳಲು ಪ್ರಯತ್ನಿಸಿದ್ದಾನೆ ಮತ್ತು ಅವುಗಳ ಮೂಲಕ ಬದುಕನ್ನು ಕಟ್ಟಿಕೊಳ್ಳುತ್ತಾ ಬಂದಿದ್ದಾನೆ ಎನ್ನಬಹುದು. ಮನುಷ್ಯನಿಗೆ ತನ್ನ ಅಸ್ತಿತ್ವದ ನಿಗೂಢ ರಹಸ್ಯಗಳ ಮುಂದೆ ಮೌನವಾಗಿ ಬದುಕಲು ಸಾಧ್ಯವಿರಲಿಲ್ಲ. ಹೀಗೆ, ಕಥೆಗಳು ನಮ್ಮ ಬದುಕಿನ ಅವ್ಯವಸ್ಥೆಗೆ ಒಂದು ರೂಪ ಮತ್ತು ಅನಿಶ್ಚತತೆಗೆ ಒಂದು ಲಯವನ್ನು ನೀಡಿವೆ. ಅವು ನಮ್ಮನ್ನು ಕೇವಲ ಬದುಕಿ ಸಾಯುವ ಜೀವಿಗಳಾಗಿ ಇರಲು ಬಿಡದೆ, ನಿರಂತರವಾಗಿ ಹೊಸದನ್ನು ಅನ್ವೇಷಿಸುವ ಮತ್ತು ಆಶಿಸುವ ಮನುಷ್ಯರನ್ನಾಗಿ ಬದುಕಲು ಅವಕಾಶ ಮಾಡಿಕೊಡುತ್ತವೆ.

ಮನುಷ್ಯ ಲೋಕದ ಜ್ಞಾನ ವಿಸ್ತರಿಸಿದಂತೆ ಹೊಸ ಕಥೆಗಳು ಸೃಷ್ಟಿಯಾಗಿವೆ. ಆದರೆ, ಹಳೆ ಕಥೆಗಳನ್ನು ನಂಬಿ ಬದುಕುತ್ತಿರುವವರಿಗೆ, ಅವುಗಳ ಆಧಾರದ ಮೇಲೆಯೇ ತಮ್ಮ ಸುತ್ತಲಿನ ಪರಿಸರದ ನಿಯಂತ್ರಣವನ್ನು ತೆಗೆದುಕೊಂಡವರಿಗೆ ಮತ್ತು ಅಧಿಕಾರದ ರುಚಿ ಅನುಭವಿಸಿದವರಿಗೆ ಈ ಹೊಸ ಕಥೆಗಳು ಅಭದ್ರತೆ ಸೃಷ್ಟಿಸಿ ಪಥ್ಯವಾಗದೆ, ಕಥೆಗಾರರನ್ನೇ ನಿಷೇಧ ಮಾಡಿರುವುದು ಅಥವಾ ಸಾಯಿಸಿರುವುದು ಈ ಜಗತ್ತಿನಲ್ಲಿ ನಡೆಯುತ್ತಾ ಬಂದಿದೆ. ನಿರ್ದಿಷ್ಟ ಉದಾಹರಣೆ ಕೊಡುವುದಾದರೆ, ತನ್ನ ಸುತ್ತಲಿನ ಜಗತ್ತು ಹೇಳುವ ಕಥೆಗಳನ್ನು ಪ್ರಶ್ನಿಸಿದ ಸಾಕ್ರಟಿಸ್ ಮತ್ತು ಕೊಪರ್ನಿಕಸ್ ತಮ್ಮ ಸ್ವಅರಿವಿನಿಂದ ಮಾಡಿದ ಹೊಸ ನಿರೂಪಣೆಗಾಗಿ ಜೀವ ತೆರಬೇಕಾಯಿತು. ಈ ನಿಷೇಧವು, ಧಾರ್ಮಿಕ ಮತ್ತು ಇತಿಹಾಸದ ಕಥೆಗಳನ್ನು ಪ್ರಶ್ನಿಸುವವರ ಮೇಲೆ, ಹೊಸ ಕಥೆಗಳನ್ನು ಹೇಳುವವರ ಮೇಲೆ ಇಂದಿಗೂ ನಡೆಯುತ್ತಿದೆ ಎನ್ನುವುದು ವಾಸ್ತವ. ಯಾಕೆಂದರೆ, ತಲೆಮಾರುಗಳಿಂದ ನಮ್ಮ ಮನಸ್ಸಿನಲ್ಲಿ ಬೇರೂರಿರುವ ಕಥೆಗಳನ್ನು ನಂಬುತ್ತೇವೆಯೇ ಹೊರತು, ನಮ್ಮ ಸಮಕಾಲೀನ ಸಹವರ್ತಿ ಜ್ಞಾನಿಗಳನ್ನಲ್ಲ.

ಮನುಷ್ಯನ ನಂಬಿಕೆಯ ಆಳದಲ್ಲಿ ಬೇರೂರಿರುವ ಕಥೆಗಳನ್ನು ಅಲುಗಾಡಿಸಬೇಕೆಂದರೆ, ಅಷ್ಟೇ ಗಟ್ಟಿಯಾಗಿ ಹೆಣೆದ ಹೊಸ ಕಥೆಗಳನ್ನು ಸೃಷ್ಟಿಸಬೇಕಾಗುತ್ತದೆ. ಇದನ್ನು, ಜಗತ್ತಿನಾದ್ಯಂತ ರಾಜಸಂಸ್ಥಾನಗಳು ಮತ್ತು ಧಾರ್ಮಿಕ ಕೇಂದ್ರಗಳು ಯಶಸ್ವಿಯಾಗಿ ಮಾಡಿವೆ. ಅವುಗಳು ತಮ್ಮ ಸುತ್ತ ಬಲವಾದ ಕಥೆಗಳ ಪ್ರಭಾವಳಿಯನ್ನು ಹೆಣೆದಿವೆ. ಆದ್ದರಿಂದಲೇ, ವಿಜ್ಞಾನಕ್ಕೂ ತಾನು ಆವಿಷ್ಕರಿಸುವ ಸಿದ್ಧಾಂತಗಳಿಗೆ ಎಷ್ಟೇ ಪ್ರಬಲ ಸಾಕ್ಷ್ಯ ಒದಗಿಸಿದರೂ, ಹಳೆಯ ಕಥೆಗಳನ್ನು ಮತ್ತು ಅವುಗಳ ಮೇಲಿರುವ ನಂಬಿಕೆಯನ್ನು ಜನರ ಮನಸ್ಸಿನಿಂದ ಸಂಪೂರ್ಣವಾಗಿ ಅಳಿಸಲು ಸಾಧ್ಯವಾಗಿಲ್ಲ. ಈ ನಿಟ್ಟಿನಲ್ಲಿ, ವೈಜ್ಞಾನಿಕ ಮತ್ತು ವೈಚಾರಿಕ ಸಿದ್ಧಾಂತಗಳನ್ನು ಸುಂದರವಾಗಿ ಪೋಣಿಸಿರುವ ಕಥೆಗಳ ಮೂಲಕ ಹಂಚಿಕೊಂಡು ಜನರಿಗೆ ಮನದಟ್ಟು ಮಾಡುವ ಅಗತ್ಯವಿದೆ.

ವಿಸ್ಮಯವೆಂದರೆ, ನಮ್ಮನಾಳುವ ಜನಪ್ರಿಯ ಕಥೆಗಳಿಗೆ ಪರ್ಯಾಯ ಕಥೆಗಳನ್ನು ಸೃಷ್ಟಿಸುವ ಕೆಲಸವನ್ನು ಜನಪದರು ಮಾಡಿದ್ದಾರೆ. ಜನಪ್ರಿಯ ಕಥೆಗಳನ್ನು ಮರುವ್ಯಾಖ್ಯಾನಿಸುವ ಮೂಲಕ ಅವರು ಪ್ರಚಲಿತ ಕಥೆಗಳನ್ನು ತಮ್ಮದೇ ರೀತಿಯಲ್ಲಿ ಪ್ರಶ್ನಿಸಿದ್ದಾರೆ ಮತ್ತು ತಿದ್ದಿದ್ದಾರೆ. ಕಥೆಗಳು ಜನರ ಮನಸ್ಸಿನ ಮೇಲೆ ಗಾಢ ಪ್ರಭಾವ ಬೀರುವ ಅಂಶವನ್ನೇ ಆಧರಿಸಿ, ಜನರನ್ನು ನಿಯಂತ್ರಿಸಿ ಆಳಬೇಕೆನ್ನುವ ಸ್ಥಾಪಿತ ಹಿತಾಸಕ್ತಿಯವರು ತಾವು ಹೇಳಬೇಕಾದುದನ್ನು ಕಥೆಗಳ ಮೂಲಕವೇ ವಿಸ್ಮಯ ಹುಟ್ಟಿಸುವಂತೆ, ನಂಬುವಂತೆ ಹೆಣೆದು ಜನಸಾಮಾನ್ಯರನ್ನು ನಿಯಂತ್ರಿಸುತ್ತಾ ಬಂದಿದ್ದಾರೆ ಎನ್ನುವುದೂ ವಾಸ್ತವ. ಹಾಗಿದ್ದಲ್ಲಿ, ಕಥೆಗಳಿಂದ ನಮಗೆ ಬಿಡುಗಡೆ ಇಲ್ಲವೇ?

ಇಲ್ಲವೆನ್ನಬಹುದು. ಯಾಕೆಂದರೆ ಕಥೆಗಳು ಮನುಷ್ಯನ ಅಂತರಂಗದಿಂದ ಹುಟ್ಟುತ್ತವೆ. ಮೂಲತಃ ಪ್ರತಿಯೊಬ್ಬ ಮನುಷ್ಯನು ಕಥೆಗಾರನೇ. ತನ್ನ ತಪ್ಪುಗಳನ್ನು ಮುಚ್ಚಿಹಾಕಬೇಕೆನ್ನುವಾಗ, ತನ್ನ ಸ್ವರಕ್ಷಣೆಗಾಗಿ ಮನುಷ್ಯ ಎಷ್ಟೊಂದು ಅದ್ಭುತ ಕಥೆಗಳನ್ನು ಸೃಷ್ಟಿಸುವ ಸಾಮರ್ಥ್ಯ ಹೊಂದಿದ್ದಾನೆ ಎನ್ನುವುದು ವಿಸ್ಮಯ ಹುಟ್ಟಿಸುತ್ತದೆ. ಇಂತಹ ಕಥೆಗಳು ಸತ್ಯದ ತಲೆಗೆ ಹೊಡೆದಂತೆ ನಮ್ಮ ತಲೆದೂಗಿಸುತ್ತವೆ. ಆದ್ದರಿಂದ, ಕಥೆಗಳು ಗೆಲ್ಲುತ್ತವೆಯೋ, ಸೋಲುತ್ತವೆಯೋ ಎನ್ನುವುದು ಕಥೆಗಾರನ ಕಥೆ ಹೆಣೆಯುವ ಸಾಮರ್ಥ್ಯದ ಮೇಲೆ ಅವಲಂಬಿಸಿದೆ. ಕಥೆ ಚೆನ್ನಾಗಿದ್ದರೆ ಜನರು ನಂಬಬಹುದು. ಉದಾಹರಣೆಗೆ, ಚುನಾವಣೆಯಲ್ಲಿ ಗೆಲ್ಲಲು ಪ್ರತಿ ಅಭ್ಯರ್ಥಿಯು ತನ್ನ ಪರವಾಗಿ ಮತ್ತು ತನ್ನ ಪ್ರತಿಸ್ಪರ್ಧಿಯ ವಿರುದ್ಧವಾಗಿ ಕಥೆ ಹೆಣೆಯುವಂತೆ, ಪಕ್ಷಗಳು ತಮ್ಮ ವಿರೋಧ ಪಕ್ಷಗಳ ವಿರುದ್ಧ ಕಥೆ ಕಟ್ಟುವಂತೆ, ಅಧಿಕಾರದಲ್ಲಿರುವವರು ಇತಿಹಾಸವನ್ನು ತಮಗನುಕೂಲವಾಗುವಂತೆ ಕಾಲಕಾಲಕ್ಕೆ ಮರುಸೃಷ್ಟಿ ಮಾಡುವಂತೆ, ಕಥೆಗಳ ನೆರವು ಎಲ್ಲರಿಗೂ ಬೇಕು. ಇದು ಮನುಷ್ಯನ ಉಳಿವಿಗೂ ಬೇಕು, ಅಳಿಸಲೂ ಬೇಕು. ಕಥೆಗಳ ಮರುನಿರೂಪಣೆ ಅಗತ್ಯವೇ? ಇದು ಕೂಡ ಇತಿಹಾಸದುದ್ದಕ್ಕೂ ನಡೆಯುತ್ತಾ ಬಂದಿದೆ. ತುಳಸಿದಾಸ, ಪಂಪ, ಕುಮಾರವ್ಯಾಸ, ಕುವೆಂಪು, ಭೈರಪ್ಪ... ಎಲ್ಲರೂ ಪುರಾಣಗಳನ್ನು ಮರುವ್ಯಾಖ್ಯಾನಿಸಿದ್ದಾರೆ. ಪ್ರತಿಯೊಂದು ಯುಗವೂ ತನ್ನದೇ ಆದ ಸತ್ಯವನ್ನು ಕಂಡುಕೊಳ್ಳಲು ಕಥೆಗಳನ್ನು ಮರುವ್ಯಾಖ್ಯಾನಿಸಿದೆ. ಇದನ್ನು ಪುನರಾವರ್ತನೆ ಅನ್ನುವುದಕ್ಕಿಂತ ಭೂತಕಾಲ ಮತ್ತು ವರ್ತಮಾನದ ನಡುವಿನ ಸಂಭಾಷಣೆಯೆನ್ನಬಹುದು. ಕಥೆಗಳ ಸತ್ಯ ಉಳಿಯುವುದು, ಅವು ಹರಿಯುವ ನದಿಯಾಗಿದ್ದರೆ ಮಾತ್ರ. ನಮ್ಮ ಕಾಲದ ಪ್ರಶ್ನೆಗಳಿಗೆ ಸ್ಪಂದಿಸಿದಾಗ ಅವು ಜೀವಂತಗೊಂಡು ನಮ್ಮೊಂದಿಗೆ ಸಂಭಾಷಣೆಗೆ ತೊಡಗುತ್ತವೆ.

ವಾಲ್ಮೀಕಿಯ ಸುತ್ತ ಹುತ್ತದಂತೆ ಕಟ್ಟಿರುವ ಸಾಕಷ್ಟು ದಂತಕಥೆಗಳು ಹೇಳುವಂತೆ, ಅವರೊಬ್ಬ ಬೇಟೆಗಾರ ಮತ್ತು ಕ್ರೌಂಚ ಹಕ್ಕಿ ಹೊಡೆದುರುಳಿಸಿದ್ದನ್ನು ನೋಡಿ ದುಃಖದಿಂದಾಗಿ ಬಾಯಿಯಿಂದ ಹೊರಬಂದ ಉಚ್ಚಾರವೇ ಮೊದಲ ಶ್ಲೋಕವಾಯಿತು; ಈ ಮೂಲಕ ಭಾರತದ ಸಾಹಿತ್ಯದ ಮೊದಲ ಮಹಾಕಾವ್ಯ ರಾಮಾಯಣದ ಜನನವಾಯಿತು. ಇಲ್ಲಿರುವ ಕೃತಿಕಾರನ ಹಿನ್ನೆಲೆಯ ಕುರಿತು ಇರುವಂತಹ ದಂತಕಥೆಗಳನ್ನು ನಾವಿಂದು ಪ್ರಶ್ನಿಸಬಹುದು. ವಿದ್ವತ್ತು ಮತ್ತು ಜ್ಞಾನ ಯಾವುದೇ ಜಾತಿಗೆ ಸೀಮಿತವಾದುದಲ್ಲ, ಸ್ವಕಲಿಕೆಯಿಂದ ಸಿದ್ಧಿಸಬಹುದು ಎನ್ನುವುದನ್ನು ನಿರೂಪಿಸಬಹುದು.

ಹೆಚ್ಚು ಜನರು ಸ್ವೀಕರಿಸುವ ಕಥೆಗಳು ದಂತಕಥೆಗಳೆನಿಸುತ್ತವೆ. ಕಾಲ ಬದಲಾದಂತೆ, ಹೊಸ ಅರಿವಿನಿಂದ ದಂತಕಥೆಗಳನ್ನೂ ಮರುನಿರ್ಮಿಸಿ ವಾಸ್ತವ ಜಗತ್ತಿನೊಂದಿಗೆ ಜೋಡಿಸುವ ಅಗತ್ಯವಿದೆ. ಇಂದು 'ಕಾಂತಾರ'ವೆಂಬ ದಂತಕಥೆಯ ನಿರೂಪಣೆ ಜನರಿಗೆ ಇಷ್ಟವಾಗಿದೆ. ಮುಂದೊಂದು ದಿನ ಈ ದಂತಕಥೆಯನ್ನು ಕೂಡ ಮರು ನಿರೂಪಣೆ ಮಾಡಬಹುದು.

ಕೊನೆಯದಾಗಿ, ದಂತಕಥೆಗಳು ನಮಗೆ ನ್ಯಾಯ ಎಂದರೇನು? ಸತ್ಯ ಎಂದರೇನು? ಬದುಕಿನ ಅರ್ಥವೇನು? ಎನ್ನುವ ಕಾಲಾತೀತ ಪ್ರಶ್ನೆಗಳೊಂದಿಗೆ ಮುಖಾಮುಖಿಯಾಗುತ್ತವೆ. ನಾವು ಏನಾಗಿದ್ದೇವೆ ಮತ್ತು ಏನಾಗಲು ಬಯಸುತ್ತೇವೆ ಎನ್ನುವುದನ್ನು ತಿಳಿ ಹೇಳುತ್ತವೆ. ಆದ್ದರಿಂದ, ನಾವು ಕಥೆಗಳನ್ನು ನಮ್ಮ ಭರವಸೆಗಾಗಿ ಕೇಳುತ್ತೇವೆ. ಕಥೆಗಳನ್ನು ಆಲಿಸದ ಸಮಾಜಗಳು ಇಲ್ಲವೆನ್ನಬಹುದು. ಮಾನವ ಇತಿಹಾಸದಲ್ಲಿ ಕಥೆ ಹೆಣೆಯುವುದನ್ನು ಮನುಷ್ಯನ ಮೊದಲ ಬೌದ್ಧಿಕ ಚಟುವಟಿಕೆ ಎನ್ನಬಹುದು. ಕಥೆಗಳಿರುವುದು ನಮ್ಮನ್ನು ಆಲೋಚನೆಗೆ ಹಚ್ಚಲು, ಈ ಮೂಲಕ ಅವುಗಳನ್ನು ಮರುವ್ಯಾಖ್ಯಾನಿಸುವಂತೆ ನಮ್ಮನ್ನು ಆಹ್ವಾನಿಸಲು. ಕಥೆಗಳನ್ನು ಅಂತಿಮ ಸತ್ಯದಂತೆ ಅಥವಾ ನಿಂತ ನೀರಿನಂತೆ ನಾವು ನೋಡಬಾರದು; ಹೊಸ ತೊರೆಗಳನ್ನು ಸೇರಿಸಿಕೊಳ್ಳುತ್ತಾ ನಿರಂತರವಾಗಿ ಹರಿಯುತ್ತಾ ಮುಂದುವರಿಯುವ ಜೀವನ್ಮುಖಿಯಂತೆ ಸ್ವೀಕರಿಸುವುದು ಹಿತ.

ವಾಚಕರ ವಾಣಿ

ಜನರ ಸಂವಾದಕ್ಕೆ ಜೀವ ತುಂಬಲಿ

ಬಹುತೇಕ ಎಲ್ಲ ರಾಜಕಾರಣಿಗಳು ಫೇಸ್‌ಬುಕ್ ಸೇರಿದಂತೆ ವಿವಿಧ ಸಾಮಾಜಿಕ ಮಾಧ್ಯಮಗಳಲ್ಲಿ ಸಕ್ರಿಯರಾಗಿದ್ದಾರೆ. ಈ ಸಕ್ರಿಯತೆಯು ಹೆಚ್ಚಿನ ಸಂದರ್ಭಗಳಲ್ಲಿ ಏಕಪಕ್ಷೀಯವಾಗಿರುತ್ತದೆ. ತಮ್ಮ ಘೋಷಣೆ, ಕಾರ್ಯಕ್ರಮಗಳ ವರದಿ, ಸ್ವಪ್ರಚಾರಕ್ಕೆ ಸೀಮಿತವಾಗಿರುವುದು ವಿಷಾದನೀಯ. ಸಾಮಾಜಿಕ ಮಾಧ್ಯಮವು ಜನರೊಂದಿಗೆ ನೇರ ಸಂವಾದ ನಡೆಸಲು ಸೂಕ್ತ ವೇದಿಕೆಯಾಗಿದೆ. ನಾಗರಿಕರು ಕೇಳುವ ಪ್ರಶ್ನೆ, ನೀಡುವ ಸಲಹೆ, ವ್ಯಕ್ತಪಡಿಸುವ ಅಸಮಾಧಾನಗಳಿಗೆ ಸ್ಪಂದಿಸುವುದು ಜನಪ್ರತಿನಿಧಿಗಳ ಜವಾಬ್ದಾರಿ. ಜನರ ಧ್ವನಿಗೆ ಪ್ರತಿಧ್ವನಿ ನೀಡುವ ನೀತಿಯುತ ಬದ್ಧತೆ ಇಲ್ಲದಿದ್ದರೆ, ಈ ಖಾತೆಗಳ ಅಸ್ತಿತ್ವವೇ ಅರ್ಥಹೀನ.

ಜಿ. ನಾಗೇಂದ್ರ ಕಾವೂರು, ಸಂಡೂರು

ವೈಜ್ಞಾನಿಕ ದರ: ಕಬ್ಬು ಬೆಳೆಗಾರರ ಪಟ್ಟು

ಕಬ್ಬಿನ ಹಂಗಾಮು ಶುರುವಾಗುತ್ತಿದೆ. ಆದರೆ, ಇನ್ನೂ ರಾಜ್ಯ ಸರ್ಕಾರ ಮತ್ತು ಸಕ್ಕರೆ ಕಾರ್ಖಾನೆಗಳು, ವೈಜ್ಞಾನಿಕವಾಗಿ ದರ ನಿಗದಿಗೆ ಮುಂದಾಗಿಲ್ಲ. ಕಬ್ಬು ನಂಬಿದ ರೈತರು ಸೂಕ್ತ ಬೆಲೆ ಸಿಗದೆ ಸಂಕಷ್ಟ ಅನುಭವಿಸುತ್ತಿದ್ದಾರೆ. ಕಬ್ಬು ನಾಟಿಯಿಂದ ಹಿಡಿದು ಕಾರ್ಖಾನೆಗಳಿಗೆ ಸಾಗಿಸುವವರೆಗೂ ರೈತರು ಸಾಕಷ್ಟು ಹಣ ಖರ್ಚು ಮಾಡುತ್ತಾರೆ. ಇತ್ತೀಚೆಗೆ ಕಬ್ಬು ಕೃಷಿ ವೆಚ್ಚವೂ ಏರಿಕೆ ಕಂಡಿದೆ. ಆದರೆ, ಬೆಳೆಗೆ ನ್ಯಾಯಯುತ ಬೆಲೆ ಸಿಗದೆ ಬೆಳೆಗಾರರಲ್ಲಿ ಆತಂಕ ಮನೆ ಮಾಡಿದೆ. ಬಾಕಿ ಮೊತ್ತ, ತೂಕ ವ್ಯತ್ಯಾಸ ಹಾಗೂ ದರ ವಂಚನೆ ಮೂಲಕ ಬೆಳೆಗಾರರ ಜೀವ ಹಿಂಡುತ್ತಿರುವ ಸಕ್ಕರೆ ಉದ್ಯಮಿಗಳಿಗೆ ಸರ್ಕಾರವು ಲಗಾಮು ಹಾಕಬೇಕಿದೆ. ಆದರೆ, ಇದಕ್ಕೆ ಪೂರಕವಾದ ನೀತಿ ರೂಪಿಸಬೇಕಾದ ಸರ್ಕಾರವು ಭರವಸೆಗಳಲ್ಲೇ ಮುಳುಗಿರುವುದು ದುರದೃಷ್ಟಕರ. ಹಾಗಾಗಿ, 'ಕಬ್ಬು ಡೊಂಕು ಸಿಹಿಯೂ ಡೊಂಕು' ಎಂಬ ಮಾತು ಬೆಳೆಗಾರರ ಪಾಲಿಗೆ ಅಕ್ಷರಶಃ ಅನ್ವಯಿಸುತ್ತದೆ.

ಬಾಬು ಶಿರಮೋಜಿ, ಬೆಳಗಾವಿ

ಕ್ರೀಡಾ ತಾರತಮ್ಯ ಕೊನೆಯಾಗಲಿ

ಭಾರತದ ಮಹಿಳಾ ಕ್ರಿಕೆಟ್ ತಂಡವು ವಿಶ್ವಕಪ್‌ನ ಸೆಮಿಫೈನಲ್ ಪಂದ್ಯದಲ್ಲಿ ಅದ್ಭುತ ಗೆಲುವು ಸಾಧಿಸಿದ ನಂತರ, ಅಭಿಮಾನಿಗಳು ಭಾವನಾತ್ಮಕವಾಗಿ ಪ್ರತಿಕ್ರಿಯಿಸಿದ್ದರು. 'ಫೈನಲ್‌ನಲ್ಲಿ ಏನಾಗುತ್ತೋ ನೋಡೋಣ' ಎಂಬ ಮಾತುಗಳು ಬೇಸರ ಉಂಟು ಮಾಡಿದ್ದು ದಿಟ. ಆದರೆ, ಭಾರತದ ಮಹಿಳಾ ಕ್ರಿಕೆಟ್ ತಂಡ ಆಡಿಕೊಂಡವರ ಬಾಯಿಗೆ ತಕ್ಕ ಉತ್ತರ ನೀಡುವಂತೆ ವಿಶ್ವಕಪ್ ಕಿರೀಟವನ್ನು ಮುಡಿಗೇರಿಸಿಕೊಂಡಿದೆ. ಈ ಜಯ ರಾಷ್ಟ್ರದ ಮಹಿಳಾ ಕ್ರಿಕೆಟ್ ಲೋಕಕ್ಕೆ ಹೊಸ ಹುರುಪು ತುಂಬಿದೆ. ದೀಪ್ತಿ ಶರ್ಮಾ ಅವರ ಆಲ್‌ರೌಂಡ್ ಪ್ರದರ್ಶನ ಎಲ್ಲರ ಮನಸೆಳೆದಿದೆ. ಮಿಥಾಲಿ ರಾಜ್ ಅವರ ಎರಡು ದಶಕಗಳ ಕನಸು ಈ ಗೆಲುವಿನಿಂದ ನನಸಾಗಿದೆ. ಈಗಲಾದರೂ ಕ್ರೀಡೆಯಲ್ಲಿ ತಾರತಮ್ಯಗಳು ಕೊನೆಯಾಗಲಿ.

ಶಿವಯೋಗಿ ಎಂ.ವಿ., ರಾಂಪುರ

ಒಳಮೀಸಲಾತಿ ಗೊಂದಲ ಬಗೆಹರಿಸಿ

ಪ್ರತಿದಿನವೂ ಪರಿಶಿಷ್ಟ ಜಾತಿಯ ಒಳಮೀಸಲಾತಿಗೆ ಸಂಬಂಧಿಸಿದಂತೆ ಹೊಸ ಸುದ್ದಿಗಳು ಪ್ರಕಟವಾಗುತ್ತಿವೆ. ಆದರೆ, ಗೊಂದಲ ಮಾತ್ರ ಇನ್ನೂ ಬಗೆಹರಿದಿಲ್ಲ. ಒಳಮೀಸಲಾತಿಯಲ್ಲಿನ ಅನ್ಯಾಯ ಪ್ರಶ್ನಿಸಿ ಅಲೆಮಾರಿ ಸಮುದಾಯಗಳು ಹೈಕೋರ್ಟ್‌ನ ಮೆಟ್ಟಿಲೇರಿವೆ. ಎರಡು ಆಯೋಗ ರಚಿಸಿದರೂ ಸರ್ಕಾರಕ್ಕೆ ನ್ಯಾಯ ಸಮ್ಮತವಾಗಿ ಪರಿಶಿಷ್ಟರಿಗೆ ಮೀಸಲಾತಿ ಹಂಚಿಕೆ ಮಾಡಲು ಸಾಧ್ಯವಾಗಿಲ್ಲ. ಇದರಿಂದ ಹೊಸ ನೇಮಕಾತಿ ಪ್ರಕ್ರಿಯೆ ನನೆಗುದಿಗೆ ಬಿದ್ದಿದೆ. ಲಕ್ಷಾಂತರ ಉದ್ಯೋಗಾಕಾಂಕ್ಷಿಗಳು ತೊಂದರೆಗೆ ಸಿಲುಕುವಂತಾಗಿದೆ. ಮುಖ್ಯಮಂತ್ರಿ ಹಾಗೂ ಸಮಾಜ ಕಲ್ಯಾಣ ಸಚಿವರು, ಒಳಮೀಸಲಾತಿಗೆ ಸಂಬಂಧಿಸಿದ ಗೊಂದಲಗಳನ್ನು ತ್ವರಿತವಾಗಿ ಬಗೆಹರಿಸಬೇಕಿದೆ.

ಸಿದ್ಧಾರ್ಥ ಪವಾರ, ಹಾವೇರಿ

ಬೇಜವಾಬ್ದಾರಿಗೆ ಹೊಣೆ ಯಾರು?

ಕೆಟ್ಟ ಗಾಳಿ, ಹದಗೆಟ್ಟ ರಸ್ತೆ, ಕಲುಷಿತ ನೀರು, ಆರೋಗ್ಯ ಸೌಲಭ್ಯದ ಕೊರತೆ... ಇವೆಲ್ಲಾ ಭಾರತದ ಪ್ರಜಾಪ್ರಭುತ್ವದ ಕಪ್ಪುಚುಕ್ಕೆಗಳು. ಜನರು ತಮ್ಮ ಜೀವನೋಪಾಯಕ್ಕಾಗಿ ಸ್ಪರ್ಧಾತ್ಮಕ ಜಗತ್ತಿನಲ್ಲಿ ಹೇಗೋ ಕಾರ್ಯನಿರತವಾಗಿ ಉಸಿರಾಡುತ್ತಿದ್ದಾರೆ. ನಗರೀಕರಣದ ತೀವ್ರಗತಿ ಬೆಳವಣಿಗೆಯು ನಮ್ಮ ಸಂಸ್ಕೃತಿಯ ಬೇರುಗಳನ್ನು ಕಳೆದುಕೊಳ್ಳುವಂತೆ ಮಾಡಿದೆ. ಜನರನ್ನು ಏಕಾಂತದ ಛಾಯೆಯಲ್ಲಿ ಇರಿಸುವ ಮೂಲಕ ದುರ್ಬಲರನ್ನಾಗಿಸಿದೆ. ಎಲ್ಲದಕ್ಕೂ ಹೊಂದಿಕೊಳ್ಳುವಂತೆ ಮಾಡುತ್ತಿದೆ. ಪ್ರಶ್ನೆಯಿಲ್ಲದ ಹೊಂದಾಣಿಕೆಯಿಂದಾಗಿ ಪ್ರಜಾಪ್ರಭುತ್ವದ ಅಂತ್ಯ ಆರಂಭವಾಗಿದೆಯೇನೊ ಎಂಬ ಭೀತಿ ಕಾಡುತ್ತಿದೆ. ಪ್ರಜಾಪ್ರಭುತ್ವ ಎಂದರೆ ಕೇವಲ ಚುನಾವಣೆ ಮಾತ್ರವಲ್ಲ, ಪ್ರತಿಯೊಬ್ಬರ ಯೋಗಕ್ಷೇಮಕ್ಕಾಗಿ ಇರುವ ಗಟ್ಟಿಯಾದ ಜವಾಬ್ದಾರಿಯುತ ಆಯುಧ. ಸಮಸ್ಯೆಗಳಿಗೆ ಯಾರೂ ಉತ್ತರಿಸುವ ಉಮೇದಿನಲ್ಲಿಲ್ಲ. ಇದರ ಹೊಣೆ ಯಾರು ಹೊರಬೇಕು?

ಕೆ.ಎಂ. ಹನುಮಾನ್, ಬೆಂಗಳೂರು

ಕಾಲ್ತುಳಿತ: ಗೃಹ ಸಚಿವಾಲಯದ ನಿರ್ಲಕ್ಷ್ಯ

ದೇಶದಲ್ಲಿ ಒಂದರ ಮೇಲೊಂದು ಕಾಲ್ತುಳಿತ ಪ್ರಕರಣಗಳು ವರದಿಯಾಗುತ್ತಿವೆ. ಆದರೆ, ರಾಜ್ಯ ಮತ್ತು ಕೇಂದ್ರ ಸರ್ಕಾರದ ಗೃಹ ಸಚಿವಾಲಯಗಳು ನೀಡುವ ಘಟನೋತ್ತರ ಪ್ರತಿಕ್ರಿಯೆಗಳು, 'ತೀರಾ ಹಳಸಲು' ಎನಿಸುತ್ತವೆ. ಬಹುತೇಕ ಪ್ರಕರಣಗಳಲ್ಲಿ ಆಯೋಜಕರ ನಿರ್ಲಕ್ಷ್ಯತನ ಎದ್ದು ಕಾಣುತ್ತದೆ. ಯಾವುದೇ ಸಿದ್ಧತೆ ಪರಿಶೀಲಿಸದೆ ಅನುಮತಿ ನೀಡುವ ಗೃಹ ಇಲಾಖೆಯ ಕೆಟ್ಟಚಾಳಿಯಿಂದಾಗಿ ಸಾವು–ನೋವು ಸಂಭವಿಸುತ್ತಿವೆ. ಪ್ರಭುತ್ವದ ಸಂಜ್ಞೆಯಲ್ಲೇ ಕಾರ್ಯ ನಿರ್ವಹಿಸುವ ಗೃಹ ಇಲಾಖೆಯು ಕಠಿಣವಾದ ನೀತಿ ನಿರೂಪಣೆ ಇಲ್ಲದೇ ಬಳಲುತ್ತಿದೆ ಎಂಬುದಕ್ಕೆ ಇಂತಹ ಪ್ರಕರಣಗಳೇ ನಿದರ್ಶನ.

ಸಿದ್ಧಲಿಂಗಸ್ವಾಮಿ ಹಿರೇಮಠ, ಮೈಸೂರು

ಚುರುಮುರಿ

ಪಾಸಿಂಗ್ ಮಾರ್ಕ್ಸ್

● ಲಿಂಗರಾಜು ಡಿ.ಎಸ್.

ಬೇತಾಳ ವಿಕ್ರಮಾದಿತ್ಯನ ಮಗ್ಗುಲಿಗೆ ಬಂದು ಕೂತ್ಗಂದು, 'ರಾಜನೇ ಅಡ್ಡಬಿದ್ದೆ. ಮೊನ್ನೆ ನಾನು ದುರ್ಗದಗೆ ಜಮೀರಣ್ಣನ್ನ ಮಗ್ಗುಲಗಿದ್ದೋನ ಹೆಗಲೇರಿಕ್ಯಂದಿದ್ದೆನಲ್ಲಾ ಅವನು ಜನ ನೋಡಿ ಖುಸಿಯಾಗಿ 'ಡಿಸಿಎಂ ಜಮೀರಣ್ಣನಿಗೆ ಜೈ' ಅಂದುದ್ಕೆ ಜಮೀರಣ್ಣ ಹಿಡಕಂದು ಮುತ್ಕೊಟ್ಬುಡದಾ? ಆವಯ್ಯಗೆ ಹಾರ್ಟಿಗೂ ನಾಲಗೇಗೂ ಪಿಲ್ಟರ್ ಇಲ್ಲ ಕನ್ರೀ. ಒಳ್ಳೇನು' ಬೇತಾಳ ಹೊಗಳಿತು.

'ರಾಜನ್ ಈವತ್ತು ನಾವು ಬ್ಯಾರೇ ಆಟ ಆಡಮು. ನಾನು ಪ್ರಶ್ನೆ ಕೇಳ್ತೀನಿ ನೀನು ಉತ್ತರ ಹೇಳು. ಉತ್ತರ ಕೊಡದೇ ಇದ್ರೆ ನಾನು ಸೋತಂಗೆ' ಬೇತಾಳ ಪಂದ್ಯ ಕಟ್ಟಿತು.

'ರಾಜಕಾರಣಿಗಳು ದೊಣ್ಣೆ, ಕತ್ತಿ, ಪಥ ಸಂಚಲನ, ಸಂಘಟನೆ ಅಂತ ಜಗಳಾಡ್ತಾ ಟೈಮು ವೇಸ್ಟ್ ಮಾಡ್ತಾವ್ರಲ್ಲ ಯಾಕೆ?' ಬೇತಾಳ ಕೇಳಿತು.

'ಮಾಡಕ್ಕೆ ಕ್ಯಾಮೆ ಇಲ್ದಿದ್ದಾಗ ಹಂಗೀಯೆ' ವಿಕ್ರಮಾದಿತ್ಯ ಉತ್ತರ ಕೊಟ್ಟ.

'ಸಿಂದಗಿಯಲ್ಲಿ ರಾಷ್ಟ್ರಧ್ವಜ ಉಲ್ಟಾ ಹಾರಿಸ್ಯವರಂತೆ. ಯಾಕೆ?' ಬೇತಾಳ ಬೇಜಾರಾತು.

'ರಾಜಕೀಯದೇಲಿ ದೇಸವೇ ಉಲ್ಟಾ ಆಗ್ಯದೆ ಅಂತ ತೋರಿಸಕ್ಕೆ' ವಿಕ್ರಮಾದಿತ್ಯ ಉತ್ತರಿಸಿದ.

'ಕರೆಟ್ಟು. ನಾಯಕತ್ವ ಬದಲಾವಣೆ ಯಾವಾಗ?'

'ಯಾರು ಹೇಳಿದ್ದು? ನಿನಗೆಂಗೆ ಗೊತ್ತಾತು? ನಾನು ಹೇಳಿದ್ದೀನೇನ್ರಿ? ಹಣೇಲಿ ಬರೆದಿರಬೇಕಲ್ಲವಾ?' ವಿಕ್ರಮಾದಿತ್ಯ ಉತ್ತರಿಸಿದ.

'ಒಪ್ಪಿದೆ ಕನ್ರಿ. ಕಾಂಗ್ರೆಸ್ಸಿಗೆ ಯಾವುದು ಅನಿವಾರ್ಯ?'

'ಕಡಲೇಬೀಜ' ಅಂತ ವಿಕ್ರಮಾದಿತ್ಯ ನಕ್ಕ.

'ಸಿವಿಕ್ ಸಂಘಟನೆ ನಡೆಸಿದ 'ನಮ್ಮ ಸರ್ಕಾರ, ನಮ್ಮ ರಿಪೋರ್ಟ್' ಪರೀಕ್ಷೇಲಿ ಆಡಳಿತ ಪಕ್ಷ ನೂರಾ ಮೂವತ್ತನಾಲ್ಕು ಭರವಸೆಗಳಲ್ಲಿ ಒಂಬತ್ತು ಮಾತ್ರ ಈಡೇರಿಸಿ ಪೇಲಾಗ್ಯದಂತೆ. ಅದೆಂಗೆ?'

'ನಮ್ಮ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣಮಂತ್ರಿಗಳೇ ಮೂವತ್ತಮೂರು ಮಾರ್ಕ್ಸ್ ತಗಂಡೋರೆಲ್ಲಾ ಪಾಸು ಅಂತ ಆಡ್ರು ಹೊಂಡ್ಸವ್ರೆ. ಇದುನ್ನ ಸಿವಿಕ್ ಸಂಘಟನೆಯೋರು ತಿಳಕಂದುಲ್ಲ' ಅಂದ ವಿಕ್ರಮಾದಿತ್ಯ.

ಬೇತಾಳ ಸದ್ದಿಲ್ಲದಂಗೆ ಎದ್ದು ಬಂದು ವಿಕ್ರಮಾದಿತ್ಯನ ಹೆಗಲೇರಿ ಕೂಕಂತು.

ಸಂಗತ

ಕನ್ನಡನುಡಿ ಸೊಡರು; ಎಲ್ಲೆಡೆಯೂ ತೊಡರು!

ಶಿಕ್ಷಣ, ಸಾಹಿತ್ಯ, ಸಿನಿಮಾ, ಉದ್ಯಮ, ಎಲ್ಲ ಕ್ಷೇತ್ರಗಳಲ್ಲೂ ಕನ್ನಡ ನುಡಿ ಸವಾಲು ಎದುರಿಸುತ್ತಿದೆ. ಕನ್ನಡ ನುಡಿ ಎಲ್ಲರ 'ಎದೆಯ ನುಡಿ' ಆಗುವುದು ಯಾವಾಗ?

● ರಾಜಕುಮಾರ ಕುಲಕರ್ಣಿ

ವರನಟ ರಾಜ್‌ಕುಮಾರ್ ಅವರ ಕಂಠಸಿರಿಯಲ್ಲಿ ಕನ್ನಡದ ಹಾಡೊಂದು ಅಲೆಅಲೆಯಾಗಿ ತೇಲಿಬರುತ್ತಿತ್ತು. ಕಾರ್ಮಿಕರು ಮೊಬೈಲ್ ಫೋನ್‌ನಲ್ಲಿ ಹಾಡು ಆಲಿಸುತ್ತ ರಸ್ತೆಬದಿ ಕಟ್ಟಡ ಕೆಲಸದಲ್ಲಿ ನಿರತರಾಗಿದ್ದರು. ಅವರನ್ನು ನೋಡಿ ಜೊತೆಗಿದ್ದ ಶಿಕ್ಷಕ ಮಿತ್ರರು ಹೇಳಿದರು: 'ಭವಿಷ್ಯದಲ್ಲಿ ಕನ್ನಡ ಭಾಷೆ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳುವುದಾದರೆ ಅದು ಈ ಶ್ರಮಿಕ ವರ್ಗದಿಂದ ಮಾತ್ರ. ವಿದ್ಯಾವಂತರು ಕನ್ನಡ ಭಾಷೆಯಿಂದ ದೂರವಾಗುತ್ತಿರುವ ಸಂದರ್ಭದಲ್ಲಿ ತಮ್ಮ ದೈನಂದಿನ ವ್ಯವಹಾರದಲ್ಲಿ ಕನ್ನಡ ಭಾಷೆ ಬಳಸುತ್ತಿರುವ ಶ್ರಮಿಕ ವರ್ಗದವರೇ ಈಗ ಉಳಿದಿರುವ ಏಕೈಕ ಭರವಸೆ'.

ಕನ್ನಡ ಭಾಷೆ ಅನೇಕ ಸವಾಲುಗಳನ್ನು ಎದುರಿಸುತ್ತಿರುವ ಈ ಹೊತ್ತಿನಲ್ಲಿ ಮಿತ್ರರು ಹೇಳಿದ ಮಾತು ಸತ್ಯಕ್ಕೆ ಹತ್ತಿರ ಅನಿಸಿತು. ಈಗಾಗಲೇ, ಕನ್ನಡ ಶಾಲೆಗಳು ವಿದ್ಯಾರ್ಥಿಗಳ ಕೊರತೆಯಿಂದ ಒಂದೊಂದಾಗಿ ಮುಚ್ಚುತ್ತಿವೆ. ವಿದ್ಯಾರ್ಥಿಗಳು ಇಂಗ್ಲಿಷ್ ಮಾಧ್ಯಮದ ಖಾಸಗಿ ಶಾಲೆಗಳಲ್ಲಿ ಪ್ರವೇಶ ಪಡೆಯಲು ಆಸಕ್ತಿ ತೋರುತ್ತಿರುವುದೇ ಇದಕ್ಕೆ ಕಾರಣ. ಖಾಸಗಿ ಇಂಗ್ಲಿಷ್ ಮಾಧ್ಯಮದ ಶಾಲೆಗಳಲ್ಲಿ ಕನ್ನಡವನ್ನು ಬರೀ ಒಂದು ಭಾಷೆಯಾಗಿ ಮಾತ್ರ ಕಲಿಸುತ್ತಿರುವುದರಿಂದ ಅಲ್ಲಿ ಕನ್ನಡ ನುಡಿ ನಿರ್ಲಕ್ಷ್ಯಕ್ಕೆ ಒಳಗಾಗಿದೆ. ಗಣಿತ ಮತ್ತು ವಿಜ್ಞಾನ ವಿಷಯಗಳಿಗೆ ನೀಡುವ ಆದ್ಯತೆಯನ್ನು ಕನ್ನಡ ಭಾಷೆಯ ಬೋಧನೆಗೆ ನೀಡುತ್ತಿಲ್ಲ. ಭಾಷೆಯನ್ನು ಹೇಗಾದರೂ ಕಲಿಯಬಹುದೆಂಬ ಕನ್ನಡ ಕುರಿತು ಅಸಡ್ಡೆ ವಿದ್ಯಾರ್ಥಿಗಳಲ್ಲಿ ಮನೆಮಾಡಿದೆ.

ವೃತ್ತಿಪರ ಕೋರ್ಸ್‌ಗಳಲ್ಲಿ ವಿದ್ಯಾರ್ಥಿಗಳು ಕನ್ನಡ ಭಾಷೆಯನ್ನು ಅಭ್ಯಸಿಸಲು ನಿಯಮ ರೂಪಿಸಲಾಗಿದೆ. ಆದರೆ, ವಿದ್ಯಾರ್ಥಿಗಳು ಆಸಕ್ತಿ ತೋರಿಸುತ್ತಿಲ್ಲ. ಎಂಜಿನಿಯರಿಂಗ್ ಮತ್ತು ವೈದ್ಯಕೀಯ ವಿದ್ಯಾರ್ಥಿಗಳು ಶೈಕ್ಷಣಿಕ ಪರಿಸರದಾಚೆಯೂ ಬೋಧಕರೊಂದಿಗೆ ಮತ್ತು ಸಹಪಾಠಿಗಳೊಂದಿಗೆ ಇಂಗ್ಲಿಷ್‌ನಲ್ಲೇ ಮಾತನಾಡುವುದು ಸಾಮಾನ್ಯವಾಗಿದೆ. ವೈದ್ಯಕೀಯ ಕಾಲೇಜಿನ ಗ್ರಂಥಾಲಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ ನನ್ನೊಂದಿಗೆ ಕರ್ನಾಟಕದ ವಿದ್ಯಾರ್ಥಿಗಳೂ ಇಂಗ್ಲಿಷ್‌ನಲ್ಲೇ ವ್ಯವಹರಿಸಲು ಮುಂದಾಗುತ್ತಾರೆ. ಕನ್ನಡ ಭಾಷೆಯಲ್ಲಿ ಮಾತನಾಡಲು ಸಾಧ್ಯವಿರುವಾಗ ಸಂವಹನಕ್ಕಾಗಿ ಬೇರೆ ಭಾಷೆಯನ್ನು ಬಳಸುವ ಅಗತ್ಯವಾದರೂ ಏಕೆ? ಉತ್ತರಿಸದೆ ಮೌನವಾಗುತ್ತಾರೆ.

ಕನ್ನಡಿಗರಿಗೆ ಪರಭಾಷಾ ಮೋಹವಿದೆ ಎನ್ನುವುದು ಅನೇಕ ಸಂದರ್ಭಗಳಲ್ಲಿ ರುಜುವಾತಾಗಿದೆ. ಬಳ್ಳಾರಿ ಅಥವಾ ರಾಯಚೂರು ಸೀಮೆಯ ಇಬ್ಬರು ಕನ್ನಡಿಗರು ಮಾತನಾಡಲು ತೆಲುಗು ಭಾಷೆಯನ್ನು ಬಳಸುತ್ತಾರೆ. ಕಲ್ಯಾಣ ಕರ್ನಾಟಕ ಭಾಗದಲ್ಲಿ ಹಿಂದಿ ವಾಣಿಜ್ಯ ಭಾಷೆಯಾಗಿ ಪ್ರಭುತ್ವ ಸಾಧಿಸಿದೆ. ಬೆಳಗಾವಿ ಮತ್ತು ಬೀದರ್ ಭಾಗದಲ್ಲಿ ಮರಾಠಿ ಭಾಷೆಯ ಪ್ರಾಬಲ್ಯವಿದೆ. ರಾಜಧಾನಿ ಬೆಂಗಳೂರು ಅನೇಕ ಭಾಷೆಗಳ ಸಂಗಮವಾಗಿದೆ. ಕನ್ನಡಿಗರು ಅನ್ಯಭಾಷಿಕರೊಂದಿಗೆ ಮಾತನಾಡುವಾಗ ಕನ್ನಡದ ಬದಲು ಅನ್ಯಭಾಷೆಯನ್ನು ಬಳಸುವುದು ಸಹಜವಾಗಿದೆ.

ಕನ್ನಡ ಭಾಷೆಯಲ್ಲಿ ಅಸಂಖ್ಯಾತ ಪುಸ್ತಕಗಳು ಪ್ರತಿವರ್ಷ ಪ್ರಕಟವಾಗುತ್ತಿದ್ದರೂ ಪೈರು ಮತ್ತು ಕಳೆ ಒಂದೇ ಎನ್ನುವಂತಾಗಿದೆ. ಸಾಹಿತ್ಯದಲ್ಲಿ 'ಕೊಡು–ಕೊಳ್ಳುವಿಕೆ' ಮುನ್ನೆಲೆಗೆ ಬಂದು ಲೇಖಕರೇ ಪರಸ್ಪರರ ಕೃತಿಗಳನ್ನು ವಿಮರ್ಶಿಸಿಕೊಳ್ಳುತ್ತಿದ್ದಾರೆ. ನೀ ನನಗಾದರೆ ನಾ ನಿನಗೆ ಎನ್ನುವ ಲಾಭ–ನಷ್ಟದ ಲೆಕ್ಕಾಚಾರದಿಂದಾಗಿ ಕೆಟ್ಟ ಕೃತಿಗಳು ಕೂಡ ಸಹಲೇಖಕರ ಮೆಚ್ಚುಗೆಗೆ ಪಾತ್ರವಾಗುತ್ತಿವೆ. ಸಾಮಾಜಿಕ ಮಾಧ್ಯಮದ ಅಬ್ಬರದ ಪ್ರಚಾರ ಉತ್ತಮ ಕೃತಿಗಳ ಜೊತೆಗೆ ಅಗ್ಗದ ಕೃತಿಗಳನ್ನೂ ಓದುಗರಿಗೆ ತಲುಪಿಸುತ್ತಿದೆ. ರಾಜಧಾನಿಯಿಂದ ಹಳ್ಳಿಯವರೆಗೆ ಪ್ರಶಸ್ತಿ ನೀಡುವ ಸಂಸ್ಥೆಗಳು ಹುಟ್ಟಿಕೊಳ್ಳುತ್ತಿದ್ದು, ಪ್ರಶಸ್ತಿಗಾಗಿಯೇ ಬರೆಯುವವರ ತಳಿಯೊಂದು ರೂಪುಗೊಳ್ಳುತ್ತಿದೆ.

ನೋವಿನ ಮೇಲೆ ಬರೆ ಎಳೆದಂತೆ ಸಿನಿಮಾ ಮಾಧ್ಯಮ ಭಾಷೆಯ ಅಂದವನ್ನು ವಿರೂಪಗೊಳಿಸುತ್ತಿದೆ. ಕನ್ನಡ ಭಾಷೆಯಲ್ಲಿ ವಿಚಿತ್ರ ಹೆಸರಿನ ಸಿನಿಮಾಗಳು ನಿರ್ಮಾಣವಾಗುತ್ತಿವೆ. ಇತ್ತೀಚೆಗೆ 'ಹಲ್ಕಾಡಾನ್' ಎನ್ನುವ ಕನ್ನಡ ಸಿನಿಮಾದ ಹೆಸರನ್ನು ಪತ್ರಿಕೆಗಳಲ್ಲಿ ಓದಿ ಮನಸ್ಸಿಗೆ ಖೇದವಾಯಿತು. ಇಂಥ ಅನೇಕ ಹೆಸರುಗಳನ್ನು ಉಲ್ಲೇಖಿಸಬಹುದು. ಸಿನಿಮಾದ ಪ್ರಭಾವದಿಂದ ಕಾಲೇಜಿನ ಕಾರಿಡಾರ್‌ಗಳಲ್ಲಿ ಅರ್ಥವೇ ಇಲ್ಲದ ಪದಗಳು ಹರಿದಾಡುತ್ತಿವೆ. ಬೆಂಗಳೂರು ಕೇಂದ್ರಿತವಾದ ಸಿನಿಮಾ ರಂಗದಲ್ಲಿ ಉತ್ತರ ಕರ್ನಾಟಕದ ಭಾಷಾಶೈಲಿಯನ್ನು ಹಾಸ್ಯ, ವ್ಯಂಗ್ಯ ಮತ್ತು ಅಶ್ಲೀಲವಾಗಿ ಬಳಸಲಾಗುತ್ತಿದೆ.

ಎಲ್ಲ ಸಮಸ್ಯೆಗಳ ನಡುವೆ ಕನ್ನಡ ಭಾಷೆಯನ್ನು ಉಳಿಸಿ ಬೆಳೆಸುವ ಹೊಣೆಗಾರಿಕೆ ನಮ್ಮೆಲ್ಲರದ್ದಾಗಿದೆ. ಇಂಗ್ಲಿಷ್ ಮಾಧ್ಯಮದ ಶಾಲೆಗಳಲ್ಲಿ ಕನ್ನಡ ಭಾಷೆಯ ಕಲಿಕೆಗೆ ಆದ್ಯತೆ ನೀಡಬೇಕು. ಗಣಿತ ಮತ್ತು ವಿಜ್ಞಾನ ವಿಷಯಗಳಿಗೆ ಸಿಗುತ್ತಿರುವ ಪ್ರಾಮುಖ್ಯತೆ ಕನ್ನಡಕ್ಕೂ ಸಿಗುವಂತಾಗಬೇಕು. ಶಾಲಾ– ಕಾಲೇಜುಗಳ ಆವರಣದಲ್ಲಿ ಕನ್ನಡ ಪದಗಳು ಕಿವಿಗಳನ್ನು ಸ್ಪರ್ಶಿಸುವಂತಾಗಲಿ. ಪಾಲಕರು ಮನೆಗಳಲ್ಲಿ ಪುಟ್ಟ ಗ್ರಂಥಾಲಯಗಳನ್ನು ಸ್ಥಾಪಿಸಿ, ಅಲ್ಲಿ ಕನ್ನಡ ಪುಸ್ತಕಗಳನ್ನು ಸಂಗ್ರಹಿಸಿಡುವಂತಾಗಲಿ. ಅನ್ಯಭಾಷೆಗಳನ್ನು ಕಲಿಯುವುದು ತಪ್ಪಲ್ಲ, ಆದರೆ, ಅದು ನಮ್ಮದೇ ಭಾಷೆಯ ಕತ್ತುಹಿಚುಕುವ ಮೋಹವಾಗಬಾರದು. ಭಾಷೆಯನ್ನು ಸಿನಿಮಾಗಳಲ್ಲಿ ವಿರೂಪಗೊಳಿಸುವುದು ಸರಿಯಲ್ಲ. ಗುಣಮಟ್ಟದ ಪುಸ್ತಕಗಳ ಪ್ರಕಟಣೆಗೆ ಪ್ರಕಾಶಕರು ಆದ್ಯತೆ ನೀಡಬೇಕು. ಪುಸ್ತಕಗಳನ್ನು ಓದಿಸುವ ಪರಿಕಲ್ಪನೆಯ ಮೂಲಕ ಓದುಗರಿಗೆ ಅತ್ಯುತ್ತಮ ಪುಸ್ತಕಗಳನ್ನು ಪರಿಚಯಿಸಬೇಕಿದೆ. ಈ ಮೂಲಕ ಉತ್ತಮ ಕೃತಿಗಳು ಮುನ್ನೆಲೆಗೆ ಬರಬೇಕು.

ಭಾಷೆ ಬಲಗೊಳ್ಳುವುದೆಂದರೆ ಅದು ಎದೆಯ ಭಾಷೆಯಾಗಿ ರೂಪುಗೊಳ್ಳುವುದು ಎಂದರ್ಥ. ಕನ್ನಡ ಎದೆಯ ಭಾಷೆಯಾಗುವ ದಿನ ಬೇಗ ಬರಲಿ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಸಿಗದ ಎಫ್‌ಆರ್‌ಪಿ
ರಾಜ್ಯದ ಕಬ್ಬು ನೆರೆರಾಜ್ಯಕ್ಕೆ

ರಾಜ್ಯದ ಹಲವು ಜಿಲ್ಲೆಗಳಲ್ಲಿ ಕಬ್ಬು ಅರೆಯುವಿಕೆ ಆರಂಭಗೊಂಡಿದೆ. ಕೇಂದ್ರ ಸರ್ಕಾರ ಎಫ್‌ಆರ್‌ಪಿಯನ್ನು ನಿಗದಿ ಪಡಿಸಿದೆ. ಅದರ ಆಧಾರದಲ್ಲಿ ರಾಜ್ಯದಲ್ಲೂ ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ನಿರ್ದೇಶನಾಲಯ ಕಾರ್ಖಾನೆವಾರು ಎಫ್‌ಆರ್‌ಪಿ ನಿಗದಿಪಡಿಸಿ ಆದೇಶ ಹೊರಡಿಸಿದೆ. ಆದರೆ, ನಿಗದಿತ ದರವನ್ನು ನೀಡಲು ಕಾರ್ಖಾನೆಗಳು ಹಿಂದೆ ಮುಂದೆ ನೋಡುತ್ತಿವೆ. ನಷ್ಟವನ್ನು ತಪ್ಪಿಸುವುದಕ್ಕಾಗಿ ರಾಜ್ಯದ ಗಡಿ ಜಿಲ್ಲೆಗಳಾದ ಬೆಳಗಾವಿ, ವಿಜಯಪುರ, ಕಲಬುರಗಿ, ಚಾಮರಾಜನಗರದ ಜಿಲ್ಲೆಯ ಬೆಳೆಗಾರರು, ಉತ್ತಮ ದರ ನೀಡುತ್ತಿರುವ ನೆರೆ ರಾಜ್ಯಗಳ ಸಕ್ಕರೆ ಕಾರ್ಖಾನೆಗಳಿಗೆ ಕಬ್ಬು ಪೂರೈಸುತ್ತಿದ್ದಾರೆ

ಪ್ರಜಾವಾಣಿ ವಾರ್ತೆ

ಕೇಂದ್ರ ಸರ್ಕಾರವು ಪ್ರತಿ ಟನ್ ಕಬ್ಬಿಗೆ ನಿಗದಿಪಡಿಸಿರುವ ನ್ಯಾಯಸಮ್ಮತ ಮತ್ತು ಲಾಭದಾಯಕ ದರ (ಎಫ್‌ಆರ್‌ಪಿ) ಆಧಾರದಲ್ಲಿ ರಾಜ್ಯದಲ್ಲಿ ಬೆಲೆ ನಿಗದಿ ಮಾಡಲಾಗಿದ್ದರೂ ಸಕ್ಕರೆ ಕಾರ್ಖಾನೆಗಳು ಕಡಿಮೆ ದರ ನೀಡಲು ಮುಂದಾಗಿವೆ. ಈ ಕಾರಣಕ್ಕೆ ರಾಜ್ಯದ ಗಡಿ ಭಾಗದ ಜಿಲ್ಲೆಗಳ ಕಬ್ಬು ಬೆಳೆಗಾರರು ಹೆಚ್ಚಿನ ದರ ನೀಡುತ್ತಿರುವ ಮತ್ತು ಸಕಾಲದಲ್ಲಿ ಹಣ ಪಾವತಿಸುತ್ತಿರುವ ಹೊರರಾಜ್ಯಗಳ ಸಕ್ಕರೆ ಕಾರ್ಖಾನೆಗಳತ್ತ ಮುಖ ಮಾಡುತ್ತಿದ್ದಾರೆ.

ಉತ್ತರ ಕರ್ನಾಟಕ ಭಾಗದ ಗಡಿ ಜಿಲ್ಲೆಗಳಾದ ಬೆಳಗಾವಿ, ವಿಜಯಪುರ, ಕಲಬುರಗಿಯ ಕಬ್ಬು ಬೆಳೆಗಾರರು ಮಹಾರಾಷ್ಟ್ರದ ಸಕ್ಕರೆ ಕಾರ್ಖಾನೆಗಳಿಗೆ ಕಬ್ಬು ಮಾರಾಟ ಮಾಡುತ್ತಿದ್ದಾರೆ. ದಕ್ಷಿಣದ ಚಾಮರಾಜನಗರ ಜಿಲ್ಲೆಯಲ್ಲಿ ಬೆಳೆಗಾರರು ತಮಿಳುನಾಡಿನ ಸಕ್ಕರೆ ಕಾರ್ಖಾನೆಗಳಿಗೆ ಕಬ್ಬು ಪೂರೈಸುತ್ತಿದ್ದಾರೆ.

ಕೇಂದ್ರ ಸರ್ಕಾರವು 2025ರ ಸಾಲಿಗೆ ಶೇ 10.25ರಷ್ಟು ಇಳುವರಿ (recovery rate) ಇರುವ ಟನ್ ಕಬ್ಬಿಗೆ ₹3,550 ನಿಗದಿ ಮಾಡಿದೆ. ಇದರ ಆಧಾರದಲ್ಲಿ ರಾಜ್ಯ ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶನಾಲಯದ ಆಯುಕ್ತರು ರಾಜ್ಯದಲ್ಲಿರುವ 81 ಕಾರ್ಖಾನೆಗಳು 2025–26ನೇ ಸಾಲಿಗೆ ಬೆಳೆಗಾರರಿಗೆ ಮೊದಲ ಕಂತಿನಲ್ಲಿ ಪಾವತಿಸಬೇಕಾದ ದರವನ್ನು ನಿಗದಿಪಡಿಸಿ ಸೆಪ್ಟೆಂಬರ್ 15ರಂದು ಆದೇಶ ಹೊರಡಿಸಿದ್ದಾರೆ. 2024–25ನೇ ಸಾಲಿನಲ್ಲಿ ಕಾರ್ಖಾನೆಗಳಲ್ಲಿ ಅರೆದ ಕಬ್ಬಿನಿಂದ ಉತ್ಪಾದನೆಯಾದ ಸಕ್ಕರೆಯ ಆಧಾರದಲ್ಲಿ ಎಫ್‌ಆರ್‌ಪಿ ನಿಗದಿಪಡಿಸಲಾಗಿದೆ.

ಆದರೆ, ರಾಜ್ಯದ ಯಾವ ಕಾರ್ಖಾನೆಯೂ ಇಷ್ಟು ಬೆಲೆ ನೀಡಲು ಮುಂದಾಗಿಲ್ಲ. ₹2,700ರಿಂದ ₹3,100ರವರೆಗೆ ದರ ನೀಡಲು ತೀರ್ಮಾನಿಸಿವೆ.

ಸಾಮಾನ್ಯವಾಗಿ ಕಾರ್ಖಾನೆಗಳು ಕಬ್ಬಿನ ಕಟಾವು ಮತ್ತು ಸಾಗಣೆ ವೆಚ್ಚವನ್ನು ಲೆಕ್ಕಹಾಕಿ ಅದನ್ನು ದರದಲ್ಲಿ ಕಡಿತ ಮಾಡುತ್ತವೆ. ₹800ರಿಂದ ₹900ವರೆಗೂ ಕಡಿತ ಮಾಡುತ್ತವೆ. ಹಾಗಾದಾಗ, ಟನ್ ಕಬ್ಬಿನ ದರ ಇನ್ನಷ್ಟು ಕಡಿಮೆಯಾಗುತ್ತದೆ.

‘ರಾಜ್ಯದಲ್ಲಿ ಕಾರ್ಖಾನೆಗಳು ನೀಡುವ ದರವನ್ನು ನೋಡಿದಾಗ, ಮಹಾರಾಷ್ಟ್ರದಲ್ಲಿ ಇಲ್ಲಿಗಿಂತ ಪ್ರತಿ ಟನ್‌ಗೆ ₹300–₹400 ಹೆಚ್ಚು ಸಿಗುತ್ತಿದೆ. ಅಲ್ಲಿನ ಕಾರ್ಖಾನೆಗಳು ಪ್ರತಿ ಟನ್ ಕಬ್ಬಿಗೆ ₹3,400 ನೀಡುತ್ತಿವೆ. ರಾಜ್ಯದ ಕಾರ್ಖಾನೆಗಳು ಹಣ ಪಾವತಿಯನ್ನು ವಿಳಂಬ ಮಾಡುತ್ತಿವೆ. ಅಲ್ಲಿನ ಕಾರ್ಖಾನೆಗಳು ತಕ್ಷಣ ಪಾವತಿಸುತ್ತಿವೆ. ಇಲ್ಲಿ ಕಡಿಮೆ ಪಾವತಿಯ ಜೊತೆಗೆ ತೂಕ, ಇಳುವರಿ ಪ್ರಮಾಣದಲ್ಲೂ ಕಾರ್ಖಾನೆಗಳು ಮೋಸ ಮಾಡುತ್ತವೆ’ ಎಂದು ಹೇಳುತ್ತಾರೆ ಕಬ್ಬು ಬೆಳೆಗಾರರು.

‘ಕೇಂದ್ರ ಸರ್ಕಾರವು ಶೇ 10.25ರಷ್ಟು ಇಳುವರಿ ದರ ಆಧರಿಸಿ ಎಫ್‌ಆರ್‌ಪಿ ನಿಗದಿ ಮಾಡಿದೆ. ಇದು ಕೂಡ ಅವೈಜ್ಞಾನಿಕ. ಇಳುವರಿ ಪ್ರಮಾಣ ಶೇ 9.5ರ ಆಧಾರದ ಮೇಲೆ ಎಫ್‌ಆರ್‌ಪಿ ಘೋಷಿಸಬೇಕು. ಆಗ ಮಾತ್ರ ರೈತರಿಗೆ ಲಾಭದಾಯಕ ದರ ಸಿಗಲು ಸಾಧ್ಯ. ಎಫ್‌ಆರ್‌ಪಿ ಘೋಷಣೆ ಮಾಡಿದ ಮೇಲೂ ದರ ಪರಿಷ್ಕರಣೆ ಮಾಡುವ ಅಧಿಕಾರ ಕರ್ನಾಟಕ ಕಬ್ಬು ನಿಯಂತ್ರಣ ಮಂಡಳಿಗೆ ಇದೆ. ರಾಜ್ಯದ ಬಹುಪಾಲು ಕಾರ್ಖಾನೆಗಳನ್ನು ಜನಪ್ರತಿನಿಧಿಗಳು, ರಾಜಕಾರಣಿಗಳೇ ನಡೆಸುತ್ತಿದ್ದಾರೆ. ಅವರು ಮಂಡಳಿಯನ್ನು ಹಿಡಿತದಲ್ಲಿಟ್ಟು ದರ ಪರಿಷ್ಕರಣೆ ಆಗದಂತೆ ನೋಡಿಕೊಳ್ಳುತ್ತಿದ್ದಾರೆ’ ಎಂಬುದು ಅವರ ತಕರಾರು.

9.87 ಲಕ್ಷ ಹೆಕ್ಟೇರ್‌ಗೂ ಹೆಚ್ಚು — ಕರ್ನಾಟಕದಲ್ಲಿ ಕಬ್ಬು ಬೆಳೆಯುವ ಪ್ರದೇಶದ ವಿಸ್ತೀರ್ಣ

81 — ರಾಜ್ಯದಲ್ಲಿರುವ ಸಕ್ಕರೆ ಕಾರ್ಖಾನೆಗಳು

29 — ಬೆಳಗಾವಿ ಜಿಲ್ಲೆಯಲ್ಲಿರುವ ಕಾರ್ಖಾನೆಗಳು

5.40 ಕೋಟಿ ಟನ್ — ರಾಜ್ಯದಲ್ಲಿ 2024ರಲ್ಲಿ ಉತ್ಪಾದನೆಯಾದ ಕಬ್ಬು

1.94 ಕೋಟಿ ಟನ್ — ಕಳೆದ ವರ್ಷ ಬೆಳಗಾವಿ ಜಿಲ್ಲೆಯಲ್ಲಿ ನುರಿಸಲಾದ ಕಬ್ಬಿನ ಪ್ರಮಾಣ

41 ಲಕ್ಷ ಟನ್ — ಕರ್ನಾಟಕದಲ್ಲಿ 2024ರಲ್ಲಿ ಉತ್ಪಾದನೆಯಾದ ಸಕ್ಕರೆಯ ಅಂದಾಜು ಪ್ರಮಾಣ

16.15 ಲಕ್ಷ ಟನ್ — ಬೆಳಗಾವಿಯಲ್ಲಿ ಕಳೆದ ವರ್ಷ ಉತ್ಪಾದನೆಯಾದ ಸಕ್ಕರೆ

> **ಮಹಾರಾಷ್ಟ್ರದಲ್ಲಿ ಈ ವರ್ಷವೂ ₹3,410 ದರ ನಿಗದಿ ಮಾಡಲಾಗಿದೆ. ಅಲ್ಲಿನ ಇಳುವರಿ ಶೇ 12ಕ್ಕೂ ಹೆಚ್ಚು ಬರುವ ಕಾರಣ ರೈತರಿಗೆ ಹೆಚ್ಚು ದರ ಸಿಗುತ್ತದೆ. ಅದಾಗಿಯೂ ಅಲ್ಲಿನ ರೈತರು ಕೂಡ ₹3,750 ದರಕ್ಕೆ ಆಗ್ರಹಿಸಿ ಪ್ರತಿಭಟನೆ ನಡೆಸುತ್ತಿದ್ದಾರೆ**
>
> **ಸಿದಗೌಡ ಮೋದಗಿ,**
> ಭಾರತೀಯ ಕೃಷಿಕ ಸಮಾಜದ (ಕರ್ನಾಟಕ) ಅಧ್ಯಕ್ಷ

10 ಲಕ್ಷ ಟನ್ ಕಬ್ಬು ಮಹಾರಾಷ್ಟ್ರಕ್ಕೆ: ನೆರೆಯ ಮಹಾರಾಷ್ಟ್ರದೊಂದಿಗೆ ಗಡಿ ಹಂಚಿಕೊಂಡಿರುವ ಬೆಳಗಾವಿ ಜಿಲ್ಲೆಯ ಅಥಣಿ, ಚಿಕ್ಕೋಡಿ, ನಿಪ್ಪಾಣಿ, ರಾಯಬಾಗ ಮತ್ತು ಕಾಗವಾಡ ತಾಲ್ಲೂಕುಗಳ ಹಲವು ರೈತರು ಮಹಾರಾಷ್ಟ್ರದ ಸಕ್ಕರೆ ಕಾರ್ಖಾನೆಗಳಿಗೆ ಕಬ್ಬು ಸಾಗಿಸುತ್ತಾರೆ.

ಅಂದಾಜಿನ ಪ್ರಕಾರ, ಪ್ರತಿ ವರ್ಷ 10 ಲಕ್ಷ ಟನ್‌ಗಳಷ್ಟು ಜಿಲ್ಲೆಯ ಕಬ್ಬು ‘ಮಹಾ’ ಕಾರ್ಖಾನೆಗಳಲ್ಲಿ ನುರಿಯುತ್ತಿದೆ. ಜಿಲ್ಲೆಯಲ್ಲಿ 29 ಸಕ್ಕರೆ ಕಾರ್ಖಾನೆಗಳು ಇದ್ದಾಗ್ಯೂ ಮಹಾರಾಷ್ಟ್ರಕ್ಕೆ ಅಪಾರ ಪ್ರಮಾಣದ ಕಬ್ಬು ಸಾಗಣೆಯಾಗುತ್ತಿದೆ.

ಮಹಾರಾಷ್ಟ್ರದ ಕೊಲ್ಹಾಪುರ ಜಿಲ್ಲೆಯಲ್ಲಿರುವ ಕಲ್ಲಪ್ಪಣ್ಣ ಅವಾಡೆ ಸಹಕಾರ ಸಕ್ಕರೆ ಕಾರ್ಖಾನೆ (ಹುಪರಿ), ದತ್ತ ಸೇತ್ಕರಿ ಸಹಕಾರ ಸಕ್ಕರೆ ಕಾರ್ಖಾನೆ (ಶಿರೋಳ), ಪಂಚಗಂಗಾ ಸಹಕಾರ ಸಕ್ಕರೆ ಕಾರ್ಖಾನೆ (ಇಚಲಕರಂಜಿ), ಛತ್ರಪತಿ ಶಾಹೂ ಸಹಕಾರ ಸಕ್ಕರೆ ಕಾರ್ಖಾನೆ (ಕಾಗಲ್), ಸದಾಶಿವರಾವ್ ಮಂಡಲಿಕ್ ಸಹಕಾರ ಸಕ್ಕರೆ ಕಾರ್ಖಾನೆ (ಹಮೀದವಾಡ), ಸಂತಾಜಿ ಘೋರ್ಪಡೆ ಸಹಕಾರ ಸಕ್ಕರೆ ಕಾರ್ಖಾನೆ (ಸೇನಾಪತಿ ಕಾಪಸಿ), ದೂದಗಂಗಾ ವೇದಗಂಗಾ ಸಹಕಾರ ಸಕ್ಕರೆ ಕಾರ್ಖಾನೆ (ಬಿದರಿ), ಗುರುದತ್ತ ಸಕ್ಕರೆ ಕಾರ್ಖಾನೆ (ಟಾಕಳಿ) ಮುಂತಾದ ಕಾರ್ಖಾನೆಗಳು ಬೆಳಗಾವಿ ಜಿಲ್ಲೆಯ ರೈತರ ಕಬ್ಬನ್ನೇ ನೆಚ್ಚಿಕೊಂಡಿವೆ.

ಜಿಲ್ಲೆಯ ಕಾರ್ಖಾನೆಗಳು ಟನ್ ಕಬ್ಬಿಗೆ ₹3,010 ದರ ವಾಗ್ದಾನ ಮಾಡಿವೆ. ಜಿಲ್ಲಾಧಿಕಾರಿ ಮಧ್ಯಸ್ಥಿಕೆಯಲ್ಲಿ ನಡೆದ ಸಭೆಯಲ್ಲಿ ಇದನ್ನು ₹3,200ಕ್ಕೆ ಏರಿಸುವ ಭರವಸೆ ನೀಡಲಾಗಿದೆ. ಆದರೆ, ₹3,500ಕ್ಕೆ ಏರಿಸಲೇಬೇಕು ಎಂದು ರೈತರು ಜಿಲ್ಲೆಯಾದ್ಯಂತ ಬೃಹತ್ ಪ್ರಮಾಣದ ಪ್ರತಿಭಟನೆ ನಡೆಸಿದ್ದಾರೆ.

‘ಜಿಲ್ಲಾಡಳಿತ ಮಧ್ಯಸ್ಥಿಕೆ ವಹಿಸಿದರೂ ಉತ್ತಮ ದರ ಸಿಗುತ್ತಿಲ್ಲ. ಸದ್ಯ ಕಾರ್ಖಾನೆಗಳು ಕಬ್ಬು ಕಟಾವು ಹಾಗೂ ಸಾಗಣೆ ವೆಚ್ಚ ಸೇರಿಸಿ ₹3,200 ದರ ನೀಡುವುದಾಗಿ ಹೇಳಿವೆ. ಸಾಗಣೆ ವೆಚ್ಚವನ್ನೂ ರೈತರ ಕಬ್ಬಿನ ಬಿಲ್ಲಿನಿಂದಲೇ ಕತ್ತರಿಸಿ ವಾಹನದವರಿಗೆ ನೀಡುತ್ತಾರೆ. ಇದರಿಂದ ರೈತರಿಗೆ ಅನ್ಯಾಯವಾಗುತ್ತಿದೆ. ಹಾಗಾಗಿ, ಕಟಾವು ಮತ್ತು ಸಾಗಣೆ ವೆಚ್ಚದ ಹೊರತಾಗಿ ₹3,500 ದರ ನೀಡಬೇಕು ಎಂದು ರೈತರು ಪಟ್ಟು ಹಿಡಿದಿದ್ದಾರೆ’ ಎನ್ನುವುದು ಕಬ್ಬು ಬೆಳೆಗಾರ, ರೈತ ಮುಖಂಡ ಚೂಣಪ್ಪ ಪೂಜಾರಿ ಅವರ ಮಾತು.

ಕಬ್ಬು ಸಾಗಿಸಲು ಅಣಿ: ವಿಜಯಪುರ ಜಿಲ್ಲೆಯಲ್ಲಿ ಇದೇ 1ರಿಂದ ಪ್ರಸಕ್ತ ಸಾಲಿನ ಕಬ್ಬು ಅರೆಯುವಿಕೆ ಆರಂಭವಾಗಬೇಕಿತ್ತು. ಆದರೆ, ಈವರೆಗೆ ಯಾವೊಂದು ಸಕ್ಕರೆ ಕಾರ್ಖಾನೆಯೂ ಕಬ್ಬಿನ ದರವನ್ನು ಘೋಷಿಸಿಲ್ಲ. ಜಿಲ್ಲೆಯ 10 ಸಕ್ಕರೆ ಕಾರ್ಖಾನೆಗಳು ಬೆಳೆಗಾರರಿಗೆ ನೀಡಬೇಕಾದ ದರವನ್ನು ಜಿಲ್ಲಾಧಿಕಾರಿಯವರು ನಿಗದಿಪಡಿಸಿದ್ದಾರೆ. ಇನ್ನೂ ಕಬ್ಬು ನುರಿಯುವಿಕೆ ಆರಂಭವಾಗಿಲ್ಲ.

ಇದರ ನಡುವೆಯೇ ಜಿಲ್ಲೆಯ ಗಡಿಭಾಗದ ಇಂಡಿ, ಚಡಚಣ, ಆಲಮೇಲ ಭಾಗದ ಕಬ್ಬು ಬೆಳೆಗಾರರಿಗೆ ಮಹಾರಾಷ್ಟ್ರ ಸಕ್ಕರೆ ಕಾರ್ಖಾನೆಗಳು ಹೆಚ್ಚಿನ ದರ ನೀಡುವ ಭರವಸೆ ನೀಡಿದ್ದು, ಬೆಳೆಗಾರರು ಮಹಾರಾಷ್ಟ್ರದ ಸಕ್ಕರೆ ಕಾರ್ಖಾನೆಗಳಿಗೆ ಕಬ್ಬು ಸಾಗಿಲು ಅಣಿಯಾಗಿದ್ದಾರೆ.

ಮಹಾರಾಷ್ಟ್ರದಲ್ಲಿ ಕಬ್ಬು ನುರಿಸುವ ಹಂಗಾಮು ನವೆಂಬರ್ 1ರಿಂದ ಆರಂಭವಾಗಿದೆ. ಸೋಲಾಪುರದ ಸಿದ್ದೇಶ್ವರ, ಲೋಕಮಂಗಲ, ಸಿದ್ದನಾಥ ಮತ್ತು ಅಕ್ಕಲಕೋಟದ ಜೈನ್ ಸಕ್ಕರೆ ಕಾರ್ಖಾನೆ ಸೇರಿದಂತೆ ಇತರೆ ಕಾರ್ಖಾನೆಗಳು ಪ್ರತಿ ಟನ್‌ಗೆ ₹3,500 ನೀಡುವುದಾಗಿ ರೈತರೊಂದಿಗೆ ಮಾತುಕತೆ ನಡೆಸಿವೆ. ಸಾಗಣೆ ವೆಚ್ಚ ಪಡೆಯದೇ ಜಿಲ್ಲೆಯ ಕಬ್ಬು ಖರೀದಿಸಲು ಮುಂದಾಗಿವೆ. ಅದಲ್ಲದೆ, ಮಹಾರಾಷ್ಟ್ರದ ಬಹುತೇಕ ಕಾರ್ಖಾನೆಗಳು ಎಥೆನಾಲ್ ಘಟಕ ಹೊಂದಿದ್ದು, ಕಬ್ಬು ಖರೀದಿಗೆ ಪೈಪೋಟಿ ಒಡ್ಡುತ್ತಿವೆ. ಒಂದು ವೇಳೆ ಮಹಾರಾಷ್ಟ್ರಕ್ಕೆ ಹೆಚ್ಚಿನ ಪ್ರಮಾಣದಲ್ಲಿ ಕಬ್ಬು ಸಾಗಣೆಯಾದರೆ ರಾಜ್ಯ ಸರ್ಕಾರಕ್ಕೆ ಕೋಟ್ಯಂತರ ತೆರಿಗೆ ನಷ್ಟವಾಗಲಿದೆ ಎನ್ನುತ್ತಾರೆ ಕರ್ನಾಟಕ ರಾಜ್ಯ ರೈತ ಸಂಘ ಮತ್ತು ಹಸಿರು ಸೇನೆ ಜಿಲ್ಲಾ ಘಟಕದ ಅಧ್ಯಕ್ಷ ಸಂಗಮೇಶ ಸಗರ.

ಮಾಹಿತಿ: ಸಂತೋಷ ಈ.ಚಿನಗುಡಿ, ಬಸವರಾಜ ಸಂಪಳ್ಳಿ, ಮನೋಜ್‌ಕುಮಾರ್ ಗುದ್ದಿ, ಬಾಲಚಂದ್ರ ಎಚ್.

ಮಾರಾಟಕ್ಕೆ ಅವಕಾಶ

ಕರ್ನಾಟಕ ಕಬ್ಬು (ಖರೀದಿ ಮತ್ತು ಸರಬರಾಜು ನಿಯಂತ್ರಣ) ಕಾಯ್ದೆಗೆ 2014ರಲ್ಲಿ ತಿದ್ದುಪಡಿಯಾಗಿದೆ. ಆದರೆ, ಇದು ರೈತರ ಕಬ್ಬು ಸಾಗಣೆ ಮೇಲೆ ಯಾವುದೇ ನಿಯಂತ್ರಣ ಹೇರುವುದಿಲ್ಲ. ಹಾಗಾಗಿ, ಕೃಷಿಕ ತನ್ನ ಉತ್ಪನ್ನವನ್ನು ಎಲ್ಲಿಯಾದರೂ (ಅಂತರ ಜಿಲ್ಲೆ, ಅಂತರ ರಾಜ್ಯ) ಮಾರಲು ಸ್ವತಂತ್ರ. ಆದರೆ, ಕಾರ್ಖಾನೆಗಳು ನೆರೆ ರಾಜ್ಯದ ಕಬ್ಬು ತರಿಸಿಕೊಳ್ಳಬೇಕಿದ್ದರೆ, ನಿಯಮ ಪಾಲಿಸಬೇಕು. ಇದಕ್ಕಾಗಿ ಕರ್ನಾಟಕ ಹಾಗೂ ಮಹಾರಾಷ್ಟ್ರ ಗಡಿಯಲ್ಲಿರುವ ಬಹುತೇಕ ಕಾರ್ಖಾನೆಗಳು ಅಂತರರಾಜ್ಯ ಅನುಮತಿ (ಮಲ್ಟಿಸ್ಟೇಟ್ ಲೈಸನ್ಸ್) ಪಡೆದಿರುತ್ತವೆ. ಆದರೆ, ರಾಜ್ಯದ ಬಹುಪಾಲು ಸಕ್ಕರೆ ಕಾರ್ಖಾನೆಗಳು, ಸ್ಥಳೀಯವಾಗಿ ಬೆಳೆದ ಕಬ್ಬನ್ನು ತಮಗೇ ಮಾರಾಟ ಮಾಡಬೇಕು ಎಂದು ಬೆಳೆಗಾರರಿಗೆ ನಿರ್ದೇಶನ ನೀಡಬೇಕು ಎಂದು ಜಿಲ್ಲಾಡಳಿತಗಳನ್ನು ಒತ್ತಾಯಿಸುತ್ತಲೇ ಬಂದಿವೆ.

ನಷ್ಟ ಅನುಭವಿಸಬೇಕೇ?

‘ರಾಜ್ಯದ ಬಹುತೇಕ ಸಕ್ಕರೆ ಕಾರ್ಖಾನೆಗಳ ಮಾಲೀಕತ್ವ ಸಚಿವರು, ಶಾಸಕರು, ಸಂಸದರು, ರಾಜಕಾರಣಿಗಳಲ್ಲಿದೆ. ಇವರು ಯಾರೂ ಬೆಳೆಗಾರರ ಪರವಾಗಿ ಯೋಚನೆ ಮಾಡುವುದಿಲ್ಲ. ಕೇಂದ್ರ ಸರ್ಕಾರ ನಿಗದಿಪಡಿಸಿದ ಎಫ್‌ಆರ್‌ಪಿ ದರವನ್ನು ನೀಡಲೂ ಕಾರ್ಖಾನೆಗಳು ಹಿಂದೆ ಮುಂದೆ ನೋಡುತ್ತವೆ. ಕೇಂದ್ರವು ಶೇ 10.25ರಷ್ಟು ಇಳುವರಿ ದರ ಆಧರಿಸಿ ಎಫ್‌ಆರ್‌ಪಿ ನಿಗದಿಪಡಿಸಿದೆ. ಒಂದು ವೇಳೆ ಇಳುವರಿ ಪ್ರಮಾಣ ಹೆಚ್ಚಿದ್ದರೆ ಹೆಚ್ಚು ದರ ನೀಡಬೇಕು. ಇಳುವರಿ ಶೇ 1ರಷ್ಟು ಹೆಚ್ಚಿದ್ದರೆ ₹346 ಹೆಚ್ಚುವರಿ ನೀಡಬೇಕು. ಬೆಳಗಾವಿ ಜಿಲ್ಲೆಯಲ್ಲಿ ಬೆಳೆಯುತ್ತಿರುವ ಕಬ್ಬಿನ ಇಳುವರಿ ಪ್ರಮಾಣ ಶೇ 12–ಶೇ 13ರವರೆಗೂ ಇದೆ. ಈ ಲೆಕ್ಕದಲ್ಲಿ ಕಾರ್ಖಾನೆಗಳು ಹೆಚ್ಚು ದರ ನೀಡಬೇಕು. ಆದರೆ, ಯಾವ ಕಾರ್ಖಾನೆಗಳೂ ನೀಡುತ್ತಿಲ್ಲ. ರೈತರು ನಷ್ಟ ಅನುಭವಿಸುವುದನ್ನು ತಪ್ಪಿಸಲು ಮಹಾರಾಷ್ಟ್ರದ ಕಾರ್ಖಾನೆಗಳಿಗೆ ಮಾರಾಟ ಮಾಡುತ್ತಾರೆ ಇದು ತಪ್ಪೇ’ ಎಂದು ಪ್ರಶ್ನಿಸುತ್ತಾರೆ ರಾಜ್ಯ ಕಬ್ಬು ಬೆಳೆಗಾರರ ಸಂಘದ ಅಧ್ಯಕ್ಷ ಕುರುಬೂರು ಶಾಂತಕುಮಾರ್.

‘ಮಹಾರಾಷ್ಟ್ರದಲ್ಲಿ ಸಹಕಾರಿ ಕಾರ್ಖಾನೆಗಳು ಹೆಚ್ಚಿವೆ. ಉತ್ತಮ ಬೆಲೆ ಜೊತೆಗೆ ಸಕಾಲದಲ್ಲಿ ಹಣ ಪಾವತಿ ಮಾಡುತ್ತಿವೆ. ರಾಜ್ಯದ ಬಹುತೇಕ ಕಾರ್ಖಾನೆಗಳು ತೂಕ, ಇಳುವರಿ ದರದಲ್ಲಿ ಮೋಸ ಮಾಡುವುದರ ಜೊತೆಗೆ ಕಟಾವು, ಸಾಗಣೆ ವೆಚ್ಚವನ್ನು ಹೆಚ್ಚು ಕಡಿತ ಮಾಡುತ್ತವೆ. ವಿಳಂಬವಾಗಿ ಪಾವತಿ ಮಾಡುತ್ತವೆ’ ಎಂಬುದು ಅವರ ದೂರು.

ಚಾ.ನಗರದಿಂದ ತಮಿಳುನಾಡಿಗೆ

ಚಾಮರಾಜನಗರ ಜಿಲ್ಲೆಯ ಕೆಲವು ಬೆಳೆಗಾರರು ಕಬ್ಬನ್ನು ಕೊಳ್ಳೇಗಾಲ ಸಮೀಪದ ಕುಂತೂರಿನಲ್ಲಿರುವ ಬಣ್ಣಾರಿ ಅಮ್ಮನ್ ಸಕ್ಕರೆ ಕಾರ್ಖಾನೆಯ ಬದಲಿಗೆ ತಮಿಳುನಾಡಿನ ಈರೋಡ್‌ನಲ್ಲಿರುವ ಶಕ್ತಿ ಶುಗರ್ಸ್ ಸೇರಿದಂತೆ ಇತರೆ ಕಾರ್ಖಾನೆಗಳಿಗೆ ಪೂರೈಸುತ್ತಿದ್ದಾರೆ.

‘ಬಣ್ಣಾರಿ ಅಮ್ಮನ್ ಸಕ್ಕರೆ ಕಾರ್ಖಾನೆಯು ಪ್ರತಿ ಟನ್‌ಗೆ ₹3,320 ನೀಡುತ್ತಿದ್ದು, ತಮಿಳುನಾಡಿನ ಕಾರ್ಖಾನೆಗಳು ₹4,000ವರೆಗೂ ನೀಡಲು ಮುಂದೆ ಬಂದಿವೆ. ಹೆಚ್ಚು ಬೆಲೆ ಸಿಗುವ ಕಾರಣಕ್ಕೆ ರೈತರು ಅಲ್ಲಿನ ಕಾರ್ಖಾನೆಗಳಿಗೆ ಸಾಗಿಸುತ್ತಿದ್ದಾರೆ’ ಎಂದು ರೈತ ಮುಖಂಡರು ಹೇಳಿದ್ದಾರೆ.

ಜಿಲ್ಲೆಯಲ್ಲಿ 10 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಕಬ್ಬು ಬೆಳೆಯಲಾಗುತ್ತಿದೆ. ಜಿಲ್ಲೆಯ ರೈತರ ಹಿತದೃಷ್ಟಿಯಿಂದ ಹಾಗೂ ಉತ್ತಮ ದರ ಸಿಗಬೇಕು ಎಂಬ ಕಾರಣಕ್ಕೆ ಜಿಲ್ಲೆಯಿಂದ ಹೊರಜಿಲ್ಲೆ ಹಾಗೂ ರಾಜ್ಯಗಳಿಗೆ ಕಬ್ಬು ಪೂರೈಕೆ ಮಾಡಲು ಯಾವುದೇ ನಿರ್ಬಂಧ ವಿಧಿಸಲಾಗಿಲ್ಲ.

ಕಲಬುರಗಿ ಕಬ್ಬು ಮಹಾರಾಷ್ಟ್ರಕ್ಕೆ

ಕಾರ್ಖಾನೆಗಳು ಸಮೀಪದಲ್ಲಿವೆ ಮತ್ತು ಸಕಾಲದಲ್ಲಿ ಹಣ ಸಿಗುತ್ತದೆ ಎಂಬ ಕಾರಣಕ್ಕೆ ಮಹಾರಾಷ್ಟ್ರ ಹಾಗೂ ತೆಲಂಗಾಣದೊಂದಿಗೆ ಗಡಿ ಹಂಚಿಕೊಂಡಿರುವ ಕಲಬುರಗಿ ಜಿಲ್ಲೆಯ ಗಡಿ ಭಾಗದ ಗ್ರಾಮಗಳ ಬೆಳೆಗಾರರು ನೆರೆ ರಾಜ್ಯದ ಸಕ್ಕರೆ ಕಾರ್ಖಾನೆಗಳಿಗೆ ಕಬ್ಬನ್ನು ಸಾಗಿಸುತ್ತಾರೆ.

ಜಿಲ್ಲೆಯಲ್ಲಿ ಹೆಚ್ಚು ಕಬ್ಬನ್ನು ಬೆಳೆಯುವ ಅಫಜಲಪುರ ತಾಲ್ಲೂಕಿನಲ್ಲಿ ರೇಣುಕಾ ಶುಗರ್ಸ್ ಹಾಗೂ ಕೆಪಿಆರ್ ಶುಗರ್ಸ್ ಸಕ್ಕರೆ ಕಾರ್ಖಾನೆಗಳಿದ್ದು, ಹೆಚ್ಚಿನ ಪ್ರಮಾಣದ ಕಬ್ಬನ್ನು ಇವೆರಡು ಕಾರ್ಖಾನೆಗಳಿಗೇ ಸಾಗಿಸಲಾಗುತ್ತದೆ. ಆದರೆ, ಇತ್ತೀಚಿನ ವರ್ಷಗಳಲ್ಲಿ ಸಕಾಲಕ್ಕೆ ಬಾಕಿ ಪಾವತಿ ಮಾಡದೇ ಇರುವುದರಿಂದ ಹಾಗೂ ಬೆಲೆಯೂ ಕಮ್ಮಿ ನಿಗದಿ ಆಗುವುದರಿಂದ ನೆರೆಯ ಮಹಾರಾಷ್ಟ್ರದ ಸಕ್ಕರೆ ಕಾರ್ಖಾನೆಗಳಿಗೆ ಕಬ್ಬನ್ನು ಪೂರೈಸುತ್ತಿದ್ದಾರೆ.

‘ಮಹಾರಾಷ್ಟ್ರದ 10 ಸಕ್ಕರೆ ಕಾರ್ಖಾನೆಗಳಿಗೆ ಅಫಜಲಪುರ, ಆಳಂದ ತಾಲ್ಲೂಕಿನ ರೈತರು ಕಬ್ಬು ಸಾಗಣೆ ಮಾಡುತ್ತಾರೆ. ಸೋಲಾಪುರ ಜಿಲ್ಲೆಯ ಸಕ್ಕರೆ ಕಾರ್ಖಾನೆಗಳು ಈಗಾಗಲೇ ಪ್ರತಿ ಟನ್ ಕಬ್ಬಿಗೆ ₹3,440 ಬೆಲೆ ನಿಗದಿ ಮಾಡಿವೆ. ಹೀಗಾಗಿ ಕಬ್ಬು ಬೆಳೆಗಾರರು ಅಲ್ಲಿನ ಸಕ್ಕರೆ ಕಾರ್ಖಾನೆಗಳಿಗೆ ಕಬ್ಬು ಪೂರೈಸುತ್ತಿದ್ದಾರೆ’ ಎಂಬುದು ಕಲಬುರಗಿ ಜಿಲ್ಲಾ ಕಬ್ಬು ಬೆಳೆಗಾರರ ಸಂಘದ ಅಧ್ಯಕ್ಷ ರಮೇಶ ಹೂಗಾರ ಅನಿಸಿಕೆ.

ರಾಷ್ಟ್ರೀಯ

9 ರಾಜ್ಯಗಳು, 3 ಕೇಂದ್ರಾಡಳಿತ ಪ್ರದೇಶಗಳಲ್ಲಿ ಎಸ್‌ಐಆರ್ ಶುರು

ನವದೆಹಲಿ/ಕಾನ್ಪುರ (ಪಿಟಿಐ): ದೇಶದ ಮೂರು ಕೇಂದ್ರಾಡಳಿತ ಪ್ರದೇಶಗಳು ಮತ್ತು 9 ರಾಜ್ಯಗಳ ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆಯು ಮಂಗಳವಾರದಿಂದ ಆರಂಭವಾಗಲಿದೆ.

ಡಿಸೆಂಬರ್ 4ಕ್ಕೆ ಎಸ್‌ಐಆರ್ ಪ್ರಕ್ರಿಯೆ ಪೂರ್ಣಗೊಳ್ಳಲಿದ್ದು, ಡಿ.9ಕ್ಕೆ ಮತದಾರರ ಪಟ್ಟಿಯ ಕರಡನ್ನು ಚುನಾವಣಾ ಆಯೋಗವು ಬಿಡುಗಡೆ ಮಾಡಲಿದೆ. ಅಂತಿಮ ಪಟ್ಟಿಯನ್ನು 2026ರ ಫೆ.7ರಂದು ಬಿಡುಗಡೆ ಮಾಡಲಿದೆ. ಆಯೋಗವು ಬಿಹಾರದಲ್ಲಿ ಇತ್ತೀಚೆಗಷ್ಟೇ ಎಸ್‌ಐಆರ್ ಪ್ರಕ್ರಿಯೆ ಪೂರ್ಣಗೊಳಿಸಿತ್ತು.

ಎಲ್ಲೆಲ್ಲಿ?: ಅಂಡಮಾನ್ ಮತ್ತು ನಿಕೋಬಾರ್, ಲಕ್ಷದ್ವೀಪ, ಪುದುಚೇರಿ, ಛತ್ತೀಸಗಢ, ಗೋವಾ, ಗುಜರಾತ್, ಮಧ್ಯ ಪ್ರದೇಶ, ರಾಜಸ್ಥಾನ, ತಮಿಳುನಾಡು, ಕೇರಳ, ಉತ್ತರ ಪ್ರದೇಶ ಮತ್ತು ಪಶ್ಚಿಮ ಬಂಗಾಳದಲ್ಲಿ ಎಸ್‌ಐಆರ್ ನಡೆಯಲಿದೆ.

ಈ ಪೈಕಿ ತಮಿಳುನಾಡು, ಪಶ್ಚಿಮ ಬಂಗಾಳ, ಪುದುಚೇರಿ ಮತ್ತು ಕೇರಳದಲ್ಲಿ 2026ರಲ್ಲಿ ಚುನಾವಣೆ ನಡೆಯಲಿದೆ. ತಮಿಳುನಾಡಿನಲ್ಲಿ ಎಸ್‌ಐಆರ್ ನಡೆಸದಂತೆ ತಡೆಯಲು ಸುಪ್ರೀಂ ಕೋರ್ಟ್‌ಗೆ ಹೋಗುವುದಾಗಿ ಅಲ್ಲಿನ ಸರ್ಕಾರ ಹೇಳಿದೆ.

‘ಐತಿಹಾಸಿಕ ಸಾಧನೆ’

ಬಿಹಾರದಲ್ಲಿ ಎಸ್‌ಐಆರ್ ನಡೆದಿದ್ದು, ಜಗತ್ತಿನಲ್ಲೇ ಅತಿ ದೊಡ್ಡ ‘ಶುದ್ಧೀಕರಣ’ ಪ್ರಕ್ರಿಯೆಯಾಗಿತ್ತು. ಜೊತೆಗೆ, ಭಾರತದ ಪ್ರಜಾಪ್ರಭುತ್ವಕ್ಕೆ ಇದೊಂದು ಮೈಲಿಗಲ್ಲು. ಸದ್ಯ ಬಿಹಾರದಲ್ಲಿ ಮಾತ್ರವೇ ಈ ಪ್ರಕ್ರಿಯೆ ಪೂರ್ಣಗೊಂಡಿದೆ. ಈ ಪ್ರಕ್ರಿಯೆಯನ್ನು ದೇಶದಾದ್ಯಂತ ವಿಸ್ತರಿಸಿದರೆ, ಅದು ದೇಶದ ಮತ್ತು ಚುನಾವಣಾ ಆಯೋಗದ ಅತ್ಯಂತ ದೊಡ್ಡ ಐತಿಹಾಸಿಕ ಸಾಧನೆಯಾಗಲಿದೆ. ದೇಶದಾದ್ಯಂತ ಈ ಪ್ರಕ್ರಿಯೆಯು ಪೂರ್ಣಗೊಂಡರೆ, ಆಯೋಗದ ಕುರಿತು ಮಾತ್ರವಲ್ಲ, ನಮ್ಮ ದೇಶ ಪ್ರಜಾತಂತ್ರ ವ್ಯವಸ್ಥೆ ಬಗ್ಗೆಯೇ ದೇಶದ ಜನರು ಹೆಮ್ಮೆಪಡುತ್ತಾರೆ

ಜ್ಞಾನೇಶ್ ಕುಮಾರ್,
ಮುಖ್ಯ ಚುನಾವಣಾ ಆಯುಕ್ತ

‘ಅಸ್ಸಾಂಗೆ ಪ್ರತ್ಯೇಕ ದಿನಾಂಕ’

‘ಅಸ್ಸಾಂನಲ್ಲಿ ಪೌರತ್ವವನ್ನು ಪರಿಶೀಲಿಸುವ ಕಾರ್ಯ ಪ್ರಗತಿಯಲ್ಲಿದೆ. ಈ ಕಾರ್ಯವು ಸುಪ್ರೀಂ ಕೋರ್ಟ್‌ನ ಮೇಲ್ವಿಚಾರಣೆಯಲ್ಲಿ ನಡೆಯುತ್ತಿದೆ. ಆದ್ದರಿಂದ, ಈ ರಾಜ್ಯದಲ್ಲಿ ಎಸ್‌ಐಆರ್ ಆರಂಭಿಸಲು ಪ್ರತ್ಯೇಕವಾಗಿ ದಿನಾಂಕ ಘೋಷಿಸಲಾಗುವುದು’ ಎಂದು ಚುನಾವಣಾ ಆಯೋಗ ಹೇಳಿದೆ. ಅಸ್ಸಾಂನಲ್ಲಿ 2026ರಲ್ಲಿ ವಿಧಾನಸಭೆಗೆ ಚುನಾವಣೆ ನಡೆಯಲಿದೆ.

ಎಸ್‌ಐಆರ್: ‘ಸುಪ್ರೀಂ’ಗೆ ಡಿಎಂಕೆ ಅರ್ಜಿ

ಚೆನ್ನೈ (ಪಿಟಿಐ): ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಅನುಷ್ಠಾನವನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್‌ಗೆ ತಮಿಳುನಾಡಿನ ಆಡಳಿತಾರೂಢ ಡಿಎಂಕೆ ಪಕ್ಷವು ಸೋಮವಾರ ಅರ್ಜಿ ಸಲ್ಲಿಸಿದೆ.

ಡಿಎಂಕೆ ಸಂಘಟನಾ ಕಾರ್ಯದರ್ಶಿ ಆರ್.ಎಸ್. ಭಾರತಿ ಅವರು ಪಕ್ಷದ ಸಂಸದ, ವಕೀಲ ಎನ್.ಆರ್. ಇಳಂಗೊ ಅವರ ಮೂಲಕ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದಾರೆ ಎಂದು ಪಕ್ಷದ ಪ್ರಕಟಣೆ ತಿಳಿಸಿದೆ. ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಅಧ್ಯಕ್ಷತೆಯಲ್ಲಿ ಭಾನುವಾರ ನಡೆದಿದ್ದ ಬಹು ಪಕ್ಷಗಳ ಸಭೆಯಲ್ಲಿ, ಎಸ್‌ಐಆರ್ ವಿರೋಧಿಸಿ ನ್ಯಾಯಾಲಯದ ಮೊರೆ ಹೋಗಲು ನಿರ್ಧರಿಸಲಾಗಿತ್ತು.

ಬೀದಿ ನಾಯಿ ಹಾವಳಿ: 7ಕ್ಕೆ ತೀರ್ಪು

ನವದೆಹಲಿ (ಪಿಟಿಐ): ಬೀದಿ ನಾಯಿಗಳ ಹಾವಳಿ ನಿಯಂತ್ರಣ ಕುರಿತ ಪ್ರಕರಣಕ್ಕೆ ಸಂಬಂಧಿಸಿದಂತೆ ಇದೇ 7ರಂದು ತೀರ್ಪು ಪ್ರಕಟಿಸುವುದಾಗಿ ಸುಪ್ರೀಂ ಕೋರ್ಟ್ ಸೋಮವಾರ ತಿಳಿಸಿದೆ.

ನ್ಯಾಯಮೂರ್ತಿಗಳಾದ ವಿಕ್ರಮ್ ನಾಥ್, ಸಂದೀಪ್ ಮೆಹ್ತಾ ಮತ್ತು ಎನ್.ವಿ.ಅಂಜಾರಿಯಾ ಅವರನ್ನು ಒಳಗೊಂಡ ವಿಶೇಷ ನ್ಯಾಯಪೀಠವು ವಿಚಾರಣೆ ನಡೆಸಿತು. ಈ ಸಂದರ್ಭದಲ್ಲಿ ಬಹುತೇಕ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಮುಖ್ಯ ಕಾರ್ಯದರ್ಶಿಗಳು ಉಪಸ್ಥಿತರಿದ್ದುದನ್ನು ಪೀಠವು ಗಮನಿಸಿತು.

ಕೇರಳದ ಮುಖ್ಯ ಕಾರ್ಯದರ್ಶಿ ಅವರು ಖುದ್ದು ಹಾಜರಿಯಿಂದ ವಿನಾಯಿತಿ ಕೋರಿ ಸಲ್ಲಿಸಿದ್ದ ಅರ್ಜಿಯನ್ನು ಪರಿಗಣಿಸಿತು. ಅವರ ಪರವಾಗಿ ರಾಜ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿ ವಿಚಾರಣೆಯಲ್ಲಿ ಭಾಗಿಯಾಗಿದ್ದರು.

ಪ್ರಕರಣ ಸಂಬಂಧ ಪ್ರಾಣಿಗಳ ಕಲ್ಯಾಣ ಮಂಡಳಿಯನ್ನೂ ಕಕ್ಷಿದಾರರಾಗಿ ನೇಮಿಸಲಾಗಿದೆ ಎಂದು ಪೀಠ ತಿಳಿಸಿತು.

ಇನ್ನು ಮುಂದೆ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಮುಖ್ಯ ಕಾರ್ಯದರ್ಶಿಗಳು ಖುದ್ದಾಗಿ ವಿಚಾರಣೆಗೆ ಹಾಜರಾಗಬೇಕಿಲ್ಲ. ಆದರೆ, ಕೋರ್ಟ್‌ನ ಆದೇಶ ಪಾಲನೆಯಲ್ಲಿ ಲೋಪ ಕಂಡುಬಂದಲ್ಲಿ ಅವರು ಮತ್ತೆ ಹಾಜರಾಗಬೇಕಾಗುತ್ತದೆ ಎಂದು ತಿಳಿಸಿತು.

ಪ್ರಯತ್ನವಿಲ್ಲದ ಪ್ರತಿಭೆಯಿಂದ ಪ್ರಯೋಜನವಿಲ್ಲ

ನುಡಿ ಬೆಳಗು — ದೀಪಾ ಹಿರೇಗುತ್ತಿ

ಚಂದನ್ ಮತ್ತು ಶ್ಯಾಮ್ ಎಂಬ ಸ್ನೇಹಿತರಿಗೆ ಚಿತ್ರ ಬಿಡಿಸುವ ಆಸಕ್ತಿ. ಇಬ್ಬರಿಗೂ ಚಿತ್ರ ಕಲಾವಿದರಾಗುವ ಆಸೆ. ಒಟ್ಟಿಗೆ ಓದಿ ಪಿಯುಸಿ ಮಗಿಸಿದ ನಂತರ ಕಲಾಶಾಲೆಯಲ್ಲಿ ಓದುತ್ತಿದ್ದರು. ಚಂದನ್ ಪ್ರತಿಭಾವಂತ. ಅವನ ಕೈಬೆರಳುಗಳಲ್ಲಿ ಮಾಂತ್ರಿಕತೆ ಇದೆಯೆಂದು ಜನರು ಮಾತಾಡಿಕೊಳ್ಳುತ್ತಿದ್ದರು. ಜತೆಗೆ ಚಂದನ್ ಕಷ್ಟಪಟ್ಟು ಅಭ್ಯಾಸ ನಡೆಸುತ್ತಿದ್ದ. ಶ್ಯಾಮ್ ಕೂಡ ಪ್ರತಿಭಾವಂತನೇ. ಆದರೆ ಚಂದನ್‌ನಲ್ಲಿರುವ ಅದ್ಭುತ ಪ್ರತಿಭೆ ಆತನಲ್ಲಿರಲಿಲ್ಲ. ಆದರೆ ತಾನು ಏನನ್ನಾದರೂ ಸಾಧಿಸಬೇಕೆಂಬ ಛಲ ಶ್ಯಾಮ್‌ನಲ್ಲಿತ್ತು. ಆ ಗುರಿ ಸಾಧಿಸಲು ಆತ ಹಗಲಿರುಳು ಕಷ್ಟಪಡುತ್ತಿದ್ದ.

ಕಾಲೇಜಿನಲ್ಲಿ ಓದುತ್ತಿರುವಾಗಲೇ ಚಂದನ್ ಬಿಡಿಸಿದ ಚಿತ್ರಗಳು ಎಲ್ಲರ ಮನಸೂರೆಗೊಂಡಿದ್ದವು. ತರಗತಿಯಲ್ಲಿ ಉಪಾಧ್ಯಾಯರಿಂದ ಹಿಡಿದು ಎಲ್ಲರೂ ಹೊಗಳುವವರೇ! ಮೂರನೇ ವರ್ಷದಲ್ಲಿ ಓದುತ್ತಿರುವಾಗಲೇ ಆತ ಸ್ವಂತ ಚಿತ್ರ ಪ್ರದರ್ಶನ ಕೂಡ ಏರ್ಪಡಿಸಿದ. ಅಲ್ಲಿ ಆತನ ಚಿತ್ರಗಳು ಒಳ್ಳೆಯ ಬೆಲೆಗೆ ಮಾರಾಟವಾದವು ಕೂಡ. ‘ನೋಡಿ, ಪ್ರತಿಭೆಯೊಂದಿಗೇ ಹುಟ್ಟಿದ್ದಾನೆ ಈ ಹುಡುಗ’ ಎಂದು ಜನರು ಮಾತಾಡಿಕೊಳ್ಳುವುದನ್ನು ಕೇಳಿ ಕೇಳಿ ಚಂದನ್‌ಗೆ ಕೊಂಚ ಅಹಂಕಾರ ಬಂತು. ಹೇಗಿದ್ದರೂ ತನ್ನ ಕೈಲಿ ಜಾದೂ ಇದೆ ಅಂದುಕೊಂಡ ಚಂದನ್ ಶ್ರಮ ಪಡುವುದನ್ನು ಕಡಿಮೆ ಮಾಡಿದ. ಮೊದಲು ಹಗಲೂ ರಾತ್ರಿ ತನ್ನ ಚಿತ್ರಕಲೆಯ ನಾಜೂಕು ಸಂಗತಿಗಳನ್ನು ಅಧ್ಯಯನ ಮಾಡುತ್ತಿದ್ದವನು ಅವನ್ನು ನಿರ್ಲಕ್ಷಿಸಲು ಪ್ರಾರಂಭಿಸಿದ. ಜಾಸ್ತಿ ಹೊತ್ತು ಮೊಬೈಲಿನಲ್ಲಿ ಕಳೆಯುವುದು, ನಿದ್ರಿಸುವುದನ್ನು ಶುರುಮಾಡಿದ. ಪ್ರತಿಭೆಯ ಬಲದಿಂದಲೇ ತಾನು ಎತ್ತರೆತ್ತರ ಬೆಳೆಯುತ್ತೇನೆಂಬ ಭ್ರಮೆಯಲ್ಲಿ ಬಿದ್ದ.

ಶ್ಯಾಮ್ ಮೊದಲಿನಿಂದಲೂ ಚಿತ್ರಕಲೆಯ ಕಡು ವ್ಯಾಮೋಹಿ. ತಾನು ಚಂದನ್ ರೀತಿ ಅದ್ಭುತ ಪ್ರತಿಭಾವಂತ ಅಲ್ಲವೆಂದು ಅವನಿಗೆ ಗೊತ್ತಿತ್ತು. ಹಾಗಾಗಿ ತಾನು ಯಶಸ್ವಿಯಾಗಬೇಕಾದರೆ ಬಹಳ ಕಷ್ಟಪಡಬೇಕೆಂದು ಶ್ಯಾಮ್ ಅರ್ಥ ಮಾಡಿಕೊಂಡಿದ್ದ. ಚಿತ್ರಗಳು ಜನರ ಗಮನ ಸೆಳೆಯದೇ ಹೋದಾಗ ತನ್ನ ಶಿಕ್ಷಕರೊಂದಿಗೆ ಚರ್ಚಿಸಿ ತಿದ್ದಿಕೊಳ್ಳಲು ಶತಃಪ್ರಯತ್ನ ಪಟ್ಟ. ಬೇರೆ ಬೇರೆ ಕಲಾಪ್ರದರ್ಶನಗಳಿಗೆ ಹೋಗಿ ಪ್ರಖ್ಯಾತ ಕಲಾವಿದರ ಚಿತ್ರಗಳ ಬಗ್ಗೆ ಆಳವಾಗಿ ಅಧ್ಯಯನ ನಡೆಸುತ್ತಿದ್ದ. ‘ಕತ್ತಲೆಯನ್ನು ಓಡಿಸಲು ದೊಡ್ಡ ದೀಪಗಳೇ ಬೇಕೆಂದಿಲ್ಲ, ಸಣ್ಣ ಹಣತೆಯೂ ಸಾಕು, ಆದರೆ ಅದು ಉರಿಯುತ್ತಲೇ ಇರಬೇಕಷ್ಟೇ’ ಎಂಬ ಅಮ್ಮನ ಮಾತನ್ನು ನೆನಪಿಟ್ಟಿದ್ದ ಶ್ಯಾಮ್.

ಕೊನೆಯ ವರ್ಷ ನಗರದಲ್ಲಿ ಅಂತರ ಕಾಲೇಜು ಮಟ್ಟದ ಸ್ಪರ್ಧೆ ಏರ್ಪಟ್ಟಿತು. ಅದರಲ್ಲಿ ಚಂದನ್ ಗೆಲ್ಲುತ್ತಾನೆಂದು ಎಲ್ಲರೂ ಅಂದುಕೊಂಡಿದ್ದರು. ಚಂದನ್ ಕೂಡ ವಿಶ್ವಾಸದಿಂದಿದ್ದ. ಆದರೆ ಶ್ಯಾಮ್ ಗೆಲ್ಲಲೇಬೇಕೆಂದು ತೀರ್ಮಾನಿಸಿದ್ದ. ಚಿತ್ರ ಬಿಡಿಸುವ ಸ್ಪರ್ಧೆಯ ದಿನ ಕೊನೆಯ ನಿಮಿಷ ಕಳೆದಾಗ ನೋಡುವುದೇನು? ಚಂದನ್ ಚಿತ್ರವೇನೋ ಚೆನ್ನಾಗಿತ್ತು, ಆದರೆ ಅದರ ಆತ್ಮ ಎಲ್ಲೋ ಕಳೆದುಹೋದಂತೆ ಭಾಸವಾಗುತ್ತಿತ್ತು. ಆದರೆ ಶ್ಯಾಮ್‌ನ ಚಿತ್ರ ಅತ್ಯದ್ಭುತವಾಗಿ ಮೂಡಿತ್ತು. ಮಹಾನ್ ಕಲಾವಿದರು ಎಂದೂ ನಿರ್ಲಕ್ಷ್ಯ ಮಾಡದ ಅತ್ಯಂತ ಸೂಕ್ಷ್ಮ ಸಂಗತಿಗಳೆಲ್ಲ ಕರಾರುವಾಕ್ಕಾಗಿ ಮೂಡಿಬಂದಿದ್ದವು. ಸತತ ಅಧ್ಯಯನ, ಅಭ್ಯಾಸ ಅವನ ಚಿತ್ರದಲ್ಲಿ ಕಾಣುತ್ತಿತ್ತು. ಅತಿಯಾದ ಆತ್ಮವಿಶ್ವಾಸ ಚಂದನ್‌ನನ್ನು ಸೋಲಿಸಿದರೆ ಸತತ ಪರಿಶ್ರಮ ಶ್ಯಾಮ್‌ನನ್ನು ಗೆಲ್ಲಿಸಿತು. ❖

ಪದಬಂಧ 6213

ವಿದ್ಯಾ ವಿನಯ್



ಎಡದಿಂದ ಬಲಕ್ಕೆ

1.ಸೂರ್ಯನ ಕಾವಿನಲ್ಲಿ ಗೋಚರಿಸಿದ ಮರೀಚಿಕೆ (5)
3.ಅಗಲವಾದ ಹರಿವಾಣ (3)
5.ಮನೋರಥದಲ್ಲಿರುವ ತೇರು (2)
6.ಹೆಂಡತಿ ಇಲ್ಲಿ ತಿರುಗಿದ್ದಾಳಲ್ಲಾ! (2)
8.ಪ್ರಾತಃಕಾಲವಿದು (3)
9.ಕಿರೀಟಧಾರಣ ಮಹೋತ್ಸವವಿದು (5)
12.ಅಂತರಂಗದಲ್ಲಿನ ಅಲೆ (3)
13.ಇಂದ್ರಿಯಗಳನ್ನು ಹಿಡಿತದಲ್ಲಿಕೊಂಡಿರುವವನು (2)
15.ಒಗ್ಗರಣೆಗೆ ಹಾಕುವ ವಸ್ತು (2)
16.ಬಂಗಾರ ಇಲ್ಲಿದೆ (3)
17.ನೀರು ಹರಿದು ಹೋಗಲು ಮಾಡಿರುವ ಕೊಳವೆ (5)

ಮೇಲಿಂದ ಕೆಳಕ್ಕೆ

1.ಶಾಖವನ್ನು ಸೂಸುತ್ತಿರುವ ನೆತ್ತರು (4)
2.ಹೀನ ಸ್ಥಿತಿಯಿದು (3)
4.ಅಂತರವಿರುವ ತಲೆಮಾರು! (4)
7.ಒಳ್ಳೆಯ ಅಭಿಪ್ರಾಯ (5)
8.ಪ್ರತೀ ಸಲ ಕಾಣಿಸಿರುವ ಚಿಹ್ನೆ! (3)
9.ಹೂವಿನಲ್ಲಿರುವ ಹುಡಿ (3)
10.ಪರಮಾತ್ಮ ಇಲ್ಲಿಯೇ ಪ್ರತ್ಯಕ್ಷ! (4)
11.ಲಗ್ಗೆ ಹಾಕುವ ಬಗೆ ಬಹಳ ಚುರುಕು! (4)
14.ಅಮೂಲ್ಯ ವಸ್ತುಗಳನ್ನಿಡುವ ಕಬ್ಬಿಣದ ಪೆಟ್ಟಿಗೆ (3)

6212ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:

1.ಅಂತಃಪುರ 3.ವಕ್ರತುಂಡ
5.ಸವಾರ 6.ಜಲಜ
8.ಜಲ್ಲರಿ 9.ಪ್ರಧಾನಿ
10.ಮಡೆಯ 11.ಕನ್ನಡ
12.ತನಯ 14.ದಾಯಾದಿ
16.ಶಯ್ಯಾಗೃಹ 17.ನಖಹತ

ಮೇಲಿಂದ ಕೆಳಕ್ಕೆ:

1.ಅಂಡಜ 2.ರಸ 3.ವರ
4.ಡಬರಿ 7.ಜನನಿಬಿಡ
8.ಜನುಮದಾತ 11.ಕಳಶ
13.ಯಯಾತಿ 14.ದಾಹ 15.ದಿನ

ಸುಡೊಕು 6597

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

7		4		5				3
			1		9	6		5
6		5		3				
2					4	1		9
9	7	1		8			4	
4			9		2	3		7
	4		3		7		2	1
						7		8
1	3			2			6	

6596 ಸುಡೊಕು

8	7	9	6	2	1	3	4	5
3	2	6	5	4	8	9	1	7
1	4	5	9	7	3	2	8	6
2	6	8	1	3	5	4	7	9
9	3	1	7	8	4	5	6	2
4	5	7	2	9	6	1	3	8
6	9	2	3	1	7	8	5	4
7	1	4	8	5	9	6	2	3
5	8	3	4	6	2	7	9	1

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

04 ನವೆಂಬರ್ 2025 ಮಂಗಳವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಕಾರ್ತಿಕ ಶುಕ್ಲ ಚತುರ್ದಶಿ ಗಂ. 22-37 ನಕ್ಷತ್ರ: ರೇವತಿ ಗಂ 12-35 ಯೋಗ: ವಜ್ರ ಗಂ 15-43 ಕರಣ: ಗರ ಗಂ. 12-24 ತುಲಾ ಮಾಸದ 18 ನೇ ದಿನ. ಮಳೆ ನಕ್ಷತ್ರ : ಸ್ವಾತಿ 4 ನೇ ಪಾದ. ರಾಹುಕಾಲ : ಮಧ್ಯಾಹ್ನ 03-00 - 04-30 , ಸೂರ್ಯೋದಯ : 06-29 ಸೂರ್ಯಾಸ್ತ : 05-59, ಮುಸ್ಲಿಂ ದಿನಾಂಕ : 12 ಜುಮಾದುಲ್ಲಾವಲ್, ಅದೃಷ್ಟ ಸಂಖ್ಯೆ : 7, 3

ಮೇಷ: ಮನೆಯಲ್ಲಿ ನಡೆಯುವ ಕಾರ್ಯಕ್ರಮಕ್ಕಾಗಿ ದಿನಸಿ ವಸ್ತುಗಳ ಖರೀದಿಯನ್ನು ದೊಡ್ಡ ಮಟ್ಟದಲ್ಲಿ ಮಾಡುವಿರಿ. ವಿದೇಶದಲ್ಲಿರುವ ಮಕ್ಕಳಿಂದ ಅಚ್ಚರಿಯ ಸುದ್ದಿ ಕೇಳುವಿರಿ. ಆಕಸ್ಮಿಕ ಪ್ರಯಾಣದ ಸಾಧ್ಯತೆಯಿದೆ.

ವೃಷಭ: ವೃತ್ತಿಯಲ್ಲಿದ್ದ ಸ್ಪರ್ಧಾತ್ಮಕ ಪೈಪೋಟಿಯಲ್ಲಿ ಸಿಕ್ಕ ಗೆಲುವಿನಿಂದ ಹೆಚ್ಚಿನ ತೃಪ್ತಿ, ಸಂತೋಷ ಉಂಟಾಗಲಿದೆ. ಮೊಬೈಲ್ ಬಳಕೆಯು ಯೋಚನೆಗಳಿಗೆ ಕಾರಣವಾಗುತ್ತದೆ. ಭಕ್ತಿಯಿಂದ ಈಶ್ವರನನ್ನು ಆರಾಧಿಸಿ.

ಮಿಥುನ: ತಾಂತ್ರಿಕ ವಿದ್ಯೆಯಲ್ಲಿ ಯಶಸ್ಸನ್ನು ಹೊಂದುವ ಎಲ್ಲಾ ಲಕ್ಷಣಗಳೂ ಕಂಡರೂ ವಿದ್ಯಾಭ್ಯಾಸಕ್ಕೆ ತೊಂದರೆಯಾಗುವ ಪರಿಸ್ಥಿತಿ ಎದುರಾಗಬಹುದು. ಸಂಗೀತ-ನಾಟ್ಯ ಸಾಧಕರಿಗೆ ವೇದಿಕೆ ದೊರೆತು ವಿದ್ವತ್ ಪ್ರದರ್ಶನವಾಗುವುದು.

ಕರ್ಕಾಟಕ: ಮಾರುಕಟ್ಟೆಯಲ್ಲಿ ಆಗುತ್ತಿರುವ ಬದಲಾವಣೆಗಳನ್ನು ಗಮನಿಸಿ ನಂತರದಲ್ಲಿ ಷೇರುಗಳನ್ನು ಕೊಳ್ಳುವ ಯೋಜನೆಗೆ ಮುಂದಾಗಿ. ವರ್ತಮಾನ ಸ್ಥಿತಿ ಅರಿತು ವ್ಯವಹಾರ ಮಾಡಿ. ಇತರರನ್ನು ತಿರಸ್ಕಾರದಿಂದ ನೋಡದಿರಿ.

ಸಿಂಹ: ಬಹಳ ದಿನಗಳಿಂದ ನಿರೀಕ್ಷಿಸಿದ ರೀತಿಯಲ್ಲಿ ಉದ್ಯೋಗ ಸಿಕ್ಕದಿದ್ದರೂ, ಸಣ್ಣ ಮಟ್ಟದ ಉದ್ಯೋಗ ಸಿಕ್ಕಿರುವುದು ಸಂತೋಷ ಪಡುವ ವಿಚಾರ. ಹತ್ತಿ ಕಾರ್ಖಾನೆಯಲ್ಲಿ ಕೆಲಸ ಮಾಡುವಂತವರಿಗೆ ಉಷ್ಣದ ಸಮಸ್ಯೆ ಕಾಡಬಹುದು.

ಕನ್ಯಾ: ಸ್ನೇಹಿತನ ಸಹಾಯದಿಂದ ಹಲವಾರು ವಿಚಾರಗಳಲ್ಲಿ ಪರಿಪೂರ್ಣತೆಯನ್ನು ಹೊಂದಲು ಸಾಧ್ಯ. ರಕ್ಷಣೆಯನ್ನು ಬಯಸಿ ಬಂದ ಸ್ನೇಹಿತನಿಗೆ ಕೈಲಾದ ಸಹಾಯ ಮಾಡಿ. ಒಳ್ಳೆಯದಾಗುತ್ತದೆ.

ತುಲಾ: ರಾಜಕಾರಣಿಗಳಿಗೆ, ಸರ್ಕಾರಿ ನೌಕರರಿಗೆ ಸುಯೋಗವೆಂದು ಹೇಳ ಬಹುದು. ಹೆಸರಾಂತ ಶಿಕ್ಷಣ ಸಂಸ್ಥೆಯಲ್ಲಿ ಕಡಿಮೆ ಪ್ರಯತ್ನದಿಂದ ಅಧ್ಯಾಪಕ ವೃತ್ತಿ ದೊರೆಯುವ ಸಂಭವವಿದೆ. ಖಾಸಗಿ ನೌಕರರಿಗೆ ಕೆಲಸವಿರುವುದು.

ವೃಶ್ಚಿಕ: ವಿದ್ಯಾಭ್ಯಾಸಕ್ಕಾಗಿ ಮನೆಯಿಂದ ದೂರ ಇರುವ ನಿಮಗೆ ಪ್ರತಿ ಬಾರಿಯ ಶುಭಕಾರ್ಯಗಳು ತಪ್ಪಿ ಹೋಗುವುದು ದುಃಖ ತರುವುದು. ಸ್ನೇಹಿತನಿಗಾಗಿ ಸಮಯ ಮತ್ತು ಹಣವನ್ನು ಖರ್ಚು ಮಾಡುವ ಪರಿಸ್ಥಿತಿ ಬರುವುದು.

ಧನು: ಅನಗತ್ಯ ವಿಷಯಗಳಿಂದ ದೂರವಿರುವುದು ಯೋಜನೆಗಳನ್ನು ಗಂಭೀರವಾಗಿ ಪರಿಗಣಿಸಲು ಅನುಕೂಲ. ವೃತ್ತಿಯಲ್ಲಿ ನಿಷ್ಠರಾಗಿರಿ. ಹಣಕಾಸಿನ ವಿಚಾರದಲ್ಲಿ ಪರಿಶ್ರಮಕ್ಕೆ ತಕ್ಕಂತಹ ಫಲ ದೊರೆಯುವುದು.

ಮಕರ: ಮಗಳ ಮದುವೆ ವಿಷಯವನ್ನು ಆಕೆಯ ಅನುಮತಿ ಪಡೆದು ಮಾತ್ರವೇ ಮನೆಯವರ ಜೊತೆ ಪ್ರಸ್ತಾಪಿಸಿ. ಕೋರ್ಟಿನ ಕೆಲಸಗಳನ್ನು ತ್ವರಿತಗತಿಯಲ್ಲಿ ನಡೆಸಿ ಕೊಡುವಂತೆ ವಕೀಲರಲ್ಲಿ ಕೇಳಿಕೊಳ್ಳುವಿರಿ.

ಕುಂಭ: ವೈದ್ಯರಿಗೆ ವೃತ್ತಿಯಲ್ಲಿ ಆಶ್ಚರ್ಯಕರ ಘಟನೆ ನಡೆದು ದೇವರಿದ್ದಾನೆ ಎಂಬ ನಂಬಿಕೆ ಅನುಭವಕ್ಕೆ ಬರುವಂತಾಗುವುದು. ಸಹೋದ್ಯೋಗಿಗಳೊಡನೆ ಪ್ರೀತಿಯಿಂದ ವರ್ತಿಸುವುದರಿಂದ ಕೆಲಸ ಸರಾಗವಾಗಿ ಸಾಗಲಿದೆ.

ಮೀನ: ಯಾವ ಒತ್ತಡಗಳಿಗೂ, ಯಾರ ದಬ್ಬಾಳಿಕೆಗೂ ಒಳಗಾಗದೆ ಸ್ವತಂತ್ರವಾಗಿರಲು ಬಯಸುವಿರಾದರೂ ಸಾಧ್ಯವಾಗುವುದಿಲ್ಲ. ಮನಸ್ಸಿಗೆ ಅಸಮಾಧಾನ ಆಗುವಂತಹ ಹಲವು ಘಟನೆ ಬಾಳಲ್ಲಿ ನಡೆಯಲಿದೆ.

ಗುಂಡಣ್ಣ

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ	
ಹಿಂದಿನ ಅಂತ್ಯ:	25,722
ಇಂದಿನ ಅಂತ್ಯ:	25,763
ದಿನದ ಗರಿಷ್ಠ:	25,803
	41

ಮೊಟ್ಟೆ ಧಾರಣೆ (ಎನ್‌ಇಸಿಸಿ)

ಬೆಂಗಳೂರು	100 ಕ್ಕೆ	₹595
	12 ಕ್ಕೆ	₹80
ಮೈಸೂರು	100 ಕ್ಕೆ	₹595

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹182
ಆರ್‌ಎಸ್‌ಎಸ್-5	₹177
ಗುಡ್ ಲಾಟ್	₹164

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಹಿಂದಿನ ವಹಿವಾಟಿನ ದರ) (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1400 (1410)
ಸೋಯಾ (ರಿಫೈನ್ಡ್)	₹1260 (1260)
ಸೂರ್ಯಕಾಂತಿ (ರಿಫೈನ್ಡ್)	₹1480 (1475)
ಪಾಮೊಲಿನ್	₹1260 (1260)

ಮುದ್ರೆಮನೆ ಕಾಫಿ (50 ಕೆಜಿಗೆ)

ಎಪಿ	₹29250
ಎಸಿ	₹15400
ಆರ್‌ಪಿ	₹19000
ಆರ್‌ಸಿ	₹10950

ಚಿಟಿಕೆ ಸುದ್ದಿ

ಯುಪಿಐ ವಹಿವಾಟು ₹27.28 ಲಕ್ಷ ಕೋಟಿ

ನವದೆಹಲಿ (ಪಿಟಿಐ): ಅಕ್ಟೋಬರ್ ತಿಂಗಳಿನಲ್ಲಿ ಏಕೀಕೃತ ಪಾವತಿ ವ್ಯವಸ್ಥೆ (ಯುಪಿಐ) ಮೂಲಕ 2,070 ಕೋಟಿ ವಹಿವಾಟುಗಳು ನಡೆದಿವೆ. ಹಣದ ಲೆಕ್ಕದಲ್ಲಿ ಒಟ್ಟು ₹27.28 ಲಕ್ಷ ಕೋಟಿಯಷ್ಟು ವಹಿವಾಟುಗಳು ನಡೆದಿವೆ ಎಂದು ರಾಷ್ಟ್ರೀಯ ಪಾವತಿ ನಿಗಮ (ಎನ್‌ಪಿಸಿಐ) ಸೋಮವಾರ ತಿಳಿಸಿದೆ.

ಹಬ್ಬದ ಋತುವಿನ ಅಂಗವಾಗಿ ಖರೀದಿ ಹೆಚ್ಚಿದ ಕಾರಣದಿಂದಾಗಿ ವಹಿವಾಟು ಹೆಚ್ಚಳ ಆಗಿದೆ ಎಂದು ನಿಗಮ ತಿಳಿಸಿದೆ.

ಕಳೆದ ವರ್ಷದ ಅಕ್ಟೋಬರ್‌ನಲ್ಲಿ ₹23.49 ಲಕ್ಷ ಕೋಟಿ ಮೌಲ್ಯದ ವಹಿವಾಟು ನಡೆದಿತ್ತು. ಇದಕ್ಕೆ ಹೋಲಿಸಿದರೆ ಶೇ 16ರಷ್ಟು ಬೆಳವಣಿಗೆ ದಾಖಲಿಸಿದೆ ಎಂದು ಹೇಳಿದೆ. ಅಕ್ಟೋಬರ್‌ನಲ್ಲಿ ದಿನನಿತ್ಯ ಸರಾಸರಿ 66.8 ಕೋಟಿ ವಹಿವಾಟುಗಳು ನಡೆದಿವೆ. ಇದರ ಮೌಲ್ಯ ದಿನಕ್ಕೆ ಸರಾಸರಿ ₹87,993 ಕೋಟಿ.

ಈ ವರ್ಷದ ಮೇ ತಿಂಗಳಿನಲ್ಲಿ ₹25.14 ಲಕ್ಷ ಕೋಟಿಯಷ್ಟು ಮೌಲ್ಯದ ವಹಿವಾಟು ನಡೆದಿತ್ತು. ಇದು ಅವರೆಗಿನ ಗರಿಷ್ಠ ಮಟ್ಟದ ವಹಿವಾಟು ನಡೆದ ತಿಂಗಳಾಗಿತ್ತು. ಆದರೆ, ಅಕ್ಟೋಬರ್ ವಹಿವಾಟು ಇದಕ್ಕಿಂತಲೂ ಹೆಚ್ಚಳವಾಗಿದೆ.

ಮಲೇಷ್ಯಾದಲ್ಲೂ ಯುಪಿಐ: ಮಲೇಷ್ಯಾದಲ್ಲಿ ಯುಪಿಐ ಬಳಸುವ ಮೂಲಕ ವಹಿವಾಟು ನಡೆಸಬಹುದಾಗಿದೆ ಎಂದು ಎನ್‌ಪಿಸಿಐ ತಿಳಿಸಿದೆ. ಎನ್‌ಪಿಸಿಐ ಇಂಟರ್‌ನ್ಯಾಷನಲ್ ಮತ್ತು ರೇಜರ್‌ಪೇ ಕರ್ಲೆಕ್ ಈ ಕುರಿತು ಒಪ್ಪಂದ ಮಾಡಿಕೊಂಡಿವೆ.

18ರಿಂದ ಬೆಂಗಳೂರು ಟೆಕ್ ಶೃಂಗಸಭೆ

ಬಿಐಇಸಿಯಲ್ಲಿ ಶೃಂಗಸಭೆ ಆಯೋಜನೆ • ಭಾಗವಹಿಸಲಿರುವ 60 ದೇಶಗಳ ಪ್ರತಿನಿಧಿಗಳು: ಸಚಿವ ಪ್ರಿಯಾಂಕ್ ಖರ್ಗೆ

ಪ್ರಜಾವಾಣಿ ವಾರ್ತೆ

ಪ್ರಿಯಾಂಕ್ ಖರ್ಗೆ

ಬೆಂಗಳೂರು: '28ನೇ ಆವೃತ್ತಿಯ ಬೆಂಗಳೂರು ಟೆಕ್ ಶೃಂಗಸಭೆ ತುಮಕೂರು ರಸ್ತೆಯ ಬೆಂಗಳೂರು ಅಂತರ ರಾಷ್ಟ್ರೀಯ ವಸ್ತುಪ್ರದರ್ಶನ ಕೇಂದ್ರದಲ್ಲಿ (ಬಿಐಇಸಿ) ಇದೇ 18ರಿಂದ ಮೂರು ದಿನ ನಡೆಯಲಿದೆ' ಎಂದು ಮಾಹಿತಿ ಮತ್ತು ಜೈವಿಕ ತಂತ್ರಜ್ಞಾನ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಸೋಮವಾರ ಮಾತನಾಡಿದ ಅವರು, 'ಈ ಶೃಂಗಸಭೆಯಲ್ಲಿ 60 ದೇಶಗಳ ಪ್ರತಿನಿಧಿಗಳು ಭಾಗವಹಿಸಲಿದ್ದಾರೆ. ತಂತ್ರಜ್ಞಾನ ಮತ್ತು ಉದ್ಯಮವನ್ನು ಒಂದೇ ವೇದಿಕೆಗೆ ತರುವ ಜಾಗತಿಕ ಕಾರ್ಯಕ್ರಮ ಇದಾಗಿದ್ದು, ಈ ಬಾರಿ ಕ್ವಾಂಟಮ್ ಕಂಪ್ಯೂಟಿಂಗ್, ಎಐ, ಸ್ಪೇಸ್‌ಟೆಕ್, ಹೆಲ್ತ್ ಟೆಕ್‌ಗೆ ವಿಶೇಷ ಗಮನ ನೀಡಲಾಗುವುದು' ಎಂದು ಹೇಳಿದರು.

'20ರಂದು ಫ್ಯೂಚರ್ ಮೇಕರ್ಸ್ ಕಾನ್‌ಕ್ಲೇವ್ ನಡೆಯಲಿದ್ದು, 10 ಸಾವಿರಕ್ಕೂ ಹೆಚ್ಚಿನ ಉದ್ಯಮಿಗಳು, ಹೂಡಿಕೆದಾರರು, ಸ್ಟಾರ್ಟ್ ಅಪ್ ಸಂಸ್ಥಾಪಕರು ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ಆವಿಷ್ಕಾರ ಮಾಡಿರುವವರು ಪಾಲ್ಗೊಳ್ಳಲಿದ್ದಾರೆ' ಎಂದರು.

ಹೊಸ ನೀತಿ: 'ಸ್ಟಾರ್ಟ್ ಅಪ್ ಐಟಿ ಸ್ಪೇಸ್ ಟೆಕ್‌ಗೆ ಹೊಸ ನೀತಿ ರೂಪಿಸಲಾಗಿದೆ. ಒಟ್ಟಾರೆ, ಈ ಬಾರಿ ನೀತಿಗಳನ್ನು ಜಾಗತಿಕ ದೃಷ್ಟಿಕೋನದಲ್ಲೇ ರೂಪಿಸಲಾಗಿದೆ. ಮಾಹಿತಿ ತಂತ್ರಜ್ಞಾನ, ಸ್ಟಾರ್ಟ್ ಅಪ್, ಸ್ಪೇಸ್ ಟೆಕ್‌ನಲ್ಲಿ ಕರ್ನಾಟಕ ಮುಂಚೂಣಿಯಲ್ಲಿದೆ. ಈ ನೀತಿಯ ಮೂಲಕ ಕರ್ನಾಟಕದಲ್ಲಿರುವ ಇನ್ನಷ್ಟು ಅವಕಾಶಗಳನ್ನು ಬಳಸಿಕೊಳ್ಳಲು ಪ್ರಯತ್ನಿಸಲಾಗುವುದು' ಎಂದರು.

₹600 ಕೋಟಿ ಹೂಡಿಕೆ: 'ಕರ್ನಾಟಕವನ್ನು ಭಾರತದ ಡೀಪ್ ಟೆಕ್ ರಾಜಧಾನಿಯಾಗಿ ರೂಪಿಸುವ ಉದ್ದೇಶದಿಂದ ಸರ್ಕಾರ ₹600 ಕೋಟಿ ಹೂಡಿಕೆಗೆ ಬದ್ಧವಾಗಿದೆ. ಇದರಲ್ಲಿ ಎಐ, ಕ್ವಾಂಟಮ್ ಕಂಪ್ಯೂಟಿಂಗ್, ರೋಬೋಟಿಕ್ಸ್ ಹಾಗೂ ಸುಸ್ಥಿರತೆ ಆಧಾರಿತ ಆವಿಷ್ಕಾರಗಳಿಗೂ ಪ್ರೋತ್ಸಾಹ ನೀಡಲಾಗುವುದು' ಎಂದೂ ಅವರು ತಿಳಿಸಿದರು.

ಮಾಹಿತಿ ಮತ್ತು ಜೈವಿಕ ತಂತ್ರಜ್ಞಾನ ಇಲಾಖೆ ಕಾರ್ಯದರ್ಶಿ ಎನ್. ಮಂಜುಳಾ, ವ್ಯವಸ್ಥಾಪಕ ನಿರ್ದೇಶಕ ರಾಹುಲ್ ಸಂಕನೂರ್ ಇದ್ದರು.

ಶೃಂಗಸಭೆಯ ವಿಶೇಷ

- ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ಹೊಸ ಅವಕಾಶಗಳ ಹುಡುಕಾಟಕ್ಕೆ ಅವಕಾಶ, ಕೌಶಲಯುತ ಮಾನವ ಸಂಪನ್ಮೂಲ ಲಭ್ಯತೆಯ ಅನಾವರಣ
- ರಾಜ್ಯದ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಹೂಡಿಕೆದಾರರು ಮತ್ತು ನವೋದ್ಯಮಗಳಿಗೆ ಸೇತುವೆಯಾಗಿ ವೇದಿಕೆ
- ಬೆಂಗಳೂರು ಬಿಟ್ಟು ಇತರ ನಗರಗಳಲ್ಲಿ ಹೊಸ ಉದ್ಯಮ ಸ್ಥಾಪನೆಗೆ ಪ್ರೋತ್ಸಾಹ; ಉದ್ಯೋಗ ಸೃಷ್ಟಿಗೆ ಆದ್ಯತೆ
- ಮುಂದಿನ ಐದು ವರ್ಷಗಳಲ್ಲಿ 50 ಲಕ್ಷಕ್ಕಿಂತ ಹೆಚ್ಚು ಉದ್ಯೋಗ ಸೃಷ್ಟಿಯ ಗುರಿ
- ನೆರೆ ರಾಜ್ಯಗಳ ವಿವಿಧ ವಿನ್ಯಾಸ ಹೂಡಿಕೆದಾರರಿಗೆ ಸೆಳೆಯುತ್ತಿರುವುದರಿಂದ ವೃತ್ತಿಪರ ನೀಡಲು ಮುಕ್ತ ಅವಕಾಶ ಕಲ್ಪಿಸುವುದು
- ನವೋದ್ಯಮಗಳಿಗೆ ಅಭಿವೃದ್ಧಿ ವೇದಿಕೆ, ನವೋದ್ಯಮಿಗಳಿಗೆ ತಂತ್ರಜ್ಞಾನ ಸೌಲಭ್ಯಗಳನ್ನು ಪ್ರಕಟಿಸುವುದು. ಆ ಮೂಲಕ, ಈ ಕ್ಷೇತ್ರದ ಬೆಳವಣಿಗೆಗೆ ಪೂರಕ ಪರಿಸರಕ್ಕೆ ಒತ್ತು

ಸುದ್ದಿ 2 ನಿಮಿಷ

ಏರ್‌ಟೆಲ್‌ಗೆ ₹8,651 ಕೋಟಿ ಲಾಭ

ಬೆಂಗಳೂರು/ನವದೆಹಲಿ (ಪಿಟಿಐ): ದೂರಸಂಪರ್ಕ ಸೇವಾ ಕಂಪನಿ ಭಾರ್ತಿ ಏರ್‌ಟೆಲ್ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ₹8,651 ಕೋಟಿ ನಿವ್ವಳ ಲಾಭ ಗಳಿಸಿದೆ. ಕಳೆದ ಆರ್ಥಿಕ ವರ್ಷದ ಇದೇ ಅವಧಿಯಲ್ಲಿ ಕಂಪನಿಯು ₹4,153 ಕೋಟಿ ಲಾಭ ಗಳಿಸಿತ್ತು. ಈ ಲಾಭಕ್ಕೆ ಹೋಲಿಸಿದರೆ ಈ ಬಾರಿಯ ಲಾಭ ಎರಡು ಪಟ್ಟು ಹೆಚ್ಚಳವಾಗಿದೆ ಎಂದು ಕಂಪನಿ ಸೋಮವಾರ ತಿಳಿಸಿದೆ.

ವರಮಾನದಲ್ಲಿ ಶೇ 25.7ರಷ್ಟು ಏರಿಕೆ ಆಗಿದ್ದು, ₹52,145 ಕೋಟಿಗೆ ತಲುಪಿದೆ. ಸ್ಮಾರ್ಟ್‌ಫೋನ್ ಬಳಸುವ ಗ್ರಾಹಕರ ಸಂಖ್ಯೆ ಮತ್ತು ಪೋಸ್ಟ್‌ಪೇಯ್ಡ್ ಸಂಪರ್ಕ ಹೆಚ್ಚಳವೇ ಲಾಭದ ಪ್ರಮಾಣ ಏರಿಕೆಗೆ ಕಾರಣವಾಗಿದೆ ಎಂದು ತಿಳಿಸಿದೆ.

ಕಂಪನಿಯು ತನ್ನ ಪ್ರತಿ ಗ್ರಾಹಕನಿಂದ ತಿಂಗಳೊಂದರಲ್ಲಿ ಪಡೆಯುತ್ತಿರುವ ಸರಾಸರಿ ವರಮಾನದಲ್ಲಿ (ಎಆರ್‌ಪಿಯು) ಶೇ 10ರಷ್ಟು ಹೆಚ್ಚಳವಾಗಿದ್ದು, ₹256 ಆಗಿದೆ. ಕಳೆದ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಇದು ₹233 ಇತ್ತು.

ಮೊಬೈಲ್ ಡೇಟಾ ಬಳಕೆ ಪ್ರಮಾಣ ಕಳೆದ ವರ್ಷದ ಸೆಪ್ಟೆಂಬರ್‌ಗೆ ಹೋಲಿಸಿದರೆ ಶೇ 26.6ರಷ್ಟು ಹೆಚ್ಚಳವಾಗಿದೆ. ಪ್ರತಿ ತಿಂಗಳಿಗೆ ಗ್ರಾಹಕರೊಬ್ಬ ಬಳಸುವ ಸರಾಸರಿ ಡೇಟಾ 28.3 ಜಿಬಿ ಆಗಿದೆ.

ದೇಶದಲ್ಲಿ ಕಂಪನಿಯು 45 ಕೋಟಿ ಗ್ರಾಹಕರನ್ನು ಹೊಂದಿದೆ. ಒಂದು ವರ್ಷದಲ್ಲಿ ಕಂಪನಿಯು 12,796 ಟವರ್ ಸ್ಥಾಪಿಸಿದೆ ಮತ್ತು 20,841 ಮೊಬೈಲ್ ಬ್ರಾಡ್‌ಬ್ಯಾಂಡ್ ಸ್ಟೇಷನ್ ನಿರ್ಮಿಸಿದೆ. 44,104 ಕಿ.ಮೀ ಉದ್ದದ ಫೈಬರ್ ಅಳವಡಿಕೆ ಮಾಡಿದೆ. ಕಂಪನಿಯ ನಿವ್ವಳ ಸಾಲವು ಶೇ 5ರಷ್ಟು ಕಡಿಮೆಯಾಗಿದ್ದು, ₹1,94,713 ಕೋಟಿಗೆ ಇಳಿದಿದೆ.

ಬ್ಯಾಂಕ್ ಆಫ್ ಬರೋಡಾ ಲಾಭ ₹4,809 ಕೋಟಿ

ಬೆಂಗಳೂರು: ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಆಫ್ ಬರೋಡಾ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ₹4,809 ಕೋಟಿ ಲಾಭ ಗಳಿಸಿದೆ. ಇದು ಹಿಂದಿನ ತ್ರೈಮಾಸಿಕಕ್ಕೆ (ಏಪ್ರಿಲ್-ಜೂನ್) ಹೋಲಿಸಿದರೆ ಶೇಕಡ 5.9ರಷ್ಟು ಹೆಚ್ಚು.

ಪ್ರಸಕ್ತ ಹಣಕಾಸು ವರ್ಷದ ಪ್ರಥಮಾರ್ಧದಲ್ಲಿ ಬ್ಯಾಂಕ್‌ನ ನಿವ್ವಳ ಲಾಭವು ₹9,351 ಕೋಟಿ ಆಗಿದೆ. ಬ್ಯಾಂಕ್‌ನ ಕಾರ್ಯಾಚರಣೆ ಲಾಭವು ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ₹7,576 ಕೋಟಿ ಆಗಿದೆ ಹಾಗೂ ಹಣಕಾಸು ವರ್ಷದ ಪ್ರಥಮಾರ್ಧದಲ್ಲಿ ₹15,812 ಕೋಟಿ ಆಗಿದೆ.

ಬ್ಯಾಂಕ್‌ನ ನಿವ್ವಳ ಬಡ್ಡಿ ವರಮಾನವು ₹11,954 ಕೋಟಿ ಆಗಿದ್ದು, ಜೂನ್ ತ್ರೈಮಾಸಿಕಕ್ಕೆ ಹೋಲಿಸಿದರೆ ಇದು ಶೇ 4.5ರಷ್ಟು ಹೆಚ್ಚಾಗಿದೆ. ಹಣಕಾಸು ವರ್ಷದ ಪ್ರಥಮಾರ್ಧದಲ್ಲಿ ಇದು ₹23,388 ಕೋಟಿ ಆಗಿದೆ. ಬ್ಯಾಂಕ್‌ನ ಒಟ್ಟು ಎನ್‌ಪಿಎ ಪ್ರಮಾಣವು ಶೇ 0.34ರಷ್ಟು ಕಡಿಮೆ ಆಗಿದ್ದು, ಶೇ 2.16ಕ್ಕೆ ತಲುಪಿದೆ ಎಂದು ಪ್ರಕಟಣೆ ತಿಳಿಸಿದೆ.

ಮುಂಬೈ ಧಾರಣೆ (ಶೇಂಗಾ)
03-11-2025

ಜಾವಾ 70/80(ಹೊಸ)	10300-10400
ಜಾವಾ 80/90(ಹೊಸ)	9600-9700
ದಪ್ಪ ಮಧ್ಯಪ್ರದೇಶ (ಹೊಸ)	7500-7600
ದಪ್ಪ ಗುಜರಾತ್ (ಹೊಸ)	8400-8500
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1410 (1420)
ಒಂದು ವಾರದ ಡೆಲಿವರಿ	1405 (1415)
ಪಾಮ್ ವಾರದ ಡೆಲಿವರಿ	1258 (1258)
ಸೂರ್ಯಕಾಂತಿ ಎಣ್ಣೆ ಕಚ್ಚಾ	1410 (1405)
ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,20,700 (1,20,400)
ಬೆಳ್ಳಿ ಕೆ.ಜಿಗೆ	1,49,100 (1,48,500)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ರಾಮನಗರ ರೇಷ್ಮೆಗೂಡು

ಮಿಶ್ರತಳಿ(ಸಿ.ಬಿ)	₹366-653
ದ್ವಿತಳಿ (ಬಿ.ವಿ)	₹439-767

ಬಿಲ್ ಮೊತ್ತ ಪಾವತಿಗೆ ಕ್ರಮ ತೆಗೆದುಕೊಳ್ಳುವಂತೆ ಸೂಚನೆ

ಬಿಎಸ್‌ಎನ್‌ಎಲ್‌ಗೆ ₹44.18 ಕೋಟಿ ಬಾಕಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರದ ವಿವಿಧ ಇಲಾಖೆಗಳು ಕೇಂದ್ರ ಸರ್ಕಾರ ಸ್ವಾಮ್ಯದ ಭಾರತ್ ಸಂಚಾರ್ ನಿಗಮಕ್ಕೆ (ಬಿಎಸ್‌ಎನ್‌ಎಲ್) ಒಟ್ಟು ₹44.18 ಕೋಟಿ ಮೊತ್ತದ ಬಿಲ್ ಪಾವತಿಸಲು ಉಳಿಸಿಕೊಂಡಿವೆ.

ಈ ಪೈಕಿ, ಗೃಹ ಇಲಾಖೆಯು ಅತೀ ಹೆಚ್ಚು ಅಂದರೆ, ₹15.89 ಕೋಟಿ ಪಾವತಿಸಲು ಬಾಕಿ ಇದೆ. ಉಳಿದಂತೆ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ (ಡಿಪಿಎಆರ್) ಸೆಂಟರ್ ಫಾರ್ ಇ- ಗವರ್ನೆನ್ಸ್ ₹4.25 ಕೋಟಿ, ಗ್ರಾಮೀಣಾಭಿವೃದ್ಧಿ ಇಲಾಖೆ (ಗ್ರಾಮ ಪಂಚಾಯತ್) ₹3.50 ಕೋಟಿ, ಕಿಯೋನಿಕ್ಸ್ ₹2 ಕೋಟಿ ಪಾವತಿಸಬೇಕಿದೆ.

ಬಿಲ್ ಬಾಕಿ ಮೊತ್ತವನ್ನು ತಕ್ಷಣ ಪಾವತಿಸುವಂತೆ ಸಂಬಂಧಿಸಿದ ಇಲಾಖೆಗಳಿಗೆ ಸೂಕ್ತ ನಿರ್ದೇಶನ ನೀಡಬೇಕು ಎಂದು ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರಿಗೆ ಕೇಂದ್ರ ಸರ್ಕಾರದ ದೂರ ಸಂಪರ್ಕ ಇಲಾಖೆಯ ಕಾರ್ಯದರ್ಶಿ ನೀರಜ್ ಮಿತ್ತಲ್ ಅವರು ಆಗಸ್ಟ್ 29ರಂದು ಎರಡನೇ ಬಾರಿಗೆ ಪತ್ರ ಬರೆದಿದ್ದಾರೆ.

ಬಿಲ್ ಮೊತ್ತ ಬಾಕಿ ಉಳಿಸಿಕೊಂಡಿರುವ ಇಲಾಖೆಗಳ ಮುಖ್ಯಸ್ಥರು ಹಾಗೂ ವಿಧಾನಸೌಧ, ವಿಕಾಸಸೌಧ ಮತ್ತು ಬಹುಮಹಡಿ ಕಟ್ಟಡಗಳ ಕಾರ್ಯದರ್ಶಿಗಳಿಗೆ ಮಿತ್ತಲ್ ಅವರು ಬರೆದಿರುವ ಈ ಪತ್ರದ ಸಹಿತ ಸೂಚನೆ ನೀಡಿರುವ ಡಿಪಿಎಆರ್, ಬಾಕಿ ಬಿಲ್ ಪಾವತಿಸಲು ಕ್ರಮ ತೆಗೆದುಕೊಳ್ಳಬೇಕು ಎಂದು ಸೂಚಿಸಿದೆ.

ಈ ಪತ್ರಕ್ಕೂ ಮೊದಲು ಇದೇ ಮೇ 14ರಂದು ಮುಖ್ಯ ಕಾರ್ಯದರ್ಶಿಗೆ ಪತ್ರ ಬರೆದಿದ್ದ ಮಿತ್ತಲ್, 2025ರ ಮಾರ್ಚ್ 31ರವರೆಗೆ ವಿವಿಧ ಇಲಾಖೆಗಳು ₹69.36 ಕೋಟಿ ಮೊತ್ತದ ಬಿಲ್ ಬಾಕಿ ಉಳಿಸಿಕೊಂಡಿರುವ ಮಾಹಿತಿ ನೀಡಿದ್ದರು. ಬಿಎಸ್‌ಎನ್‌ಎಲ್‌ನ ಆರ್ಥಿಕ ಪರಿಸ್ಥಿತಿಯನ್ನು ಈ ಪತ್ರದಲ್ಲಿ ವಿವರಿಸಿದ್ದ ಅವರು, ಬಾಕಿ ಬಿಲ್ ಮೊತ್ತವನ್ನು ಇಲಾಖೆಗಳು ಪಾವತಿಸಲು ಕ್ರಮ ತೆಗೆದುಕೊಳ್ಳಬೇಕು ಎಂದು ಮನವಿ ಮಾಡಿದ್ದರು. ಆ ಪತ್ರವನ್ನು ಉಲ್ಲೇಖಿಸಿ ಡಿಪಿಎಆರ್ ಜೂನ್ 12ರಂದು ನೀಡಿದ್ದ ಸೂಚನೆಗೆ ಸ್ಪಂದಿಸಿದ್ದ ಕೆಲವು ಇಲಾಖೆಗಳು ಬಿಲ್ ಮೊತ್ತವನ್ನು ಪಾವತಿಸಿದ್ದವು.

₹ 1 ಕೋಟಿಗೂ ಹೆಚ್ಚು ಉಳಿಸಿಕೊಂಡಿರುವ ಇಲಾಖೆಗಳು

ಇಲಾಖೆ	ಮೊತ್ತ (₹ ಕೋಟಿಗಳಲ್ಲಿ)
ಗ್ರಾಮೀಣಾಭಿವೃದ್ಧಿ (ಗ್ರಾಮೀಣ ಫೈಬರ್ ಯೋಜನೆ)	3.61
ಆರ್ಥಿಕ (ಕಂದಾಯ)	1.97
ಗೃಹ	15.89
ಐಟಿಬಿಟಿ (ಕಿಯೋನಿಕ್ಸ್)	2.00
ಆರ್‌ಡಿಪಿಆರ್ (ಗ್ರಾ.ಪಂ)	3.50
ಡಿಪಿಎಆರ್ (ಇ-ಆಡಳಿತ)	4.25
ಬಿಬಿಎಂಪಿ	1.24
ಕೃಷಿ	1.44

ತಯಾರಿಕಾ ಚಟುವಟಿಕೆ ಏರಿಕೆ

ನವದೆಹಲಿ (ಪಿಟಿಐ): ದೇಶದ ತಯಾರಿಕಾ ವಲಯದ ಚಟುವಟಿಕೆ ಅಕ್ಟೋಬರ್ ತಿಂಗಳಿನಲ್ಲಿ ಏರಿಕೆಯಾಗಿದೆ ಎಂದು ಎಸ್ ಆ್ಯಂಡ್ ಪಿ ಗ್ಲೋಬಲ್ ಸಂಸ್ಥೆಯ ಮಾಸಿಕ ಸಮೀಕ್ಷಾ ವರದಿ ಸೋಮವಾರ ತಿಳಿಸಿದೆ.

ಎಸ್ ಆ್ಯಂಡ್ ಪಿ ಗ್ಲೋಬಲ್ ಸಂಸ್ಥೆಯು ನಿರ್ವಹಿಸುವ 'ಎಚ್‌ಎಸ್‌ಬಿಸಿ ಇಂಡಿಯಾ ಮ್ಯಾನುಫ್ಯಾಕ್ಚರಿಂಗ್ ಪರ್ಚೇಸಿಂಗ್ ಮ್ಯಾನೇಜರ್ಸ್ ಸೂಚ್ಯಂಕ'ವು ಸೆಪ್ಟೆಂಬರ್ ತಿಂಗಳಲ್ಲಿ 57.7 ದಾಖಲಾಗಿತ್ತು. ಇದು ಅಕ್ಟೋಬರ್‌ನಲ್ಲಿ 59.2ಕ್ಕೆ ಏರಿಕೆಯಾಗಿದೆ.

ಪಿಎಂಐ ಸೂಚ್ಯಂಕವು 50ಕ್ಕಿಂತ ಹೆಚ್ಚಿನ ಮಟ್ಟದಲ್ಲಿ ಇದ್ದರೆ ಅದನ್ನು ಬೆಳವಣಿಗೆ ಎಂದು ಗುರುತಿಸಲಾಗುತ್ತದೆ.

ಜಿಎಸ್‌ಟಿ ಇಳಿಕೆಯಿಂದ ಖರೀದಿ ಹೆಚ್ಚಳವಾಯಿತು. ದೇಶೀಯ ಮಾರುಕಟ್ಟೆಯಲ್ಲಿ ಸರಕುಗಳಿಗೆ ಹೆಚ್ಚಿದ ಬೇಡಿಕೆ ಮತ್ತು ಹೊಸ ರಫ್ತು ಕಾರ್ಯಾದೇಶದಿಂದ ಸೂಚ್ಯಂಕವು ಏರಿಕೆ ಕಂಡಿದೆ ಎಂದು ತಿಳಿಸಿದೆ. ಜೊತೆಗೆ ತಂತ್ರಜ್ಞಾನ ಕಂಪನಿಗಳು ಹೂಡಿಕೆ ಪ್ರಮಾಣವನ್ನು ಹೆಚ್ಚಿಸಿದ್ದು ಸಹ ಸೂಚ್ಯಂಕಗಳ ಏರಿಕೆಗೆ ಕಾರಣವಾಗಿದೆ ಎಂದು ತಿಳಿಸಿದೆ.

ಆದರೆ, ಇದೇ ಅವಧಿಯಲ್ಲಿ ಅಂತರ-ರಾಷ್ಟ್ರೀಯ ಮಾರುಕಟ್ಟೆಯಲ್ಲಿ ಮಾರಾಟ ಮಂದಗೊಂಡಿದೆ ಎಂದು ಹೇಳಿದೆ.

'ಅಕ್ಟೋಬರ್‌ನಲ್ಲಿ ತಯಾರಿಕಾ ವಲಯದ ಉತ್ಪಾದನೆ ಏರಿಕೆಯಾಗಿದೆ. ಹೊಸ ಕಾರ್ಯಾದೇಶ ಮತ್ತು ಉದ್ಯೋಗ ಸೃಷ್ಟಿ ಹೆಚ್ಚಳವಾಗಿದೆ' ಎಂದು ಎಚ್‌ಎಸ್‌ಬಿಸಿ ಇಂಡಿಯಾದ ಮುಖ್ಯ ಅರ್ಥಶಾಸ್ತ್ರಜ್ಞೆ ಪ್ರಾಂಜುಲ್ ಭಂಡಾರಿ ಹೇಳಿದ್ದಾರೆ.

ಅಡಿಕೆ ಧಾರಣೆ

ಮಾರುಕಟ್ಟೆ	ತಳಿ	ಧಾರಣೆ
ಚಿತ್ರದುರ್ಗ	ಆಪಿ	55442-55892
	ಬೆಟ್ಟೆ	38029-38459
	ಕೆಂಪುಗೋಟು	30000-30400
	ರಾಶಿ	54939-55389
ಕುಮಟಾ	ಹಳೆಚಾಲಿ	42739-45300
ಪುತ್ತೂರು	ಕೋಕ	20000-31500
ಸಾಗರ	ಬಿಳಿಗೋಟು	22066-34889
	ಚಾಲಿ	31899-43699
	ಕೋಕ	10199-34470
	ಕೆಂಪುಗೋಟು	28999-36299
	ರಾಶಿ	40599-60910
	ಸಿಪ್ಪೆಗೋಟು	8099-24185
ಶಿವಮೊಗ್ಗ	ಬೆಟ್ಟೆ	56369-56369
	ಗೊರಬಲು	19000-39100
	ಹೊಸತು	46869-61389
	ರಾಶಿ	46099-61505
	ಸರಕು	54699-90896
ಸಿದ್ದಾಪುರ	ಬಿಳಿಗೋಟು	26999-36500
	ಚಾಲಿ	41000-48499
	ಕೋಕ	24111-32299
	ಕೆಂಪುಗೋಟು	28089-36199
	ರಾಶಿ	46599-57099
	ತಟ್ಟಿಬೆಟ್ಟೆ	32899-44599
ಶಿರಸಿ	ಬೆಟ್ಟೆ	39689-49899
	ಬಿಳಿಗೋಟು	26199-39299
	ಚಾಲಿ	43510-49561
	ಕೆಂಪುಗೋಟು	13169-27889
	ರಾಶಿ	52292-59588
ಯಲ್ಲಾಪುರ	ಬಿಳಿಗೋಟು	22012-34900
	ಚಾಲಿ	36699-49999
	ಕೋಕ	11012-30969
	ಕೆಂಪುಗೋಟು	27609-38699
	ರಾಶಿ	56900-63261
	ತಟ್ಟಿಬೆಟ್ಟೆ	46599-48669

ಡಿಜಿಟಲ್ ಅರೆಸ್ಟ್ ವಿರುದ್ಧ ಕಠಿಣ ಕಾನೂನು: ಸುಪ್ರೀಂ

ಒಂದನೇ ಪುಟದಿಂದ...

ಅಲ್ಲದೇ 'ಭಾರತವೊಂದರಲ್ಲಿಯೇ ಇಷ್ಟು ದೊಡ್ಡ ಮಟ್ಟದಲ್ಲಿ ಪ್ರಕರಣಗಳು ವರದಿಯಾಗುತ್ತಿವೆ ಎಂದರೆ, ವಿದೇಶಗಳಲ್ಲಿ ದಾಖಲಾಗುವ ಪ್ರಕರಣಗಳ ಸಂಖ್ಯೆ ಏನಿರಬಹುದು' ಎಂದು ನ್ಯಾ. ಸೂರ್ಯಕಾಂತ್ ದಿಗ್ಭ್ರಮೆ ವ್ಯಕ್ತಪಡಿಸಿದರು.

ಅಮಿಕಸ್ ಕ್ಯೂರಿ ನೇಮಕ: ಸೈಬರ್ ಅಪರಾಧ, ಪ್ರಮುಖವಾಗಿ 'ಡಿಜಿಟಲ್ ಅರೆಸ್ಟ್' ಹೆಸರಿನ ವಂಚನೆ ನಿಯಂತ್ರಣ ಕುರಿತು ನ್ಯಾಯಾಲಯಕ್ಕೆ ಸಲಹೆ ಮತ್ತು ಸಹಕಾರ ನೀಡಲು ಅಮಿಕಸ್ ಕ್ಯೂರಿಯನ್ನು ನೇಮಿಸಲಾಗುವುದು ಎಂದು ಪೀಠ ಹೇಳಿತು. ಹಿರಿಯ ವಕೀಲೆ, ಸೈಬರ್ ಕಾನೂನು ತಜ್ಞೆ ಎನ್.ಎಸ್. ನಪ್ಪಿನಾಯ್ ಅವರನ್ನು ಅಮಿಕಸ್ ಕ್ಯೂರಿಯನ್ನಾಗಿ ನೇಮಿಸಿತು. ಸೈಬರ್ ಅಪರಾಧಗಳಿಗೆ ಸಂಬಂಧಿಸಿ ಕಾನೂನುಗಳ ಬಗ್ಗೆ ಮಾಹಿತಿ ನೀಡುವ 'ಸೈಬರ್ ಸಾಥಿ' ಎಂಬ ವೆಬ್‌ಸೈಟ್ ಅನ್ನೂ ಇವರು ಸ್ಥಾಪಿಸಿದ್ದಾರೆ.

'ಕೇಂದ್ರ ಗೃಹ ಸಚಿವಾಲಯದಲ್ಲಿ ಪ್ರತ್ಯೇಕ ತಂಡವೊಂದು ಸೈಬರ್ ಅಪರಾಧಗಳಿಗೆ ಸಂಬಂಧಿಸಿ ಕೆಲಸ ಮಾಡುತ್ತಿದೆ, ಬೇಕಾದ ಕ್ರಮಗಳನ್ನೂ ಕೈಗೊಂಡಿದೆ' ಎಂದು ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಪೀಠಕ್ಕೆ ತಿಳಿಸಿದರು. ಅಮಿಕಸ್ ಕ್ಯೂರಿ ಅವರಿಂದ ಸಲಹೆ ಪಡೆದ ಬಳಿಕ ಕೆಲವು ಮಾರ್ಗ-ಸೂಚಿಗಳನ್ನು ನೀಡುವುದಾಗಿ ಹೇಳಿದ ಪೀಠವು, ಮುಂದಿನ ವಿಚಾರಣೆಯನ್ನು ನ.10ಕ್ಕೆ ಮುಂದೂಡಿತು.

ಅಫ್ಗಾನಿಸ್ತಾನದಲ್ಲಿ ಭೂಕಂಪ: 20 ಸಾವು

ಕಾಬೂಲ್ (ಎಪಿ): ಉತ್ತರ ಅಫ್ಗಾನಿಸ್ತಾನದಲ್ಲಿ 6.3 ತೀವ್ರತೆಯಲ್ಲಿ ಭೂಕಂಪ ಸಂಭವಿಸಿದ್ದು, ಕನಿಷ್ಠ 20 ಮಂದಿ ಮೃತಪಟ್ಟಿದ್ದಾರೆ ಮತ್ತು 300ಕ್ಕೂ ಹೆಚ್ಚು ಜನರಿಗೆ ಗಾಯಗಳಾಗಿವೆ ಎಂದು ಆರೋಗ್ಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಖುಲ್ಮ್ ನಗರದ ಪಶ್ಚಿಮ ನೈಋತ್ಯದಿಂದ 22 ಕಿ.ಮೀ. ದೂರದಲ್ಲಿ ಭೂಕಂಪನ ಕೇಂದ್ರ ಬಿಂದು ಪತ್ತೆಯಾಗಿದೆ ಎಂದು ಅಮೆರಿಕ ಭೂವೈಜ್ಞಾನಿಕ ಸಮೀಕ್ಷೆ ತಿಳಿಸಿದೆ.

ಗಾಯಗೊಂಡವರಲ್ಲಿ ಹೆಚ್ಚಿನವರಿಗೆ ಸಣ್ಣ ಪ್ರಮಾಣದಲ್ಲಿ ಗಾಯಗಳಾಗಿದ್ದು, ಪ್ರಾಥಮಿಕ ಚಿಕಿತ್ಸೆ ನೀಡಿ ಆಸ್ಪತ್ರೆಯಿಂದ ಬಿಡುಗಡೆ ಮಾಡಲಾಗಿದೆ ಎಂದು ಅಫ್ಗಾನಿಸ್ತಾನ ವಿಪತ್ತು ನಿರ್ವಹಣಾ ಏಜೆನ್ಸಿ ವಕ್ತಾರ ಯೂಸುಫ್ ಹಮದ್ ತಿಳಿಸಿದ್ದಾರೆ.

ಅಣ್ವಸ್ತ್ರ ಪರೀಕ್ಷೆ: ಟ್ರಂಪ್ ಸಮರ್ಥನೆ

ಅಣ್ವಸ್ತ್ರಗಳ ವಿಶ್ವಾಸಾರ್ಹತೆ ಖಚಿತಪಡಿಸಿಕೊಳ್ಳುವ ಅಗತ್ಯವಿದೆ

ಡೊನಾಲ್ಡ್ ಟ್ರಂಪ್

ವಾಷಿಂಗ್ಟನ್ (ಪಿಟಿಐ): 'ಅಣ್ವಸ್ತ್ರಗಳನ್ನು ಪರೀಕ್ಷಿಸುತ್ತಿರುವ ದೇಶಗಳಲ್ಲಿ ಪಾಕಿಸ್ತಾನ ಮತ್ತು ಚೀನಾ ಸೇರಿವೆ' ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ.

ಮೂರು ದಶಕಗಳ ನಂತರ ಅಮೆರಿಕದ ಸ್ವಂತ ಅಣ್ವಸ್ತ್ರಗಳ ಪರೀಕ್ಷೆಯನ್ನು ಪುನರಾರಂಭಿಸುವ ತಮ್ಮ ಆಡಳಿತದ ಯೋಜನೆಗಳನ್ನು ಸಮರ್ಥಿಸಿಕೊಳ್ಳುವ ಭಾಗವಾಗಿ ಟ್ರಂಪ್ ಈ ಹೇಳಿಕೆ ನೀಡಿದ್ದಾರೆ ಎನ್ನಲಾಗಿದೆ.

ಕಳೆದ ವಾರ ಚೀನಾ ಅಧ್ಯಕ್ಷ ಷಿ ಜಿನ್‌ಪಿಂಗ್ ಅವರೊಂದಿಗಿನ ಭೇಟಿಗೂ ಮುನ್ನ ಟ್ರಂಪ್ ಅವರು, ಅಮೆರಿಕವು ಪ್ರತಿಸ್ಪರ್ಧಿ ಶಕ್ತಿಗಳೊಂದಿಗೆ ಸರಿಸಮವಾಗಿ ಅಣ್ವಸ್ತ್ರಗಳ ಪರೀಕ್ಷೆ ಆರಂಭಿಸುವುದಾಗಿ ಘೋಷಿಸಿದ್ದರು.

ಭಾನುವಾರ 'ಸಿಬಿಎಸ್ ನ್ಯೂಸ್'ಗೆ ನೀಡಿದ ಸಂದರ್ಶನದಲ್ಲಿ ಟ್ರಂಪ್ ಅವರು, ರಷ್ಯಾ, ಚೀನಾ, ಉತ್ತರ ಕೊರಿಯಾ ಮತ್ತು ಪಾಕಿಸ್ತಾನ ಪರಮಾಣು ಶಸ್ತ್ರಾಸ್ತ್ರಗಳನ್ನು ಪರೀಕ್ಷಿಸುವ ದೇಶಗಳೆಂದು ಹೆಸರಿಸಿದರು.

'ರಷ್ಯಾ, ಚೀನಾ ಪರೀಕ್ಷೆ ನಡೆಸುತ್ತಿವೆ. ಆದರೆ, ಅವರು ಅದರ ಬಗ್ಗೆ ಮಾತನಾಡುವುದಿಲ್ಲ. ಉತ್ತರ ಕೊರಿಯಾ, ಪಾಕಿಸ್ತಾನ ಪರೀಕ್ಷೆ ನಡೆಸುತ್ತಿರುವುದು ನಿಸ್ಸಂಶಯ' ಎಂದು ಟ್ರಂಪ್ ಹೇಳಿದರು.

'ನಾವೂ ಪರಮಾಣು ಶಸ್ತ್ರಾಸ್ತ್ರಗಳನ್ನು ಪರೀಕ್ಷಿಸಬೇಕು. ಶಸ್ತ್ರಾಸ್ತ್ರಗಳ ವಿಶ್ವಾಸಾರ್ಹತೆ ಯನ್ನು ಖಚಿತಪಡಿಸಿಕೊಳ್ಳಲು ಇಂತಹ ಪರೀಕ್ಷೆ ಅಗತ್ಯ' ಎಂದು ಟ್ರಂಪ್ ಹೇಳಿದರು.

ಅಮೆರಿಕದ ಮಾಧ್ಯಮ ವರದಿಗಳ ಪ್ರಕಾರ, 'ಅಮೆರಿಕ ಸೇನೆಯು ಪರಮಾಣು ಸಿಡಿತಲೆಯನ್ನು ಹೊತ್ತೊಯ್ಯುವ ಸಾಮರ್ಥ್ಯವಿರುವ ತನ್ನ ಕ್ಷಿಪಣಿಗಳನ್ನು ನಿಯಮಿತವಾಗಿ ಪರೀಕ್ಷಿಸುತ್ತದೆ. ಆದರೆ, 1992ರಿಂದ ಶಸ್ತ್ರಾಸ್ತ್ರಗಳನ್ನು ಸ್ಫೋಟಿಸಿಲ್ಲ.

ರಷ್ಯಾ ಪೋಸಿಡಾನ್ ಪರಮಾಣು ಸಾಮರ್ಥ್ಯದ ಸೂಪರ್ ಟಾರ್ಪಿಡೊವನ್ನು ಪರೀಕ್ಷಿಸಿದೆ ಎಂದು ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಕಳೆದ ವಾರ ಹೇಳಿದ್ದರು.

ಭಾರತ-ಪಾಕ್ ಸಂಘರ್ಷ ನಿಲ್ಲಿಸಿದೆ: 'ಮೇ ತಿಂಗಳಲ್ಲಿ ಭಾರತ ಮತ್ತು ಪಾಕಿಸ್ತಾನ ನಡುವಿನ ಸಂಘರ್ಷ ಸೇರಿದಂತೆ ಏಳು ಯುದ್ಧಗಳನ್ನು ನಿಲ್ಲಿಸಿದ ಕೀರ್ತಿ ನನಗೆ ಸಲ್ಲುತ್ತದೆ' ಎಂದು ಟ್ರಂಪ್ ಮತ್ತೊಮ್ಮೆ ಹೇಳಿದರು.

'ಈ ಮಧ್ಯೆ, ನಾನು ಎಂಟು ಯುದ್ಧಗಳನ್ನು ಪರಿಹರಿಸಿದ್ದೇನೆ. ಎಂಟು ಯುದ್ಧಗಳು ನಡೆಯುವುದನ್ನು ತಪ್ಪಿಸಿದ್ದೇನೆ' ಎಂದರು.

'ನಾನು ಇನ್ನೂ ಪರಿಹರಿಸಲಾಗದ ಏಕೈಕ ಯುದ್ಧವೆಂದರೆ ರಷ್ಯಾ-ಉಕ್ರೇನ್ ಯುದ್ಧ. ಆದರೆ, ಅದನ್ನೂ ನಿಲ್ಲಿಸಲಿದ್ದೇನೆ' ಎಂದು ಹೇಳಿದರು.

ಮೂವರು ಸೈನಿಕರ ಮೃತದೇಹ ಹಸ್ತಾಂತರ

ಜರುಸಲೇಂ (ಎಪಿ): ಹಮಾಸ್ ಬಂಡುಕೋರರು 2023ರ ಅಕ್ಟೋಬರ್ 7ರಂದು ನಡೆಸಿದ ಹಠಾತ್ ದಾಳಿಯಲ್ಲಿ ಹತ್ಯೆಗೈದಿದ್ದ ಮೂವರು ಸೈನಿಕರ ಮೃತ ದೇಹವನ್ನು ಭಾನುವಾರ ರಾತ್ರಿ ಹಸ್ತಾಂತ ರಿಸಿದರು ಎಂದು ಇಸ್ರೇಲ್ ತಿಳಿಸಿದೆ.

ದಾಳಿ ಸಂದರ್ಭದಲ್ಲಿ ದಕ್ಷಿಣ ಇಸ್ರೇಲ್‌ನಲ್ಲಿ ಸೈನಿಕರನ್ನು ಹತ್ಯೆ ಮಾಡಿ ಮೃತದೇಹಗಳನ್ನು ಗಾಜಾಕ್ಕೆ ಕೊಂಡೊಯ್ದಿದ್ದರು. ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರ ಕಚೇರಿಯು ಮೃತರನ್ನು ಗುರುತಿಸಿದೆ ಎಂದು ಇಸ್ರೇಲ್ ಸೇನೆಯು ತಿಳಿಸಿದೆ.

ದಕ್ಷಿಣ ಗಾಜಾದ ಸುರಂಗದಲ್ಲಿ ಇವರ ಮೃತದೇಹಗಳು ಪತ್ತೆಯಾಗಿವೆ ಎಂದು ಹಮಾಸ್ ಇದಕ್ಕೂ ಮುನ್ನ ಹೇಳಿಕೆಯಲ್ಲಿ ತಿಳಿಸಿತ್ತು.

ಅಕ್ಟೋಬರ್ 10ರಂದು ಕದನ ವಿರಾಮ ಒಪ್ಪಂದ ಏರ್ಪಟ್ಟ ಬಳಿಕ ಹಮಾಸ್ ಬಂಡುಕೋರರು 20 ಒತ್ತೆಯಾಳುಗಳ ಮೃತದೇಹಗಳನ್ನು ಹಸ್ತಾಂತರಿಸಿದ್ದಾರೆ. ಈ ಪೈಕಿ ಎಂಟು ಮೃತದೇಹಗಳು ಗಾಜಾದಲ್ಲಿಯೇ ಇವೆ.

₹7,545 ಕೋಟಿ ಮೌಲ್ಯದ ಅನಿಲ್ ಅಂಬಾನಿ ಆಸ್ತಿ ಜಪ್ತಿ

ಒಂದನೇ ಪುಟದಿಂದ...

ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆಯಡಿ (ಪಿಎಂಎಲ್‌ಎ) ಅನಿಲ್ ಅಂಬಾನಿ ಅವರಿಗೆ ಸೇರಿದ 44 ಆಸ್ತಿಗಳನ್ನು ಜಪ್ತಿ ಮಾಡುವುದಕ್ಕೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯವು ಅಕ್ಟೋಬರ್ 31ರಂದು ನಾಲ್ಕು ಆದೇಶಗಳನ್ನು ಹೊರಡಿಸಿತ್ತು.

ಮುಂಬೈನ ಪಾಲಿ ಹಿಲ್‌ನಲ್ಲಿರುವ ಅಂಬಾನಿ ಅವರ ಕುಟುಂಬದ ಮನೆ ಸೇರಿದಂತೆ ಅವರ ಕಂಪನಿಗಳ ಇತರ ವಸತಿ ಮತ್ತು ವಾಣಿಜ್ಯ ಆಸ್ತಿಗಳನ್ನು ಜಪ್ತಿ ಮಾಡಲಾಗಿದೆ.

ದೆಹಲಿಯ ಮಹಾರಾಜಾ ರಂಜಿತ್ ಸಿಂಗ್ ಮಾರ್ಗದಲ್ಲಿರುವ ರಿಲಯನ್ಸ್ ಸೆಂಟರ್‌ಗೆ ಸೇರಿದ ಜಮೀನು ಮತ್ತು ರಿಲಯನ್ಸ್ ಇನ್‌ಫ್ರಾಸ್ಟ್ರಕ್ಚರ್ ಲಿಮಿಟೆಡ್‌ನ ಇತರ ಆಸ್ತಿಗಳು ಇದರಲ್ಲಿ ಸೇರಿವೆ. ರಾಷ್ಟ್ರದ ರಾಜಧಾನಿ ಅಲ್ಲದೆ ನೊಯಿಡಾ, ಗಾಜಿಯಾಬಾದ್, ಮುಂಬೈ, ಪುಣೆ, ಠಾಣೆ, ಹೈದರಾಬಾದ್, ಚೆನ್ನೈ ಮತ್ತು ಪೂರ್ವ ಗೋದಾವರಿಯಲ್ಲಿರುವ ಆಸ್ತಿಗಳನ್ನೂ ಜಪ್ತಿ ಮಾಡಲಾಗಿದೆ ಎಂದು ಇ.ಡಿ ಪ್ರಕಟಣೆ ತಿಳಿಸಿದೆ.

ರಿಲಯನ್ಸ್ ಹೋಮ್ ಫೈನಾನ್ಸ್ ಲಿಮಿಟೆಡ್ (ಆರ್‌ಎಚ್‌ಎಫ್‌ಎಲ್) ಮತ್ತು ರಿಲಯನ್ಸ್ ಕಮರ್ಷಿಯಲ್ ಫೈನಾನ್ಸ್ ಲಿಮಿಟೆಡ್ (ಆರ್‌ಸಿಎಫ್‌ಎಲ್) ಕಂಪನಿಗಳು ಸಾರ್ವಜನಿಕರಿಂದ ಸಂಗ್ರಹಿಸಿದ ಹಣವನ್ನು ಅಕ್ರಮ ವರ್ಗಾವಣೆ ಮಾಡಿರುವುದಕ್ಕೆ ಸಂಬಂಧಿಸಿದ ಪ್ರಕರಣ ಇದಾಗಿದೆ.

ಆಸ್ತಿ ಜಪ್ತಿ ಬಗ್ಗೆ ಅನಿಲ್ ಅಂಬಾನಿ ಅಥವಾ ಅವರ ಕಂಪನಿಯ ಪ್ರತಿನಿಧಿಗಳು ಯಾವುದೇ ಪ್ರತಿಕ್ರಿಯೆ ನೀಡಿಲ್ಲ.

35 ಭಾರತೀಯ ಮೀನುಗಾರರ ಬಂಧನ

ಕೊಲಂಬೊ (ಪಿಟಿಐ): ಅಕ್ರಮವಾಗಿ ಮೀನುಗಾರಿಕೆ ನಡೆಸಿದ ಆರೋಪದಡಿ ಕನಿಷ್ಠ 35 ಭಾರತೀಯ ಮೀನುಗಾರರನ್ನು ಬಂಧಿಸಿದ ಶ್ರೀಲಂಕಾ ನೌಕಾಪಡೆಯು, ನಾಲ್ಕು ಮೀನುಗಾರಿಕಾ ದೋಣಿಗಳನ್ನು ಸೋಮವಾರ ನಸುಕಿನಲ್ಲಿ ವಶಪಡಿಸಿಕೊಂಡಿದೆ.

ಉತ್ತರ ಜಾಫ್ನಾ ಜಿಲ್ಲೆಯ ಕಂಕೆಸಂತುರೈ ಪ್ರದೇಶದ ಸುತ್ತಮುತ್ತಲಿನ ಶ್ರೀಲಂಕಾದ ಜಲಪ್ರದೇಶದಲ್ಲಿ ಬಂಧಿತರು ಮೀನುಗಾರಿಕೆ ನಡೆಸುತ್ತಿದ್ದರು ಎಂದು ನೌಕಾಪಡೆಯ ವಕ್ತಾರ ಕಮಾಂಡರ್ ಬುಡ್ಡಿಕಾ ಸಂಪತ್ ತಿಳಿಸಿದ್ದಾರೆ.

ಬಂಧಿಸಿರುವ ಮೀನುಗಾರರನ್ನು ಮತ್ತು ಅವರಿಂದ ವಶಪಡಿಸಿಕೊಂಡ ಉಪಕರಣಗಳನ್ನು ಮುಂದಿನ ಕ್ರಮಕ್ಕಾಗಿ ಮೀನುಗಾರಿಕೆ ತನಿಖಾಧಿಕಾರಿಗಳಿಗೆ ಹಸ್ತಾಂತರಿಸಲಾಗುವುದು ಎಂದು ನೌಕಾಪಡೆ ತಿಳಿಸಿದೆ.

ಅ. 9ರಂದು 47 ಭಾರತೀಯ ಮೀನುಗಾರರನ್ನು ಬಂಧಿಸಿದ್ದ ಶ್ರೀಲಂಕಾ ನೌಕಾಪಡೆಯು, ಐದು ಮೀನುಗಾರಿಕಾ ದೋಣಿಗಳನ್ನು ವಶಪಡಿಸಿಕೊಂಡಿತ್ತು.

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹28100-28100
ದಾವಣಗೆರೆ	₹15000-16850
ತಿಪಟೂರು	₹27000-28580
ತುರುವೇಕೆರೆ	₹27000-28500

ಸುದ್ದಿ ವೈವಿಧ್ಯಕ್ಕೆ prajavani.netಗೆ ಭೇಟಿ ಮಾಡಿ

ಆರೋಪ ಸಾಬೀತಾದರೆ ಅದಾನಿ ಜೊತೆಗಿನ ಒಪ್ಪಂದ ರದ್ದು: ಬಾಂಗ್ಲಾ

ಢಾಕಾ (ಪಿಟಿಐ): ಯಾವುದೇ ರೀತಿ ಅಕ್ರಮ ಮತ್ತು ಭ್ರಷ್ಟಾಚಾರ ಸಾಬೀತಾದರೆ ಭಾರತದ ಅದಾನಿ ಸಮೂಹದೊಂದಿಗಿನ ವಿದ್ಯುತ್ ಒಪ್ಪಂದವನ್ನು ರದ್ದುಗೊಳಿಸುವುದಾಗಿ ಬಾಂಗ್ಲಾದೇಶದ ಮಧ್ಯಂತರ ಸರ್ಕಾರ ಹೇಳಿದೆ.

'ಒಪ್ಪಂದದಲ್ಲಿ ಯಾವುದೇ ಭ್ರಷ್ಟಾ ಚಾರ ನಡೆದಿಲ್ಲ ಎಂದು ಹೇಳಲಾಗುತ್ತಿದೆ. ಆದರೆ ಭ್ರಷ್ಟಾಚಾರ ನಡೆದಿರುವುದು ಸಾಬೀತಾದರೆ ಒಪ್ಪಂದವೇ ರದ್ದುಗೊಳ್ಳುವ ಸಾಧ್ಯತೆಗಳಿವೆ' ಎಂದು ಬಾಂಗ್ಲಾದ ಇಂಧನ ವ್ಯವಹಾರಗಳ ಸಲಹೆ ಗಾರ ಮೊಹಮ್ಮದ್ ಫೌಝುಲ್ ಕಬೀರ್ ಸ್ಥಳೀಯ ಮಾಧ್ಯಮಗಳಿಗೆ ತಿಳಿಸಿದ್ದಾರೆ.

ಹಸೀನಾ ಆಡಳಿತದಲ್ಲಿ ನಡೆದಿರುವ ವಿದ್ಯುತ್ ಒಪ್ಪಂದಗಳ ಬಗ್ಗೆ ಪರಿಶೀಲನೆ ನಡೆಸಿರುವ ರಾಷ್ಟ್ರೀಯ ಪರಿಶೀಲನಾ ಸಮಿತಿ ಸಲ್ಲಿಸಿರುವ ಮಧ್ಯಂತರ ವರದಿಯ ಬಗ್ಗೆ ಕಬೀರ್ ಪ್ರತಿಕ್ರಿಯಿಸಿದರು.

2017ರಲ್ಲಿ ಅದಾನಿ ಸಮೂಹ ಮತ್ತು ಬಾಂಗ್ಲಾದೇಶದ ನಡುವೆ ಆಗಿದ್ದ ಒಪ್ಪಂದದ ಕುರಿತು, ಮಾಜಿ ಪ್ರಧಾನಿ ಶೇಖ್ ಹಸೀನಾ ಸರ್ಕಾರ ಪತನಗೊಂಡ ಬಳಿಕ ಪರಿಶೀಲನೆ ನಡೆಸಲಾಗುತ್ತಿದೆ.

'ಹಸೀನಾ ಆಡಳಿತಾವಧಿಯಲ್ಲಿ ಇಂಧನ ವಲಯದಲ್ಲಿ ಸರ್ಕಾರದ ವೈಫಲ್ಯ ಮತ್ತು ದೊಡ್ಡ ಮಟ್ಟದಲ್ಲಿ ಭ್ರಷ್ಟಾಚಾರ ನಡೆದಿರುವುದು ತನಿಖೆಯಲ್ಲಿ ಪತ್ತೆಯಾಗಿದೆ' ಎಂದು ಸಮಿತಿಯ ಮುಖ್ಯಸ್ಥರು ತಿಳಿಸಿದ್ದಾರೆ. ಸಮಿತಿಯು ಅಂತಿಮ ವರದಿಯನ್ನು 2026ರ ಜನವರಿಯಲ್ಲಿ ನೀಡುವ ಸಾಧ್ಯತೆಯಿದೆ.

ಅದಾನಿ ಸಮೂಹದ ಜೊತೆಗಿನ ವಿದ್ಯುತ್ ಖರೀದಿ ಒಪ್ಪಂದದ ಬಗ್ಗೆ ಪ್ರತ್ಯೇಕ ವರದಿ ತಯಾರಿಸಿರುವುದಾಗಿ ಸಮಿತಿ ತಿಳಿಸಿದೆ.

ಪಿ.ಯು: 1.18 ಲಕ್ಷ ವಿದ್ಯಾರ್ಥಿಗಳು ಬೇಕು!

ಪಿಯು ಕಾಲೇಜು

ಸರ್ಕಾರಿ	1,319
ಖಾಸಗಿ	3,623
ಅನುದಾನಿತ	815
ವಿಭಜಿತ	159
ಕಾರ್ಪೊರೇಷನ್	19
ವಸತಿ ಕಾಲೇಜು	116
ಅಲ್ಪಸಂಖ್ಯಾತ	126
ಒಟ್ಟು ಕಾಲೇಜು	6,177

8,42,173 2025ರಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಬರೆದವರು

5,24,984 ಪರೀಕ್ಷೆ-1ರಲ್ಲಿ ತೇರ್ಗಡೆಯಾದವರು

87,330 ಪರೀಕ್ಷೆ-2ರಲ್ಲಿ ತೇರ್ಗಡೆಯಾದವರು

42,085 ಪರೀಕ್ಷೆ-3 ತೇರ್ಗಡೆಯಾದವರು

7,72,402 2025–26ನೇ ಸಾಲಿನ ಪ್ರಥಮ ಪಿಯುಗೆ ಲಭ್ಯವಿದ್ದ ಸೀಟುಗಳು

1,18,003 ಲಭ್ಯ ಸೀಟುಗಳಿಗೆ ಕೊರತೆ ಇರುವ ವಿದ್ಯಾರ್ಥಿಗಳ ಸಂಖ್ಯೆ

6,54,399 ಎಸ್‌ಎಸ್‌ಎಲ್‌ಸಿ 2025ರ ಮೂರೂ ಪರೀಕ್ಷೆಗಳಿಂದ ತೇರ್ಗಡೆಯಾದವರು

ಒಂದನೇ ಪುಟದಿಂದ...

ಕರ್ನಾಟಕ ಪಬ್ಲಿಕ್ ಶಾಲೆಗಳ ಮೂಲಕ ಪೂರ್ವ ಪ್ರಾಥಮಿಕದಿಂದ ದ್ವಿತೀಯ ಪಿಯುವರೆಗೂ ಗುಣಮಟ್ಟದ ಶಿಕ್ಷಣ ನೀಡಲಾಗುತ್ತಿದೆ. ಸ್ಪರ್ಧಾಪರೀಕ್ಷೆಗಳ ಮೂಲಕ ಪ್ರತಿಭಾವಂತರನ್ನು ಆಯ್ಕೆ ಮಾಡಿ ವಿವಿಧ ವಿಷಯಗಳ ಉಪನ್ಯಾಸಕರಾಗಿ ನೇಮಕ ಮಾಡಿದೆ. ಆದರೂ, ಸರ್ಕಾರಿ ಕಾಲೇಜುಗಳು ವಿದ್ಯಾರ್ಥಿಗಳನ್ನು ಸೆಳೆಯುವಲ್ಲಿ ವಿಫಲವಾಗುತ್ತಾ ಸಾಗಿವೆ. ಗಮನ ಸೆಳೆಯುವ ಪೀಠೋಪಕರಣ, ದುಬಾರಿ ಶುಲ್ಕ, ಪಠ್ಯ-ವಿವಿಧ ಪ್ರವೇಶ ಪರೀಕ್ಷಾ ತರಬೇತಿಗಷ್ಟೇ ಗಮನ ನೀಡುತ್ತಿರುವ ಖಾಸಗಿ ಕಾಲೇಜುಗಳತ್ತ ವಿದ್ಯಾರ್ಥಿ-ಪೋಷಕರು ಆಕರ್ಷಿತರಾಗು ತ್ತಿರುವುದು ಸರ್ಕಾರಿ ಕಾಲೇಜುಗಳ ಪ್ರಾಂಶುಪಾಲರು, ಉಪನ್ಯಾಸಕರ ಧೃತಿಗೆಡಿಸಿದೆ.

'ಸೇವೆಯ ಹೆಸರಿನಲ್ಲಿ ಶಿಕ್ಷಣವನ್ನು ವ್ಯಾಪಾರದ ಸರಕಾಗಿಸಿಕೊಂಡಿರುವ ಖಾಸಗಿ ಕಾಲೇಜುಗಳ ಶೈಕ್ಷಣಿಕ ಮಾಫಿಯಾಕ್ಕೆ ತಡೆ ಹಾಕಬೇಕು. ಅಧಿಕ ಶುಲ್ಕ ವಸೂಲಿ ಮಾಡುವ ಮೂಲಕ ಪೋಷಕರನ್ನು ಸಾಲದ ಸುಳಿಗೆ ತಳ್ಳುತ್ತಿರುವ, ವೈದ್ಯಕೀಯ-ಎಂಜಿನಿಯರಿಂಗ್ ಸೇರಿದಂತೆ ವಿವಿಧ ಕೋರ್ಸ್‌ಗಳಿಗೆ ತರಬೇತಿ ನೀಡುವ ನೆಪದಲ್ಲಿ ಅಧಿಕ ಅಂಕಗಳಿಕೆಗಾಗಿ ಒತ್ತಡ ಹಾಕುವ, ವಿದ್ಯಾರ್ಥಿಗಳ ಭವಿಷ್ಯಕ್ಕಿಂತ ಲಾಭಕ್ಕಾಗಿ ಕೆಲಸ ಮಾಡುತ್ತಾ ಸಾಮಾಜಿಕ ಮತ್ತು ಶೈಕ್ಷಣಿಕ ಅಸಮಾನತೆಗೆ ಕಾರಣವಾಗಿರುವ ಖಾಸಗಿ ಕಾಲೇಜುಗಳಿಗೆ ಅನುಮತಿ ನೀಡಬಾರದು' ಎಂದು ಒತ್ತಾಯಿಸಿ ಕರ್ನಾಟಕ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರ ಸಂಘ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದಿದೆ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ

General

ಉದ್ಯೋಗಾವಕಾಶಗಳು TVS ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th, PUC, ITI, Degree. ಸಂಬಳ 16,000-86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

Part-Time Jobs

ಮನೆಯಿಂದಲೇ ಕೆಲಸ Part Time/Full Time ವರ್ಕ್ ಗಳಿಗೆ ಯುವಕರು, ಯುವತಿಯರು ಬೇಕಾಗಿದ್ದಾರೆ. 18,000/ 25,000. ಕೊರಿಯರ್ ಸೌಲಭ್ಯವಿದೆ. 8095043191

Wanted

ಯುವಕ ಯುವತಿಯರು ಹೆಲ್ಪರ್ ಕೆಲಸಕ್ಕೆ ಬೇಕಾಗಿದ್ದಾರೆ. ವಿದ್ಯಾಭ್ಯಾಸ SSLC/PUC ತಿಂಗಳಿಗೆ ವೇತನ 16000-20000 ಸಾವಿರವರೆಗೆ ವಿಳಾಸ: ಸೆಲೆಬ್ರಿಟಿ ವೆಲ್ನೆಸ್, ಕಿನೋ ಅಪಾರ್ಟ್ ಮೆಂಟ್ ಎದುರು ಆನಂದರಾವ್ ಸರ್ಕಲ್ ಹತ್ತಿರ ಶೇಷಾದ್ರಿಪುರಂ ಬೆಂಗಳೂರು. Ph:8431378847

ತಕ್ಷಣ ಬೇಕಾಗಿದ್ದಾರೆ ಕಂಪನಿ ಮತ್ತು ಆಫೀಸ್ ಗಳಿಗೆ 7,10, ಪಿಯುಸಿ ಆದಂತಹ ಯುವಕ, ಯುವತಿಯರಿಗೆ ಸಂಬಳ 18000/- ವಸತಿಯೂಟದೊಂದಿಗೆ 9916788422

ಪ್ರವಾಸ

Travel Agencies

ದುಬೈ ಪ್ರವಾಸ 6 ದಿನಗಳು 12/12/25, ಬುರ್ಜ್ ಖಲೀಫಾ ದುಬೈ ಫ್ರೇಮ್ ಡೆಸರ್ಟ್ ಸಫಾರಿ ಗ್ಲೋಬಲ್ ವಿಲೇಜ್ ಮಿರಾಕಲ್ ಗಾರ್ಡನ್ ದುಬೈ ಮ್ಯೂಸಿಯಂ ಇತರೆ ಸುವರ್ಣಯಾತ್ರಾ 9480843945/ 9019462508

Travel

7ದಿನಗಳ ಕಾಶಿಯಾತ್ರೆ, 11ದಿನಗಳ ಗುಜರಾತ್. ರನ್ ಆಫ್ ಕಚ್. 12ದಿನಗಳ ಮಧ್ಯಪ್ರದೇಶ. ನಂದಿ ಹಾಲಿಡೇಸ್ ಬಸವನಗುಡಿ, ಬೆಂಗಳೂರು.04. 9980270467, 9740228186

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಭಾವಪೂರ್ಣ ಶ್ರದ್ಧಾಂಜಲಿ

ಶ್ರೀಮತಿ ರಾಜಮ್ಮನವರು
(ಕನ್ನಡಪರ ಹೋರಾಟಗಾರರಾದ ದಿ|| ಶ್ರೀ ರಾಂದಾಸ್‌ರವರ ಧರ್ಮಪತ್ನಿ)
ನಿಧನ : 03-11-2025
ಅಂತಿಮ ದರ್ಶನ: 04-Nov-2025 ರಂದು ಬೆಳ್ಳಿಗೆ 7:00 ಘಂಟೆಯ ನಂತರ ಸ್ವಗೃಹದಲ್ಲಿ
ಅಂತ್ಯಕ್ರಿಯೆ : ಮಧ್ಯಾಹ್ನ 1:00 ಘಂಟೆ ಯಶವಂತಪುರದ ಬಿ.ಕೆ.ನಗರದಲ್ಲಿ.
ದುಃಖತಪ್ತ ಕುಟುಂಬ
ಮೊ: 98451 83534 / 87460 07999



ಸವಿನೆನಪು
ಡಾ.ಆರ್. ಶಿವರಾಮಯ್ಯ, MVSc.
(ನಿವೃತ್ತ ಸಹಾಯಕ ನಿರ್ದೇಶಕರು, AH&VS)
ನಿಧನ: 04-11-2023
ನೀವು ನಮ್ಮನ್ನಗಲಿ ಇಂದಿಗೆ ಎರಡು ವರ್ಷ.
ನಿಮ್ಮ ನೆನಪು ಸದಾ ಹಸಿರು,
ನಿಮ್ಮ ಪ್ರೀತಿ ಹಾಗೂ ಆದರ್ಶಮಯ ಜೀವನ ನಮಗೆ ದಾರಿದೀಪ.
ನಿಮ್ಮನ್ನು ಹೆಮ್ಮೆಯಿಂದ ಸ್ಮರಿಸುವ,
ಇಂತಿ ದುಃಖತಪ್ತರು:
ಧರ್ಮಪತ್ನಿ ಮತ್ತು ಮಕ್ಕಳು

2026ಕ್ಕೆ ಕಿಂಗ್ ರಿಲೀಸ್

'ಪಠಾಣ್' ಸಿನಿಮಾ ನಿರ್ದೇಶಿಸಿದ್ದ ಸಿದ್ಧಾರ್ಥ್ ಆನಂದ್ ನಿರ್ದೇಶನದ, ಶಾರುಖ್ ಖಾನ್ ನಟನೆಯ ಹೊಸ ಸಿನಿಮಾ 'ಕಿಂಗ್' 2026ರಲ್ಲಿ ತೆರೆಕಾಣಲಿದೆ.

ಬಾಕ್ಸ್ ಆಫೀಸ್‌ನಲ್ಲಿ 'ಪಠಾಣ್' ಹಣ ಬಾಚಿತ್ತು. 2023ರಲ್ಲಿ ತೆರೆಕಂಡ 'ಡಂಕಿ' ಬಳಿಕ ಶಾರುಖ್ ಖಾನ್ ಸಿನಿಮಾಗಳೇ ತೆರೆಕಂಡಿಲ್ಲ. ಭಾನುವಾರ (ನ.2) ಅವರ ಜನ್ಮದಿನದಂದು 'ಕಿಂಗ್' ಸಿನಿಮಾದ ಟೀಸರ್ ಬಿಡುಗಡೆಯಾಗಿದೆ. ಸಿನಿಮಾವನ್ನು ರೆಡ್ ಚಿಲ್ಲೀಸ್ ಎಂಟರ್‌ಟೇನ್ಮೆಂಟ್ ಮತ್ತು ಮಾರ್ಫ್ಲಿಕ್ಸ್ ಪಿಕ್ಚರ್ಸ್ ನಿರ್ಮಾಣ ಮಾಡಿದೆ.

ಹೊಸ ಸಿನಿಮಾದಲ್ಲಿ ಭಿನ್ನವಾದ ಲುಕ್‌ನಲ್ಲಿ ಹೊಸ ಅವತಾರದಲ್ಲಿ ಶಾರುಖ್ ಖಾನ್ ಪ್ರೇಕ್ಷಕರೆದುರಿಗೆ ಬರಲಿದ್ದಾರೆ. ಭರ್ಜರಿಯಾದ ಆ್ಯಕ್ಷನ್ ಸೀಕ್ವೆನ್ಸ್ ಟೀಸರ್‌ನಲ್ಲಿದೆ. ಚಿತ್ರದಲ್ಲಿ ಶಾರುಖ್ ಖಾನ್ ಪುತ್ರಿ ಸುಹಾನಾ ಖಾನ್ ನಟಿಸುತ್ತಿದ್ದು, ನಟಿ ದೀಪಿಕಾ ಪಡುಕೋಣೆ ಜೋಡಿಯಾಗಿದ್ದಾರೆ. ಈ ಹಿಂದೆ 'ಓಂ ಶಾಂತಿ ಓಂ', 'ಚೆನ್ನೈ ಎಕ್ಸ್‌ಪ್ರೆಸ್', 'ಪಠಾಣ್' ಹಾಗೂ 'ಜವಾನ್'ನಲ್ಲಿ ಶಾರುಖ್ ಖಾನ್ ಜೊತೆ ದೀಪಿಕಾ ನಟಿಸಿದ್ದರು. ❖

ಆ್ಯಫ್ರೊ ಟಪಾಂಗ್‌ನಲ್ಲಿ ಕುಣಿದು ಕುಪ್ಪಳಿಸಿದ ಸ್ಟಾರ್ಸ್

ಸಂಗೀತ ನಿರ್ದೇಶಕ ಅರ್ಜುನ್ ಜನ್ಯ ಆ್ಯಕ್ಷನ್ ಕಟ್ ಹೇಳಿರುವ, ಶಿವರಾಜ್‌ಕುಮಾರ್, ಉಪೇಂದ್ರ ಹಾಗೂ ರಾಜ್ ಬಿ.ಶೆಟ್ಟಿ ಜೊತೆಯಾಗಿ ಕಾಣಿಸಿಕೊಳ್ಳಲಿರುವ '45' ಸಿನಿಮಾ ಡಿ.25ಕ್ಕೆ ತೆರೆಕಾಣುತ್ತಿದೆ. ರಿಲೀಸ್‌ಗೆ ಸಿದ್ಧತೆ ಆರಂಭಿಸಿರುವ ಚಿತ್ರತಂಡ 'ಆ್ಯಫ್ರೊ ಟಪಾಂಗ್' ಎನ್ನುವ ಪ್ರಮೋಷನಲ್ ಹಾಡೊಂದನ್ನು ಇತ್ತೀಚೆಗೆ ರಿಲೀಸ್ ಮಾಡಿದೆ. ವಿಶೇಷವೇನೆಂದರೆ ಯುಗಾಂಡದ ಘೆಟ್ಟೊ ಕಿಡ್ಸ್ ಜೊತೆ ಮೂವರೂ ಸ್ಟಾರ್ಸ್ ಕುಣಿದು ಕುಪ್ಪಳಿಸಿದ್ದಾರೆ.

ಈ ರ್‍ಯಾಪ್ ಹಾಡಿನಲ್ಲಿ ಜೀವನದ ಪಾಠ ಮಾಡಿದ್ದಾರೆ ಶಿವರಾಜ್‌ಕುಮಾರ್ ಹಾಗೂ ಉಪೇಂದ್ರ. ಎಂ.ರಮೇಶ್ ರೆಡ್ಡಿ ಅವರು ತಮ್ಮ ಸೂರಜ್ ಪ್ರೊಡಕ್ಷನ್ ಬ್ಯಾನರ್‌ನಲ್ಲಿ ಈ ಸಿನಿಮಾ ನಿರ್ಮಿಸಿದ್ದಾರೆ. ಎಂ.ಸಿ.ಬಿಜು ಮತ್ತು ನಿಶಾನ್ ರೈ ಈ ಹಾಡನ್ನು ಬರೆದು ಹಾಡಿದ್ದಾರೆ.

ಈ ಸಂದರ್ಭದಲ್ಲಿ ಮಾತನಾಡಿದ ನಿರ್ದೇಶಕ ಅರ್ಜುನ್ ಜನ್ಯ, 'ನಾನು ಕನಸಿನಲ್ಲೂ ನಿರ್ದೇಶಕನಾಗಬೇಕು ಎಂದುಕೊಂಡವನೇ ಅಲ್ಲ. ನನ್ನನ್ನು ನಿರ್ದೇಶಕರನ್ನಾಗಿ ಮಾಡಿದವರು ಶಿವರಾಜ್‌ಕುಮಾರ್. ಅವರು ಈ ಸಿನಿಮಾವನ್ನು ನೀವೇ ನಿರ್ದೇಶಿಸಿ ಎಂದಾಗ ಹೊಸ ಜವಾಬ್ದಾರಿ ಹೆಗಲೇರಿತು. ಇಡೀ ಸಿನಿಮಾದ ಕಥೆಯಲ್ಲಿ ಹಾಡು ತೂರಿಸುವಂಥ ಜಾಗವೇ ಇಲ್ಲ. ಇದೊಂದು ಭಿನ್ನವಾದ ಕಥೆಯಾಗಿರುವ ಕಾರಣ ಕಮರ್ಷಿಯಲ್ ಹಾಡುಗಳಿಗೆ ಅವಕಾಶವೇ ಇರಲಿಲ್ಲ. ಹಾಡಿಲ್ಲದೆ ಮೂರು ಸ್ಟಾರ್‌ಗಳ ಅಭಿಮಾನಿಗಳನ್ನು ತಣಿಸುವುದು ಹೇಗೆ? ಹೀಗಾಗಿ ಒಂದು ಪ್ರೊಮೋಷನಲ್ ಹಾಡೊಂದನ್ನು ಮಾಡಿದೆವು. ಹಾಡು ಸಾಮಾನ್ಯವಾಗಿರಬಾರದು ಎನ್ನುವ ಯೋಚನೆ ಮಾಡಿ ಘೆಟ್ಟೋ ಕಿಡ್ಸ್ ತಂಡವನ್ನು ಕರೆತಂದೆ. ಮೊದಲು ಯುಗಾಂಡಕ್ಕೇ ಹೋಗಿ ಈ ಹಾಡಿನ ಚಿತ್ರೀಕರಣ ಮಾಡಲು ಉದ್ದೇಶಿಸಿದ್ದೆವು. ಆದರೆ ತಾಂತ್ರಿಕವಾಗಿ ಕೊಂಚ ಕಷ್ಟವಿದ್ದ ಕಾರಣ ಅವರನ್ನೇ ಇಲ್ಲಿಗೆ ಕರೆದೆವು. ಸುಮಾರು 15 ಮಕ್ಕಳಿಗೆ ಜಾನಿ ಮಾಸ್ಟರ್ ನೃತ್ಯ ನಿರ್ದೇಶನ ಮಾಡಿದರು. ಹಾಡು ಕಂಪೋಸ್ ಮಾಡುವಾಗಲೇ 'ಜೋಗಿ' ಸ್ಟೆಪ್, 'ಉಪೇಂದ್ರ' ಸ್ಟೆಪ್ ಹಾಗೂ ಹುಲಿವೇಷ ಸ್ಟೆಪ್ ಬರಬೇಕು ಎಂದು ನಿರ್ಧರಿಸಿದ್ದೆ' ಎಂದರು.

ಹಾಡಿನಲ್ಲಿದೆ ಕಥೆ!

'ಇದು ಕೇವಲ ಪ್ರಮೋಷನಲ್ ಹಾಡಲ್ಲ. ಹಾಡಿನೊಳಗೆ ಒಂದು ಕಥೆಯಿದೆ. ಈ ಸಿನಿಮಾದ ಕ್ಲೈಮ್ಯಾಕ್ಸ್ ಶೂಟಿಂಗ್ ಸಂದರ್ಭದಲ್ಲಿ ನನಗೆ ಕ್ಯಾನ್ಸರ್ ಇರುವುದು ಪತ್ತೆಯಾಗಿತ್ತು. ವಿಷಯ ತಿಳಿದು ಅರ್ಜುನ್ ಜನ್ಯ ಮಗುವಿನಂತೆ ಅತ್ತಿದ್ದರು. ಆ ಸಂದರ್ಭದಲ್ಲಿ ಇಡೀ ತಂಡವು ನನ್ನನ್ನು ಮಗುವಿನಂತೆ ನೋಡಿಕೊಂಡಿತ್ತು. ಇದರಿಂದ ನನಗೂ ಧೈರ್ಯ ಬಂದಿತ್ತು. ಆನಂದ್ ಆಡಿಯೊದವರು ಆಡಿಯೊ ಹಕ್ಕುಗಳನ್ನು ಪಡೆದಿದ್ದಾರೆ. ಇದು ಒಂದೊಳ್ಳೆಯ ಸಿನಿಮಾ ಆಗಲಿದೆ ಎನ್ನುವ ಭರವಸೆ ಇದೆ. ದೇವರ ಬಗ್ಗೆಯೇ ಇರುವ ಸಿನಿಮಾವಿದು' ಎಂದರು ಶಿವರಾಜ್‌ಕುಮಾರ್

ಚಿತ್ರಕ್ಕೆ ಕೆನಡಾದಲ್ಲಿ ನೆಲೆಸಿರುವ ಯಶ್ ಶೆಟ್ಟಿ ನೇತೃತ್ವದಲ್ಲಿ ವಿಎಫ್‌ಎಕ್ಸ್ ಮಾಡಲಾಗಿದೆ. ❖

> ನನಗೆ ಕಲಿಯುವುದಕ್ಕೆ ಹೆಚ್ಚು ಅವಕಾಶ ಸಿಕ್ಕಿದ ಸಿನಿಮಾವಿದು. ಇದು ಕೇವಲ ಕನ್ನಡಕ್ಕೊಂದು ಒಳ್ಳೆಯ ಸಿನಿಮಾವಾದರೆ ಸಾಲದು. ಭಾರತಕ್ಕೆ ಒಂದೊಳ್ಳೆ ಸಿನಿಮಾವಾಗಬೇಕು. ಆ ಕ್ಷಮತೆ ಈ ಸಿನಿಮಾಗಿದೆ. ನಾನು ಉಪೇಂದ್ರ ಅವರ ನಿರ್ದೇಶನದ ದೊಡ್ಡ ಅಭಿಮಾನಿ. ಅವರ ಪೋಸ್ಟರ್ ನೋಡಿ ಸಿನಿಮಾಗೆ ಬಂದವನು.
>
> **ರಾಜ್ ಬಿ.ಶೆಟ್ಟಿ**, ನಟ

> ನಮ್ಮ ಸಿನಿಮಾದ ಶೂಟಿಂಗ್ ಪೂರ್ಣ ಮಾಡಿಕೊಂಡೇ ಶಸ್ತ್ರಚಿಕಿತ್ಸೆಗಾಗಿ ಶಿವಣ್ಣ ಅಮೆರಿಕಕ್ಕೆ ಹೋದರು. ಆಸ್ಪತ್ರೆಯಿಂದ ಬಿಡುಗಡೆಯಾದ ಹದಿನೈದು ದಿನಕ್ಕೇ ಹಾಡಿನ ಸೆಟ್‌ನಲ್ಲಿದ್ದರು.
>
> **ಎಂ.ರಮೇಶ್ ರೆಡ್ಡಿ**, ನಿರ್ಮಾಪಕ

'ಜಾಕಿ-42' ಟೀಸರ್ ಬಿಡುಗಡೆ

ಹೃತಿಕ ಶ್ರೀನಿವಾಸ್

ಕಿರುತೆರೆ ಹಾಗೂ ಬೆಳ್ಳಿತೆರೆಯಲ್ಲಿ ಗುರುತಿಸಿಕೊಂಡಿರುವ ನಟ ಕಿರಣ್ ರಾಜ್ ನಾಯಕನಾಗಿ ನಟಿಸಿರುವ, ಗುರುತೇಜ್ ಶೆಟ್ಟಿ ನಿರ್ದೇಶನದ 'ಜಾಕಿ-42'ದ ಟೀಸರ್ ಇತ್ತೀಚೆಗೆ ಬಿಡುಗಡೆಯಾಯಿತು.

ಗೋಲ್ಡನ್ ಗೇಟ್ ಸ್ಟುಡಿಯೋಸ್ ಬ್ಯಾನರ್‌ನಲ್ಲಿ ಭಾರತಿ ಸತ್ಯನಾರಾಯಣ ನಿರ್ಮಿಸಿರುವ ಚಿತ್ರ ಇದಾಗಿದೆ. ಕುದುರೆ ಓಟದ ಸ್ಪರ್ಧೆಯ ಹಿನ್ನೆಲೆಯಲ್ಲಿ ನಡೆಯುವ ಕಥಾಹಂದರವನ್ನು ಈ ಸಿನಿಮಾ ಹೊಂದಿದೆ. ಕಿರಣ್ ರಾಜ್ ದ್ವಿಪಾತ್ರದಲ್ಲಿ ನಟಿಸಿರುವುದು ಚಿತ್ರದ ವಿಶೇಷ. ಚಿತ್ರದ ಮಾತಿನ ಭಾಗದ ಚಿತ್ರೀಕರಣ ಮುಕ್ತಾಯವಾಗಿದ್ದು, ಎರಡು ಹಾಡುಗಳ ಚಿತ್ರೀಕರಣ ಬಾಕಿ ಇದೆ. ಶೀಘ್ರದಲ್ಲೇ ಚಿತ್ರದ ಬಿಡುಗಡೆ ದಿನಾಂಕ ಘೋಷಣೆಯಾಗಲಿದೆ ಎಂದಿದೆ ಚಿತ್ರತಂಡ. ಕ್ರಿಸ್ಮಸ್ ಹಬ್ಬದ ವೇಳೆಗೆ ಚಿತ್ರ ತೆರೆಗೆ ಬರುವ ಸಾಧ್ಯತೆಯಿದೆ.

ವಿನೋದ್ ಯಜಮಾನ್ಯ ಸಂಗೀತ ನಿರ್ದೇಶನ, ರಾಘವೇಂದ್ರ ಬಿ.ಕೋಲಾರ ಛಾಯಾಚಿತ್ರ ಗ್ರಹಣ, ಉಮೇಶ್ ಆರ್.ಬಿ. ಸಂಕಲನ ಹಾಗೂ ಸತೀಶ್ ಕಲಾ ನಿರ್ದೇಶನ ಚಿತ್ರಕ್ಕಿದೆ. ಕಿರಣ್ ರಾಜ್‌ಗೆ ಜೋಡಿಯಾಗಿ ಹೃತಿಕ ಶ್ರೀನಿವಾಸ್ ನಟಿಸುತ್ತಿದ್ದು, ದೀಪಕ್ ರೈ ಪಾಣಾಜೆ, ರಾಜೇಂದ್ರ ಕಾರಂತ್, ಮಧುಸೂದನ್, ಶಾಂತಲಾ ಕಾಮತ್, ಬಲ ರಾಜವಾಡಿ, ಯಶ್ ಶೆಟ್ಟಿ, ಚೇತನ್ ರೈ ಮಾಣಿ ಮುಂತಾದವರು ತಾರಾಬಳಗದಲ್ಲಿದ್ದಾರೆ. ❖

'ಆಪರೇಷನ್..'ಗೆ ಹಳೇ ಲೆನ್ಸ್!

'ಸಪ್ತಸಾಗರದಾಚೆ ಎಲ್ಲೋ' ಸಿನಿಮಾ ನಿರ್ದೇಶಕ ಹೇಮಂತ್ ಎಂ.ರಾವ್ ನಿರ್ದೇಶನದ '666 ಆಪರೇಷನ್ ಡ್ರೀಮ್ ಥಿಯೇಟರ್' ಸಿನಿಮಾದ ಶೂಟಿಂಗ್ ಬೆಂಗಳೂರಿನಲ್ಲಿ ನಡೆಯುತ್ತಿದೆ. ಚಿತ್ರಕ್ಕಾಗಿ 70ರ ದಶಕದ ಸಿನಿಮಾಗಳಲ್ಲಿ ಬಳಸುತ್ತಿದ್ದ ವಸ್ತ್ರ ವಿನ್ಯಾಸದಿಂದ ಹಿಡಿದು ಆ ಕಾಲದ ಲೆನ್ಸ್‌ಗಳನ್ನೂ ಚಿತ್ರತಂಡ ಬಳಸಿಕೊಂಡಿದೆ.

70, 80ರ ದಶಕದಲ್ಲಿ ರಾಜ್‌ಕುಮಾರ್ ಅವರ ಅನೇಕ ಚಿತ್ರಗಳಲ್ಲಿ ಬಳಸಲಾಗುತ್ತಿದ್ದ ವಿಂಟೇಜ್ ಕ್ಯಾಮೆರಾವನ್ನು ಬಳಸಿ ತಂಡ ಈಗಾಗಲೇ ಎರಡು ಹಂತಗಳ ಶೂಟಿಂಗ್ ಅನ್ನು ಪೂರ್ಣಗೊಳಿಸಿದೆ. ತಂಡವು ಲೆನ್ಸ್ ಆಯ್ಕೆಗಾಗಿ ಚೆನ್ನೈ, ಮುಂಬೈನಲ್ಲೂ ಹುಡುಕಾಟ ನಡೆಸಿತ್ತು.

'ಪ್ರತಿಯೊಂದು ದೃಶ್ಯವೂ ರಾಜ್‌ಕುಮಾರ್ ಅವರ ಬಾಂಡ್ ಚಿತ್ರಗಳಾದ 'ಆಪರೇಷನ್ ಡೈಮಂಡ್ ರಾಕೆಟ್' ಮತ್ತು 'ಜೇಡರ ಬಲೆ' ಚಿತ್ರಗಳ ರೀತಿ ಕಾಣಬೇಕು ಎನ್ನುವುದು ಆರಂಭದಿಂದಲೇ ಚಿತ್ರತಂಡಕ್ಕೆ ಸ್ಪಷ್ಟವಾಗಿ ಗೊತ್ತಿತ್ತು. ಹೀಗಾಗಿ ಸಂಪೂರ್ಣವಾಗಿ ಪೋಸ್ಟ್ ಪ್ರೊಡಕ್ಷನ್‌ನ ಮೇಲೆ ಅವಲಂಬಿಸದೆ, ಶೂಟಿಂಗ್‌ನಲ್ಲಿಯೇ ಚಿತ್ರೀಕರಿಸಲು ಹಳೆಯ ಶೈಲಿಯ ಟಂಗ್‌ಸ್ಟನ್ ಲೈಟ್ಸ್ ಮತ್ತು ವಿಂಟೇಜ್ ಲೆನ್ಸ್‌ಗಳನ್ನು ಬಳಸಿದ್ದೇವೆ. 16 ವಿಭಿನ್ನ ಲೆನ್ಸ್ ಸೆಟ್‌ಗಳನ್ನು ಪರೀಕ್ಷಿಸಿ ಗ್ರೇಡ್ ಮಾಡಿದ ನಂತರ, ನಾವು ವಿಂಟೇಜ್ ಲೊಮೋ ಅನಾಮಾರ್ಫಿಕ್ ಮತ್ತು ಲೊಮೋ ಸ್ಫೆರಿಕಲ್ ಲೆನ್ಸ್‌ಗಳನ್ನು ಆಯ್ಕೆ ಮಾಡಿದ್ದೆವು. ಇದರ ಮೂಲಕವೇ ನಾವು '666 ಆಪರೇಷನ್ ಡ್ರೀಮ್ ಥಿಯೇಟರ್'ನ ಜಗತ್ತನ್ನು ತೋರಿಸಲಿದ್ದೇವೆ' ಎನ್ನುತ್ತಾರೆ ಛಾಯಾಚಿತ್ರ ಗ್ರಾಹಕರಾದ ಅದ್ವೈತ ಗುರುಮೂರ್ತಿ.

ಧನಂಜಯ, ಅದ್ವೈತ್

ಧನಂಜಯ ಮುಖ್ಯಪಾತ್ರದಲ್ಲಿ ನಟಿಸಿರುವ ಈ ಚಿತ್ರವನ್ನು ವೈಶಾಖ್ ಜೆ.ಗೌಡ ನಿರ್ಮಿಸಿದ್ದು, ಶಿವರಾಜ್‌ಕುಮಾರ್ ಅವರೂ ಪ್ರಮುಖ ಪಾತ್ರದಲ್ಲಿ ನಟಿಸಿದ್ದಾರೆ. ಕನ್ನಡ ಮತ್ತು ತೆಲುಗು ಭಾಷೆಗಳಲ್ಲಿ ಏಕಕಾಲದಲ್ಲಿ ಸಿನಿಮಾ ಬಿಡುಗಡೆ ಮಾಡಲು ಚಿತ್ರತಂಡ ಯೋಚಿಸುತ್ತಿದೆ. ❖

ಕೋಟಿ ಕನಸು ಸಾಕಾರಗೊಂಡಾಗ...

ಮೊದಲ ಬಾರಿ ಐಸಿಸಿ ಕಿರೀಟ ಗೆದ್ದು ಚಾರಿತ್ರಿಕ ಸಾಧನೆ ಮೆರೆದ ಹರ್ಮನ್‌ಪ್ರೀತ್ ಕೌರ್ ಬಳಗ

● ಜಿ.ಕೃಷ್ಣನ್

ಮುಂಬೈ: ವಿಶ್ವಕಪ್ ಗೆಲುವಿನ ರೋಮಾಂಚನದ ಅನುಭವ ಹರ್ಮನ್‌ಪ್ರೀತ್ ಅವರಿಗೆ ಈಗ ಆಗಿದೆ. ಸ್ವಸಾಮರ್ಥ್ಯದಲ್ಲಿ ಇರಿಸಿದ ನಂಬಿಕೆಯು ಅವರನ್ನು, ಅವರ ತಂಡವನ್ನು ಐದು ವಾರಗಳ ಅವಧಿ, ಒಂಬತ್ತು ಪಂದ್ಯಗಳ ನಂತರ ಭಾನುವಾರ ವಿಶ್ವಕಪ್ ಟ್ರೋಫಿ ಎತ್ತಿಹಿಡಿಯುವಂತೆ ಮಾಡಿದೆ.

ವಿಶ್ವಕಪ್ ಗೆದ್ದ ಸಂಭ್ರಮದಲ್ಲಿ ಮಿಂದೆದ್ದಾಗ ಮಧ್ಯರಾತ್ರಿ ಕಳೆದು ಸೋಮವಾರ ಆರಂಭವಾಗಿತ್ತು. ಮಾಧ್ಯಮ ಗೋಷ್ಠಿಯಲ್ಲಿ ನಾಯಕಿ ಹರ್ಮನ್‌ಪ್ರೀತ್ ಮುಂದಿದ್ದ ಮೇಜಿನಲ್ಲಿ ವಿಶ್ವಕಪ್ ಟ್ರೋಫಿ ಮಿಂಚುತಿತ್ತು.

'ಈ ಪಯಣದಲ್ಲಿ ಏಳು ಬೀಳು ಗಳಿದ್ದವು. ಆದರೆ ತಂಡ ಸ್ವಸಾಮರ್ಥ್ಯಲ್ಲಿ ವಿಶ್ವಾಸ ಕಳೆದುಕೊಳ್ಳಲಿಲ್ಲ. ನಮ್ಮ ಲಕ್ಷ್ಯ ಒಂದೇ ಗುರಿಯ ಕಡೆಯಿತ್ತು. ಆ ಗುರಿ ವಿಶ್ವಕಪ್ ಟ್ರೋಫಿ ಎತ್ತಿಹಿಡಿಯುವುದಾಗಿತ್ತು' ಎಂದು ಮಾಧ್ಯಮಗೋಷ್ಠಿಯನ್ನು ಉದ್ದೇಶಿಸಿ ನಾಯಕಿ ಹೇಳಿದರು.

ಈ ವರ್ಷದ ಆಗಸ್ಟ್‌ನಲ್ಲಿ ವಿಶ್ವಕಪ್‌ಗೆ 50 ದಿನಗಳಿರುವಾಗ ಮುಂಬೈನಲ್ಲಿ ನಡೆದ 'ಕೌಂಟ್ ಡೌನ್' ಸಮಾರಂಭದಲ್ಲಿ ಕೌರ್ ಜತೆಯಲ್ಲಿ ಅನುಭವಿ ಬ್ಯಾಟರ್‌ಗಳಾದ ಸ್ಮೃತಿ ಮಂದಾನ ಮತ್ತು ಜೆಮಿಮಾ ರಾಡ್ರಿಗಸ್ ಅವರೂ ಇದ್ದರು. ತವರಿನಲ್ಲಿ ಪುರುಷರ ತಂಡ 2011ರಲ್ಲಿ ವಿಶ್ವಕಪ್ ಗೆದ್ದ ಸಾಧನೆಯನ್ನು ತಾವೂ ಮಾಡಲು ಅವರು ಪಣತೊಟ್ಟಂತೆ ಕಂಡಿದ್ದರು.

'ತವರಿನ ಅಭಿಮಾನಿಗಳ ಎದುರು ವಿಶ್ವಕಪ್ ಆಡುವುದು ಮಕ್ಕಳ ಆಟ ದಂತಲ್ಲ. ಹೊರಗಿನ ಟೀಕೆ–ಟಿಪ್ಪಣಿಗಳ ಸದ್ದುಗದ್ದಲಗಳಿಗೆ ತಲೆಕೆಡಿಸಿಕೊಳ್ಳದೇ ಟ್ರೋಫಿ ಗೆಲ್ಲುವ ಒಂದೇ ಗುರಿಯ ಕಡೆ ಗಮನವಿಡಬೇಕು' ಎಂದು ಆ ವಿಶ್ವಕಪ್‌ನಲ್ಲಿ ಭಾರತ ತಂಡದ ಗೆಲುವಿನ ರೂವಾರಿಯಾಗಿದ್ದ ಯುವರಾಜ್ ಸಿಂಗ್ ಕಿವಿಮಾತು ಹೇಳಿದ್ದರು.

ಅವರು ಹೇಳಿದಂತೆ ಭಾರತಕ್ಕೆ ಈ ಅಭಿಯಾನ ಸುಲಭದ್ದಾಗಿರಲಿಲ್ಲ. ಶ್ರೀಲಂಕಾ ಮತ್ತು ಪಾಕಿಸ್ತಾನ ತಂಡಗಳ ಎದುರು ಗೆದ್ದ ನಂತರ ತಂಡವು, ಪ್ರಬಲ ಎದುರಾಳಿಗಳ ವಿರುದ್ಧ ಸತತವಾಗಿ ಮೂರು ಪಂದ್ಯಗಳಲ್ಲಿ ಸೋಲುಂಡಿತು. ಕೋಟ್ಯಂತರ ಅಭಿಮಾನಿಗಳ ನಿರೀಕ್ಷೆಯ ಭಾರದ ಅನುಭವ ಆಗತೊಡಗಿತು.

ತಂಡ ಹಿನ್ನಡೆ ಕಂಡಾಗ ಗೆಲುವಿನ ಹಂತದಲ್ಲಿದ್ದ ಪಂದ್ಯಗಳನ್ನು ಕೈಚೆಲ್ಲುತ್ತಿದೆ ಎಂಬ ಟೀಕೆಗಳನ್ನು ಎದುರಿಸಬೇಕಾಯಿತು. ಸ್ಮೃತಿ ಮಂದಾನ ಮತ್ತು ಪ್ರತೀಕಾ ರಾವಲ್ ಉತ್ತಮ ಆರಂಭ ಮಾಡಿದರೂ ಮಧ್ಯಮ ಕ್ರಮಾಂಕ ಸ್ಥಿರ ಪ್ರದರ್ಶನ ನೀಡಲಿಲ್ಲ.

ಇಂಗ್ಲೆಂಡ್ ವಿರುದ್ಧ 70 ರನ್ ಮತ್ತು ಸೆಮಿಫೈನಲ್‌ನಲ್ಲಿ ಆಸ್ಟ್ರೇಲಿಯಾ ವಿರುದ್ಧ 88 ರನ್ ಗಳಿಸಿದ್ದು ಬಿಟ್ಟರೆ ಉಳಿದ ಪಂದ್ಯಗಳಲ್ಲಿ ಕೌರ್ ಸ್ವತಃ ಹೇಳಿಕೊಳ್ಳುವಂಥ ಆಟ ಆಡಿರಲಿಲ್ಲ. ಮೂರನೇ ಕ್ರಮಾಂಕದ ಆಟಗಾರ್ತಿ ಹರ್ಲೀನ್ ಡಿಯೋಲ್ ಮೊದಲ ಐದು ಪಂದ್ಯಗಳಲ್ಲಿ ಉತ್ತಮ ಸ್ಟ್ರೈಕ್ ರೇಟ್‌ನಲ್ಲಿ ರನ್ ಗಳಿಸಲಿಲ್ಲ. ಉತ್ತಮ ಆರಂಭ ಪಡೆದರೂ ದೊಡ್ಡ ಮೊತ್ತ ಗಳಿಸಲಿಲ್ಲ. ಹೀಗಾಗಿ ಮೂರನೇ ಕ್ರಮಾಂಕವನ್ನು ನಂತರ ಜೆಮಿಮಾ ರಾಡ್ರಿಗಸ್ ಅವರಿಗೆ ಬಿಟ್ಟುಕೊಟ್ಟರು.

ಕೆಳ ಮಧ್ಯಮ ಕ್ರಮಾಂಕದಲ್ಲಿ ನಂಬಿಕಸ್ಥ ಆಟಗಾರ್ತಿ ದೀಪ್ತಿ ಶರ್ಮಾ ಕೆಲವು ಪಂದ್ಯಗಳಲ್ಲಿ ತಂಡವನ್ನು ಆಪತ್ತಿನಿಂದ ಕಾಪಾಡಿದರು. ಅವರು ಟೂರ್ನಿಯಲ್ಲಿ 215 ರನ್ ಗಳಿಸುವ ಜೊತೆಗೆ 22 ವಿಕೆಟ್ ಕಬಳಿಸಿದರು. ಅವರಿಗೆ ರಿಚಾ ಘೋಷ್, ಅಮನ್ಜೋತ್ ಕೌರ್ ಮತ್ತು ಸ್ನೇಹ ರಾಣಾ ಅವರಿಂದ ಉಪಯುಕ್ತ ಬೆಂಬಲ ದೊರೆಯಿತು. ಹೀಗಾಗಿ ತಂಡ ಮಧ್ಯಮಹಂತದ ಕುಸಿತದಿಂದ ಅಧೀರಗೊಳ್ಳುವ ಸ್ಥಿತಿ ಎದುರಾಗಲಿಲ್ಲ.

ತವರಿನ ವಿಶ್ವಕಪ್ ಟೂರ್ನಿಯು ಮಾನಸಿಕವಾಗಿ ದಣಿವು ಉಂಟುಮಾಡುತ್ತದೆ. ಆದರೆ ಇದರಲ್ಲೂ ಕೆಲವು ಸಕಾರಾತ್ಮಕ ಅಂಶ ಗಳಿದ್ದವು. ಬೆಂಗಳೂರಿನ ಪಂದ್ಯಗಳನ್ನು ಡಿ.ವೈ. ಪಾಟೀಲ ಕ್ರೀಡಾಂಗಣ ಸೇರಿದಂತೆ ಬೇರೆ ಕ್ರೀಡಾಂಗಣಗಳಿಗೆ ಸ್ಥಳಾಂತರಿಸಿದ್ದು ಇದರಲ್ಲಿ ಒಳಗೊಂಡಿತು. ಇದೂ ತಂಡಕ್ಕೆ ಸಂತಸ ಮೂಡಿಸಿತು.

'ಡಿ.ವೈ ಪಾಟೀಲ ಕ್ರೀಡಾಂಗಣಕ್ಕೆ ನಮ್ಮ ಪಂದ್ಯಗಳನ್ನು ಸ್ಥಳಾಂತರಿಸಿದ್ದು ಗೊತ್ತಾದ ತಕ್ಷಣ ನಮಗೆಲ್ಲಾ ಸಂತಸವಾಯಿತು. ಇಲ್ಲಿ ನಾವು ಉತ್ತಮವಾಗಿ ಆಡಿದ್ದೇವೆ. ಇಲ್ಲಿನ ಪ್ರೇಕ್ಷಕರು ಒಕ್ಕೊರಲಿನ ಬೆಂಬಲ ನೀಡುತ್ತ ಬಂದಿದ್ದಾರೆ' ಎಂದು ಕೌರ್ ಹೇಳಿದರು.

ಬಾಂಗ್ಲಾದೇಶದ ವಿರುದ್ಧ ಪಂದ್ಯ ಮಳೆಯ ಪಾಲಾಗಿತ್ತು. ಇದನ್ನು ಬಿಟ್ಟು ಈ ಕ್ರೀಡಾಂಗಣದಲ್ಲಿ ಆಡಿದ ಎಲ್ಲ ಪಂದ್ಯಗಳಲ್ಲಿ ಭಾರತ ತಂಡ ಜಯಗಳಿಸಿತು. ಈ ಎಲ್ಲ ಪಂದ್ಯಗಳೂ ಮಾಡು–ಮಡಿ ರೀತಿಯದ್ದಾಗಿದ್ದವು.

ನ್ಯೂಜಿಲೆಂಡ್ ಎದುರಿನ ಲೀಗ್ ಹಂತದ ಪಂದ್ಯ ಕ್ವಾರ್ಟರ್‌ಫೈನಲ್ ಪಂದ್ಯದಂತೆ ಇತ್ತು. ಭಾರತ ಇಲ್ಲಿ ಮೊದಲು ಬ್ಯಾಟ್ ಮಾಡಿ 3 ವಿಕೆಟ್‌ಗೆ 340 ರನ್ ಪೇರಿಸಿತು. ಇದು ಪಂದ್ಯ ಗೆಲ್ಲಲು ಧಾರಾಳ ಎನಿಸಿತು. ಆಸ್ಟ್ರೇಲಿಯಾ ಎದುರು ಸೆಮಿಫೈನಲ್ ಪಂದ್ಯದಲ್ಲಿ ಭಾರತ ತಂಡ ವಿಶ್ವದಾಖಲೆಯ ಚೇಸ್ ಮಾಡಿತು. ಈ ಪಂದ್ಯದಲ್ಲಿ ಜೆಮಿಮಾ ರಾಡ್ರಿಗಸ್ ಅವರ ಅಜೇಯ ಶತಕದ ಆಟ ಅವಿಸ್ಮರಣೀಯ ಎನ್ನುವಂತಿತ್ತು. ಅವಳ ಆಟದ ಬಗ್ಗೆಯಿದ್ದ ಸಂಶಯಗಳನ್ನೆಲ್ಲಾ ಆ ಆಟ ದೂರ ಮಾಡಿತು. ಇಂಗ್ಲೆಂಡ್ ವಿರುದ್ಧ ಪಂದ್ಯದಿಂದ ಹೊರಬಿದ್ದಿದ್ದ ಜೆಮಿಮಾ ಅವರ ಆತ್ಮವಿಮರ್ಶೆಗೂ ಕಾರಣವಾಯಿತು.

ಮೂಲ ತಂಡದಲ್ಲಿ ಇಲ್ಲದ ಆಟ ಗಾರ್ತಿ, ಒಂದು ವರ್ಷ ಭಾರತ ಏಕದಿನ ತಂಡದಿಂದ 'ವನವಾಸ' ಅನುಭವಿಸಿದ್ದ ಶಫಾಲಿ ವರ್ಮಾ ಫೈನಲ್ ಪಂದ್ಯದಲ್ಲಿ ಚಮತ್ಕಾರದ ಆಟ ಮೆರೆದರು. ಆ ಪಂದ್ಯದಲ್ಲಿ ಅಮೋಘ 87 ರನ್‌ಗಳ ಜೊತೆ ಆಫ್ ಬ್ರೇಕ್ ಬೌಲಿಂಗ್‌ನಲ್ಲಿ ಎರಡು ವಿಕೆಟ್ ಪಡೆದಿದ್ದು, ಹರಿಣಗಳ ಪಡೆಯನ್ನು ಅಚ್ಚರಿಗೆ ದೂಡಿತು.

2005 ಮತ್ತು 2017ರಲ್ಲಿ ಭಾರತ ತಂಡ ಫೈನಲ್‌ನಲ್ಲಿ ಅವಕಾಶ ಕೈಚೆಲ್ಲಿತು. ಆದರೆ ಹರ್ಮನ್‌ಪ್ರೀತ್ ಕೌರ್ ಪಡೆ ಈ ಅವಕಾಶ ಕೈಬಿಡಲಿಲ್ಲ. ಸಮಾನ ಗುರಿಯನ್ನು ಸಾಧಿಸಲು ಒಂದೇ ಕುಟುಂಬದ ಸದಸ್ಯರ ರೀತಿ ಅವರೆಲ್ಲ ಆಡಿದರು.

ಮುಖ್ಯಾಂಶಗಳು

- ಫೈನಲ್‌ನಲ್ಲಿ ದಕ್ಷಿಣ ಆಫ್ರಿಕಾ ವಿರುದ್ಧ 52 ರನ್‌ಗಳ ಜಯ
- 2005, 2017ರ ಫೈನಲ್‌ನಲ್ಲಿ ಮುಗ್ಗರಿಸಿದ್ದ ಭಾರತದ ವನಿತೆಯರು
- ಆಲ್‌ರೌಂಡರ್ ದೀಪ್ತಿ ಶರ್ಮಾಗೆ ಸರಣಿಯ ಆಟಗಾರ್ತಿ ಗೌರವ

ಐಸಿಸಿ ಏಕದಿನ ವಿಶ್ವಕಪ್

ಐಸಿಸಿ ಏಕದಿನ ವಿಶ್ವಕಪ್ ಗೆದ್ದ ಭಾರತ ತಂಡದ ಆಟಗಾರ್ತಿಯರ ಸಂಭ್ರಮ –ಪಿಟಿಐ ಚಿತ್ರ

ಮಹಿಳಾ ತಂಡದ ಸಾಧನೆ ಹಿಂದಿದೆ 'ಅಮೋಲ್' ಶಕ್ತಿ

ಸಂತೃಪ್ತ ಭಾವದಲ್ಲಿ ಮಜುಂದಾರ್

ನವಿ ಮುಂಬೈ (ಪಿಟಿಐ): ಭಾರತ ತಂಡದಲ್ಲಿ ಆಡುವ ಅವಕಾಶ ಸಿಗಲಿಲ್ಲ ಎಂಬ ಕೊರಗು ಅಮೋಲ್ ಮಜುಂದಾರ್ ಅವರನ್ನು ದೀರ್ಘಕಾಲ ಕಾಡುತ್ತ ಇತ್ತು. ಆದರೆ ಆ ನೋವಿನಿಂದ ಹೊರಬಂದಿರುವ ಭಾರತ ಮಹಿಳಾ ತಂಡದ ಮುಖ್ಯ ಕೋಚ್ ಈಗ ಸಂತೃಪ್ತ ವ್ಯಕ್ತಿ.

ಅವರ ಮಾರ್ಗದರ್ಶನದಲ್ಲಿ ಭಾರತದ ಮಹಿಳಾ ತಂಡ ವಿಶ್ವಕಪ್ ಗೆದ್ದಾಗ ಕೆಲಕ್ಷಣ ಏನೂ ತೋಚದೇ ತಮ್ಮದೇ ಲೋಕದಲ್ಲಿ ಕಳೆದುಹೋಗಿದ್ದರು. ಅಮೇಲಷ್ಟೇ ವಾಸ್ತವ ಸಂಭ್ರಮಕ್ಕೆ ಮರಳಿದ್ದರು.

ಫೈನಲ್ ಪಂದ್ಯದ ಕೊನೆಯಲ್ಲಿ ಹರ್ಮನ್‌ಪ್ರೀತ್ ಕೌರ್ ಅವರು ಓಡಿ ಪಡೆದ ಕ್ಯಾಚಿಗೆ ನದಿನ್ ಡಿ ಕ್ಲರ್ಕ್ ಔಟಾಗಿ ಭಾರತ ಗೆದ್ದಾಗ, ಮಜುಂದಾರ್ ಅವರ ಹಲವು ವರ್ಷಗಳಿಂದ ಮನಸ್ಸಿನಲ್ಲೇ ಅನುಭವಿಸಿದ ಯಾತನೆಗೆ ಹಿತಾನುಭವದ ಮುಲಾಮು ಹಚ್ಚಿದಂತಾಗಿತ್ತು.

'ಆ ಕ್ಯಾಚ್ ಹಿಡಿದ ನಂತರ ನನಗೇನಾಯಿತೆಂದು ಗೊತ್ತೇ ಆಗಲಿಲ್ಲ. ಮುಂದಿನ ಐದು ನಿಮಿಷ ನಾನು ಕಳೆದುಹೋಗಿದ್ದೆ. ಡಗ್‌ಔಟ್‌ನಲ್ಲೇ ಇದ್ದು ಮುಗಿಲಿನತ್ತ ನೋಡುತ್ತಿದ್ದೆ. ಏನಾಯಿತು ಎಂದೇ ಗೊತ್ತಾಗಲಿಲ್ಲ' ಎಂದು ಅವರು ಸೋಮವಾರ ಆಯ್ದ ಪತ್ರಕರ್ತರೊಂದಿಗೆ ಸಂವಾದದಲ್ಲಿ ತಿಳಿಸಿದರು.

ಕೇವಲ ಮೂವರಷ್ಟೇ ಮುಖ್ಯ ಕೋಚ್ ಆಗಿ ಇಂಥ ಯಶಸ್ಸು ಸಾಧಿಸಿದ್ದಾರೆ. ಗ್ಯಾರಿ ಕರ್ಸ್ಟನ್ ಮತ್ತು ರಾಹುಲ್ ದ್ರಾವಿಡ್ ಮೊದಲ ಇಬ್ಬರು. 1983ರಲ್ಲಿ ಕಪಿಲ್ ದೇವ್ ವಿಶ್ವಕಪ್ ಎತ್ತಿಹಿಡಿದಾಗ ತಂಡದಲ್ಲಿ ಮ್ಯಾನೇಜರ್ ಅಷ್ಟೇ ಇದ್ದರು. 2011ರಲ್ಲಿ ಲಾಲ್‌ಚಂದ್ ರಜಪೂತ್ ಅವರು ಹಂಗಾಮಿ ಕೋಚ್ ಆಗಿದ್ದರು.

ಭಾರತ ತಂಡದ ನಾಯಕಿ ಹರ್ಮನ್‌ಪ್ರೀತ್ ಕೌರ್ ಅವರು ವಿಶ್ವಕಪ್ ಫೈನಲ್ ಗೆಲುವಿನ ಬಳಿಕ ಮುಖ್ಯ ಕೋಚ್ ಮಜುಂದಾರ್ ಅವರ ಕಾಲಿಗೆ ಎರಗಿದರು –ಎಎಫ್‌ಪಿ ಚಿತ್ರ

1990ರ ದಶಕದಲ್ಲಿ ದೇಶಿ ಕ್ರಿಕೆಟ್‌ನಲ್ಲಿ ಛಾಪು ಮೂಡಿಸಿದ್ದ ಕಲಾತ್ಮಕ ಬ್ಯಾಟರ್‌ಗಳಲ್ಲಿ ಅಮೋಲ್ ಒಬ್ಬರು. ಆದರೆ ಅವರು ಆಡುತ್ತಿದ್ದ ಕಾಲಘಟ್ಟದಲ್ಲಿ ಸಚಿನ್ ತೆಂಡೂಲ್ಕರ್, ರಾಹುಲ್ ದ್ರಾವಿಡ್, ವಿವಿಎಸ್ ಲಕ್ಷ್ಮಣ್, ಸೌರವ್ ಗಂಗೂಲಿ ಮೊದಲಾದ ಘಟಾನುಘಟಿ ಆಟಗಾರರು ತಂಡದಲ್ಲಿದ್ದರು. ಹೀಗಾಗಿ ಅವರಿಗೆ ಸೀನಿಯರ್ ತಂಡದಲ್ಲಿ ಸ್ಥಾನ ಸಿಗಲಿಲ್ಲ.

ಹ್ಯಾರಿಸ್ ಶೀಲ್ಡ್ ಫೈನಲ್‌ನಲ್ಲಿ ಶಾರದಾಶ್ರಮ ಶಾಲಾ ತಂಡದಲ್ಲಿದ್ದ ಅವರು ಪ್ಯಾಡ್ ಕಟ್ಟಿ ತಮ್ಮ ಸರದಿಗೆ ಕಾಯುತ್ತಿದ್ದರು. ಆದರೆ ಸಚಿನ್ ತೆಂಡೂಲ್ಕರ್ ಮತ್ತು ವಿನೋದ್ ಕಾಂಬ್ಳಿ ಅವರ ದಾಖಲೆಯ 664 ರನ್‌ಗಳ ಜೊತೆಯಾಟದಿಂದ ಅವರಿಗೆ ಬ್ಯಾಟಿಂಗ್ ಮಾಡುವ ಅವಕಾಶವೇ ಸಿಗಲಿಲ್ಲ.

ಶಾಂತಸ್ವಭಾವ, ಸಂಯಮ ಮತ್ತು ಹಸನ್ಮುಖಿ ಅಮೋಲ್ ದೇಶಿ ಕ್ರಿಕೆಟ್‌ನಲ್ಲಿಯೇ ತಮ್ಮ ಸಾಮರ್ಥ್ಯ ತೋರಿದರು. ಮುಂಬೈ ತಂಡವನ್ನು ಕೆಲವು ವರ್ಷ ಮುನ್ನಡೆಸಿದವರು. ದೇಶಿ ಕ್ರಿಕೆಟ್‌ನಲ್ಲಿ 11,000ಕ್ಕೂ ಅಧಿಕ ರನ್ ಗಳಿಸಿದವರು.

ವಿಶ್ವಕಪ್ 2025: ಹೆಚ್ಚು ರನ್ ಗಳಿಸಿದವರು

ಆಟಗಾರ್ತಿ	ದೇಶ	ಪಂದ್ಯ	ರನ್
ಲಾರಾ ವೋಲ್ವಾರ್ಟ್	ದಕ್ಷಿಣ ಆಫ್ರಿಕಾ	9	571
ಸ್ಮೃತಿ ಮಂದಾನ	ಭಾರತ	9	434
ಆ್ಯಶ್ಲಿ ಗಾರ್ಡನರ್	ಆಸ್ಟ್ರೇಲಿಯಾ	7	328
ಪ್ರತೀಕಾ ರಾವಲ್	ಭಾರತ	7	308
ಫೋಬಿ ಲಿಚ್‌ಫೀಲ್ಡ್	ಆಸ್ಟ್ರೇಲಿಯಾ	7	304

ವಿಶ್ವಕಪ್ 2025: ಹೆಚ್ಚು ವಿಕೆಟ್ ಪಡೆದವರು

ಬೌಲರ್	ದೇಶ	ಪಂದ್ಯ	ವಿಕೆಟ್
ದೀಪ್ತಿ ಶರ್ಮಾ	ಭಾರತ	9	22
ಅನ್ನಾಬೆಲ್ ಸದರ್‌ಲ್ಯಾಂಡ್	ಆಸ್ಟ್ರೇಲಿಯಾ	7	17
ಸೋಫಿ ಎಕ್ಲೆಸ್ಟೋನ್	ಇಂಗ್ಲೆಂಡ್	7	16
ಶ್ರೀಚರಣಿ	ಭಾರತ	9	14
ಅಲನಾ ಕಿಂಗ್	ಆಸ್ಟ್ರೇಲಿಯಾ	7	13

ಸಜ್ಜನರ ಆಟಕ್ಕೆ 'ತಾಯ್ತನ'ದ ಪ್ರಭಾವಳಿ

ಒಂದನೇ ಪುಟದಿಂದ...

ಅದಕ್ಕೂ ಮೊದಲು ಕೇವಲ 78 ಎಸೆತಗಳಲ್ಲಿ ಅವರು 87 ರನ್ ಕಲೆಹಾಕಿದ್ದರು. ಶಫಾಲಿ ಏಳು ಓವರ್ ಬೌಲ್ ಮಾಡಬಹುದು ಎಂದು ದಕ್ಷಿಣ ಆಫ್ರಿಕಾ ತಂಡದವರು ಕನಸಲ್ಲೂ ಎಣಿಸಿರಲಿಕ್ಕಿಲ್ಲ. ಯಾಕೆಂದರೆ, ಅವರು ಆಡಿರುವ 31 ಪಂದ್ಯಗಳಲ್ಲಿ ಬೌಲ್ ಮಾಡಿರುವುದು ಆರರಲ್ಲಿ ಮಾತ್ರ.

ಭಾರತದ ಹೆಣ್ಣುಮಕ್ಕಳ ವಿಶ್ವಕಪ್ ವಿಜಯದ ಹಾದಿಯಲ್ಲಿ ಮೊಗೆದಷ್ಟೂ ಭಾವುಕ ಕಥೆಗಳು ಸಿಗುತ್ತವೆ. ಅದು ಅಂತ್ಯಗೊಂಡ ಬಗೆಯಲ್ಲಿ ಎದ್ದುಕಂಡಿದ್ದು ತಾಯ್ತನದ ಬನಿ. ದಕ್ಷಿಣ ಆಫ್ರಿಕಾದ ನಾಯಕಿ ಲಾರಾ ವೋಲ್ವಾರ್ಟ್ ಅವರನ್ನು ಸ್ಮೃತಿ ಆಲಿಂಗಿಸಿದ್ದು, ಹಳೆಯ ದಿಗ್ಗಜ ಆಟಗಾರ್ತಿಯರಾದ ಝೂಲನ್ ಗೋಸ್ವಾಮಿ–ಮಿಥಾಲಿ ರಾಜ್ ಕಪ್ ಸ್ಪರ್ಶಿಸಿ ಮಕ್ಕಳಂತೆ ಸುಖಿಸಿದ್ದು, ಎಲ್ಲರ ಕಣ್ಣುಗಳಲ್ಲಿ ತೇವ ಜಮೆಯಾಗಿದ್ದು... ಚಳಿಗಾಲದಲ್ಲಿ ಎದೆ ಬೆಚ್ಚಗಾಗಿಸುವ ಗಾಳಿಯೊಂದು ಹದವಾಗಿ ಬೀಸಿದಂತಾಯಿತು.

ಹತಾಶೆ ಮೂಡಿಸಿದೆ: ವೋಲ್ವಾರ್ಟ್

ನವಿ ಮುಂಬೈ (ಪಿಟಿಐ): ಮಹಿಳಾ ಏಕದಿನ ವಿಶ್ವಕಪ್ ಫೈನಲ್ ಪಂದ್ಯದಲ್ಲಿ ಭಾರತದ ಸಾಂದರ್ಭಿಕ ಬೌಲರ್ ಶಫಾಲಿ ವರ್ಮಾ ಅವರಿಗೆ ಎರಡು ವಿಕೆಟ್‌ಗಳನ್ನು ಕಳೆದುಕೊಂಡಿದ್ದು ದಕ್ಷಿಣ ಆಫ್ರಿಕಾದ ನಾಯಕಿ ಲಾರಾ ವೋಲ್ವಾರ್ಟ್ ಅವರಿಗೆ ಹತಾಶೆ ಮೂಡಿಸಿದೆ.

ಆದರೆ ಸತತ ಮೂರು ಐಸಿಸಿ ಟೂರ್ನಿಗಳಲ್ಲಿ ಫೈನಲ್ ತಲುಪಿದ್ದು ದೇಶದಲ್ಲಿ ಕ್ರಿಕೆಟ್ ಸರಿಯಾದ ದಿಕ್ಕಿನಲ್ಲಿ ಸಾಗುತ್ತಿದೆ ಎಂದು ಭಾನುವಾರದ ಅಂತಿಮ ಪಂದ್ಯದಲ್ಲಿ ಶತಕ ಬಾರಿಸಿದ ವೋಲ್ವಾರ್ಟ್ ಹೇಳಿದ್ದಾರೆ. ಹರಿಣಗಳ ಪಡೆ 2023ರ ಟಿ20 ವಿಶ್ವಕಪ್ ಫೈನಲ್‌ನಲ್ಲಿ ಆಸ್ಟ್ರೇಲಿಯಾ ಎದುರು ಸೋತಿತ್ತು. 2024ರ ಟಿ20 ವಿಶ್ವಕಪ್ ಫೈನಲ್‌ನಲ್ಲಿ ನ್ಯೂಜಿಲೆಂಡ್‌ಗೆ ಮಣಿದಿತ್ತು. ಈಗ ಏಕದಿನ ವಿಶ್ವಕಪ್‌ನಲ್ಲಿ ಭಾರತ ಎದುರು ಸೋಲನುಭವಿಸಿದೆ.

299 ರನ್‌ಗಳ ಮೊತ್ತ ಬೆನ್ನಟ್ಟಿದ್ದ ದಕ್ಷಿಣ ಆಫ್ರಿಕಾ ತಂಡ ಉತ್ತಮ ಆರಂಭ ಪಡೆದಿತ್ತು. ಆದರೆ ಶಫಾಲಿ ಅವರು ಸುನೆ ಲೀಸ್ (25) ಮತ್ತು ಮರೈಝನ್ ಕಾಪ್ (4) ಅವರ ವಿಕೆಟ್‌ಗಳನ್ನು ಪಡೆದು ಎದುರಾಳಿಗಳನ್ನು ಒತ್ತಡಕ್ಕೆ ತಳ್ಳಿದ್ದರು.

'ವಿಶ್ವಕಪ್ ಫೈನಲ್‌ನಲ್ಲಿ ಸಾಂದರ್ಭಿಕ ಬೌಲರ್‌ಗೆ ವಿಕೆಟ್ ಕಳೆದುಕೊಳ್ಳುವುದನ್ನು ಯಾರೂ ಇಷ್ಟಪಡುವುದಿಲ್ಲ. ಆದರೆ ಅವರು ಎರಡು ವಿಕೆಟ್ ಪಡೆದಿದ್ದು ಹತಾಶಗೊಳಿಸಿತು. ಎರಡೂ ಮಹತ್ವದ ವಿಕೆಟ್‌ಗಳು. ನಂತರ ಅವರಿಗೆ ಮತ್ತಷ್ಟು ವಿಕೆಟ್ ಸಿಗದಂತೆ ಎಚ್ಚರಿಕೆ ವಹಿಸಬೇಕಾಯಿತು' ಎಂದು ವೋಲ್ವಾರ್ಟ್ ತಿಳಿಸಿದರು.

ಲಾರಾ ವೋಲ್ವಾರ್ಟ್ ಈ ಟೂರ್ನಿಯ 9 ಇನಿಂಗ್ಸ್‌ಗಳಲ್ಲಿ 71.37 ಸರಾಸರಿಯಲ್ಲಿ 571 ರನ್ ಕಲೆಹಾಕಿದ್ದು, ಇದು ಒಂದೇ ವಿಶ್ವಕಪ್‌ನಲ್ಲಿ ಗರಿಷ್ಠ ರನ್ ದಾಖಲೆಯಾಗಿದೆ. ಸೆಮಿಫೈನಲ್ ಮತ್ತು ಫೈನಲ್ ಎರಡರಲ್ಲೂ ಶತಕ, ಮೂರು ಪಂದ್ಯಗಳಲ್ಲಿ ಅರ್ಧ ಶತಕ ಅವರ ಹೆಗ್ಗಳಿಕೆ.

ಲಾರಾ ವೋಲ್ವಾರ್ಟ್

ಅದೃಷ್ಟದ ಬಲದಲ್ಲಿ ಮಿಂದೆದ್ದ ಶಫಾಲಿ

ನವಿ ಮುಂಬೈ (ಪಿಟಿಐ): 'ದೈವಬಲ....' ಎಂಬ ಪದ ಶಫಾಲಿ ವರ್ಮಾ ಅವರಿಗೆ ಸರಿಯಾಗಿ ಒಪ್ಪುತ್ತದೆ. ಅವರು ಸೆಮಿಫೈನಲ್ ಪಂದ್ಯಕ್ಕೆ ಮೊದಲು ತಂಡದಲ್ಲೇ ಇರಲಿಲ್ಲ. ಗಾಯಾಳಾದ ಆರಂಭ ಆಟಗಾರ್ತಿ ಪ್ರತೀಕಾ ರಾವಲ್ ಅವರ ಬದಲು ಸ್ಥಾನ ಪಡೆದ ಶಫಾಲಿ ಈಗ ಭಾರತ ತಂಡದ ವಿಶ್ವಕಪ್ ಫೈನಲ್ ಪಂದ್ಯದ ಗೆಲುವಿನಲ್ಲಿ ಅಚ್ಚಳಿಯದ ಛಾಪು ಮೂಡಿಸಿದ್ದಾರೆ.

ಆಯ್ಕೆ ಸಮಿತಿ ಅಧ್ಯಕ್ಷೆ ನೀತು ಡೇವಿಡ್ ಅವರು ಆಗಸ್ಟ್‌ನಲ್ಲಿ ಪತ್ರಿಕಾಗೋಷ್ಠಿಯ ವೇಳೆ ಶಫಾಲಿ ಅವರನ್ನು ವಿಶ್ವಕಪ್ ತಂಡದಿಂದ ಹೊರಗಿಟ್ಟಿರುವುದನ್ನು ಖಚಿತ ಪಡಿಸಿ, 'ಅವರು ಮುಂದೊಮ್ಮೆ ಭಾರತ ತಂಡಕ್ಕೆ ಆಡುವ ಅವಕಾಶ ಪಡೆಯುತ್ತಾರೆ' ಎಂದು 'ಭರವಸೆ' ನೀಡಿದ್ದರು. 21 ವರ್ಷ ವಯಸ್ಸಿನ ಶಫಾಲಿ ಈ ಹಿಂದೆ ಎರಡೂ ಮಾದರಿಗಳ ವಿಶ್ವಕಪ್‌ನಲ್ಲಿ ಒಟ್ಟು ಐದು ಪಂದ್ಯಗಳನ್ನು ಆಡಿದ್ದರು.

ಏಕದಿನ ಪಂದ್ಯಗಳಲ್ಲಿ ಶಫಾಲಿ ತಮಗೆ ದೊರೆತ ಅವಕಾಶಗಳಲ್ಲಿ ಏರಿಳಿತ ಕಂಡಿದ್ದರು. ಸತತವಾಗಿ ವಿಫಲರಾದ ಬಳಿಕ ನಂತರ ಅವರನ್ನು ತಂಡದಿಂದ ಹೊರಗಿಡಲಾಯಿತು. ಆರಂಭ ಆಟಗಾರ್ತಿ ಪ್ರತೀಕಾ ರಾವಲ್ ಸ್ಫೂರ್ತಿಯುತ ಪ್ರದರ್ಶನ ನೀಡತೊಡಗಿದ ನಂತರ ಶಫಾಲಿಗೆ ಮರಳಿ ಸ್ಥಾನ ಪಡೆಯುವ ಸಾಧ್ಯತೆಯೂ ದೂರವಾಯಿತು. ಆದರೆ ಲಯದಲ್ಲಿದ್ದ ಪ್ರತೀಕಾ ದುರದೃಷ್ಟವಶಾತ್ ಗಾಯಾಳಾದರು. ಈ ಸಂದರ್ಭದಲ್ಲಿ ಸೂರತ್‌ನಲ್ಲಿ ಸೀನಿಯರ್ ರಾಷ್ಟ್ರೀಯ ಮಹಿಳಾ ಟಿ20 ಟೂರ್ನಿಯಲ್ಲಿ ಆಡುತ್ತಿದ್ದ ಶಫಾಲಿ ಅವರಿಗೆ ಅದೃಷ್ಟದ ಬಾಗಿಲು ದೊರೆಯಿತು.

ಆಸ್ಟ್ರೇಲಿಯಾ ವಿರುದ್ಧ ಸೆಮಿಫೈನಲ್ ಪಂದ್ಯಕ್ಕೆ ತಯಾರಿ ನಡೆಸಲು ಶಫಾಲಿ ಬಳಿ ಬಳಿ ಹೆಚ್ಚು ಸಮಯವೂ ಇರಲಿಲ್ಲ.

ಪುನರಾಗಮನದ ಮೊದಲ ಯತ್ನದಲ್ಲಿ ಆಸ್ಟ್ರೇಲಿಯಾ ವಿರುದ್ಧ ಅವರು ಎದುರಿಸಿದ್ದು ಐದೇ ಎಸೆತಗಳನ್ನು. ಆದರೆ ಫೈನಲ್‌ನಲ್ಲಿ ಹಲವು ವರ್ಷಗಳ ಅನುಭವಿಯಂತೆ ಆಟವಾಡಿದರು. ಆಕರ್ಷಕ ಹೊಡೆತಗಳಿದ್ದ 87 ರನ್ ಬಾರಿಸಿ, ತಂಡ ದೊಡ್ಡ ಮೊತ್ತ ದಾಖಲಿಸುವುದಕ್ಕೆ ಅಡಿಪಾಯ ಹಾಕಿಕೊಟ್ಟರು. ಫೈನಲ್‌ನಲ್ಲಿ ಅರ್ಧ ಶತಕ ಬಾರಿಸಿದ ಅತಿ ಕಿರಿಯ ಆಟಗಾರ್ತಿ ಎಂಬ ಶ್ರೇಯ ಅವರದಾಯಿತು.

ಆದರೆ ಬೌಲಿಂಗ್‌ನಲ್ಲಿ ಅವರು ಛಾಪು ಮೂಡಿಸಬಹುದೆಂದು ಯಾರೂ ಯೋಚಿಸಿರಲಿಲ್ಲ– ಆಪ್ತೇಷ್ಟರನ್ನು ಹೊರತುಪಡಿಸಿ. ಭಾನುವಾರದ ಫೈನಲ್‌ಗಿಂತ ಮೊದಲು 30 ಏಕದಿನ ಪಂದ್ಯಗಳಲ್ಲಿ ಅವರು ಬೌಲಿಂಗ್ ಮಾಡಿದ್ದು ಐದೇ ಬಾರಿ. ಅದೂ ಸಾಂದರ್ಭಿಕ ಬೌಲರ್ ಆಗಿ.

ಬಿಸಿಸಿಐನಿಂದ ₹51 ಕೋಟಿ ಬಹುಮಾನ

ನವದೆಹಲಿ (ಪಿಟಿಐ): ಏಕದಿನ ವಿಶ್ವ ಕಪ್ ಗೆದ್ದುಕೊಂಡ ಭಾರತ ಮಹಿಳಾ ತಂಡಕ್ಕೆ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯು ₹51 ಕೋಟಿ ಬಹುಮಾನ ನೀಡಲಿದೆ ಎಂದು ಮಂಡಳಿಯ ಕಾರ್ಯದರ್ಶಿ ದೇವಜಿತ್ ಸೈಕಿಯಾ ಸೋಮವಾರ ಇಲ್ಲಿ ತಿಳಿಸಿದರು.

'ಭಾರತ ಮಹಿಳಾ ತಂಡವು ವಿಶ್ವಕಪ್ ಗೆದ್ದುಕೊಂಡಿರುವುದಕ್ಕೆ ಮೆಚ್ಚುಗೆಯ ಸಂಕೇತವಾಗಿ ಬಿಸಿಸಿಐ ₹51 ಕೋಟಿ ನಗದು ಬಹುಮಾನ ನೀಡಲಿದೆ. ಆಟಗಾರ್ತಿಯರು, ನೆರವು ಸಿಬ್ಬಂದಿ ಮತ್ತು ರಾಷ್ಟ್ರೀಯ ಆಯ್ಕೆ ಸಮಿತಿಯ ಸದಸ್ಯರೂ ಇದರಲ್ಲಿ ಒಳಗೊಳ್ಳಲಿದ್ದಾರೆ' ಎಂದು ಸೈಕಿಯಾ ತಿಳಿಸಿದ್ದಾರೆ.

ಕ್ರಾಂತಿಗೆ ₹1 ಕೋಟಿ (ಭೋಪಾಲ್ ವರದಿ): ವಿಶ್ವ ಕಪ್ ವಿಜೇತ ತಂಡದಲ್ಲಿದ್ದ ಮಧ್ಯಪ್ರದೇಶದ ವೇಗದ ಬೌಲರ್ ಕ್ರಾಂತಿ ಗೌಡ್ ಅವರಿಗೆ ₹1 ಕೋಟಿ ನೀಡುವುದಾಗಿ ಮಧ್ಯ ಪ್ರದೇಶ ಸರ್ಕಾರ ಸೋಮವಾರ ಪ್ರಕಟಿಸಿದೆ.

ರೇಣುಕಾಗೆ ₹1 ಕೋಟಿ (ಶಿಮ್ಲಾ ವರದಿ): ಮಹಿಳಾ ವಿಶ್ವಕಪ್ ವಿಜೇತ ಭಾರತ ತಂಡದ ಅನುಭವಿ ಬೌಲರ್ ರೇಣುಕಾ ಸಿಂಗ್ ಠಾಕೂರ್ ಅವರಿಗೆ ಹಿಮಾಚಲ ಪ್ರದೇಶ ಸರ್ಕಾರ ₹1 ಕೋಟಿ ನಗದು ಬಹುಮಾನ ಘೋಷಿಸಿದೆ.

29 ವರ್ಷ ವಯಸ್ಸಿನ ರೇಣುಕಾ ಅವರು ಹಿಮಾಚಲ ಪ್ರದೇಶದ ಶಿಮ್ಲಾ ಜಿಲ್ಲೆಯ ರೊಹ್ರುದವರು.

ಮಂಗಳವಾರ • ನವೆಂಬರ್ 4, 2025
ಪ್ರಜಾವಾಣಿ

ಸೈಕ್ಲಿಂಗ್: ಅರ್ಜುನ್, ವಿದ್ಯಾಗೆ ಚಿನ್ನ

ಬೆಂಗಳೂರು: ಧಾರವಾಡದ ಅರ್ಜುನ್ ಕಲಾಲ್ ಹಾಗೂ ಬಾಗಲಕೋಟೆಯ ವಿದ್ಯಾ ಮುತ್ತಪ್ಪ ಲಮಾಣಿ ಇಲ್ಲಿ ನಡೆಯುತ್ತಿರುವ ರಾಜ್ಯ ಮಿನಿ ಗೇಮ್ಸ್‌ನಲ್ಲಿ ಕ್ರಮವಾಗಿ ಬಾಲಕ ಮತ್ತು ಬಾಲಕಿಯರ 10 ಕಿ.ಮೀ. ಟೈಮ್ ಟ್ರಯಲ್ ಸೈಕ್ಲಿಂಗ್ ಸ್ಪರ್ಧೆಯಲ್ಲಿ ಚಿನ್ನ ಗೆದ್ದರು.

ಅರ್ಜುನ್ 14ನಿ. 15 ಸೆಕೆಂಡುಗಳಲ್ಲಿ ಗುರಿ ತಲುಪಿದರು. ಧಾರವಾಡದ ಅಭಿಷೇಕ್ ಬೆಳ್ಳಿ ಹಾಗೂ ಬೆಂಗಳೂರಿನ ಸ್ನೇಹೊ ರಾಯ್ ಕಂಚು ಜಯಿಸಿದರು.

ಬಾಲಕಿಯರ ಸ್ಪರ್ಧೆಯಲ್ಲಿ ವಿದ್ಯಾ 11ನಿ. 13 ಸೆಕೆಂಡುಗಳಲ್ಲಿ ಸ್ಪರ್ಧೆ ಮುಗಿಸಿದರು. ವಿಜಯಪುರದ ವರ್ಷಾ ಎಸ್.ಸಿ. ಬೆಳ್ಳಿ ಹಾಗೂ ಬಾಗಲಕೋಟೆಯ ಸಹನಾ ವಿ.ಎಂ. ಕಂಚು ಗೆದ್ದರು.

ಬಾಲಕಿಯರ 15 ಕಿ.ಮೀ. ರೋಡ್ ಮಾಸ್ ಸ್ಟಾರ್ಟ್ ಸ್ಪರ್ಧೆಯಲ್ಲಿ ಗದಗದ ಪ್ರಿಯಾಂಕಾ ನೀಲಪ್ಪ ಲಮಾಣಿ ಚಿನ್ನ ಗೆದ್ದರು. ಬಾಗಲಕೋಟೆಯ ಪ್ರತಿಭಾ ಎಚ್. ಹುಡೇದ್ ಮತ್ತು ವಿಜಯಪುರದ ದೀಪಿಕಾ ದೇವು ಚವ್ಹಾಣ್ ಕ್ರಮವಾಗಿ ಬೆಳ್ಳಿ ಮತ್ತು ಕಂಚಿನ ಪದಕ ಗೆದ್ದುಕೊಂಡರು.

ಬಾಲಕರ 20 ಕಿ.ಮೀ. ಸ್ಪರ್ಧೆಯಲ್ಲಿ ಬೆಂಗಳೂರಿನ ಸ್ನೇಹೊ ರಾಯ್ ಚಾಂಪಿಯನ್ ಆದರು. ಧಾರವಾಡದ ಅರ್ಜುನ್ ಕಲಾಲ್ ಬೆಳ್ಳಿ ಗೆದ್ದರೆ, ವಿಜಯಪುರದ ಅಭಿಷೇಕ್ ಕಂಚಿನ ಪದಕ ತಮ್ಮದಾಗಿಸಿಕೊಂಡರು.

ಮಯಂಕ್ ಅಮೋಘ ದಾಳಿ: ಛತ್ತೀಸಗಢಕ್ಕೆ ಮುನ್ನಡೆ

ಪ್ರಜಾವಾಣಿ ವಾರ್ತೆ

ಮೈಸೂರು: ಛತ್ತೀಸಗಢದ ಮಯಂಕ್ ಯಾದವ್ (48ಕ್ಕೆ 3) ಬೌಲಿಂಗ್ ದಾಳಿಗೆ ತತ್ತರಿಸಿದ ಕರ್ನಾಟಕ ತಂಡವು, ಇಲ್ಲಿ ನಡೆಯುತ್ತಿರುವ ಕರ್ನಲ್ ಸಿ.ಕೆ.ನಾಯ್ಡು ಕ್ರಿಕೆಟ್ ಟೂರ್ನಿಯ ಪಂದ್ಯದ ಮೊದಲ ಇನ್ನಿಂಗ್ಸ್‌ನಲ್ಲಿ 212ಕ್ಕೆ ಆಲೌಟ್ ಆಯಿತು.

ಮಾನಸಗಂಗೋತ್ರಿಯ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಕ್ರೀಡಾಂಗಣದಲ್ಲಿ ಆತಿಥೇಯ ತಂಡದ ಹರ್ಷಿಲ್ ಧರ್ಮನಿ (80 ರನ್; 195 ಎಸೆತ, 4x8) ಅವರು ಧ್ರುವ್ ಪ್ರಭಾಕರ್, ಸಮಿತ್ ದ್ರಾವಿಡ್, ಹಾರ್ದಿಕ್ ರಾಜ್ ಅವರೊಂದಿಗೆ ಉತ್ತಮ ಇನ್ನಿಂಗ್ಸ್ ಕಟ್ಟಲು ಯತ್ನಿಸಿದರು. ಸಮಿತ್ ಮತ್ತು ಹರ್ಷಿಲ್ ಅವರಿಗೆ ಮಯಂಕ್ ಯಾದವ್ ಪೆವಿಲಿಯನ್ ದಾರಿ ತೋರಿಸಿದರು. ರಾಜ್ಯ 79.1 ಓವರ್‌ಗಳಲ್ಲಿ ಆಲೌಟ್ ಆಗಿ ಹಿನ್ನಡೆ ಅನುಭವಿಸಿತು. 2ನೇ ದಿನದಾಟದ ಅಂತ್ಯಕ್ಕೆ ಛತ್ತೀಸಗಢ ತಂಡವು 2ನೇ ಇನ್ನಿಂಗ್ಸ್‌ನಲ್ಲಿ ವಿಕೆಟ್ ನಷ್ಟವಿಲ್ಲದೇ 14 ರನ್ ಗಳಿಸಿದೆ.

ಸಂಕ್ಷಿಪ್ತ ಸ್ಕೋರು: ಮೊದಲ ಇನ್ನಿಂಗ್ಸ್: ಛತ್ತೀಸಗಢ 83 ಓವರ್‌ಗಳಲ್ಲಿ 303. ಕರ್ನಾಟಕ 79.1 ಓವರ್‌ಗಳಲ್ಲಿ 212 ರನ್ (ಹರ್ಷಿಲ್ ಧರ್ಮನಿ 80 ರನ್. ಮಯಂಕ್ ಯಾದವ್ 48ಕ್ಕೆ 3, ದೇವ್ ಆದಿತ್ಯ ಸಿಂಗ್ 23ಕ್ಕೆ 2, ಪ್ರಶಾಂತ್ ಸಾಯಿ ಪೈಂಕ್ರ 32ಕ್ಕೆ 2). 2ನೇ ಇನ್ನಿಂಗ್ಸ್: ಛತ್ತೀಸಗಢ 9 ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೇ 14 (ಶೋಭಿತ್ ಶರ್ಮಾ ಔಟಾಗದೇ 7, ಮಯಂಕ್ ವರ್ಮಾ ಔಟಾಗದೇ 6)

ಭಾರತ ಚೊಚ್ಚಲ ಮಹಿಳಾ ವಿಶ್ವಕಪ್ ಕ್ರಿಕೆಟ್ ನಲ್ಲಿ ಜಯ ಗಳಿಸಿದೆ!

ವಿದ್ವತ್, ವೈಶಾಖ ದಾಳಿಗೆ ಕುಸಿದ ಕೇರಳ

ರಣಜಿ ಟ್ರೋಫಿ: ಆತಿಥೇಯರ ಮೇಲೆ ಫಾಲೋಆನ್ ಹೇರಿದ ಮಯಂಕ್ ಬಳಗ

ತಿರುವನಂತಪುರ (ಪಿಟಿಐ): ವೇಗಿಗಳಾದ ವಿದ್ವತ್ ಕಾವೇರಪ್ಪ (42ಕ್ಕೆ 4) ಮತ್ತು ವೈಶಾಖ ವಿಜಯಕುಮಾರ್ (62ಕ್ಕೆ 3) ಅವರ ಪರಿಣಾಮಕಾರಿ ಬೌಲಿಂಗ್ ದಾಳಿಯ ನೆರವಿನಿಂದ ಕರ್ನಾಟಕ ತಂಡವು ರಣಜಿ ಟ್ರೋಫಿಯ ಬಿ ಗುಂಪಿನ ಪಂದ್ಯದ ಮೊದಲ ಇನಿಂಗ್ಸ್‌ನಲ್ಲಿ 348 ರನ್‌ಗಳ ಭಾರಿ ಮುನ್ನಡೆ ಪಡೆಯಿತು. ಹಾಲಿ ರನ್ನರ್ಸ್ ಅಪ್ ಕೇರಳ ತಂಡದ ಮೇಲೆ ಫಾಲೋಆನ್ ಹೇರಿತು.

ಮಂಗಲಪುರದ ಕೆಸಿಎ ಕ್ರಿಕೆಟ್ ಮೈದಾನದಲ್ಲಿ ನಡೆಯುತ್ತಿರುವ ಪಂದ್ಯದ ಮೇಲೆ ಕರ್ನಾಟಕ ತಂಡವು ಮೂರನೇ ದಿನವಾದ ಸೋಮವಾರ ಮತ್ತಷ್ಟು ಹಿಡಿತ ಸಾಧಿಸಿತು. ಕರುಣ್ ನಾಯರ್ (233) ಮತ್ತು ರವಿಚಂದ್ರನ್ ಸ್ಮರಣ್ (220) ಅವರ ದ್ವಿಶತಕಗಳ ನೆರವಿನಿಂದ ಮಯಂಕ್ ಅಗರವಾಲ್ ಪಡೆ ಮೊದಲ ಇನಿಂಗ್ಸ್‌ನಲ್ಲಿ 5 ವಿಕೆಟ್‌ಗಳಿಗೆ 586 ರನ್ ಗಳಿಸಿ ಡಿಕ್ಲೇರ್ಡ್ ಮಾಡಿಕೊಂಡಿತ್ತು.

ಇದಕ್ಕೆ ಉತ್ತರವಾಗಿ ಇನಿಂಗ್ಸ್ ಆರಂಭಿಸಿದ ಕೇರಳ ತಂಡವು ವಿದ್ವತ್ ಮತ್ತು ವೈಶಾಖ ದಾಳಿಗೆ ತತ್ತರಿಸಿ 238 ರನ್‌ಗಳಿಗೆ ಕುಸಿಯಿತು. ಇದರಿಂದಾಗಿ ಭಾರಿ ರನ್‌ಗಳ ಮುನ್ನಡೆ ಪಡೆದ ಕರ್ನಾಟಕ ತಂಡವು ಹಾಲಿ ಟೂರ್ನಿಯಲ್ಲಿ ಮೊದಲ ಗೆಲುವಿನ ಭರವಸೆಯಲ್ಲಿದೆ.

ಭಾನುವಾರ ಮೂರು ವಿಕೆಟ್‌ಗೆ 21 ರನ್ ಗಳಿಸಿ ಸಂಕಷ್ಟದಲ್ಲಿದ್ದ ಆತಿಥೇಯ ತಂಡಕ್ಕೆ ಬಾಬಾ ಅಪರಾಜಿತ್ (88;159ಎ) ಕೊಂಚ ಆಸರೆಯಾದರು. ಅಪರಾಜಿತ್ ಮತ್ತು ಸಚಿನ್ ಬೇಬಿ (31) ಅವರು ಐದನೇ ವಿಕೆಟ್ ಜೊತೆಯಾಟದಲ್ಲಿ 86 ರನ್ ಸೇರಿಸಿದರು. ವಿದ್ವತ್ ಅವರು ಈ ಜೊತೆಯಾಟವನ್ನು ಮುರಿದರು.

ನಂತರ ಅಹಮದ್ ಇಮ್ರಾನ್ (31), ಶೋನ್ ರೋಜರ್ (29) ಅಲ್ಪ ಹೋರಾಟ ತೋರಿದ್ದರಿಂದ ಆತಿಥೇಯ ತಂಡದ ಮೊತ್ತ 200ರ ಗಡಿ ದಾಟಲು ಸಾಧ್ಯವಾಯಿತು.

ಎರಡನೇ ಇನಿಂಗ್ಸ್ ಆರಂಭಿಸಿದ ಕೇರಳ ತಂಡವು ದಿನದಾಟದ ಅಂತ್ಯಕ್ಕೆ ವಿಕೆಟ್ ನಷ್ಟವಿಲ್ಲದೇ 10 ರನ್ ಗಳಿಸಿದೆ. ಕೊನೆಯ ದಿನದ ಆಟ ಬಾಕಿ ಉಳಿದಿದ್ದು, ಇನಿಂಗ್ಸ್ ಸೋಲು ತಪ್ಪಿಸಲು ಆತಿಥೇಯರು 338 ರನ್ ಗಳಿಸಬೇಕಿದೆ. ಇನಿಂಗ್ಸ್ ಗೆಲುವು ದಾಖಲಿಸಲು ಕರ್ನಾಟಕಕ್ಕೆ 10 ವಿಕೆಟ್‌ಗಳ ಅಗತ್ಯವಿದೆ.

ಕರ್ನಾಟಕ ತಂಡವು ಆಡಿರುವ ಮೊದಲೆರಡು (ಸೌರಾಷ್ಟ್ರ ಮತ್ತು ಗೋವಾ ವಿರುದ್ಧ) ಪಂದ್ಯಗಳೂ ಡ್ರಾ ಆಗಿದ್ದವು.

ಸಂಕ್ಷಿಪ್ತ ಸ್ಕೋರ್: ಮೊದಲ ಇನಿಂಗ್ಸ್: ಕರ್ನಾಟಕ: 167 ಓವರ್‌ಗಳಲ್ಲಿ 5 ವಿಕೆಟ್‌ಗೆ 586 ಡಿಕ್ಲೇರ್ಡ್; ಕೇರಳ: 95 ಓವರ್‌ಗಳಲ್ಲಿ 238 (ಸಚಿನ್ ಬೇಬಿ 31, ಬಾಬಾ ಅಪರಾಜಿತ್ 88, ಅಹಮದ್ ಇಮ್ರಾನ್ 31, ಶೋನ್ ರೋಜರ್ 29; ವಿದ್ವತ್ ಕಾವೇರಪ್ಪ 42ಕ್ಕೆ 4, ವೈಶಾಖ ವಿಜಯಕುಮಾರ್ 62ಕ್ಕೆ 3, ಶಿಖರ್ ಶೆಟ್ಟಿ 53ಕ್ಕೆ 2). ಎರಡನೇ ಇನಿಂಗ್ಸ್: ಕೇರಳ: 3 ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೇ 10.

ನಾಲ್ಕು ವಿಕೆಟ್ ಪಡೆದ ವಿದ್ವತ್ ಕಾವೇರಪ್ಪ (ಎಡ), ಮೂರು ವಿಕೆಟ್ ಕಬಳಿಸಿದ ವೈಶಾಖ ವಿಜಯಕುಮಾರ್

ಪರಂತಾಪ್ ಬದಲು ಪಡಿಕ್ಕಲ್

ಪುಣೆಯಲ್ಲಿ ಮಹಾರಾಷ್ಟ್ರ ವಿರುದ್ಧ (ನ.8-11) ಮತ್ತು ಹುಬ್ಬಳ್ಳಿಯಲ್ಲಿ ಚಂಡೀಗಢ ವಿರುದ್ಧದ (ನ.16-19) ರಣಜಿ ಟ್ರೋಫಿ ಪಂದ್ಯಗಳಿಗೆ 15 ಸದಸ್ಯರ ಕರ್ನಾಟಕ ತಂಡವನ್ನು ಸೋಮವಾರ ಪ್ರಕಟಿಸಲಾಗಿದೆ.

ದಕ್ಷಿಣ ಆಫ್ರಿಕಾ ವಿರುದ್ಧದ 'ಟೆಸ್ಟ್'ಗೆ ಭಾರತ ಎ ತಂಡದಲ್ಲಿ ಸ್ಥಾನ ಪಡೆದಿದ್ದ ಎಡಗೈ ಬ್ಯಾಟರ್ ದೇವದತ್ತ ಪಡಿಕ್ಕಲ್ ಅವರು ಮತ್ತೆ ರಾಜ್ಯ ತಂಡಕ್ಕೆ ವಾಪಸಾಗಿದ್ದಾರೆ. ಅವರ ಬದಲು ಅವಕಾಶ ಪಡೆದಿದ್ದ ಯಶೋವರ್ಧನ್ ಪರಂತಾಪ್ ಅವರನ್ನು ಮುಂದಿನ ಎರಡು ಪಂದ್ಯಗಳಿಗೆ ಕೈಬಿಡಲಾಗಿದೆ.

ಚೆಸ್ ವಿಶ್ವಕಪ್: ನಾರಾಯಣನ್, ಪ್ರಣವ್ ಮುನ್ನಡೆ

ಪಣಜಿ (ಪಿಟಿಐ): ಭಾರತದ ಎಸ್. ಎಲ್.ನಾರಾಯಣನ್ ಅವರು ಪೆರುವಿನ ಸ್ಟೀವನ್ ರೋಜಾಸ್ ಅವರನ್ನು ಸೋಮವಾರ ಟೈಬ್ರೇಕರ್‌ನಲ್ಲಿ ಮಣಿಸಿ ಫಿಡೆ ವಿಶ್ವಕಪ್ ಚೆಸ್ ಟೂರ್ನಿಯ 128ರ ಸುತ್ತಿಗೆ ಅರ್ಹತೆ ಪಡೆದರು.

ಇವರಿಬ್ಬರ ನಡುವೆ ಕ್ಲಾಸಿಕಲ್ ಪಂದ್ಯಗಳು 1-1 ಸಮನಾಗಿದ್ದವು. ವೇಗದ ಮಾದರಿಯ ಆಟದಲ್ಲಿ ಕೌಶಲ ಹೊಂದಿರುವ ನಾರಾಯಣನ್, ಟೈಬ್ರೇಕರ್‌ನ ಮೊದಲ ಆಟದಲ್ಲಿ ಕಪ್ಪುಕಾಯಿಗಳಲ್ಲಿ ಆಡಿ ಎದುರಾಳಿಯ ರಕ್ಷಣಾ ಕೋಟೆಯನ್ನು ಭೇದಿಸಿದರು. ಎರಡನೇ ಆಟವನ್ನು ಅವರು ಕೇವಲ 22 ನಡೆಗಳಲ್ಲಿ ಗೆದ್ದರು.

ಕೋಲ್ಕತ್ತದ ದೀಪ್ತಾಯನ ಘೋಷ್, ಚೀನಾದ ಪೆಂಗ್ ಷಿಯಾಂಗ್‌ಲಿಯಾನ್ ಅವರನ್ನು ಟೈಬ್ರೇಕರ್‌ನ ಎರಡೂ ಪಂದ್ಯಗಳಲ್ಲಿ ಸೋಲಿಸಿ ಎರಡನೇ ಸುತ್ತಿಗೆ ಮುನ್ನಡೆದರು.

ವಿ. ಪ್ರಣವ್, ರೋನಕ್ ಸಾಧ್ವಾನಿ, ಎಂ. ಪ್ರಾಣೇಶ್, ಪಾ.ಇನಿಯನ್, ಕಾರ್ತಿಕ್ ವೆಂಕಟರಾಮನ್, ಅನುಭವಿ ಸೂರ್ಯಶೇಖರ ಗಂಗೂಲಿ ಅವರೂ ತಮ್ಮ ಎದುರಾಳಿಗಳನ್ನು ಟೈಬ್ರೇಕ-ರ್‌ನಲ್ಲಿ ಮಣಿಸಿ ಮುಂದಿನ ಸುತ್ತಿಗೆ ಮುನ್ನಡೆದರು.

ಲಿಯಾನ್‌ಗೆ ಸೋಲು: ಆದರೆ ಭಾರತದ ಇತರ ಗ್ರ್ಯಾಂಡ್‌ಮಾಸ್ಟರ್‌ಗಳಾದ ನೀಲಾಶ್ ಸಹಾ, ಲಿಯಾನ್ ಲ್ಯೂಕ್ ಮೆಂಡೋನ್ಸಾ ಸೋಲನುಭವಿಸಿದರು. ಮೆಂಡೋನ್ಸಾ, ಚೀನಾದ ಶಿಕ್ಸು ಬಿ ವಾಂಗ್ ಅವರಿಗೆ ಮಣಿದರು.

ಮೆಸ್ಸಿ ಬಳಗದ ಕೇರಳ ಭೇಟಿ ಮುಂದಕ್ಕೆ

ಮಲಪ್ಪುರ (ಕೇರಳ) (ಪಿಟಿಐ): ಇದೇ ತಿಂಗಳಲ್ಲಿ ಕೇರಳದಲ್ಲಿ ಸ್ನೇಹಪರ ಪಂದ್ಯ ಆಡುವುದಾಗಿ ಘೋಷಿಸಿದ್ದ ಅರ್ಜೆಂಟೀನಾ ಫುಟ್‌ಬಾಲ್ ತಂಡವು ಇದೀಗ ಭೇಟಿಯನ್ನು ಮಾರ್ಚ್‌ಗೆ ಮುಂದೂಡಿದೆ. ಇದನ್ನು ಕೇರಳ ಕ್ರೀಡಾ ಸಚಿವ ವಿ.ಅಬ್ದುರಹಿಮಾನ್ ಸೋಮವಾರ ಖಚಿತಪಡಿಸಿದ್ದಾರೆ.

'ಮುಂದಿನ ವರ್ಷದ ಮಾರ್ಚ್‌ನಲ್ಲಿ ಕೇರಳಕ್ಕೆ ಭೇಟಿ ನೀಡುವುದಾಗಿ ಹಾಗೂ ಈ ಬಗ್ಗೆ ಶೀಘ್ರದಲ್ಲೇ ಅಧಿಕೃತ ಘೋಷಣೆ ಮಾಡುವುದಾಗಿ ಅರ್ಜೆಂಟೀನಾ ತಂಡವು ಎರಡು ದಿನಗಳ ಹಿಂದೆ ಇ-ಮೇಲ್‌ನಲ್ಲಿ ತಿಳಿಸಿದೆ' ಎಂದು ಅವರು ಹೇಳಿದ್ದಾರೆ.

ದಿಗ್ಗಜ ಆಟಗಾರ ಲಯೊನೆಲ್ ಮೆಸ್ಸಿ ನಾಯಕತ್ವದ ಅರ್ಜೆಂಟೀನಾ ತಂಡವು ನವೆಂಬರ್ 10 ರಿಂದ 18ರ ನಡುವೆ ಕೊಚ್ಚಿ ಅಥವಾ ತಿರುವನಂತಪುರದಲ್ಲಿ ಸ್ನೇಹಪರ ಪಂದ್ಯ ಆಡುವುದಾಗಿ ಈ ಹಿಂದೆ ಘೋಷಿಸಿತ್ತು.

ಟಿ20 ಕ್ರಿಕೆಟ್: ವಿಲಿಯಮ್ಸನ್ ನಿವೃತ್ತಿ



ಆಕ್ಲೆಂಡ್ (ಪಿಟಿಐ): ನ್ಯೂಜಿಲೆಂಡ್ ತಂಡದ ತಾರಾ ಬ್ಯಾಟರ್ ಹಾಗೂ ಮಾಜಿ ನಾಯಕ ಕೇನ್ ವಿಲಿಯಮ್ಸನ್ ಅವರು ಅಂತರರಾಷ್ಟ್ರೀಯ ಟಿ20 ಕ್ರಿಕೆಟ್‌ಗೆ ಭಾನುವಾರ ನಿವೃತ್ತಿ ಘೋಷಿಸಿದ್ದಾರೆ. ಬುಧವಾರದಿಂದ ಆರಂಭವಾಗಲಿರುವ ವೆಸ್ಟ್ ಇಂಡೀಸ್ ಎದುರಿನ ಸರಣಿಗೂ ಮುನ್ನ ಅವರು ದಿಢೀರ್ ನಿರ್ಧಾರ ಕೈಗೊಂಡಿದ್ದಾರೆ.

ನ್ಯೂಜಿಲೆಂಡ್ ಪರ 93 ಟಿ20 ಪಂದ್ಯಗಳನ್ನು ಆಡಿದ್ದ 35 ವರ್ಷ ವಯಸ್ಸಿನ ಬಲಗೈ ಬ್ಯಾಟರ್ 33.44ರ ಸರಾಸರಿಯಲ್ಲಿ 2,575 ರನ್‌ಗಳಿಸಿದ್ದರು. ಅದರಲ್ಲಿ 18 ಅರ್ಧಶತಕಗಳೂ ಸೇರಿವೆ. ಈ ಮಾದರಿಯಲ್ಲಿ ಅತಿ ಹೆಚ್ಚು ರನ್ ಗಳಿಸಿದ ನ್ಯೂಜಿಲೆಂಡ್‌ನ ಎರಡನೇ ಆಟಗಾರ ಅವರಾಗಿದ್ದಾರೆ.